
ಪ್ರಬುದ್ಧ ಕರ್ಣಾಟಕ



ಮೈಸೂರು ವಿಶ್ವವಿದ್ಯಾನಿಲಯ

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟಣೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T. N., 'A Century and a Half of Literary Activity in Kannada,' **Kannada Studies, Vol. 1, No. 2 (Mysore 1965), p.62.**

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

ಪ್ರಬುದ್ಧ ಕರ್ಣಾಟಕ

ಸಂಪುಟ ೬೮ ಸಂಚಿಕೆ ೧

೩೬೭

ದೇವೇಂದ್ರಕುಮಾರ. ಪಿ. ಪತ್ತಾರ.
ಶಹಾಪುರ - 585223
೨೬ ನೇ ಡಿಸೆಂಬರ ೮೬

ಅಕ್ಷಯ ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೬

ರಾಷ್ಟ್ರಕವಿ ಡಾ. ಕುವೆಂಪುರವರ
83 ನೇ ಹುಟ್ಟುಹಬ್ಬದ
ನೆನಪಿಗಾಗಿ. (by Post)
29-12-86

PRABUDDHA KARNATAKA, Kannada Quarterly of the *University of Mysore,* Volume 68, Number 1, April 1986. Edited by Rame Gowda and Pradhan Gurudatta.

All Rights Reserved

ಪ್ರಧಾನ ಸಂಪಾದಕರು

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಸಂಪಾದಕರು

ರಾಮೇಗೌಡ

ಪ್ರಧಾನ್ ಗುರುದತ್ತ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು–೫೭೦ ೦೦೬

ಮುದ್ರಕರು

ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–೫೭೦ ೦೦೮

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧.	ವೇಣುಗೋಪಾಲ ಸೊರಬ	86, ಆಜಾದ್‌ನಗರ, ಕನಕಪುರ
೨.	ಬಿ. ಎಸ್. ಸಣ್ಣಯ್ಯ	ಸಹಾಯಕ ನಿರ್ದೇಶಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೬
೩.	ಎಚ್. ಶೇಷಾದ್ರಿ	ಭಾರತೀಯ ದೂರವಾಣಿ ಇಲಾಖೆ ಮೈಸೂರು
೪.	ಎನ್. ನಾರಾಯಣ ಬಲ್ಲಾಳ	ಮ್ಯಾನೇಜರ್ ಇನ್‌ಛಾರ್ಜ್, ಸಿಂಡಿಕೇಟ್ ಬ್ಯಾಂಕ್, ಶಿರೂರ್, ಬಿಜಾಪುರ ಜಿಲ್ಲೆ
೫.	ಬಿ. ಕೆ. ತಿಮ್ಮಪ್ಪ	ಈಗ ದಿವಂಗತರು, ಕೇರಳರಾಜ್ಯದಲ್ಲಿ ಕನ್ನಡ ಪ್ರಾಧ್ಯಾಪಕರೂ, ಪ್ರಿನ್ಸಿಪಾಲರೂ ಆಗಿದ್ದವರು.
೬.	ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ	ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬
೭.	ಪ್ರಧಾನ್ ಗುರುದತ್ತ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೬
೮.	ಕಲಮರಹಳ್ಳಿ ಮಲ್ಲಿಕಾರ್ಜುನ	ಉಪನ್ಯಾಸಕರು, ಸರ್ಕಾರಿ ಕಾಲೇಜು ಮಡಕೇರಿ
೯.	ಡಾ. ಎಂ. ಚಿದಾನಂದ ಮೂರ್ತಿ	ಕನ್ನಡ ಪ್ರಾಧ್ಯಾಪಕರು, ಜ್ಞಾನಗಂಗೋತ್ರಿ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-೫೬

೧೦.	ಡಾ. ಆರ್ವಿಯಸ್ (ಆರ್. ವಿ. ಎಸ್. ಸುಂದರಂ)	ತೆಲುಗು ಅಧ್ಯಾಪಕರು, ದಕ್ಷಿಣ ಭಾರತೀಯ ಅಧ್ಯಯನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು-೬
೧೧.	ಬಿ. ವೀರಭದ್ರಪ್ಪ	c/o ಡಿ. ಆರ್ ಹೊರಕೇರಪ್ಪ ಬುರುಜನಹಟ್ಟಿ, ಚಿತ್ರದುರ್ಗ
೧೨.	ಕ. ಪು. ಸೀತಾರಾಮ ಕೆದಿಲಾಯ	ಶಿಶಿಲ-ಕೊಕ್ಕಡ ಮಾರ್ಗ ದಕ್ಷಿಣ ಕನ್ನಡ
೧೩.	ಎಸ್. ಅನಂತನಾರಾಯಣ	ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು 'ಗಂಗಾತರಂಗ', ೫ನೇ ಮುಖ್ಯ ರಸ್ತೆ ಸರಸ್ವತೀಪುರಂ, ಮೈಸೂರು-೯
೧೪.	ಡಾ. ಕೆ. ಕುಶಾಲಪ್ಪ ಗೌಡ	ಕನ್ನಡ ಪ್ರಾಧ್ಯಾಪಕರು ಮದ್ರಾಸ್ ವಿಶ್ವವಿದ್ಯಾಲಯ ಮದ್ರಾಸ್-೫
೧೫.	ಮನಜ	ಮ. ನ. ಜವರಯ್ಯ. ಅಧ್ಯಾಪಕರು ಭಾರತೀಯ ಭಾಷಾ ಸಂಸ್ಥಾನ ಮಾನಸಗಂಗೋತ್ರಿ, ಮೈಸೂರು
೧೬.	ಡಾ. ಡಿ. ಕೆ. ರಾಜೇಂದ್ರ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೬
೧೭.	ಕೆ. ಆರ್. ಶೇಷಗಿರಿ	ಸಂಶೋಧನ ಸಹಾಯಕರು, ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು-೬

ವೇಣುಗೋಪಾಲ ಸೊರಬ

ಒಡನಾಟ

ಈ ಹೊರಮೈ ಕವಚ ಸುಂದರತೆಯು ಮೆಟ್ಟಿಲು–
ಆಳದ ರಕ್ತ ಮಾಂಸಗಳೆಲ್ಲ ಒಂದೇ ಅರೂಪತೆಯ
ಸೋಗುಬಾರಗಳನೊಂದೂ ಅರಿಯದ ಅಟ್ಟಲು–

ಹೀಗೆನ್ನುವುದು ತರವೆ ? ಸೋಂಕುವುದು ಚರ್ಮವೆ
ತಾನೆ ? ಹೃದಯವೆನ್ನುವುದೇನು ಕವಾಟಕೂಪವೆ ?
ಬಲ್ಲ ಮಾತಿಗೆ ಬೇಕೆ ಬೆಲ್ಲ ಜೀರಿಗೆಯ ಮುದ ?

ಸ್ಪರ್ಶಾನುಭವಕೆ ತಟ್ಟುವ ನಾಡಿಯ ಮಿಡಿತವೇನು ?
ಕೊಡುಕೊಳ್ಳುವುದ ಹಂಚಿಕೊಳ್ಳುವುದಸಾಧ್ಯವೇನು–
ನಕ್ಷತ್ರಗಳ ಆಳದಲಿ, ಕುಟುಕುವ ಪ್ರಭೆಯು ಮಡಲಿನಲಿ ?

ಮುಟ್ಟಿದರೆ ಮೈಯಲ್ಲವೆನಿಸುತಿರಬೇಕು – ಬೇಕು–
ಹೂವು ಉಸಿರಾಡಿದಂತೆ, ತಟ್ಟಿದುದು ಮೂಗೇ ಆಗಿರಬೇಕು
ಸಿಡುಕು ಮೋರೆಯಂ ಹೊರಗೊಗೆದು ಹರಡಿಕೊಳ್ಳುತ್ತ–

ಹರಡಿಕೊಳ್ಳುತ್ತ ಹೋರಾಡುತ್ತ ಮೈಯಾಚೆಗಾಗಿ
ಕಂಪಿನೆಳೆ ಎಳೆಯಾಗಿ ತಾಳಗೋಳಗಳನುತ್ತರಿಸಿ
ಕಡಲಾಗಿ ಮುಗಿಲಾಗಿ ವ್ಯಕ್ತಗೊಳ್ಳದ್ದೇನು ಅಸ್ತಿತ್ವ ?

ಪ್ರತ್ಯಕ್ಷವಾಗುವುದು ಈ ಮಾಟದಲ್ಲೇನೆ–
ಯಾವ ಗ್ರಹಗತಿಗೇನು ಒಡಮುರಿಯ ಬೇಕಿಲ್ಲ,
ಬೇಕಿಲ್ಲ ಸ್ವಾರ್ಥಕಲ್ಪವನ್ನೊಡೆದು ಹೊರಬರುದ

ತನ್ನತನವೆನಬಹುದೆ ? ಎನಬಹುದೆ ದಳಗಳ ಕಳಚಿ
ಪಸರಿಸಿದ ಕಂಪನ್ನೆ ಹೂವೆಂದು ? ಸಂಗತವಲ್ಲದ
ಕಣ್ಣೆಗೇತಕಿದ್ದೀತು ಕಾಡಿಗೆ ? ಬಾಡಿಗೆಗೆ ತಕ್ಕಷ್ಟು ಬೆವರೆ ?

ಯಾರ ಕಣ್ಣಲ್ಲಿಯೊ ನೋಡಿ, ಯಾರ ಬಾಯಲ್ಲಿಯೊ ಸವಿದು
ಯಾರ ದಾಕ್ಷಿಣ್ಯದಲ್ಲಿಯೊ ಉಸಿರಾಗಿ ಯಾರಿಗೊ ನೆರೆದಂ
ನಾನು ಘಟ್ಟಕ್ಕೆ ಬರುವುದು ಸಹ್ಯವೆ ? ಸಂಘರ್ಷವೆ ?

ಒಡನಾಟಕ್ಕೆ ಸೀಮಿತ ವ್ಯಕ್ತಿ ಬುರುಡೆಯೊಳಗೆಲ್ಲೊ
ಉರಿಯುವ, ಉರಿಯಬಹುದಾದ, ಉರಿದಿದ್ದ ದೀಪ :
ಕಸರು ಕಾಡಿಗೆಯೆಲ್ಲ ಸುತ್ತಣೆಲ್ಲರ ಸಮಾಧಾನಕ್ಕೆ !

ಸಂ : ಬಿ. ಎಸ್. ಸಣ್ಣಯ್ಯ

ನೀತಿಸಾರೋದಯ*

(ಕರ್ನಾಟಕ ಸುಭಾಷಿತ ಸಂಗ್ರಹ)

ನೆಟ್ಟನೆ ವೀರಂ ವೈರಿಘ
ರಟ್ಟಂ ಭುಜಬಲ ಲಲಾಮ ಭೀಮನ ಕೈಗಂ
ಸಟ್ಟುಗ ಬಂದುದು ಶಿವಶಿವ
ಕಟ್ಟಿದುದಂ ಕಳೆಯಬಹುದೆ [1]ಸುಕವಿ ಕರ್ಣಾ[ಭರಣಾ][1] ೧೯೪

ಅರಿವು ನಿಜಂ ಸಹದೇವಂ
[2]ನಿರವಧಿ[2] ಮಾರಾಂಪರಿಲ್ಲವರ್ಜುನನೊಳ್ ಮ
ತ್ತರಿವವನಂ ತುಱುಗಾಯಿಸಿ
ತಿರಿ[3]ದ[3]ವನಂ ಹೇಡಿ ಮಾಡಿದುದು ವಿಧಿವಶದಿಂ ೧೯೫

ನೆಟ್ಟನೆ ಮೂಱುಂ ಜಗದೊಳ್
ಕಟ್ಟರಸೆನಿಸಿರ್ದ ಸುರಪತನುಜಂ ರಿಪುಕುಲ
ದಿಟ್ಟನೆನಿಪ್ಪರ್ಜುನಗಂ
ತೊಟ್ಟದು ಬಳೆಯಂಟ್ಟ ನಿರಿಗಳುಂ ವಿಧಿವಶದಿಂ ೧೯೬

ಬೇಡರ ಭಯದೊಳ್ ಹರಿಣಂ
ಕಾಡೊಳಗಿರಲಂಜಿ ಪೋಗಿ ಶಶಿಯಂ ಸಾರಲ್
ಕೂಡಿರ್ದ ರಾಹು ನುಂಗಲ್
ಕೇಡಡಸಿದೊಡೆಲ್ಲಿ ಪೊಕ್ಕಡಂ ಮಾಣ್ದಪುದೇ ೧೯೭

(ನೀತಿಗ್ರಂಥ ಪು. ೪೨)

---

1 .... (ಕ) 2 ನಿರಿವಡೆ (ಗ) 3 ವ (ಗ)

* ೬೬–೪ ಸಂಚಿಕೆಯಿಂದ ಮುಂದುವರಿದಿದೆ.

ಹುಲಿಗಂಜಿ ಹುತ್ತವೇರಲ್
ಬಿಲದೊಳಗಣ ಹಾವು ಕಡಿದುದಂ ಕೇಳ್ದಱಿಯಾ
ಬಲವಂತನಾಗಿ ದೈವದ
ಬಲವಿಲ್ಲದವಂಗೆ ಕೇಡು ತಪ್ಪ[1]ದೆ ಬಕ್ಕುಂ[1] ೧೯೮
(ನೀತಿಗ್ರಂಥ ಪು. ೪೨)

ಕೆಟ್ಟುದಱೊಳ್ ಪರಿಣಾಮತೆ
ಕೊಟ್ಟುದಱೊಳ್ ಮಱವೆ ಸಿರಿಯೊಳಸ್ಥಿರಭಾವಂ
ಬಿಟ್ಟುದಱೊಳ್ ಹೇಯತ್ವಂ
ಹುಟ್ಟಿದೊಡವನಱಿತವೇನು ಸುಜ[ನ]ಮನೋಜಾ ೧೯೯

ಅಳಲುಂ ನೋವುಂ ಕೇಡುಂ
ಘಳಿಲನೆ ತನಗಡಸಿದಲ್ಲಿ ಅಱಿವಿನ ಮಱಪೊ
ಕ್ಕಳಿದನೆ ಚದುರಂ ಮತ್ತಾ
ತಿಳಿವಿನ್ನಾಪಡೆಗೆ ಸುಕವಿ [ಕರ್ಣಾಭರಣಾ] ೨೦೦

ನೆಟ್ಟನೆ ಸತಿ ಸುತರರ್ಥಂ
ಕೆಟ್ಟೆಡೆಯೊಳ್ ಶೋಕವ್ಯಾಧಿ ತನ್ನಯ ಮನಮಂ
ಮುಟ್ಟಿದ ಪದದೊಳ್ ಸ್ಥೈರಣ[3]
ಹುಟ್ಟದೊ[2][ದೇತಜಿ ವಿವೇಕ ಕರ್ಣಾಭರಣಾ][2] ೨೦೧
(ನೀತಿಗ್ರಂಥ ಪು. ೪೩)

ಹಿಂದಂ ನೆನೆಯದನೇ ಸುಖಿ
ಮುಂದಂ ನೆನೆವವನೆ ದುಃಖಿಯಿಂತೆರಡಱೊಳಂ
ಬಂದುದನನುಭವಿಪನೆ ಬುಧ
ನೆಂದುಂ ಸಾಯದನೆ ದೇವ [3][ಸುಜನಮನೋಜಾ][3] ೨೦೨
(ನೀತಿಗ್ರಂಥ ಪು. ೪೩)

ಚಿಂತಿಪನೆ ನರಕಿ ಸಲೆ ನಿ
ಶ್ಚಿಂತನೆ ಸುಖಿ ಕೋಪಮುಳ್ಳೊ ಹಾತನೆ ದ್ರೋಹಂ
ಸಂತೋಷಿಯೆ ಸಿರಿವಂತಂ
ಭ್ರಾಂತಳಿದನೆ ಪರಮಯೋಗಿ [3][ಸುಜನಮನೋಜಾ][3] ೨೦೩

ಕುತ್ತದ ಮೊತ್ತಂ ಪಾಪದ
ಬಿತ್ತು ಪರಾಭವದ ಬೆಳಸು ಪಸಿದ ಕೃತಾಂತಂ

---

1 ದಮೋಘಂ (ಗ) 2 ತವನರಿತವೇನು .... (ಕ) ಡೇತರ ವಿವೇಕ ಕರ್ಣಾಭರಣಾ (ಗ) 3 .... (ಕಗ)

ಗೆತ್ತಿದ ಬೋನಂ ತನುವಿದ
ನಿತ್ಯಂ ತಾನೆಂದು ತಿಳಿಗೆ ಬುಧಜನರೊಲವಿಂ ೨೦೪

ನವರಂಧ್ರವೆಂಬ ಕನ್ನಂ
ಸವೆದಿರಲೊಡಲೆಂಬ ಮನೆಯನೊಯ್ಯನೆ ಪೊಕ್ಕಾ
ಜವನೆಂಬ ಕನ್ನಗಳ್ಳಂ
ತವಕದೊಳಸುವೆಂಬ ಧನವನೊಯ್ಯನೆ ಮಾಣಂ ೨೦೫
(ನೀತಿಗ್ರಂಥ. ಪು. ೪೩)

ಯಮುನಾರ ನಂಟ ತನ್ನಯ
ಸಮಸುತನೆನಿಸಿರ್ದ ಧರ್ಮರಾಜನನೊಯ್ಯನೆ
ಭ್ರಮೆ ಬೇಡ ಬೇಡ ಮಾನವ
ನಿಮಿಷದಿ ಧರ್ಮವನೆ ಮಾಡು [1][ಸುಜನ ಮನೋಜಾ][1] ೨೦೬
(ನೀತಿಗ್ರಂಥ. ಪು. ೪೪)

ಆವಂಗಮಾದೊಡಂ ಮ
ತ್ತಾವುದುಮಂ ಕಳಿವುಪಾಯಮುಂಟೇ ಜಗದೊಳ್
ದೇವರ್ಗಂ ದೈತ್ಯರ್ಗಂ
ಸಾವಂ ತಪ್ಪಿಸುವುಪಾಯಮಾವುದುಮುಂಟೇ ೨೦೭
(ಅರ್ಥನೀ ೭–೬೮)

ಸಾವಿನ ಬೋಧೆಗೆ ಸಿಲುಕಿದ
ನಾವಂ ದಿಕ್ಪಾಲರಾಳುಗೆಲಸಂ ಭೋಗಿ[2][ಪ][2]
ರಾವಣನನೊಯ್ದನೆನೆ ಮನು
ಜಾವಳಿಗಂಜುವನೆ ಯಮನು ಕೇಳ್ ಗುಣರತ್ನಾ ೨೦೮

ಆಳುಂ ಪೆಂಡಿರು ಸುತಗುಂ
ಪೇಳದವರ್ ನಂಟರಿಷ್ಟರೊಡಹುಟ್ಟಿದರುಂ
ಕಾಲಾಳ್ ಗಜ ರಥವಶ್ವಂ
ಕೇಳಳಿವವೆ ಜವನ ಮುಳಿಸ [3][ಕೇಳ್ ಗುಣರತ್ನಾ][3] ೨೦೯
(ನೀತಿಗ್ರಂಥ, ಪು. ೪೪)

ತಾವುಳಿದು ತಮ್ಮ ನಂಟರ್
ಸಾವರೆ ಶೋಕಿಪ್ಪುದವರ ಬೆಂಬಳಿವಿಡಿದುಂ
ತಾವುಂ ಸಾವರ್ ದುಃಖದ
ಜೀವಸದಿಂ ಬೇಯಲೇಕೆ [3][ಕೇಳ್ ಗುಣರತ್ನಾ][3] ೨೧೦
(ನೀತಿಗ್ರಂಥ, ಪು. ೪೪)

---

1 .... (ಕ ಗ) 2 ಸುವ (ಕ) 3 .... (ಕ ಗ)

ಯತಿಗಳ್ ಸಿದ್ಧರ್ ವಿದ್ಯಾ
ಪ್ರತಿಗಳ್ ದೈವಜ್ಞರಾಗಮಜ್ಞರ್ ಧಾತ್ರೀ
ಪತಿಗಳ್ ಮಂತ್ರಜ್ಞರ್ ವಿಧಿ
ಗತಿಯಂ ನಿಜಸತ್ವದಿಂದ ಗೆಲಿದವರೊಳರೇ ೨೧

ಜಾತಸ್ಯ ಮರಣ ತಪ್ಪದು
ಏತಕೆ ಚಿಂತಿಸುವೆ ಬಿಜಿಂದೆ ಪಣೆಯುಲಿ ಬರೆದಿರೆ
ತಾ ತಿಳಿಸಬೇಡ ಮಾನವ
ಭೀತಿಯ ಬಿಡು ಮರಣವದೆಗೆ [1][ಸುಜನ ಮನೋಜಾ][1] ೨೧
(ನೀತಿಗ್ರಂಥ ಪು. ೪೪)

ಕಲಿ ಸತ್ತು ಪಂದೆ ಬದುಕಂ
ಕಲಿ ಬದುಕಿಯುಂ ಪಂದೆ ಸಾಯುಮಿದು ಸಿದ್ಧಾಂತಂ
ಕಲಿಯುಂ ಪಂದೆಯು ಸಾಯ್ಗುಂ
ಕಲಿಯಾಗಿಯೆ ಸಾಯ್ಗೆ ಸಾವ ಕಾಲಕ್ಕೆಂದುಂ ೨೧

ಕಾದಿಗೆಯ್ದೆಯ್ದಿ ಬಂದೊಡೆ
ಮೇದಿನಿಪತಿ ತನ್ನ ಸಮಮವನಾಗಳೆ ಮಾಳ್ಪಂ
ಮೊದಲಿಸಿ ರಣದೊಳಳಿದರೆ
ಮಹಾದೇವನ ಪೊರೆಗೆ ದೇವಗಣಕೆಯುರೊಯ್ವರ್ ೨೧

ಚೋಣೆಯೊಳಿಟ್ಟಾಡಿದಡಂ
ಕೋಣೆಯೊಳಡಗಿರ್ದಡಂ ಲಲಾಟದ ಲಿಖಿತಂ
ಮಾಣದಿದನಜಿದು ಜಾಣಂ
ಹೊಣಿಸಿ ಕಾದು[ವ್ರ]ಮ ರಣದಿ [ಸುಜನ ಮನೋಜಾ] ೨೧

ಪೆಂಡಿರ್ ತೊಲಗಿದ ಪೊಲೆ ಭೂ
ಮಂಡಲದೊಳ್ ನಾಲ್ಕು ದಿವಸ ಭೀತಿಗೆ ಕಾದೊಳ್
ಗಂಡರ್ ತೊಲಗಿದ ಪೊಲೆ ಭೂ
ಮಂಡಲ ಚಂದ್ರಾರ್ಕ ತಾರೆಯುಳ್ಳನ್ನಬರಂ ೨೧

ನೆಲದಲಪಕೀರ್ತಿವಡೆಗುಂ
ಲಲನೆಯುವಿದಿರೆದ್ದು ಪೈಪರಿಪ್ಪತ್ತೊಂದುಂ

1 .... (ಕ ಗ)

ತಲೆಯು ಪಿತೃಗಳಿಗೆ ನರಕಂ
ಕಲಿ ಘುರದೊಳ್ ಪಿಂದಕೊಂದು ಪಜ್ಜೆಯ ತೆಗೆಯಲ್ ೨೧೭

ಇದ್ದೊಳ್ಳಿತು ಬದ್ದೊಳ್ಳಿತು
ಬಿದ್ದೊಳ್ಳಿತು ಭದ್ರಗಜ[ನು] ಸೂಕರ ಶುನಕಂ
ಇದ್ದೇವುದೊ ಬದ್ದೇವುದೊ
ಬಿದ್ದೇವುದೊ ಧಾತ್ರಿಯಲ್ಲಿ [ಸುಜನಮನೋಜಾ] ೨೧೮

ಸತಿ ಬಲ್ಲಳ್ ಪತಿಸುಖಮಂ
ಶತಖಂಡದ ಘಾಯ ಸುಖವ ಪಟುಭಟ ಬಲ್ಲಂ
ಗತಿಯ ಶಿವಭಕ್ತ ಬಲ್ಲಂ
ಸತತಂ ಕೇಳ್ ಜಾರೆ ಪಿಡಿಭವಿಯಱಿದಪನೇ (?) ೨೧೯

ಹಾಡಿಂಗೋದಿಂಗಱಿಯದ
ಪೀಡೆಗಳಂ ಬೇಡಿ ಬೇಡಿ ಬೆಳಗಪ್ಪುದಱಿಂ
ಬೇಡುವುದು ಕೊಡುವನಂ ಕೊಂ
ಡಾಡವನಂ ಕೂಡೆ ಸುಕವಿ [ಕರ್ಣಾಭರಣಾ] ೨೨೦

ಬಳ್ಳಿ ಮೊದಲಾಗಿ ಮೊದಲೊಳ
ಗೆಳ್ಳನಿತುಂ ಪೊನ್ನನಿಕ್ಕಿದೊಡೆ ಪರ್ಬದು ಪೊ
ನ್ನಳ್ಳ ನರನಿತ್ತೊಡಲ್ಲದೆ
ಬೆಳ್ಳನೆ ಪರ್ಬುಗುಮೆ ಕೀರ್ತಿಲತೆ ದಿಕ್ತಟಮಂ ೨೨೧

(ಲೀಲಾ ೧-೪೩)

ಪುಟ್ಟುವ ಪದದೊಳ್ ಬಾರದು
ನೆಟ್ಟನೆ ತಾನಂತ್ಯದಲ್ಲಿ ಬಾರದು ಧನಮುಂ
ನಟ್ಟನಡು ವ್ಯಥೆಯ ಮಾಳ್ಪುದು
ಕಟ್ಟದೆ ಸತ್ಪಾತ್ರಕಿತ್ತು ಭೋಗಿಪುದುಚಿತಂ ೨೨೨

ಅಂದಂದಿಗೆ ಕಱಿವುದಱಿಂ
ದೊಂ[ದೆ] ದಿನಂ ಕಱಿವೆನೆಂದು ಪಲವು ದಿನಂ[ಗಳ್]
ನಿಂದ ಬಳಿಕ್ಕದ ಕಱಿದೊಡೆ
ಹಿಂದಣ ಹಾಲೇಕೆ ಬಹುದು [ಸುಜನ ಮನೋಜಾ] ೨೨೩

ಸಾಲದೆ ಸೋಲದೆ ಪೊ[1]ಡೆ[1]ಮ
ಟ್ಟೋಲೈಸದೆ [2]ನಿ[2]ಚ್ಚ ಪಯಣ[3]ಮಿ[3]ಲ್ಲದೆ ತಾನಿ
ದಾರ್ಲಯದೊ[4]ಳಿರ್ದು ಬಾಳ್ವುದೆ[4]
ಭೂಲೋಕಮನಾಳ್ವ[5]ಸುಖ[5]ದಿನಗಳೆಮಲ್ತೇ

(ಪಂಚತಂ ೧೦೭-೫೩)

ಮದುವೆ ಪಗೆ ಕೆಳೆತನಂ ಕೃತಿ
ಪ್ರಮಗರ್ಭಂ ಜೂಜು ಕಳವು ಪರವಧು ಸಾಲಂ
ಮೊದಲೊಳ್ ಸವಿ ನಿರ್ವಹಿಸುವ
ಪದದೊ[6][ಳ್ ದು][6]ರ್ಘಟ ಸರಸ್ವತೀಮಣಿಹಾರಂ

ರೋಗಿಯ ದಾವಂ ರುಣಿ ಸುಖಿ
ದಾಗರನಾವಂ ಜಿತೇಂದ್ರಿಯಂ ಗುರುಪದಸಂ
ಯೋಗಿಯದಾವಂ ಭಕ್ತ್ಯಾ
ದ್ಯೋಗದೊಳೊಡವಿರ್ಪವಂ .... (?)

ಮೋಹಮದಾವುದು ಧನದ ಸ
ಮೂಹಂ ಭ್ರಮೆಯಂಧಕಾರವಾವುದು ಯುವತಿ
ಯ್ಯಾಹಂಗತಿಮತಿಯಾವುದು
ಸೋಹಂಭಾವಂ ವಿವೇಕ [ಕರ್ಣಾಭರಣಾ]

ಹಳಿವಾವುದು ಕುಲಭಂಗಂ
ತಿಳಿವಾವುದು ಸಮತೆ ಬಂಧವಾವುದು ಮೋಹಂ
ಕಳವಾವುದನ್ಯತವೆಡಲಿಂ
ಮಳಿನಾವುದು ಧೃತಿ ವಿವೇಕ [ಕರ್ಣಾಭರಣಾ]

ಭೂಷಣವಾವುದು ಘನ ಸಂ
ತೋಷಂ ಅತಿಸ್ನೇಹವಾವುದರಿದರೊಳಿಹ ಸಂ
ಭಾಷಣೆ ವಂತಿಯಾವುದು ಪರ
ದೂಷಣವುನಂಳಿವುದೆ ವಿವೇಕ [ಕರ್ಣಾಭರಣಾ]

---

1 ರ (ಕ) 2 ನಿಚ್ಚನಿ (ಕ) 3 ಮುಮಿ (ಕ) 4 ಳ್ ಬಾಳ್ವುದೆ (ಕ)
5 ಸೊಗ (ಕ) 6 ದ್ದು (ಕ)

ಕಣ್ಣೊಳಗಣ ಕರಿಯಾಲಿಯ
ಸಣ್ಣಹವೆಂದೆನಲುಬೇಡ ಜಗಮಂ ಕಾಣ್ಬುವಾ
ತನ್ನೊಳ್ ವಿವೇಕಮುಳ್ಳೊಡೆ
ಬಿನ್ನಣಮಂ ಮೆಱೆಯಲೇಕೆ [ಸುಜನಮನೋಜಾ] ೨೩೦

ಕತ್ತಲೆಯನು ಒತ್ತರಿಸುವ
ದೀಪ್ತಿಯ ನೆರೆ ಕಿಱಿಯದೆಂಬರೇ ಕಿರಿಟಿಯಿಂಗ
ತ್ಯುತ್ತಮ ಗುಣವಿರಲವನುಂ
ಮುತ್ತಯ್ಯಗೆ ಹಿರಿಯನೆನಿಪ [ಸುಜನಮನೋಜಾ] ೨೩೧

ಕರಕಿಱಿಯನಾದೊಡಾಗಲಿ
ಪುರುಷತನಂ ವಿದ್ಯಾಬುದ್ಧಿ ಸ್ಥೈರಣೆಯುಳ್ಳಡೆ
ಹಿರಿಯತನಕೆರಡು ಕೊಡೆ (?)
ಮರದುದ್ದಿನ ಮನುಜನೇಕೆ [ಸುಜನಮನೋಜಾ] ೨೩೨

ಕತ್ತುರಿಮಿಗ ಬಡವಾದರೆ
ಮತ್ತದಂ ತಾಂ ಪೊಲಸು ನಾರಲರಿಯದು ಸಹಜಂ
ಉತ್ತಮ ನಿರ್ಗತಿಯಾದೊಡೆ
ಮತ್ತಮಿಾಕೆಯ ಪುರವನಲ್ಲದವಗುಣವಱಿಯಂ ೨೩೩

ಮೃತಿಗಾಪರ್ಣಂತಭಿಮಾನ
ಚ್ಯುತಿಗಾಪರ್ರೆ ಮಾನ್ಯರುತ್ತಮರ್ ರಣದೊಳ್ ದು
ರ್ಗತಿಗಳ್ಕಿ ಬೆರಸಿ ಶಸ್ತ್ರದ
ಹತಿಗಳ್ಕದೆ ಸಾಯ್ವುದುದಱಿನಿಪ್ಪ ಕೂರಿದಮಃ ೨೩೪

ಎಲ್ಲಾ ಕಲೆಗಳ ಬಲ್ಲವ
ರಲ್ಲಿಯೆ ಸಿರಿಯಕ್ಕನಿಕ್ಕು ಸಿರಿ ತಾ ಮೂರ್ಖನ
[1]ನ[ಲ್ಲಾ][1]ಳಾಗಿಹಳು ಕವಿಯೊ
ಳೊಳ್ಳಿದರಂಗೊಳ್ಳಿತುಂಟೆ [ಸುಜನಮನೋಜಾ] ೨೩೫

ಹೊನ್ನಳ್ಳ ಹೊಲೆಯರಾದರು
ಮನ್ನಿಸುವರಿತ್ತ ಬನ್ನಿರಿ ಕುಳ್ಳಿರಿಯೆಂಬರು

ನಲ್ಲ (ಕ)

ತನ್ನೊಡಹುಟ್ಟಿದ ಬಡವನ
ನನ್ನಿಗನವರಾರುಮೆಂಬರೀ ಕಲಿಯುಗದೊಳ್ ೨೩೬

ನೆಲ ಮುಸಿವುದು ನೀರೆರೆಯರು
ಕುಲವಜ್ಜಿಯರು ಕೂಸ ಕುವರು ತಳಿಗೆಯಲಿಕ್ಕರು
ಪೊಲೆಯರು ಬಟ್ಟೆಯ ತೊಲಗರು
ಎಲೆ ಮಾನವ ಭಾಗ್ಯಲಕ್ಷ್ಮಿ ತೊಲಗಿದ ಬಳಿಕಂ ೨೩೭

ಬಡವರ್ ಬಂದಡೆ ಬಂಧುಗ
ಳೊಡನುಡಿಯರ್ ಮುಂದೆ ನಿಂದಡಂ ಲಜ್ಜಿಸುವರ್
ಬಡತನವೆ ಶತ್ರು ಲಕ್ಷ್ಮಿಗೆ
ಗಡ ನಂಟಂ ಬೆರೆ ಬಂಧು ಶತ್ರುಗಳುಂಟೇ ೨೩೮

ಅಡವಿಯ ನೆರೆಯುಡುಗದೆ ಸುಡು
ವಡವಿಯೊಳ್ ಕಿಚ್ಚಿಂಗೆ ಗಾಳಿ ನೆರವಾದಪುದು ತಾಂ
ಕೆಡಿಸಿತು ದೀಪಮನಾಗಳ್
ಬಡವರ್ಗಂ ಬಂಧುವುಂಟೆ ವಸುಧಾತಳದೊಳ್ ೨೩೯

ಬಡತನವೆ ಕೇಳು ನಿನಗಾಂ
ಪೊಡಮಡುವೆಂ ನಿನ್ನ ಮಾಸಜಿಂ ಸಿದ್ಧತ್ವಂ
ಪಡೆದೆನದೆಂತೆನೆ ಧರೆಯೊಳ್
ಗೆಡೆಯಾಡಿಯೆ ಕಾಣ್ಬೆನಿನ್ನನಾರುಂ ಕಾಣರ್ ೨೪೦

ಶ್ರೀಯಿಲ್ಲದವನ ರೂಪುಂ
ತಾಯಿಲ್ಲದ ಸುತನು ಸತಿಯುಮಿಲ್ಲದ ನರನುಂ
ಪ್ರಾಯದೊಳಲ್ಲದ ಪಡಪ್ಪುಂ
ಮಾಯಾವಿಯ ತೇಜಸವಕ್ಕಿ [ಸುಜನಮನೋಜಾ] ೨೪೧

ಹಣ ಹೋಗಿ ಬಾಳಲಕ್ಕು
ಹಣ ಹೋಗಿಯೆ ಬಾಳಲರಿದುದೆಂತೆನೆ ಪೇಳ್ವೆಂ
ಹಣ ಹೋದರೆ ಹಣವಕ್ಕುಂ
ಹಣ ಹೋದರೆ ಹಾನಿಯ[1]ಕ್ಕು [ಸುಜನಮನೋಜಾ][1] ೨೪೨

(ನೀತಿಗ್ರಂಥ ಪು. ೪೫)

---

1 ಕ್ಕು .... (ಕ ಗ)

ಅಱಿಯರೆನವೇಡ ತಮತಮ
ಗಱಿವಂತುಟು ಕಾರ್ಯಗತಿಯನೆಲ್ಲರ್ ಬಲ್ಲರ್
ಮೊಱದೊಳಗಣ ಕಿಱುಗೂಸುಂ
ಪೊಱಕೈಯಿಂದಲ್ಲದುಗುರೊಳೊರಸಮು ಕಣ್ಣಂ ೨೪೩

ನಂಬದಿರನ್ಯರನೆಂದುಂ
ನಂಬುವಡಾರ್ಯೈದು ನಂಬು ನಂಬಿದ ಬಳಿಕಂ
ನಂಬುಗೆಗೆಡದಿರು ಕೆಟ್ಟರೆ
ನಂಬದಿರಾ ಜನ್ಮ ಜನ್ಮಾಂತರದೊಳ್ ೨೪೪

ಮುನಿದಂಗೆ ಮುನಿಯೆ ಭೂಸುರ
ಮುನಿಯದಱೆಳು ಮುನಿಯೆನತುಳ ಕ್ಷತ್ರಿಯನೆಂತುಂ
ವಿನಯಿತರೊಳ್ ಮುನಿ ವೈಶ್ಯಂ
ಅನವರತಂ ಮುನಿವ ಶೂದ್ರನವರಿವರೆನ್ನಂ ೨೪೫

ಒತ್ತರ ಕೆರ ಹೊಲ್ಲದ ಸತಿ
ಮುತ್ತಿಗೆಗೊಳಗಪ್ಪ ದುರ್ಗ ಅಧಮನ ಕೆಳೆಯುಂ
ಸತ್ತವರಿಂದತಿಕಷ್ಟಂ
ದುಷ್ಟನ ಸಾರುವುದೆ ಕಷ್ಟ [ಸುಜನಮನೋಜಾ] ೨೪೬

ಅರವೆಯಿಲ್ಲದ ಕೆಱೆಯುಂ
ನೀರಿಲ್ಲದ ಬಾವಿ ಚಂದ್ರನಿಲ್ಲದ ನಿಶೆಯುಂ
ಸಾರಕಲೆಯಿಲ್ಲದವಳಂ
ಸಾರದಿರಾ ಸೌಖ್ಯಮಿಲ್ಲ [ಸುಜನಮನೋಜಾ] ೨೪೭

ಖೂಳನ ಗುಣಗಣ ದಾವಾ
ನಳನಂ ಸುಜನಂತರಂಗ ಸಂತೋಷವ್ಯಾ
ಕುಳನಂ ಸಮಗ್ರ ದೋಷಾ
ಕುಳನಂ ಪೆಸಗೊಂಡು ಬದುಕುವಣ್ಣಂದಾಮಂ ೨೪೮

ಬೇವಿನ ಸಸಿಯಂ ತಂದಿ
ಟ್ಟಾವಿನ ಸೊರೆವಾಲನೆಱೆದು ಸಲಹಿದೊಡಮ ತಾಂ
ಬೇವಲ್ಲದಮೃತವಾಗದು
ಗಾವಿಲರೊಡನಾಡಿ ಗುಣವನರಸಿದರುಂಟೇ ೨೪೯

ಪಡೆದಂ ರಜೋಧಿಕಂ ವಿಧಿ
ಪಡೆವಂತೆಯುಂ ಘಳಿಯುಮಮೃತಕರನಂ ವಿಷಮಂ
ಕಡಲಂ ಸುಳಿಯುಂ ಮಳೆಯುಂ
ಸಿಡಿಲಂ ಪಡೆದಂತೆ ಸುಜನರಂ ದುರ್ಜನರಂ ೨೫೦

(ಪಂಪರಾ ೧-೩೨: ಮಲ್ಲಿಪ್ರ ೧-೩೨: ಸೂಕ್ತಿಸು ೧-೨೮)

ತುಱುಬೆಗೆ ಪನ್ನೀರೆಱೆದೊಡೆ
ಪಱಿತಿಂಬುವ ಪಾಂಗ್ಗುದಿಲ್ಲ ದುರ್ಜನನಿಂತುಂ
ಮಱೆದಪಕಾರಂಗೆಯ್ವರ್
ಕಱುಬುತನಂ ಪಾಂಗ್ಗುದಿಲ್ಲ [ಸುಜನಮನೋಜಾ] ೨೫೧

ಆರುಂ ದುರ್ಜನ ಜನಕುಪ
ಕಾರಂ ಮಾಡಿದೊಡೆ ಸುಣ್ಣಕಲ್ಗೆ ಬಿಸಿಯು ನಿ
ವಾರಿಪೆನೆಂದವಱೊಳ್ ತ
ಣ್ಣೀರಂ ಪೊಯ್ದಂತೆ ಸುಕವಿ [ಕರ್ಣಾಭರಣಾ] ೨೫೨

ಕಿಚ್ಚಿನೊಳು ಬಿದ್ದ ಚೇಳಂ
ಬೆಚ್ಚರ[1][ದಿಂ][1] ತೆಗೆಯೆ ಕೈಯನೂಱುವ ತೆಱದಿಂ
ತುಚ್ಛಂಗೆ ಹಿತವ ಮಾಡಿದೊ
ಡಚ್ಚುಗವಂ ಮಾಡದಿಹನೆ [ಸುಜನ ಮನೋಜಾ] ೨೫೩

ಪಲ್ಲಿಲ್ಲದೆ ಬಸುಱೊಳಗಿ
ರ್ದಲ್ಲಿಯೆ ದುರ್ಜನನ ತಾಯಿ ಬದುಕಿದಳಲ್ಲದೆ
ಪಲ್ಲುಳ್ಳರೆ ಕರುಳಿಲ್ಲವ
ಪೆಲ್ಲದೆ ಪಾಣ್ಬನೆ ಸುಕವಿ ಕರ್ಣಾಭರಣಾ ೨೫೪

ತುಡುಕಿದ ದೋಷಿಯನಲ್ಲದೆ
ಪಿಡಿಯದು ಘಟಸರ್ಪನಂತುಮಲ್ಲ[2]ದೆ[2] ಮತ್ತಾ
ತುಡುಕದ ನಿರ್ದೋಷಿಯುಮಂ
ಪಿಡಿವುದು [3]ಖಳಮುಖ ಘಟೋಗ್ರ[3] ಜಿಹ್ವಾಸರ್ಪಂ ೨೫೫

(ಜಗವಿ ೧-೧೨ ; ಸೂಕ್ತಿಸು ೧-೩೩)

---

1 ದಿಂದಂ (ಕ) 2 ದು (ಕ) 3 ಘಟಮುಖೋಗ್ರ (ಕ)

ಮಾಡುವುದು ಗುಣಕೆ ಗುಣಮಂ
ಮಾಡದಿರಾ ದುರ್ಜನಂಗೆ ಗುಣಮೆಂಬುದ ನೀಂ
ಮಾಡಿದೆಯಾದೊಡೆ ಹಾವಿಂ
ಗೂಡಿದ ಹಾಲಂತೆ [ಸುಕವಿ ಕರ್ಣಾಭರಣಾ] ೨೫೬

ದುರ್ಜನಮುಖಕೋದಂಡಂ
ದುರ್ಜನಜಿಹ್ವಾಗ್ರ ಪಲವು ಸರಳುಗಳಿಂದಂ
ದುರ್ಜೆಯೆಸೆಯುತ ಬರುತಿರೆ (?)
ಸಜ್ಜನಕ್ಷಮೆಯೆಂಬ ಕವಚಮಂ ತೊಟ್ಟಿರ್ದಂ ೨೫೭

ಚೇಳುಂ ವ್ಯಾಳಂ ಮಕ್ಷಿಕ
ತಾಳಿದವವು ಪುಚ್ಛ ದಂತ ಶಿರದಿಂ ವಿಷಮಂ
ತಾಳಿದ ವಿಷಮಂ ದುರ್ಜನ
ಕಾಲಿಂದಂ ಶಿರತನಕ್ಕು [ಸುಜನಮನೋಜಾ] ೨೫೮

ಎಲೆ ದುರ್ಜನ ಕಾನನದೊಳ್
ಸಲೆ ತಿರುಗುವೆಯೇತಕೆಂದು ಸಜ್ಜನ ಕೇಳಲ್
ಹುಲಿ ತನ್ನ ತಿಂದು ಮಿಕ್ಕರ
ಕೊಲುತಿರಬೇಕೆಂದು ತಿರುಗುವೆಂ ನಿಶ್ಚಯದಿಂ ೨೫೯

ಮಸಿ ಬಿಳಿದಹುದೇ ತೊಳೆದೊಡೆ
ವಿಷ ಬಿಡುವುದೆ ಹಾವಿಗೆಷ್ಟು ಹಾಲೂಡಿದೊಡಂ
ವಸುಧೆಯೊಳಂ ನಾಯಿಬಾಲ
ಸಸಿನಹುದೇ ಕಟ್ಟಿಬಿಡಲು [ಚೂಡಾರತ್ನಾ] ೨೬೦

ಪರಿಕಿಪೊಡೆ ಪಿಸುಣನಗ್ಗದ
ಹರನೊಳ್ ಪುರುಡಿಸುವನೆಂದದುಳಿದರ ಪವಣೆಂ
ಕೊರಳೊಳ್ ಬಿಸಮಂ ತಳೆದರೆ
ಗಿರಿಶಂ ತಾಂ ತಳೆದನಲ್ತೆ ತುದಿನಾಲಗೆಯೊಳ್ ೨೬೧
(ಲೀಲಾ ೧-೩೩)

ಕಿಚ್ಚಿಂದಂ ಚುಚ್ಚಿದ ಪುಣ್
ಮುಚ್ಚುಗು ಕೆಲವಾನಂ ದಿನಕೆ ನಾಲಗೆಯಿಂದಂ
ಚುಚ್ಚಿದ ಪುಣ್ ಜನ್ಮಾಂತರ
ಮುಚ್ಚುವುದೇ ಮನದೊಳಿರದೆ [ಚೂಡಾರತ್ನಾ] ೨೬೨

ತುಚ್ಛನ ಕೆಳೆ ಹಾವಿನ ಹುದು
ಮಚ್ಚರಿಸುವ ಸತಿಯ ಸಂಗ ದುರ್ಜನಗೋಟಿಂ
ಅಚ್ಚುಗವಿಲ್ಲದೆ ಮಾಣ್ಬುದೆ
ತುಚ್ಛ ತರೊಡನಾಡಿ ಗುಣವನರಸಿದರುಂಟೇ ೨೬೩

ನಾಯಿ ಮೊದಲಾಗಿ ತನ್ನವ
ಗೋಯೆನ್ನದು ತನ್ನರನ್ಯರೆಂಬುದ ಬಲ್ಲುದು
ನೋಯಂ ನುಡಿವ ಮನುಷ್ಯಂ
ನಾಯಿಂದಂ ಕಷ್ಟಮಲ್ತೆ [ಜೋಷಾರತ್ನಾ] ೨೬೪

ನುಡಿಯಲೊಡನಿದಿರ ಹೃದಯಂ
ಮಿಡು ಮಿಡು ಮಿಡುಕುವರೆ ಬೇರೆ ಕಾಂತಮದೇಕೈ
ನುಡಿ ನಿಂದೆ ತಕ್ಕುದಲ್ಲದು
ನುಡಿವರೆ ಇಹಪರಕೆ ಹಿತವ ನುಡಿವವ ಚದುರಂ ೨೬೫

ಈ ವರ್ತಪರಿಕಾಲದೊ (?)
ಆವಂ ದುರ್ಜನನವಂಗೆ ವಂದಿಪುದು ಜನಂ
ಪಾವಂ ನೋನುವರಲ್ಲದೆ
ಆವ ದಿನಂ ಪದ್ದ ನೋಂಪರೇ ಧಾರುಣಿಯೊಳ್ ೨೬೬

ದೊರೆಯ ಮುಳಿಸೆರಡು ಮಾಸಂ
ಕರಿಗಳ ಮುಳಿಸೇಳು ದಿವಸ ಬಳಿಕಿಲ್ಲೆಂತುಂ
ಪಿರಿಯರ ಮುಳಿಸಾಕ್ಷಣದೊಳ್
ತುರುಕನ ಮುಳಿಸೇಮು ಬಿಡದು [ಜೋಷಾರತ್ನಾ] ೨೬೭

ಜಲಚರ ಜಲದೊಳಗಿರ್ದುಂ
ತೊಲಗದೆ ದುರ್ಗಂಧ ಮಯ್ಯ ಪತ್ತಿದ ತೆಱದಿಂ
ಸುಲಲಿತ ಶ್ರುತವಾರ್ಧಿಯೊಳುಂ
ಮುಳುಗಿರಲಜ್ಞಾನ ಗಂಧಮುಂ ಪೋದಪ್ಪುದೇ ೨೬೮

ಮನಮುಂ ದಂಡಿಸಲರಿಯದೆ
ತನುವಂ ದಂಡಿಸುವರೇಕೆ ತನ್ನಯ ಕೈಯೊಳ್
ತನುಂ ಮುನ್ನ ಸಾಲಗೊಂಡುದೊ
ಮನಮಱಿಯದ ಮೂರ್ಖ ತಪಮದೇಗೈದಪ್ಪುದೋ ೨೬೯

ಹೆಣ್ಣಿಂಗಂ ಹೊನ್ನಿಂಗಂ
ಮಣ್ಣಿಂಗಂ ಕಾಂಕ್ಷೆಯಿಂದಮೆಱಗದೆ ಲೋಕಂ
ಬಣ್ಣಿಸೆ ಚಂಚಲನಾಗದೆ
ತಿಣ್ಣಂ [1][ನಡೆ][1]ವವನೆ ತಾಂ ತಪೋಧನನಕ್ಕುಂ ೨೭೦

*ನಿರುಪಮ ಗುಣಿಯೆನಿಸಿದ ಸ
ತ್ಪುರುಷರ ರೂಪೆಂತುಟಾದೊಡಾತನೆ ಯೋಗ್ಯಂ
ಪರಿಮಳವನೀವ ಚಂದನ
ಗೊರಡುಂ ಮುರುಡಾದೊಡೇನು [ಚೂಡಾರತ್ನಾ] ೨೭೧

ಕೋಪದೊಳೊದ[ಗು]ಗು ಮನಸಂ
ತಾಪಂ ಸತಿಸುತರಗಲ್ಕೆ ಜನನಂ ಮರಣಂ
ಕೂಪರ ಕೆಳೆ ತಪದಾನಂ
ಪೋಪವು ಬಱಿವಾತಿನಿಂದೆ [ಚೂಡಾರತ್ನಾ] ೨೭೨

ಆನೆ ತುಡುಗುಣಿಯುಮಾದೊಡೆ
ಭೂನಾಥಂ ಜಾರನಾದೊಡಂ ಶಾಸ್ತ್ರಜ್ಞಂ
ತಾನೆ ಕಡು ಮೂರ್ಖನಾದೊಡೆ
ಏನೆಂದೆನಬಹುದು ನೀತಿ ತಾಂ ಭೂತಳದೊಳ್ ೨೭೩

ಪರಧನಮುಂ ಪರಸತಿಯುಂ
ಪರರೊಬ್ಬರುಮಿಲ್ಲವಲ್ಲಿ ದೊರೆಕೊಂಡೆಡೆಯೊಳ್
ನಿರಪೇಕ್ಷಿತನೆನಿಸಿದವಂ
ಪರಶಿವನಂಶಿಕಮಿದೆಂದು ತಿಳಿವರ್ ವಿಬುಧರ್ ೨೭೪
(ನೀತಿಗ್ರಂಥ)

ಪತಿಯಳಿದ ಸತಿಯರೆಡೆಗಂ
ಸತಿ ಪತಿ ಸಂಯೋಗದೆಡೆಗೆ ದುರ್ಜನರೆಡೆಗಂ
ಅತಿಬಳರ ವಿಷ[ಯ]ಸಂಧಿಗೆ
ಮತಿವಂತಂ ಪೋಗಲಾಗದೆಲೆ ಗುಣರತ್ನಾ ೨೭೫

---

1 ತಾಂ ನಡೆ (ಕ)

*೧೩೮ನೆಯ ಪದ್ಯವಾಗಿಯೂ ಬಂದಿದೆ.

ಜಾರೆಯೆಡೆ ಜಗಳದೆಡೆಗಂ
ಕ್ರೂರಮೃಗಂ ಕಷ್ಟರೆಡೆಗೆ ನಿಷ್ಠುರರೆಡೆಗಂ
ಜಾರ ಹುಸಿ ಪಿಸುಣರೆಡೆಗಂ
ರೋಗಂಕೆಡೆಯಾದೆ ಕೇಡು ತಪ್ಪದೆ ಬಕ್ಕುಂ ೨

ಪತಿಹಿತೆ ಸತಿ [1]ತೋರೆದನೆ[1] ಯತಿ
ಮತಿವಂತನೆ ಮಂತ್ರಿ [2][ಯಿಚ್ಛೆ]ಯರಿ[2]ವನೆ ಚದುರಂ
ಪಿತೃ ಮಾತೃಭಕ್ತನೇ ಸುತ
ಸತತಂ ರಕ್ಷಿಪನೆ ತಂದೆ [3][ಚೂಡಾರತ್ನಾ][3] ೨

(ನೀತಿಗ್ರಂಥ)

ರಕ್ಷಿಪನೆ ತಂದೆ ಹಸಿದರೆ
ಕುಕ್ಷಿಯ ತುಂಬುವಳೆ ತಾಯಿ ಕಡು ದುರ್ಜನರಂ
ಶಿಕ್ಷಿಪನೆ ನೃಪತಿ ಪುರುಷನ
ಪಕ್ಷದೊಳಿಪ್ಪವಳೆ ಸುದತಿ [ಚೂಡಾರತ್ನಾ] ೨

ಫಲಮುಂ ಪುಷ್ಪಮನಂಬುಮ
ನೆಲರಂ ವೀಳೆಯಮನೆಸೆವ ಕಲಸೋಗರಮಂ
ನಲಿದಿದಿರಲೀಯಲರಿಯದೆ
ಸಲೆ ಭುಂಜಿಪನೆಗ್ಗನೀಗೆ [ಚೂಡಾರತ್ನಾ] ೨

ಆರವೆಯು ನೆಳಲು ಹಳ್ಳದ
ನೀರುಂ ಬೆಳುದಿಂಗಳುಂ ಪಥಾಶ್ರಮದೆಲರುಂ
ನಾರಿಯರು ಧರಣಿ ಧನವು ವಿ
ಚಾರಿಸೆಯೆಲ್ಲರೊಳು ಸಮವು [ಚೂಡಾರತ್ನಾ] ೨

ಸಿರಿಯಿಂದಾದತಿಮದ ಮುಂ
ದರಿದ್ರದಿಂದಾದ ಕೇಡುಮುಂ ತನ್ನಿಂದಂ
ಪರಿಹರಿಸಬಲ್ಲ ನೀತಿಗೆ
ಸರಿಯುಂಟೇ ನರರೊಳಗೆ[ಯು ಚೂಡಾರತ್ನಾ] ೨

ಪಸಿದುಂಬುದೊಸೆದು ನೆಲೆವ್ರದಂ
ಬೆಸಗೊಂಡಡೆ ಪೇಳ್ವುದುಚಿತವಂತಲ್ಲದೆಯುಂ

---

1 ದೊರಕಿದನೆ (ಗ) 2 ಯೆಡೆಯರಿ (ಕ) ಯಿಚ್ಛೆಯರಿ (ಗ) 3 .... (ಕಗ)

ಹಸಿದುಣ್ಣದೊಸೆದು ನೆಲೆಯುಡದೆ
ಬೆಸಗೊಳ್ಳದೆ ಪೇಳ್ವನೆಗ್ಗ [ಚೂಡಾರತ್ನಾ] ೨೮೨

ಬೆಸಸಿದೊಡಲಸದಳೇ ಸತಿ
ಪೆಸೆಯುಳ್ಳ ನೆಯರಸು ಅಮೃತಪಸ್ತನೆ ಪೃದ್ಯಂ
ಪೊಸ ಬಗೆಯುಳ್ಳನೆ ಕವಿ (?)
ಪೊಸದೀವನೆ ದಾನಿಯೆಡರಿಗಪ್ಪನೆ ನೆಂಟಂ ೨೮೩

ವಾಣಿಜ್ಯ[1][ಮನತಿ][1] ಕೃಷಿಯಿಂ
ಪ್ರಾಣಮನೊಪ್ಪಿಸುವ ಸೇವೆಯಿಂ ಯಾತನೆಯಿಂ
ಮಾಣದೆ ಮಾಡಿಸುತಿಪ್ಪುದು
ಗೇಣುದ್ದಿನ ಪೊಟ್ಟೆಯೈಸೆ [ಚೂಡಾರತ್ನಾ] ೨೮೪
(ನೀತಿಗ್ರಂಥ ಪು. ೧೯)

ಕೊಡೆ ಕುಂಚ ಗಿಂಡಿ ವಾಹನ
ಪಡಿಗಂ ಪಾದುಕ ಸಮಸ್ತ[2]ವಸ್ತ್ರಂ ಶಸ್ತ್ರಂ[2]
ದಡಿ ದಂಡಿಗೆ ಹಡಪಂಗಳ
ಹಿಡಿದೊಡಲಿಗೆ [3]ಮು[3]ಡಿದು ಭೃತ್ಯರಪ್ಪರ್ ಮನುಜರ್ ೨೮೫
(ನೀತಿಗ್ರಂಥ ಪು. ೧೯)

ಅಱಿಯದ ನೃಪನೋಲಗದೊಳ್
ಎಱಗುತ್ತಡಿಗಡಿಗೆ ಸತ್ತು ಹುಟ್ಟುವ ಬದುಕಂ
ತೊಱೆದು ಜೀವನಕೆ ಹುಳ್ಳಿಯ
ಹೊಱೆಯಂ ಹೊತ್ತಿಹುದು ಲೇಸು [ಚೂಡಾರತ್ನಾ] ೨೮೬

ಮಾಡಿದ ಸೇವೆಯನಱಿಯದ
ಮೂಢ ನೃಪಾಲಕನ ಸೇರಿ ಚಿಂತಿಸುವಪಱಿಂ
ನಾಡೊಳು ಭಿಕ್ಷಾನ್ನವನುಂ
ಡಾಡುವ್ರುದತಿ ಲೇಸು [ಸುಕವಿ ಕರ್ಣಾಭರಣಾ] ೨೮೭

ಪರಗೃಹವಾಸವೆ ಕಷ್ಟಂ
ಸಿರಿಯುಳ್ಳರ ಮನೆಯ ಪೆಣ್ಣ ತಹುದತಿಕಷ್ಟಂ
ಪರಸೇವೆಯಧಿಕ ಕಷ್ಟಂ
ಧರೆಯೊಳು ಬಡತನವೆ ಕಷ್ಟ [ಚೂಡಾರತ್ನಾ] ೨೮೮

---

1 ಮ ನೆರೆ (ಕ) ವನತಿ (ಗ) 2 ಸ್ತ್ರಂ (ಕ) 3 ಪಿಸು (ಕ)

ಬಂದಿಪ್ಪುದುಂ ತುಱುಗಾಯ್ದುದು
ತೋಂಟದ ಮಾಮರಮುಂ ಅಂತಿಯುತ್ತಿದೆ ಮತ್ತಾ
ಗೆಂಟಾಗಿ ಮೋದಮುದ್ದದೆ
ನೆಂಟರ ಸಾರವನೆಸಗ್ಗ [ಚೂಡಾರತ್ನ] ೨೮೯

ಜನನಿ ಗಡ ಜಿಹ್ವೆ ಕಂಗಳ್
ಜನಕಂ ಗಡ ಕರ್ಣ ಬಂಧುಮಿತ್ರಂ ನಾಸಿಕ
ತನಯ ಸತಿ ಹಸ್ತ ಪಾದಂ
ತನು ಘನ ಸಂಸಾರದೊಳು ತಿಳಿವುದು ಜಾಣಂ ೨೯೦

ಆದರಣೆಯಿಲ್ಲದಲ್ಲಿಗೆ
ಪೋದಪೆ ತಾನೆಂದು ಕುದಿದು ಮಱುಗುವನೆಂಗುಂ
ಬೂದಿಯೊಳು ಘೃತವನೆಱೆದುಂ
ಸ್ವಾದಿಸಲೆಳಸುವವ [ಸುಕವಿ ಕರ್ಣಾಭರಣ] ೨೯೧

ಆದರಣೆಯಿಲ್ಲದೂಟಂ
ಸೋದರರಿಂದಾದ ಕಲಹ ಮುಗಿಲೊಡ್ಡಣಮುಂ
ಹಾದಿಗರೊಳಾದ ನೇಹಂ
ಪೋದುವು ತಮ್ಮಿಂದ ತಾವು [ಚೂಡಾರತ್ನ] ೨೯೨

ನಡೆವುದು ನಗೆಗೆಡೆಯಾಗದೆ
ನುಡಿವುದು ನಯ ನೀತಿಯುಳ್ಳ ಸುಜನರೊಳೆಂತುಂ
ಬಿಡುವುದು ಕೆಡೆನುಡಿಯುವರಂ
ಜಡರೊಡನಾಡಲ್ಕೆ ಬೇಡ [ಚೂಡಾರತ್ನ] ೨೯೩

ಕಡುಮೂರ್ಖನೊಡನೆ ನುಡಿಯಂ
ನುಡಿವುದು ಮನಬಿಚ್ಚಿಯಱಿದು ನುಡಿಯುದೊಡೆಂತುಂ
ಕಡುಕಷ್ಟ ದುಃಖಮಕ್ಕುಂ
ನುಡಿವುದು ಸಜ್ಜನರನಱಿದು ನುಡಿವುದೆ ಸಫಲಂ ೨೯೪

ಮಜ್ಜಿಗೆಯಿಲ್ಲದ ಊಟಂ
ಸಜ್ಜನ ಸತ್ಪಾತ್ರ ಮಱೆತು ಕೂಡದ ಸಿರಿಯುಂ
ದುರ್ಜನರೊಡನೆ ಸಮೇಳಂ
ಪಚ್ಚೆಯ ಮರಳೊತ್ತಿದಂತೆ [ಚೂಡಾರತ್ನ] ೨೯೫

ಧರೆಯೆಲ್ಲ ದಾನಶೀಲರೆ
ಮರನೆಲ್ಲಂ ಕಲ್ಪತರುವೆ ಪಶುಗಳ್ ಸುರಭಿಯೆ
ಪರಿವಾರವೆಲ್ಲ ವೀರರೆ
ನರರೆಲ್ಲರು ಜಾಣರಿಪರೆ [ಕನ್ನಡ ಜಾಣಾ] ೨೯೬

ನುತ ಕವಿಗಳ್ ಪೇಳಿದ ಸ
ತ್ಕೃತಿಯೊಳಂ ರಸಿಕನಱಿವವೊಲ್ ಕವಿಯುಱಿಯಂ
ರತಿಯೊಳ್ ಲಲನಾಸುಖಮಂ
ಪತಿಸಱಿವನೆ ಪತಿಯು ತೆಱದಿ [1]ಕನ್ನಡಜಾಣಾ[1] ೨೯೭

ಒತ್ತೆಯ ಸೂಳೆಯರೊಲವಂ
ಮುತ್ತದ ಪೂವಿನೊಳು ಕಂಪನೊಲೆಯೊಳ್ ತಂಪಂ
ಪತ್ತಿಯೊಳು ರಸಮನಱಸುವು
ದೆತ್ತಣ ಸಾಹಿತ್ಯಪೈಸೆ [ಕನ್ನಡ ಜಾಣಾ] ೨೯೮

ಕೊಡುವರೆಡೆಯಾಡಲೀಯದೆ
ಕೊಡುವುದು ಕೊಡದಿರ್ದೊಡಿಲ್ಲವೆಂಬುದು ಮತ್ತಾ
ಕೊಡುವನ ಬೇಡುವನೊಡಲುಂ
ಕೆಡುವನ್ನಕ ಮುಸಿದರುಂಟೆ [ಕನ್ನಡ ಜಾಣಾ] ೨೯೯

ಆಗಲೆ ಕೊಡು[2][ವಂ][2] ಚದುರಂ
ಬೇಗದೊಳಿಲ್ಲೆಂದು ಕಳುಹುವಾತನು ಚದುರಂ
ಆಗೀಗಲೆಂದು ಕಾಲವ
ನೀಗುವವ ತ್ಯಾಗಿಯೆಲ್ಲ ನರರೊಳಗಧಮಂ ೩೦೦

ಉರಗಂಗಂಜುವ ತೆಱದಿಂ
ಗರುಡಂಗಂಜುವರೆ ಭೂತಕಾಲಕೆತರ್ಗಂ
ಕರೆದೀವ ತೆಱದಿ ಸುರಸರ
ನಱಿದೀವರೆ ಧಾತ್ರಿಯಲ್ಲಿ [ಕನ್ನಡ ಜಾಣಾ] ೩೦೧

ಭಂಡರಿಗೆ ಭಾಷೆಹೀನಗೆ
ಲಂಡರಿಗಂ ಮಿಂಡಿ ಸಹಿತ ಬಂದಿರ್ದರಿಗಂ

---

1 .... (ಕ) 2 ವ (ಕ)

ಕಂಡಾಕ್ಷಣದೊಳ್ ಕೊಡುವರು
ಪಂಡಿತರೆನೆ ನೋಡರವರು [ಕನ್ನಡ ಜಾಣಾ] ೩೦೨

ಕಿನ್ನರಿಯ ಬಾಯ ಬೂತಿನ
ಕನ್ನೆಯುರಿಗೆ ಸೂಳೆಯರ್ಗೆ ಕುಂಟಗೊಂಡುಗರ್ಗಂ
ಉನ್ನತ ವಸ್ತುವನೀವರು
ಸನ್ನುತ ವಿದ್ಯಾಧಿಕರ್ಗೆ ಕೊಡುವವರುಂಟೇ ೩೦೩

*ಮದ್ದಳೆಯ ಗತಿಗೆ ಜಘನಗ
ಳೆದ್ದಾಡಲು ನಗುತ ಕಂಡು ಲಾಲಿಪರಲ್ಲದೆ
ಪದ್ಯ ಪದ ಕಾವ್ಯದರ್ಥವ
ನೊದ್ದಿಗರೇಂ ಬಲ್ಲರೇ ವಿದಗ್ಧಲಲಾಮಾ ೩೦೪

ಆಡಗಂ ತಿಂಬಗೆ ಭಂಗಿಯ
ಮಡಿಯುಂ ಮುಕ್ಕುವಗೆ ಕಳ್ಳ ಕುಡಿವಗೆ ಕಮಿನಗೆ
ಕಡುನೀಚಗೆ ಕಾಳ್ಗೆಡವಗೆ
ಕೊಡುವಂತುಟು ಮಾನ್ಯತತಿಗೆ ಕೊಡುವವರುಂಟೇ ೩೦೫

ಕೂಟದಲಿ ಕಪಟ ಹೊಲ್ಲಂ
ಊಟದೊಳಿರದಾಗಿ ಬಡಿಸುತಿಪ್ಪುದು ಹೊಲ್ಲಂ
ನಾಟಿಯುದಯದಲಿ ಹೊಲ್ಲಂ
ಕೋಟಿಯ ಕನಸಿನಲಿ ಹೊಲ್ಲ [ಕನ್ನಡ ಜಾಣಾ] ೩೦೬

ಅರಗಿಳಿಯಿಲ್ಲದ ವನಮುಂ
ಗುರುವಿಲ್ಲದ ಮಠವು ಹಿರಿಯರಿಲ್ಲದ ಮನೆಯುಂ
ಗುರುವಿಕೆಯಿಲ್ಲದ ಸತಿಯುಂ
ಪರವಿಲ್ಲದ ದೈವವೇಕೆ [ಕನ್ನಡ ಜಾಣಾ] ೩೦೭

ಪರಮಪದದಲ್ಲಿ ನಂಬುಗೆ
ಯಿರದುಳ್ಳಡೆಯಿರದುಮುಂಟು ಜನನಂ ಮರಣಂ
ಪರಮಪದದಲ್ಲಿ ನಂಬುಗೆ
ಯಿರದಿಲ್ಲದೊಳಿರದುಮಿಲ್ಲ ಜನನಂ ಮರಣಂ ೩೦೮

*ಇದು ೯೯ನೆಯ ಪದ್ಯವಾಗಿಯೂ ಬಂದಿದೆ.

ದಾನದೊಳನ್ನವೆ ಸಾರಂ
ದಾನಂಗೊಡಲಿಲ್ಲದಂಗೆ ನಯ ನುಡಿಸಾರಂ
ಜ್ಞಾನಿಗೆ ಮೋಕ್ಷವೆ ಸಾರಂ
ಏನುಂ ಮಾತಱಿಯದಂಗೆ ಮೌನವೆ ಸಾರಂ ೩೨೯

ತಿರಿದುಂಬರೆ ಕರೆದುಂಬುದು
ತಿರಿಯದೆಯುಟ್ಟುಂಬರಿಕ್ಕಿಯುಂಬುದು ಮತ್ತಾ
ಕರೆಯದೆಯಿಕ್ಕದೆಯುಂಡರೆ
ನರಕಿಯವಂ ಮನುಜರೊಳಗೆ [1]ಕನ್ನಡ ಜಾಣಾ[1] ೩೧೦
(ನೀತಿ ಗ್ರಂಥ ಪು. ೧೭)
ಕರೆಯದೆ ಬಂದುಂಬೂಟಂ
ಸುರತಕ್ಕನುಕೂಲೆಯಲ್ಲದವಳೊಡನಾಟಂ
ಪರವಧುಗೆಳ[2]ಸಿದ ನೋಟಂ[2]
ಧರೆಯೊಳ[ಗ]ಪಕೀರ್ತಿ ನಾರಿಯಲ್ಲಿಯ ಬೇಟಂ ೩೧೧
(ನೀತಿ ಗ್ರಂಥ ಪು. ೧೭)
ಉಂಬ ವೇಳೆಯಲಿ ಹಿರಿಯರು
ಇಂಬರಿಯದೆ ಬಂದಡವರಿಗಿಕ್ಕುವ ಮನುಜಂ
ಅಂಬುಜನಾಭಗೆ ಬ್ರಹ್ಮಗೆ
ಶಂಭುವಿನಿಂದಧಿಕನಹನು [ಕನ್ನಡ ಜಾಣಾ] ೩೧೨
(ನೀತಿ ಗ್ರಂಥ ಪು. ೧೭)
ಪಂಚಮಹಾಪಾತಕಮುಂ
[3]ವಂಚನೆಯುಂ[3] ಪಾಪದೋಷಮುಂ ಕೊಲೆ ಹೊಲೆಯುಂ
ಸಂಚಲಿಸದ ಬ್ರಹ್ಮತಿಯುಂ
ಹಂಚುಂಹರಿಮಾಳ್ಪವನ್ನದಾನವೆ ಸಫಲಂ ೩೧೩
(ನೀತಿ ಗ್ರಂಥ ಪು. ೧೭)
ಅನುಜರ ಮಿತ್ರರ ಸುಜನರ
ತನಯರ ತನ್ನವರ ನೆಂಟರಿಷ್ಟರ ಗುಣಿಗಳ
ಮುನಿಗಳನುತ್ತಮ ಪಿರಿಯರ
ವಿನಯದಿ ಸಮಪಂತಿಯೂಟದವರ್ಗೆಣೆಯುಂಟೇ ೩೧೪
(ನೀತಿಗ್ರಂಥ ಪು. ೧೮)

1 .... (ಕ) 2 ನುವ ಬೇಟಂ ಸಿರಿ ಧನ ಲಜ್ಜೆಗಳ ಕೇಡು (ಕ) 3 ವರನೆಮ್ಮ (ಗ)

ಎಡೆಮಾಡೆಂಬುದು ತನ್ನಯ
ಗಡಣದಲಿಹಬಳಿಬಲಿಕ್ಕೆ[1]ರು[1]ಬರೆ ಪುತ್ರಾ
ತುಡುಗುಣಿಯಂದದಿ ತಿಂಬರೆ
ಮುಡಿಗಿಂಬಾ ನುಡಿಯದೇಕೆ [ಕನ್ನಡ ಜಾಣಾ] ೩೧೫
(ನೀತಿ ಗ್ರಂಥ ಪು. ೧೮)

ಹಪ್ಪಳ ಸಂಡಗೆ ಶಾಖಂ
ತುಪ್ಪಂ ಸಕ್ಕರೆಯುತನ ತೋವೆ ಪಳಿದ್ಯಂ
ಉಪ್ಪಿನಕಾಯ್ಗಳ ಮೊಸರುಂ
ಚಪ್ಪರಿದುಂಬುವನೆ ದೇವ [ಕನ್ನಡ ಜಾಣಾ] ೩೧೬

ಹೂರಿಗೆ ಘಾರಿಗೆ[2]ಯೊಡೆಯು
ಉಣ್ಣ[2]ರಿಗೆ ಪರಮಾನ್ನ ದಸವ ಭಕ್ಷ್ಯಫಲಂ ಘೃತ
ಕ್ಷೀರವೆರಸೊಲದು ಪಂತಿಯೊ
ಳಾರೋಗಿಸುವನೆ ದೇ[3]ವಂ [ಕನ್ನಡ ಜಾಣಾ][3] ೩೧೭
(ನೀತಿ ಗ್ರಂಥ ಪು. ೧೯)

ಹಾಗಲ ಗುಳ್ಳಂ ಪಡಲಂ
ಕೂಗರಿ ಕೂಷ್ಮಾಂಡವವರೆ ಬದನೆಗಳಂ ಲೇ
ಸಾಗಿರೆ ಮಾಡಿದ ಸವಿ ಮೇ
ಲೋಗರವುಂಬವಗೆ ದೇವ [ಕನ್ನಡ ಜಾಣಾ] ೩೧೮

ಸೂಜಿ ಕವಲಾದ ತೆಱದಿಂ
ರಾಜಾರ್ಥಕೆ ಪಲಬರೊಡೆಯರಾಗಲ್ ಪುತ್ರಾ
ತೇಜಿಷ್ಟರು ಘನವಾಗಲು ಆ
[4][ರಾಜ್ಯಂ ಕೆಟ್ಟುಂ ಕಡೆಯೊಳರಸನುಂ][4] ಕೆಡುಗುಂ ೩೧೯

ಭೀತನನಲಸಿದನಂ ಕಾ
ಯಾರ್ತುರನಂ ಪಸಿದನಂ ತೃಷಾಪೀಡಿತನಂ
ದ್ಯೂತ ಮೃಗವ್ಯಸನ ಜನೋ
ಪೇತನನಱ[5]ದೆಪ್ಪ ಬಿನ್ನವಿಪ್ಪನೆ[5] ಗಾಂಪಂ ೩೨೦
(ಪಂಚತಂ–೮೫–೩೨ ; ಸೂಕ್ತಿಸು. ೧೬–೩೦)

---

1 ವರುಂ (ಕ) 2 ಬೊಡೆಯುಂಣೂ (ಕ) ಯುಂಣ್ಣ (ಗ) 3 ವ .... (ಕ)
4 ರಾಜ್ಯಕೆಟ್ಟು ಕಡೆಯೊಳಸು (ಕ) 5 ಪಱದು ಬಿನ್ನವಿಪ್ಪಂ (ಗ)

ಹರುಷದನಂ ದರಹಾಸನ
ಸರಸನನತಿಶಯುನ ವಿನಯು ವಿತರಣದೊಳ್
ಪೊರೆದನನಱಿದುಂ ಬಿನ್ನವಿಪಂಗೆ
ಡರೊಂದುಂಟೆ ಸುಕವಿಕರ್ಣಾಭರಣಾ (?) ೩೨೧

ಕಂಡುದನು ನುಡಿಯಲಾಗದು
ಕಂಡಡೆ ಕಡೆಗಣಿಸಿ ಕಳೆದು ಪೆಱರವಗುಣಮಂ
ಕಂಡೆಸಗದವನೆ ಸದ್ಗುಣಿ
ಕಂಡರೆ ಕಾಣದವೊಲಿಪ್ಪನಾತನೆ ಚದುರಂ ೩೨೨

ಕಾಣದು[1][ದಂ][1] ನುಡಿಯಲಾಗದು
ಕಾಣದುದಂ ಕಂಡೆನೆಂಬನಂತತಿಮೂರ್ಖಂ
ಗೋಣನರಿದಿಡುವನಾತಂ
ಮಾಣಂ ಮಾಯಾವಿ ಹುಸಿಗೆ ಮೂಲಸ್ತಂಭಂ ೩೨೩

ನಾರಿ ಮನೆಕಳ್ಳೆಯಾದೊಡೆ
ಕೇರಿಯು ತಳವಾರ ಚೋರನಾದೊಡೆ ಮತ್ತಾ
ಬಾರಿಕ ಕೊಂಡೆಯನಾದೊಡೆ
ಊರೇಳಿಗೆಯಾಗಲಿಲ್ಲ [ಕನ್ನಡ ಜಾಣಾ] ೩೨೪

ಹಾಳೂರಲಿರವು ಬಡತನ
ಸಾಲಂಬಟ್ಟೂಟ ತುಪ್ಪವಿಲ್ಲದ ಹಬ್ಬಂ
ವೀಳೆಯವಿಲ್ಲದ ಮೊಗಮುಂ
ಬಾಳೇಂ ಪ್ರತ್ಯಕ್ಷ ನರಕ [ಕನ್ನಡ ಜಾಣಾ] ೩೨೫

ವೀಳಯಮೋ ಮುಖಲಕ್ಷ್ಮಿಯು
ಪಾಳಯಮೋ ಜಾಡ್ಯವೃತ್ತಿಯುಂ ಚಾಳಿಸುಂತಿಪ
ಚಾಳಯಮೋ ರತಿಕೇಳಿಯ
ವೀಳಯಮೋ ಸುರರಿಗುಂಟೆಯಾ ತಾಂಬೂಲಂ ೩೨೬

ಸುತರಿಲ್ಲದ ಧನ ಶೂನ್ಯಂ
ಅತಿಪ್ರಿಯದ ಬಂಧುವಿಲ್ಲದಾ ಪುರಶೂನ್ಯಂ

1 ದನು (ಕ)

ಸತಿಯಿಲ್ಲದ ಗೃಹ ಶೂನ್ಯಂ
ಅತಿಪೂರ್ಣನ ಹೃದಯ ಶೂನ್ಯ [ಕನ್ನಡ ಜಾಣಾ] ೩೨೭

ಧಣಿಯಿಲ್ಲದ ಧರೆ ರೋಗಂ
ಅಣಿಯರದಿಂ ಪಾಳ್ಪ ವಿಷಯವೆಂಬುದು ಜಗಮುಂ
ಗುಣ ದಯವಿಲ್ಲದುದೆ ಹಗೆ
ಮಣಿವಗೆ ಮಚ್ಚರಿಸುತಿಪುದೆ ಕುಂಭೀನರಕಂ ೩೨೮

ಮಾತುಗಳನಱಿಯದಾತನ
ಮಾತುಗಳವು ಮಾತೇ ನುಡಿವ ಸಮಯಕ್ಕೊಂದುಂ
ಮಾತುಗಳನಱಿದು ನುಡಿವನ
ಮಾತು ಜಗನ್ಮಾತೆಯಲ್ಲೆ [ಕನ್ನಡ ಜಾಣಾ] ೩೨೯

ಕಟಕಿಯಂ ನುಡಿವನ ಮಾತುಂ
ಕುಟಿಲವ ಮಾಡುವಳ ಬೇಟ ಹಾವಿನ ಕೂಟಂ
ಅಟಮಟಿಗರೊಡನೆಯಾಟಂ
ಡಿಟದಿಂದಪಸಿರ್ದ ಕೇಡು [ಕನ್ನಡ ಜಾಣಾ] ೩೩೦

ಸೈರಣೆಯೆಂಬುದು ಮೈಸಿರಿ
ಸೈರಣೆ ಜಪತಪವು ದಾನಧರ್ಮಂ ಮತ್ತಾ
ಸೈರಣೆ ಶಾಶ್ವತ ಸುಖಮುಂ
ಸೈರಣೆ ಸರ್ವರ್ಗೆ ಹಿತವು [ಕನ್ನಡ ಜಾಣಾ] ೩೩೧

ಸೈರಿಸಿ ಕಾರ್ಯವ ಕೊಂಬುದು
ವೈರಿಯ ಮನದಿಚ್ಛೆಯಱಿದು ನಡೆವುದು ಮತ್ತಾ
ಸೈರಣೆಗಳಿಲ್ಲದಾ ಗೃಹ
ವೈರಿಗೆ ಜಯ ತನಗೆ ಹಾನಿ [ಕನ್ನಡ ಜಾಣಾ] ೩೩೨

ಸತ್ಯವು ಗುರು ಸತ್ಯವು ತಪ
ಸತ್ಯವು ಸಾಮರ್ಥ್ಯ ಸತ್ಯ ಶೌಚವು ಸಹಜಂ
ಸತ್ಯವು ಭೂಷಣ ಭೋಗಂ
ಸತ್ಯವೆ ಗುರು ಮೋಕ್ಷ ಬಂಧು ದೈವವಂದಲ್ತೇ ೩೩೩

ಉಪಕಾರವ ಮಾಡುವಡಂ
ಕುಪಿತಾತ್ಮರ್ಗೊಲಿದು ಮಾಡಲಾಗದು ಮಾಡ

ಲ್ಕುಪಕಾರಮಕ್ಕುಮದಱಿಂ
ದುಪಕಾರವ ಮಾಳ್ಪುದೈಸೆ ಸತ್ಪುರುಷರ್ಗಂ ೨೨೪

ಗುಣಿಯು ಗುಣಾವಳಿಯುಂ ಸ
ದ್ಗುಣಿಗಳು ನೆಱೆ ಬಲ್ಲರಲ್ಲದವಗುಣಿಯಱಿಯಂ
ಗುಣಮುಳ್ಳ ಪುಷ್ಪವನವಂ
ನೊಣ ಬಲ್ಲುದೆಯಳಿಯ ತೆಱದಿ [ಚೂಡಾರತ್ನಾ] ೨೨೫

ಗುಣವಱಿಯದ ಚಾತುರ್ಯದ
ಕಣೆಯಱಿಯದ ತಮಗೆ ಹಿತವರೆಂಬುದನಱಿಯದ
ಬಣಗುಗಳೊಡನಾಟಂ ಸ
ದ್ಗುಣಿಗಳಿಗದು ಕಾಳಕೂಟ [ಚೂಡಾರತ್ನಾ] ೨೨೬

ಗುಣಿಯುಂ ಕಂಡಡೆ ಸೈರಿಸ
ಗುಣಹೀನಂ ಶುನಕ ಚಂದ್ರನಂ ಕಾಣಲೊಡಂ
[1]ಮುನಿಗು[1] ಗುಣಿ ಮುನಿಯಲರಿಯಂ
ಗುಣಿಗಂ ಚಂದ್ರಂಗೆ ಬೆಳಗುತಿಪ್ಪುದೆ ಸಹಜಂ ೨೨೭

ಸರಿಯಲ್ಲದವರು ನುಡಿದರೆ
ತರಲಾಗದು ಮನಕೆ ಮುನಿಸದೆಂತೆನೆ ಪೇಳ್ವೆಂ
ಕರಿಗಳ ಘರ್ಜನೆಗಲ್ಲದೆ
ನಿರದೂಳುವ ನಾಯ ಧ್ವನಿಗೆ ಪಾಯ್ವುದೆ ಸಿಂಹಂ ೨೨೮

ಚಂ॥ ಅಱಿಯದು ಕಪ್ಪೆ ಸಾಗರವನಂಬುಧಿಗಂತದು ಕುಂದೆ ಗಂಗೆ ಕಂ
ಡಱಿಯದು ಚಂಡರೋಚಿಯುನಿನಂಗದು ಭಂಗಮೆ ಕಾಗೆ ಕಂ
ಡಱಿಯದು ಚಂದ್ರನಂ ಶಶಿಗೆ ಹೀನಮೆ ಸಜ್ಜನರೊಳ್ಪನಿಂ
ತಱಿಯದೆ [2]ದುರ್ಜನಂ ನಡೆಯೆ[2] ಕಷ್ಟತೆ ಪೊರ್ದುಪುದೇ ನಿರಂತರಂ ೨೨೯
(ಧರ್ಮಾಮೃ : ೧–೧೧೭)

ಮ॥ ಕರಿಯಂ ಸೂಕರಿ ಸಿಂಹಮಂ ಶುನಕನಾ ಭೇರುಂಡನಂ ಪರ್ದು ಮ
ತ್ತುರಗಾಧೀಶನನೊಳ್ಳೆ ಕಾಗೆ ಪಿಕನಂ ಕೆಂಬೂತ ಮಯ್ಯೂರನಂ
ಹರಿಯಂ ಕತ್ತೆ ಮರಾಳನಂ ಬಕನು ಕೈಲಾಸಾದ್ರಿಯಂ ಕಪ್ಪೆ ಕ
ರ್ಪ್ಪುರಮುಂ ಸುಣ್ಣವಲಕ್ಕು ಮೆಚ್ಚದೊಡದೇಂ ಭಂಗಂಗಳೇ ಧಾತ್ರಿಯೊಳ್ ೨೩೦

1 ಗುಣಿಗೆ (ಕ) 2 ದೂರ್ತನಿಂ ಪೞಿಯೆ (ಗ)

ಪುಲಿ ಪದುಗೆ ಪುಲ್ಲೆ ಪಾಜಿಲು
ಪುಲಿಗಾದಾ ಕೊಜಕೆಯುನು ಕಾವೇರ್ರಾಂತರದೊಳ್
ಗೆಲುವದನೆ ನೋಡಿಕೊಂಬುದು
ಚಮುಂ ಸಲೆ ಸೋತರೇನು [ಜೋಪಾರತ್ತಾ] ೩೯೧

ಮುತ್ತಬ್ಬೆಗೇಕೆ ಮೋಹನ
ಮೊತ್ತಲ್ಲಬ್ಬೆಗೇಕೆ ಒಲಿದಿಕೆ ಮೆಕ್ಕೃದೆ (?)
ಕೊತ್ತಿಂಗೆ ಪಾಸುಮಂಚಂ
ಕತ್ತೆಗೆ ವೈದಾಳಿಯೇಕೆ [ಜೋಪಾರತ್ತಾ] ೩೯೨

ನೀರಡಗುಂ ನೆಲನಡಗುಂ
ಕ್ಷೀರರಸಂ ಧಾನ್ಯವಡಗು ಪಣ್ಫಲವಡಗುಂ
ನಾರಿಯಡಗಪಿಳಿವಡಗುಂ
ಆರೋಗ್ಯವಡಗು ದೇಪ ದುಸ್ಸರೆಯುಡಗುಂ ೩೯೩

ಪರಿ ಹದ್ದಂ ಹರಸೆತ್ತಂ
ಸರಸಿಜಭವನಂಚೆಯುಂ ಕುಮಾರಂ ನವಿಲಂ
ಪರಿತುಧರನಿಲಿಯುನೇಜಿಲು
ಅರಸಂಗೆ ತಾನೆ ಕುದುರೆ [ಜೋಪಾರತ್ತಾ] ೩೯೪

. ಸುಂಕಿಗಗೆ ಜೂಜು ಸುರಗಿಯು
ಅಂಕದವಂಗರಸು ಸೂಳೆಯುತಿಬಡವಂಗು
ಸಂಕಿಸದೆ ಕಡನ ಕೊಟ್ಟಡೆ
ಭೋಂಕನೆ ಕೇಡಾಗಿರುವುದೆ [ಜೋಪಾರತ್ತಾ] ೩೯೫

ಬೋಳಿಗೆ ಬೈತಲೆ ಸಂತೆಯು
ಮಾನಸಿಕೆ ಬೇಡುವರ್ಗಭಿಮಾನಂ
ಲಾಳಿತೆ ನಂಬು ಭಿಕ್ಷದ
ಕೂಳಂಗಪ್ಪುಣಿಗೆಯೇಕೆ [ಜೋಪಾರತ್ತಾ] (?) ೩೯೬

ದೇಶಾಧಿಪತಿಗೆಯಾ ಹರ
ಲೇಸಾಗಿಯೆ ಸೊಪ್ಪಿಗಕ್ಕೆ [1][ಯೆರೆಯುಂಬ][1] ತುಪ್ಪಂ

1 ಯರವ (ಕ)

ಹಾಸಿನೊಳರ್ಥಂ ತನ್ನದು
ಈಸುಂ ಪೆಱರೊಡವೆಯಲ್ತೆ [ಜೂಪಾರತ್ನಾ] ೩೪೭

ಅರಿವಶ್ಯಂ ನಿಶ್ಯಂಕತೆ
ಗುರುವಶ್ಯಂ ಭಕ್ತಿ ಲೋಕವಶ್ಯಂ ತ್ಯಾಗಂ
ಪರಿಣಾಮದಾತ್ಮವಶ್ಯಂ
ಮನದ ಬಲ್ಪು (?) ೩೪೮

ರತಿಸುಖದ ಕಡೆಗೆ ಮೋಹಿಪ
ಸತಿಯುದು ಲಾವಣ್ಯಮುಂಡು ದಣಿದ ಬಳಿಕ್ಕಂ
ದತಿರುಚಿಪಡಿಸುವುದೂಟಂ
ನುತರಂ ನುತಿಸಲ್ಕೆ ಬಲ್ಲಡಾಕನೆ ಪ್ರವ್ರಡಂ ೩೪೯

ಆಲಸ್ಯನುಮವಿವೇಕಿಯು
ಸ್ತ್ರೀಲೋಲನುಮಧಿಕಲೋಭಿಯುಂ ನಿರ್ದಯನುಂ
ನಾಲಗೆಗೆ ಸೋಲ್ವ ನರನುಂ
ಪಾಲಿಸಲಾರ್ತಪನೆ ಜೈನಮತಮುಂ ಹಿತಮುಂ ೩೫೦

ಕೋಮಟಿಗನ ವಿಶ್ವಾಸಂ
ಕಾಮಿನಿಯರು ನುಡಿದ ನುಡಿಯು ಕನಸಿನ ಸಿರಿಯುಂ
ಕಾಮುಕನ ಲಜ್ಜೆ ವೈರಿಯ
ಪ್ರೇಮವ ನಿಜವೆಂದು ನಂಬಲಾಗದು ಚದುರಂ ೩೫೧

ಅನುಪಮ ಗುಣ[1]ಗಣಯುಕ್ತೆಯ[1]
ನನುಕೂಲೆಯನಧಿಕ ಪುಣ್ಯಲಕ್ಷ[2]ಣೆ[2]ಯುಂ ಮಾ
ನಿನಿಯುಂ ಸುರೂಪ[3]ವತಿ[3]ಯುಂ
ಜನಪಂ [4]ಮಾಟ್ಕುಂ ಕುಲಾಂಗಿಯುಂ ನಿಷ್ಟಯಿಂ[4] ೩೫೨

(ಮದತಿ. ೬-೫೨ : ಸೂಕ್ತಿಸು. ೮–೧೧೩)

ಅನುಪಮಂವವರ್ಗಳ ಕಾಮುಂ
ಮನ[5]ಸಿಜ[5]ಸುಖವಿಲ್ಲ ಸೆಱೆಯೊಳಿರ್ಪುದಱಿಂದಾ

1 ಯುಕ್ತೆಯು ತಾ (ಗ) 2 ಯುತೆ (ಕ) 3 ಯುತೆ (ಕ) 4 ಮಾಳ್ಕೆಂದುಮಾ ಕುಲಾಂಗಿಯು ಸತಿ ಕೇಳ್ (ಗ) 5 ಕೆ (ಕ)

ವನಿತೆಯರಿನಪಾಯಂಗ[1]ಳೆ
[illegible] [2]ಚದುರಂ[2] ೩೫೩
(ಮದತಿ ೬-೫೬ : ಸೂಕ್ತಿಸು. ೮-೧೧೫)

ಮಜ್ಜನದಡಪದ ಕರಗದ
ಸೆಳ್ಳೆಯ [illegible] ಕೋಶಮುಮಂ
[4]ಬೆಜ್ಜುತನ[illegible][4]ಮಂ ಪೆಜ
ತುಜ್ಜುಗಮಂ [illegible] ಕೆಟ್ಟಂ ೩೫೪
(ಮದತಿ ೬-೫೭ ; ಸೂಕ್ತಿಸು ೮-೧೧೬)

ಒಲಪೆಂದುಂ ನಿಲಲರಿಯದು
[illegible] ತಾಂ
ಲಲನೆಗೆ [5]ಪುರುಷವೃದ್ಧಿಯುಮಂ[5]
[6][illegible][6] [illegible] ೩೫೫
(ಮದತಿ. ೬-೫೯ ; ಸೂಕ್ತಿಸು. ೮-೧೧೭)

ಪಲತೆಜದ ತೊಡಗೆ ಬಿಡದಂ
[illegible][7] [illegible] ಕೊತ್ತಂ
ತಲಸದೆ [8]ಸಂಭೋಗ[8]ದೊಳಂ
[illegible] ೩೫೬

(ಮದತಿ. ೬-೬೧ : ಸೂಕ್ತಿಸು. ೮-೧೧೯)

ಅವಗೆ ಬಹುವ್ಯಾಪಾರ[9]ಮು
[illegible][9] [illegible][10] [illegible][10] [illegible]
[illegible] ಸಂಕುಚಿತನೆ [illegible]
[11][illegible][11] [illegible] [12][illegible][12] ೩೫೭
(ಮದತಿ. ೬-೬೩ ; ಸೂಕ್ತಿಸು. ೮-೧೨೦)

---

1 [illegible] (ಗ) 2 [illegible] (ಕ) 3 [illegible] (ಕ) 4 [illegible] (ಗ) 5 [illegible] (ಗ) 6 [illegible] ತಾಂ (ಗ) 7 ಟ್ಟಿ (ಕ) 8 ಸಭಾಂಗಣ (ಕ) 9 [illegible] (ಕ) 10 [illegible] (ಗ) 11 ತುಷ್ಟವಡಿಸಿ (ಕ) 12 ನರಪಂ (ಗ)

ಮನೆವಾರ್ತೆಯ [1]ಕೋಟಲೆಯೊಳ್[1]
[2]ಜನಪದ ಗಮನಂಗಳೆಡೆಯೊಳಂಗಜರಾಗಂ[2]
[3]ಜನಿಯಿಕುಮೆಂದು[3] ಕೆಲರ್ ಸ
ಜ್ಜನದಿಂ ಮನೆವಾರ್ತೆಗೆಯ್ವಲೊಲ್ಲರ್ ಚದುರರ್ ೩೫೮
(ಸೂಕ್ತಿಸು. ೮-೯೫)

ಕಡುಗೂರ್ತೊರ್ಮೆಯೆ ಪೊಕ್ಕ[4]ಳಂ ಕ[4]ನಕಮಂ ತಾನೀಯಲಾಗಳ್ ಕರಂ
[5]ಕುಡುಗುತ್ತುತ್ತಮ[5] ವಸ್ತ್ರಮಂ ಘುಸೃಣಮಂ ಕಸ್ತೂರಿಯಂ ಪುಷ್ಪಮಂ
ಮುಡಿಯಂ ಚಂದನಮಂ ಫಲಾವಳಿಗಳಂ ಕರ್ಪೂರಮಂ ನಿಚ್ಚಲುಂ
ಪಡೆಮಾತೇಂ ಪರಿರ[6]ಕ್ಷೆ ಮಾಡಿ[6] ವನಿತಾಸಂಗಕ್ಕೆ ಭೂಪಾಲಕಂ ೩೫೯
(ಮದತಿ. ೬-೬ ; ಸೂಕ್ತಿಸು. ೮-೧೧೮)

ನಗೆಯಿಂ ನೋಟದಿನೊಳ್ಪಿನಿಂ ವಿಭವದಿಂ ಸೌಂದರ್ಯದಿಂ ಧೈರ್ಯದಿಂ
ಬಗೆಯಿಂ [7]ಬ[7]ಲ್ಪಿನಿನಿಂ[8]ಬುಗೆ[8]ಯ್ವ ರತಿಯಿಂ ಚಾತುರ್ಯದಿಂ ಶೌರ್ಯದಿಂ
ಮಿಗಿಲೀತಂ ಪೆಱರ್ಗೆಂದು ತನ್ನ ವಧುವಂ ನಚ್ಚಿರ್ಪಿನಂ ಮಾಳ್ಕೆ ಭಾ
ಷೆಗಳಿಂ ಪ್ರೇರಕದಿಂ ಕುಲಾಂಗನೆಗೆ ಹೃತ್ಸಂತೋಷಮಂ [9]ಸಮ್ಬುಧರ್[9] ೩೬೦
(ಮದತಿ. ೬-೪೯ ; ಸೂಕ್ತಿಸು. ೮-೧೧೨)

ಗುರುಗಳ ನಂಟರ ಕೆಳೆಯರ
ಪ್ರೊರೆವಾಳ್ವನ ಮೆಚ್ಚದವರ ಸವತಿಯ ಕೆಲದೊಳ್
ಪರಿಭವಿಸಲು [10]ನೆರೆವತ್ತಲು[10]
ಕರಮುಳಲಿಸಲಾಗದಾತ್ಮ ಸತಿಯಂ [11]ಪುರುಷಂ[11] ೩೬೧
(ಮದತಿ. ೬-೧೩ ; ಸೂಕ್ತಿಸು. ೮-೯೬)

[12]ಪತಿಭಕ್ತೆಯ[12] ಧರ್ಮಜ್ಞೆಯ
[13]ಮತಿವಂತೆಯ[13] ಸಂದ ಶೌಚವಂತೆಯ [14]ಸ[14]ತ್ಯಾ

---

1 ಕೋಟಲೆಯೊಳಂ (ಗ) 2 ಜನಪತಿಯೆನಿಸು ಭವನೋದಯಂದಮಂಗಜರಾಜಂ (ಗ) ಜನಿಯಿಸಮೆಂದು (ಗ) 4 ಳಕ್ಕ (ಕ) 5 ಕಡುಗತ್ತ್ಯುನ್ನತ (ಗ) 6 ಕ್ಷಣಮಾಗಿ (ಕ) ಮೆ (ಗ) 8 ಪ್ರಕೆ (ಕ) 9 ಮಾಡುಗುಂ (ಗ) 10 ನರನೆತ್ತಲು (ಗ) 11 ವಧುವಂ ಸತಿಯುಂ (ಗ) 12 ಮತಿವಂತೆಯು (ಗ) 13 ಪತಿಭಕ್ತೆಯ (ಗ) 14 ಸ (ಗ)

ನಿತವಚನೆಯ ಕಥೆಯನೆ ಪೇ
ಳ್ವ ತಿರುಳಿಂ ತನ್ನ [1]ಸತಿಗೆ ಪಂಡಿತನಪ್ಪಂ[1] ೩೬೨
(ಸೂಕ್ತಿಸು. ೮-೯೬)

ಸುದತಿಯರಾರುಂ ಸಂಸ
ಗದ ಕತದಿಂ ದೋಷಮಂ ಗುಣಂಗ[2]ಳುಮಂ ಮಾ
ಣದೆ[2] ಕೈಕೊಳ್ವುದಱಿಂದಂ
[3]ಸುಪತಿಗೆ[3] ಯೋಜಿಸುಗೆ ನೀತಿಯುಂ ಧರ್ಮಮುಮಂ ೩೬೩
(ಮದತಿ, ೫-೧೪ ; ಸೂಕ್ತಿಸು. ೮-೯೭)

ಅತ್ತೆ ಮೊದಲಾಗಿ ಸಮೀಪ
ಸ್ಥಿತ ವೃದ್ಧಮದೆಂತುಟಾವಡಂ ಪ[4]ಯರ್[4]ಗುಮಾ
ಸ್ಥಿತಿಯುಂ ಸತಿಸಂ[5]ಸರ್ಗದ[5]
ಕತದಿಂ [6]ಕೆಟ್ಟಾರೋಗ್ಯದೊಡಂ[6] ಪ್ರಮಾಣಿಕ್ಕುಂ ೩೬೪
(ಮದತಿ. ೬-೧೫ ; ಸೂಕ್ತಿಸು. ೮-೯೮)

ಮನುಮತಮಂ ವೇದಾಂತಾ
ದ್ಯನೇಕ ಧರ್ಮಾಗ[7]ಮಂಗಳಂ ಕಲ್ತಿದರ್[7]
ಮುನಿಪರುಮಳಿಪ್ರವರೆಂದೊಡೆ
ವನಿತೆಯರಳಿಪ್ಪುದಿದೊಂದು ಚೋದ್ಯಮೆ ಜಗದೊಳ್ ೩೬೫
(ಮದತಿ. ೬-೨೩ ; ಸೂಕ್ತಿಸು. ೮-೧೦೩)

ನೆರಯಲೆಡೆ ಪೊಟ್ಟು ದೂತರ್
ದೊರೆಕೊಳ್ಳದೊಡಂಗನಾಜನಂ ಕುಟಿಯಲ್ಲದೆ
ನೆರೆಯಲೆಡೆ ಪೊತ್ತು ದೂತರ್
ದೊರೆಕೊಂಡೊಡೆ ಕುಚಗಳಂತೆ ಪೆಂಡಿರ್ ಜಗದೊಳ್ ೩೬೬
(ಸೂಕ್ತಿಸು. ೮-೧೨೫)

---

1 ವಧುಗೆ ಘಟಿಕುಣಿಯುಗಳ್ (ಗ) 2 ಳ ಮುನ್ನೋಡದೆ (ಗ) 3 ಮೊದಲೊಳಂ (ಗ) 4 ತ್ತು (ಗ) 5 ಗತ್ಯದ (ಗ) 6 ಕೊಟ್ಟಾರೋಳಂ (ಕ) 7 ಮುಮಂ ಕಲಿತಾದರ್ (ಕ)

ಚಂ॥ ಗೊರವಿತಿ ತೊತ್ತು ರಂಡೆ ರಜಕಾಂಗನೆ ನೀರೆಱಿವಾಕೆ ಚಿತ್ರಮಂ
ಬರೆಪವಳೊತ್ತೆಗೊಳ್ಪಳಿಲಿ ಮಾಱುವ ಜತ್ತಕಿ ಶೂಲಗಿತ್ತಿ ಗೋ
ವರ ವಧು ಮಾಲೆಗಾರ್ತಿ ಮುದುಗುಂಟಣಿವೇರಡುಗಿತ್ತಿಯೆಂಬ ಪೆಂ
ಡಿರ ನೆರೆಗೊಂಡೊಡಂವಱಿಗೆ ಸಜ್ಜನವೆಂದತಿ ಕೆಟ್ಟಳಿಂಬುದಂ ೩೬೭

(ಸೂಕ್ತಿಸು. ೮-೧೦೭)

ರತಿಹೀನ ಹೆಳವ ಗುಜ್ಜಂ
ಮತಿವಂತಂ [1]ವೃದ್ಧ ನೋಡೆ ಕೃಶನುಂ ಪಿತನುಂ[1]
ಸತಿಯುಂ ಕಾಯಲ್ ತಕ್ಕಂ
ರತಿರಾಗಿಗಳುಳಿದ ಕಾಪಿನೊಳ್ ನಿಂದ ಪತೀ ೩೬೮

(ಮದತಿ, ೬-೩೨, ಸೂಕ್ತಿಸು, ೮-೧೦೯)

ಚೆನ್ನಿಗನಂ ಜವನಿಗನಂ
ನನ್ನಿಗನಂ ಪಾಣ್ಬನಂ ಕರಂ ಸೊಬಗನುಮಂ
ತನ್ನ ಸತಿಯರ್ಗೆ ಕಾಪಿಡೆ
ನಿರ್ಣಯದಿಂ ತನ್ನ ಮನೆಯೊಳಿಟ್ಟಂ ಕಿಚ್ಚಂ ೩೬೯

ಚಂ॥ ಪರಪರಿವಾದಮಂ ನೆಗಳ್ವುದೆ ಜಪಮನ್ಯಮನಪ್ರಸೂನಮಂ (?)
ಕೊರಗಿಪುದೇ ತಪಂ ಪೆಱರ ಜೀವಿತವುಂ ಪಱಿದಿಕ್ಕುವಂದಮೇ
ಪರತರ ಶೀಲಮಾದರಿಸಿ ಲೋಗರ ಮರ್ಮಮಂ ಭೇದಿಪಂ (?)
ದಿರವೆ ಪೊಡಳ್ದ ಜಾನಮಲೆ ದುರ್ಜನ ತಾಪಸನೇಂ ಕೃತಾರ್ಥನೋ ೩೭೦

ಜೀವಿಸುಗೆ ವಜ್ರಲೋಭಿಯು
ಗಾವಧಿವರಮಲ್ಲದಂದು ಧಾತ್ರನ ಬಲದಿಂ
ಪಾವಾಗಿ ಪುಟ್ಟಿ ಧನಮಂ
ಕಾವಂತುಟೆ ಲೋಕಮಲ್ಲಮಂ ಮೆಲ್ಲದಿರಂ ೩೭೧

(ಲೀಲಾ, ೧-೪೪)

ಶಾ॥ ಇಂದ್ರತ್ವಂ ಬಲದೇವರಾದಿ ಖಚರೇಂದ್ರೋತ್ಪತ್ತಿ ಷಟ್ಖಂಡ ಭೂ
ಗೀಂ[2]ದ್ರತ್ವಂ ನಿರುಜತ್ವಮಂತೆ ವಿಜಿಗೀಷುತ್ವಂ ತಪೋಯೋಗಿ[2]ಯೋ

1 ನಾಡೆ ವೃದ್ಧಕೃಶಗರ್ಜಿತನುಂ (ಗ) 2 ಯೂಪೆಂ (ಕ)

ದೇಂಪ್ರತ್ವಂ ಬಹುಶಾಸ್ತ್ರಪಾರಗಗುಣಂ ತ್ರೈಲೋಕ್ಯ ಸಂಪೂಜ್ಯ ಜೈ
ನೇಂದ್ರಪ್ರೀಪದಮುಂಬಿನಿತ್ತು[1]ದೊಗೆ[1]ಗುಂ ಸದ್ಧರ್ಮದಿಂ ಜೀವನೇ ೩೭೨

(ಜೀವಸಂ, ೧೨-೧೨)

ಮ॥ ಕುಲಮುಂ ರೂಪಮುಮಾಯುಮಾರ್ಪು ಗುಣಮುಂ ಸೌಭಾಗ್ಯಮುಂ ಭಾಗ್ಯಮುಂ
ಬಲಮುಂ ತೇಜಮುಮಾಜ್ಞೆಯುಂ ವಿನಯಮುಂ ಚಾತುರ್ಯಮುಂ
ಶೌರ್ಯಮುಂ
ನೆಲೆಯುಂ ವಿದ್ಯೆಗಳುಂ ಪ್ರಭುತ್ವ ಗುಣಮುಂ ಸೌಂದರ್ಯಮುಂ ಧೈರ್ಯಮುಂ
ವಿಲಸದ್ಧರ್ಮದಿನಕ್ಕು[3]ಮೆಂದಱಿಪೆಯುಂ ಮಾಣ್ದಪ್ಪುದೇ ಜೀವನೇ[3] ೩೭೩

(ಜೀವಸಂ, ೧೨-೧೦)

ಚಂ॥ ಪಿರಿದುಪಕಾರಿಯುಳ್ಳದರಿವಿಲ್ಲದ ಜೀವಿಪಾತುಮುಂ
ದೊರೆಯನೆ ಮಾಳ್ಪ ಯುಕ್ತಿಯುಮಿಲ್ಲದಳುಕ್ತಿಯನಾಂಪತಪ್ರೋದಿ ಕ
ಣ್ದೆರೆಯುವ ಶೇಷಯುಕ್ತಿಗೆಣೆಗಾಣದೆ ಕೋಪಿಪ ಕೇಳ್ದು ಕೇಳ್ದು ಮ
ಚ್ಚರಿಸುವರಗ್ರದೊಳ್ ನುಡಿಯಬೇಡಲೆ ಭವ್ಯನೆ ಧರ್ಮಮಾರ್ಗಮಂ (?) ೩೭೪

ಕೊಲ್ಲದ ಧರ್ಮವೆ ಧರ್ಮಂ
ಬಲ್ಲಿದ ಪದಿನೆಂಟು ದೋಷವರ್ಜಿತನಾಪ್ತಂ
ಪುಲ್ಲಶರಂಗೊಳಗಾಗದ
ನೆಲ್ಲಾ ಜಿನಪಕಾರಿ ಗುರುವೆಂದಱಿಯೈ (?) ೩೭೫

ಉರಗನ ದಾಡೆಯೊಳಮೃತಮ ·
ನುರಿವಗ್ನಿಯೊಳಧಿಕ ಶೈತ್ಯಮಂ ಮೂರ್ಖಸಭಾಂ
ತರದೊಳ್ ವಿವೇಕಮಂ ಭವ
ಶರನಿಧಿಯೊಳ್ ಸಾರಸುಖಮನರಸಿದೊಡುಂಟೇ ೩೭೬

(ವರ್ಧಪ್ರ ೧–೧೦೧)

ಉ॥ ಅಕ್ಕರಪ್ರೋದದಂದು ಪಱಿಪಟ್ಟಿತು ಪಾರ್ವನ ನೀತಿ ಸೂಳೆಗಂ
ಮಕ್ಕಳು ಪುಟ್ಟಿದಂದೆ ಪಱಿಪಟ್ಟಿತು ಯವ್ವನದೇಳ್ಗೆಯಾಳ್ವನೊಳ್
ಕಕ್ಕಸ ಪುಟ್ಟಿದಂದು ಪಱಿಪಟ್ಟಿತು ಜೀವಿತದಾಸೆ ನಾರಿಯೊಳ್
ಸಕ್ಕ ಮುನೀಶ್ವರಂಗೆ ಪಱಿಪಟ್ಟಿತು ಮೋಕ್ಷದ ಬಟ್ಟೆ [3]ನಿ[3]ಶ್ಚಯಂ ೩೭೭

1 ಮಳೆ (ಕ) 2 ಪೆಂದು ಬಗೆ ನೀಂ ಧರ್ಮಕ್ಕೆ ಗೆಂಟುಪ್ಪುದೇ (ಗ) 3 ನಂಬುನಿ (ಕ)

ದಿನಕರಗೆ ಅರ್ಘ್ಯಮಂತ್ರವ
ನನುದಿನಮಿಾವಂತೆ ಜಂಪ್ರಮಂಗಿತ್ತಪರೇ
ಮನುಜರು ತೀವ್ರರಿಗಲ್ಲದೆ
ವಿನಯರಿಗಿತ್ತಪರೆ ಸುಕವಿ ಸುಜನಮನೋಜಾ ೩೭೮

ನಂಬುವುದು ಪಸಿದ ಪುಲಿಯಂ
ನಂಬುವುದಾರ್ಭಟಿಸಿ ತಿಂಬ ಕಾಳೋರಗನಂ
ನಂಬುವುದು ಪೊಡೆವ ಸಿಡಿಲಂ
ನಂಬದಿರಾ ಸ್ತ್ರೀಯಂದೆಂಬ ಮಹಾಪಾತಕರಂ ೩೭೯

॥ ವರ ತೀರ್ಥಂಗಳನಾವ ಸತ್ಪುರುಷರಂ ದೈವಜ್ಞರಂ ದೇವಮಂ
ದಿರಮಂ ಭೂಭುಜರಂ ವಿಶೇಷ ಪುರಮಂ ವಿದ್ವಾಂಸರಂ ವೀರರಂ
ಗುರುವಂ ಯೋಗಿಜನಂಗಳಂ ಗುಣಿಗಳಂ ಧರ್ಮಜ್ಞರಂ ಧಾತ್ರಮಂ
ಕಿರಿದುಂ ಕಾಣಲಿವೇಳ್ಕುಮೆಂಬುದು ಪುರಾಣೋಕ್ತಂ ಧರಾಚಕ್ರದೊಳ್ ೩೮೦

ಎಚ್. ಶೇಷಾದ್ರಿ

ಬೆಲೆಯ ಸುರುಳಿ

ದೇಶದ ಉದ್ದಗಲಕ್ಕೂ ಏರುತಿದೆ ಬೆಲೆಯ ಸುರುಳಿ
ಮಧ್ಯೆ ಸಿಕ್ಕಿ ಸಾಯುತ್ತಿಹನು ಜನಸಾಮಾನ್ಯ ನರಳಿನರಳಿ
ಸಂತೈಸುತಿಹನು ಪ್ರಧಾನಿಯು ಬಳಿಯುತ ರಾಜಕೀಯದ ಬಣ್ಣ
ಉದ್ದನಾಗಿರುವುದರಿಂದಲೇ ಈತ ಕಾಣುವನು ಅತಿಸಣ್ಣ
ದಪ್ಪವೇ ಕಾಣದು ಈ ಪಾಟಿ ಉದ್ದದಲಿ
ಸಂಕೋಚನವೇ ಕಾಣದ ಈ ಮಾಂತ್ರಿಕ ಸುರುಳಿ
ತಪ್ಪದೇ ನಡೆಯುತ್ತಿರುವುದು ಚುನಾವಣೆ ಬಂದೇ
ಮತಹಾಕಿ ನಿಜಕೂ ನಾಮಹಾಕಿಸಿಕೊಳ್ಳುವ ನಾವು ಕುರಿಯಮಂದೆ!
ಸುರುಳಿಯನು ಕುಗ್ಗಿಸುವವು ನಾವು
ನಿಮಗೆ ಉಸಿರಾಟ ಕೊಡಿಸುವೆವು
ಊಟ ಕಾಣಿಸುವೆವು ಮನೆಯ ಕಟ್ಟಿಸುವೆವು
ರಾಮರಾಜ್ಯದ ಕನಸು ನನಸಾಗಿಸುವೆವು
ಎಂದಾತ ಹೇಳಿದ ಮಾತು ನಿಜವಾಗಿಹುದು
ಊಟಮಾಡಿಕೊಂಡ! ಮನೆಗಳನು ಕಟ್ಟಿಕೊಂಡ!
ಅಹುದು. ರಾಜಕಾರಣಿಯೆ ರಾಮ! ಹೆಂಡತಿ ಸೀತೆಯಂತೆ
ರಾಜ್ಯವೆಲ್ಲ ಅವನದೇ ರಾಮರಾಜ್ಯದಂತೆ
ಚುನಾವಣೆಯ ನಂತರ ಈ ತರನೆ ಒಂದೊಂದು
ಪಕ್ಷ ಒಂದೊಂದು ಕೈ ನೋಡುವುದು
ಸುರುಳಿ ಮಾತ್ರ ಕುಗ್ಗದೆ ಹೀಜಿ ತಲೆಯ ಮೇಲೆಗೇರಲಿದೆ
ಹೊಲಸು ರಾಜಕೀಯದ ವಿಕಟ ಕರಾಳ ನಗೆ ಬೀರಿದೆ !

ಎನ್. ನಾರಾಯಣ ಬಲ್ಲಾಳ

ಸಾಹಿತ್ಯದಲ್ಲಿ ಅಶ್ಲೀಲತೆ

ಜನರು ತಮ್ಮ ಬುದ್ಧಿಗೆ ತೋಚಿದ ಹಾಗೆ ಸಾಹಿತ್ಯದಲ್ಲಿ ವರ್ಗಭೇದ ಮಾಡ ತೊಡಗಿದರು. ಸಾಹಿತ್ಯದ ಗುಣ, ವೈಶಿಷ್ಟ್ಯಗಳ ಮೇಲಿಂದ ವಿಮರ್ಶಕರು ಮಾಡಿದ್ದೆಂದು ಈ ಭೇದವನ್ನು ಸಮರ್ಥಿಸುವ ಹಠವೂ ಕೆಲವೊಂದು ಜನರ ಪರಿಪಾಠವಾಯಿತು. ಆದರೆ ಸಾಹಿತ್ಯದಲ್ಲಿ ವರ್ಗಭೇದ ಮಾಡುವಾಗ ಕೆಲವೊಂದು ಕ್ಷುಲ್ಲಕ ವಿವೇಚನೆಗೆ ಅಗ್ರಸ್ಥಾನ ಕೊಡುವುದು ಇತ್ತೀಚಿಗೆ ಒಂದು ಚಟವೇ ಆಗಿದೆ.

ಹಳೇ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ಕ್ರಾಂತಿಕಾರಿ ಸಾಹಿತ್ಯ, ಆಧುನಿಕ ಸಾಹಿತ್ಯವೆನ್ನುವ ಕಾಲಕಳೆದು ಇದೀಗ ಸುಶೀಲ ಸಾಹಿತ್ಯ, ಅಶ್ಲೀಲ ಸಾಹಿತ್ಯ ಮುಂತಾದ ದೈಹಿಕ ಹಾಗೂ ಕಾಮಲೀಲಾ ವಿಚಾರ ಧಾರೆಯಲ್ಲಿ ಸಾಹಿತ್ಯ ಭೇದ ಮಾಡತೊಡಗುವ ಮಂದಿ ಹೆಚ್ಚಿದ್ದಾರೆ. ಸಾಹಿತ್ಯ–ಅದು ಕಾಮಪ್ರಚೋದಕವೋ, ನೀತಿಪೂರಕವೋ ಅಥವಾ ಧ್ಯೇಯ ನಿರೂಪಣೆಯದೋ ಯಾವುದೇ ಇದ್ದರೂ ಇಂದು ಮಾಡುತ್ತಲಿರುವ ವರ್ಗಭೇದ ಕೆಲವೊಂದು ಜನರ ವೈಯಕ್ತಿಕ ಮನೋಭಾವದ ಫಲವೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಸಾಹಿತ್ಯವು ಕೇವಲ ರಸವನ್ನಷ್ಟೇ ವರ್ಣಿಸುವಂತಿಲ್ಲ. ಕಸವನ್ನೂ ರಸವತ್ತಾಗಿ ವರ್ಣಿಸುವ ಶಕ್ತಿ ಸಾಹಿತ್ಯಕ್ಕಿದೆ. ಜೀವನದ, ಪ್ರಕೃತಿಯ ಹಾಗೂ ಗೋಚರವಾಗುವ ಅಥವಾ ಅಗೋಚರವಾಗಿರುವ ಯಾವುದೇ ವಿಚಾರವನ್ನಾದರೂ-ಅದು ಅಣುವಿನಷ್ಟು ಅಲ್ಪವಿರಲಿ, ಹಿಮಾಲಯದಷ್ಟು ಉನ್ನತವಿರಲಿ, ಸೂರ್ಯನಷ್ಟು ಪ್ರಭಾವಿತವಾಗಿರಲಿ, ಕತ್ತಲೆಯಂತೆ ಕಪ್ಪಿರಲಿ–ಅದರ ಯೋಗ್ಯತೆಯನ್ನು, ಔನ್ನತ್ಯವನ್ನು, ಆವಶ್ಯಕತೆಯನ್ನು ಪ್ರತಿಪಾದಿಸುವುದು ಯೋಗ್ಯ. ಅದರಲ್ಲಿ ಶೀಲಾಶ್ಲೀಲದ ಪ್ರಶ್ನೆಯಾಗಲೀ, ರಸ–ಕಸದ ಸಮಸ್ಯೆಯಾಗಲೀ, ನೀತಿ–ಅನೀತಿಯ ಬುದ್ಧಿಮತ್ತೆಯಾಗಲೀ ಇಲ್ಲವೇ ಇಲ್ಲ. ಆ ರೀತಿ ವರ್ಗಭೇದವನ್ನು ಸಾಹಿತ್ಯದ ವಿಚಾರದಲ್ಲಿ ಮಾಡುವ ಹಕ್ಕು ಯಾರಿಗೂ ಇಲ್ಲ. ಇದೇ ದೃಷ್ಟಿಕೋನದಿಂದಲೇ ನಾವು ಸಾಹಿತ್ಯದಲ್ಲಿ ಅಶ್ಲೀಲತೆಯನ್ನು ಕುರಿತು ವಿವೇಚಿಸಬೇಕು.

ಸಾಹಿತ್ಯವು ಜನಜೀವನ ಪ್ರತಿರೂಪ. ಜೀವನದ ಅನಂತ ಮುಖಗಳನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಶಕ್ತಿ, ಸಾಮರ್ಥ್ಯ ಹಾಗೂ ಸ್ವಾತಂತ್ರ್ಯ ಸಾಹಿತಿಗಿದೆ

ಎನ್ನುವ ವಾದವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಇಂತಹ ಸರ್ವತಕ್ ಸಾಹಿತ್ಯದಲ್ಲಿ ಅಶ್ಲೀಲತೆ ಮೂರ್ತೀಭವಿಸಿದರೆ ಅದಕ್ಕೆ ಯಥಾರ್ಥವಾದಿ ಸಾಹಿತಿ ತಪ್ಪಿ ಗಾರನಾಗಲಾರ. ಅಶ್ಲೀಲತೆಯನ್ನು ನಿರ್ಮಿಸಿದ ಸಮಾಜವೇ ಹೊಣೆಯಾಗಿದೆ.

ಅಶ್ಲೀಲತೆಯು ಸಾಹಿತಿಯ ಭಾವನಾಲೋಕದಿಂದಿಳಿದು ಬಂದ ಒಂದು ಅಗೋಚ ವಿಚಾರವಲ್ಲ. ಸಮಾಜದ ಒಂದು ಪ್ರತಿನಿಧಿ ಸ್ವರೂಪ: ನಮ್ಮ ಸುತ್ತ ಮುತ್ತಲೂ, ಕಣ್ ಮುಂದೆಯೂ ನಡೆಯುವ ಒಂದು ಚಿತ್ರಣ. ಸಮಾಜದಲ್ಲೇ ಅಶ್ಲೀಲತೆ ತುಂಬಿರುವಾ ಅದನ್ನು ಪ್ರತಿಬಿಂಬಿಸಿದರೆ ಅದು ಸಾಹಿತಿಯ ತಪ್ಪಾಗಲಾರದು: ತಪ್ಪಾಗಬಾರದು ಹಾಗಿರುವಾಗ ಸಾಹಿತ್ಯದಲ್ಲಿ ಅಶ್ಲೀಲತೆಯನ್ನು ತರಬಾರದೆನ್ನುವವರು ಅದನ್ನು ಸಾಹಿತಿ ಹೇಳುವ ಬದಲು ಸಮಾಜಕ್ಕೆ ಸವಾಲು ಹಾಕಬೇಕು. ಎಲ್ಲಿಯ ತನಕ ಜನರ ಬುದ್ಧಿ ಮತ್ತೆ ಅಶ್ಲೀಲತೆಯ ಕೂಪದಲ್ಲೇ ತೇಲಾಡುತ್ತದೋ. ಅಲ್ಲಿಯ ತನಕ ಸಾಹಿತಿ ಅದನ್ ಪ್ರತಿಬಿಂಬಿಸುತ್ತ ಹೋಗುತ್ತಾನೆ. ಜನಜೀವನದ ನೈಜ ಚಿತ್ರವು ಎಂದಿನವರೆಗೆ ಅಶ್ಲೀ ಪೂರ್ಣವಾಗಿರುತ್ತದೋ ಅಲ್ಲಿಯ ತನಕ ವಾಸ್ತವಿಕ ದೃಷ್ಟಿಕೋನದ ಸಾಹಿತಿ ಅಶ್ಲೀಲತೆಯ ಮೇಲೆ ತನ್ನ ಲೇಖನಿಯ ಬೆಳಕು ತೋರಿಸಲೇ ಬೇಕಾಗುತ್ತದೆ. ಇಲ್ಲವಾದರೆ ಅವ ಸಾಹಿತ್ಯವು ಕೇವಲ ಭಾವನಾಮಯವಾಗಬಹುದು. ಕೃತಕತೆಯನ್ನಿಸಬಹುದು. ನಿರ್ಜೀವ ವಾಗಲೂಬಹುದು.

ಅಶ್ಲೀಲ ಪ್ರಸಂಗವನ್ನು ಬಿಡಿಸಿ–ಬಿಡಿಸಿ ವರ್ಣಿಸಿ ಹೇಳುವುದರಿಂದ ಜನಜೀವನದ ಮೇಲೆ ದುಷ್ಪರಿಣಾಮವಾಗುವುದೆಂದು ಕೆಲವರ ವಾದವಿದೆ. ಆದರೆ ಸಾಹಿತ್ಯ ಅಶ್ಲೀಲ ಪ್ರೇರಕವೋ ಸಮರ್ಥನೆಯದೋ ಎಂಬುದನ್ನು ಶೈಲಿಯು ಸಾರುವಂತಿಲ್ಲ ಸಾಹಿತಿಯು ಆರಿಸಿಕೊಂಡ ವಸ್ತುವು ಅದನ್ನು ಹೇಳಬಹುದು. ಕಾದಂಬರಿಯ ಕೊ ಯಲ್ಲಿ ಅಶ್ಲೀಲವನ್ನು ಸಂಪೂರ್ಣವಾಗಿ ಸಾಧಿಸಿದ್ದು ಕಂಡುಬಂದರೆ ಅದನ್ನು 'ಬಹಿಷ್ಕೃತ ಸಾಹಿತ್ಯ'ವೆನ್ನಬಹುದೇ ಹೊರತು ಶೈಲಿಯ ಮೂಲಕ ಒಂದು ಕಾದಂಬರಿಯನ್ ಅಶ್ಲೀಲದ ಒರೆಗಲ್ಲಿಗೆ ಹಚ್ಚುವುದು ಸಮರ್ಥನೀಯವಾಗಲಾರದು.

ಅಂತರರಾಷ್ಟ್ರೀಯ ಖ್ಯಾತಿವೆತ್ತ ಕಾದಂಬರಿಗಳಲ್ಲಿ ಹೆಚ್ಚಿನವು ಕಾಮಪ್ರಚೋದ ಪ್ರಸಂಗಗಳಿಂದ ತುಂಬಿರುತ್ತವೆ. ಆದರೆ ಅದು ಎಲ್ಲರಿಂದಲೂ ಇಂದು ಕನ್ನಡದ ವಗ ಭೇದ ಮಾಡಹೊರಟಿರುವ ವಿಮರ್ಶಕರಿಂದಲೂ ಸಹಾ ಕೊಂಡಾಡಲ್ಪಡುತ್ತವೆ ಇಂಗ್ಲಿಷ್, ಫ್ರೆಂಚ್ ಭಾಷೆಗಳ ಸಾಹಿತ್ಯದಲ್ಲಿ ನೈಜತೆ. ಸುಪ್ತಸೌಂದರ್ಯವನ್ನು ಕಂ ವರು ನಮ್ಮ ಕನ್ನಡದ ಕೆಲವೊಂದು ಕಾದಂಬರಿಗಳನ್ನು ಕುರಿತು ಹೇಳುವ ಮಾತು ಅರ್ಥ ವಿಲ್ಲದ್ದೆಂದೇ ಹೇಳಬೇಕು.

ನಾನಿಷ್ಟು ಮಾತನ್ನು ಹೇಳಿದಾಗ ಸಾಹಿತ್ಯದಲ್ಲಿ ಬರುವ ಅಶ್ಲೀಲತೆಯ ಪುರಸ್ಕರ್ತ ನಾನೆಂದು ನೀವೀಗಾಗಲೇ ನಿರ್ಧರಿಸಬಹುದು. ಅಶ್ಲೀಲತೆ ಎಂಬ ಪದ ಪ್ರಯೋಗದಲ್ಲಿ ನನಗೆ ನಂಬಿಕೆ ಇಲ್ಲದಿರುವಾಗ ಅಶ್ಲೀಲತೆಯ ಪುರಸ್ಕರ್ತನೆಂಬ ವಾದಕ್ಕೆ ತೊಡಗುವುದ ಬೇಡ. ಇಂದು ಜೀವನದ ತುಂಬೆಲ್ಲಾ ಅನ್ಯಾಯ, ವಂಚನೆ, ಅಶ್ಲೀಲತೆ, ವೈಪರೀತ್

ಕಾಮ ಪಿಪಾಸೆಯೇ ಕಂಡು ಬರುತ್ತಲಿದೆ. ಜನರ ಮನೋಭಾವವು ಈ ಅಶ್ಲೀಲತೆಯ ಕಡೆಗೆ ಬಹು ಬೇಗನೆ ವಾಲುತ್ತಿದೆ. ಈ ದೃಷ್ಟಿಯಿಂದ ನೋಡಿದರೆ ಇಂದಿನ ಸಾಹಿತ್ಯವು ಜನಜೀವನದ ನೈಜತೆಯ ಪ್ರತಿಬಿಂಬವಾಗಿಲ್ಲವೆನ್ನಬೇಕು. ಇಂದಿನ ಜನರು ಕೇವಲ ಅಶ್ಲೀಲ ವಿಷಯ ವಿಚಾರಗಳಿಗೇ ಇಲ್ಲದ ಪ್ರಾಧಾನ್ಯ ಇತ್ತಿದ್ದಾರೆ. ಸಮಾಜದ ಪ್ರತಿಷ್ಠಿತರು ನ್ಯಾಯವೇತ್ತರು ಈ ಅಶ್ಲೀಲತೆಯ ದಾಸರಾಗಿದ್ದಾರೆ. ಇಂದಿನ ಸಮಾಜದ ಧೀಮಂತ ಶಕ್ತಿಗಳು ಅಶ್ಲೀಲತೆಯ ರಕ್ಷಾ ಕವಚಕ್ಕೆ ನ್ಯಾಯನೀತಿಯ ಒಪ್ಪಕೊಟ್ಟು ಶಿರದಲ್ಲಿ ಧರಿಸಿದ್ದಾರೆ. ಕಣ್ಣೆದುರೇ ಅಶ್ಲೀಲದ ಪರಮ ಚಂಡಾಲರು ಜನಾಂಗದ ಮೂಗುದಾರ ಹಿಡಿದು ಎಲ್ಲರಿಂದಲೂ ಗೌರವ ಪಡೆಯುತ್ತಿದ್ದಾರೆ. ಇಂತಹವರ ಕೈಗೆ ಸತ್ಯ, ಶೀಲ, ನ್ಯಾಯಗಳು ಸೆರೆಸಿಕ್ಕು ಅವರ ಆಟದ ವಸ್ತುವಾಗಿದೆ. ಅವರ ಮಾತಿನಲ್ಲೇ ಈ ಸತ್‌ಶೀಲಗಳು ನಲಿದಾಡುತ್ತಿವೆ. ಇದನ್ನು ಕಂಡ ಸಾಹಿತಿಯು ತನ್ನ ಸಾಹಿತ್ಯದಲ್ಲಿ ಅಶ್ಲೀಲವಂತರ ಕೊನೆಯನ್ನು ದುರಂತವಾಗಿ ವರ್ಣಿಸುತ್ತಿರುವುದು ಎಷ್ಟೋ ಪ್ರತಿಷ್ಠಿತರ ಅಂತರಂಗದಲ್ಲಿ ಜ್ವಾಲಾಮುಖಿಯ ಕಿಚ್ಚನ್ನು ಹಚ್ಚಿಟ್ಟಿದೆ. ತಮ್ಮ ವರ್ತನೆಗೆ ಕೊಟ್ಟ ಪ್ರಬಲಾಘಾತವನ್ನುವ ಸೇಡಿನ ಕಿಡಿ ಈ ಸಮಾಜದ ಅಧಿಪುರುಷರಲ್ಲಿ ಉದಯಿಸಿದೆ. ಅದರಿಂದಾಗಿಯೇ ಅಂತಹ ಸಾಹಿತಿಯ ಸಾಹಿತ್ಯಕ್ಕೆ 'ಅಶ್ಲೀಲತೆ'ಯ ಪಟ್ಟಿ ಹಚ್ಚಿ ಜನರೆದುರು ಅವನನ್ನು ಮುಖಭಂಗ ಮಾಡಲಿಚ್ಛಿಸುತ್ತಿದ್ದಾರೆ. ಇಂದು ಅಶ್ಲೀಲತೆಯ ವಿರುದ್ಧ ಎದ್ದಿರುವ ಆಂದೋಲನವು ಅಶ್ಲೀಲವನ್ನು ತಮ್ಮ ಜೀವನದಲ್ಲೇ ಅರಗಿಸಿಕೊಂಡ ದರ್ಪದ ಶ್ರೀಮಂತ ಶಕ್ತಿಗಳ ಕುಟಿಲ ಕಾರಸ್ಥಾನ. ಅವರ ಎಂಜಲಾಸೆಗೆ ಬಲಿಬಿದ್ದು ಸಾಹಿತ್ಯದಲ್ಲಿ ನೀತಿಯನ್ನು ಪ್ರಸ್ತಾಪಿಸುವ ಕೆಲವೊಂದು ಗೊಡ್ಡು ಜನರ ವಾದ ವೈಖರಿ. ಇದನ್ನು ಖಡಾಖಂಡಿತವಾಗಿ ಹೇಳಬೇಕಾದ್ದು ಇಂದು ಅಗತ್ಯವಾಗಿದೆ.

ಇಂದು ಅಶ್ಲೀಲ ಸಾಹಿತ್ಯವೆಂದು ಪರಿಗಣಿಸಲ್ಪಡುತ್ತಿರುವ ಸಾಹಿತ್ಯ ಬೇರೆಲ್ಲ ದೃಷ್ಟಿಯಲ್ಲೂ ನೈಜವಾಗಿದ್ದರೂ ಸಂಪೂರ್ಣ ವಾಸ್ತವಿಕವೆಂದು, ಜನಜೀವನದ ಪ್ರತಿಬಿಂಬವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಸಾಹಿತಿಯು ಕೇವಲ ಒಂದು ನೀತಿ ಪ್ರಸ್ತಾಪನೆಗಾಗಿ—ಸಾಮಾಜಿಕ ನ್ಯಾಯದ ಮಹತ್ವಕ್ಕಾಗಿ ತನ್ನ ಕಾದಂಬರಿಯ ಅಶ್ಲೀಲ ಜೀವನದ ವ್ಯಕ್ತಿಯ ಜೀವನವನ್ನು ದುರಂತದಲ್ಲಿ ಕೊನೆಗಾಣಿಸುತ್ತಾನೆ. ಆದರೆ ಅದು ಯಥಾರ್ಥದ್ದೆಂದು ಇಂದಿನ ಜೀವನವನ್ನು ಪರಿಕಿಸಿದವನು ಯಾರೂ ಒಪ್ಪಬಹುದು. ಇಂದು ನಿತ್ಯ ಜೀವನದಲ್ಲಿ ಸಮಾಜಕ್ಕೆ ಹತ್ತು ಬಗೆಯಲ್ಲಿ ದ್ರೋಹ ಬಗೆಯುತ್ತಿರುವವನು ಮೇಲೇರುತ್ತಿದ್ದಾನೆ. ಅವನ ಸ್ಥಾನ-ಮಾನಗಳು ಎಲ್ಲ ಕಡೆ ವಿಸ್ತರಿಸಲ್ಪಡುತ್ತಿವೆ. ಅವನ ಕಾಲತುಳಿತದಲ್ಲಿ ಶೀಲ, ಸಚ್ಚಾರಿತ್ರ್ಯಗಳು ನುಜ್ಜುಗುಜ್ಜಾಗುತ್ತಿವೆ. ಇದನ್ನು ನಿತ್ಯವೂ ನೋಡುತ್ತಾ, ಸಾಹಿತಿಯು ತನ್ನ ಲೇಖನಿಯನ್ನು ದುರಂತದ ಕಡೆಗೆ ಕೊಂಡೊಯ್ಯದೇ ಅವನು ಸಮಾಜದಿಂದ 'ಬಹಿಷ್ಕೃತ'ನೆನಿಸಿದ್ದಾನೆ. ಇಂದು ಸಮಾಜವು ಕೆಲವೇ ವ್ಯಕ್ತಿಗಳ ಗುತ್ತಿಗೆಯಾಗಿದೆ. ಅವನ್ನು ಒಪ್ಪಲು ಜನಾಂಗ ಸಿದ್ಧವಾಗಿಲ್ಲ. ಪ್ರತಿಯೊಬ್ಬನ ಸ್ವಾತಂತ್ರ್ಯ ಪ್ರೇಮವು ಮನಸ್ಸಾಕ್ಷಿಯನ್ನು ವಿರೋಧಿಸಿ, ತನ್ನ ದುರ್ಬಲತೆ

ಯನ್ನು ವಿರೋಧಿಸಿ. ತನ್ನ ದುರ್ಬಲತೆಯನ್ನು ಒಪ್ಪಿಕೊಳ್ಳದಂತೆ ಮಾಡಿದೆ. ಆದ್ದರಿಂದಲೇ ಇಂದು ತಿಳಿದೂ ತಿಳಿದೂ ಅಶ್ಲೀಲತೆಯನ್ನು ಒಂದು ಕಡೆಯಿಂದ ಧಿಕ್ಕರಿಸುವ ಜನ, ಮತ್ತೊಂದು ಕಡೆಯಿಂದ ಅದರ ಪ್ರೇರಕ ಶಕ್ತಿಗೆ ಉತ್ತೇಜನವೀಯುತ್ತಿದ್ದಾರೆ. ಇದೇ ಇಂದಿನ ಲೋಕನೀತಿ.

ಸಾಹಿತ್ಯದಲ್ಲಿ ಅಶ್ಲೀಲತೆಯನ್ನು ನಿರ್ಮಿಸಬೇಡಿರೆನ್ನುವ ಪಂಗಡದವರು ಮೊದಲು ತಮ್ಮ ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು. ತಮ್ಮ ಹೃದಯದಲ್ಲಿ ಸುಪ್ತವಾಗಿರುವ ಅಶ್ಲೀಲತೆಯ ಕಲ್ಮಷವನ್ನು ಹೊರತೆಗೆದು. ಸ್ವಚ್ಛಗೊಳಿಸಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಸಾಹಿತ್ಯದಲ್ಲಿ ನೈಜತೆಯನ್ನೇ ಪ್ರತಿಬಿಂಬಿಸಬೇಕೆನ್ನುವ ಉತ್ಕಟೇಚ್ಛೆಯ ಸಾಹಿತಿ ಕೂಡಾ ಸಮಾಜದಿಂದ ಅಶ್ಲೀಲತೆ ತೊಲಗಿದಾಗಲೇ ತನ್ನ ಲೇಖನಿಯನ್ನು ಬೇರೆ ಕಡೆಗೆ ತಿರುಗಿಸಿಯಾನು. ಸಾಹಿತಿಯ ಲೇಖನಿ ಸಮಾಜದ ಜನಜೀವನದ ಕನ್ನಡಿಯಾಗಿದೆ ಎನ್ನುವುದನ್ನು ತಿಳಿದುಕೊಂಡರೆ ಸಾಹಿತ್ಯದಲ್ಲಿ ಶ್ಲೀಲಾಶ್ಲೀಲದ ಪ್ರಶ್ನೆ. ವಾದ ಹುರುಳಿಲ್ಲವೆಂದು ಮನದಟ್ಟಾಗುವುದು.

ಬಿ. ಕೆ. ತಿಮ್ಮಪ್ಪ

ತೊಲ್‌ಕಾಪ್ಪಿಯಂ

ಎೞುತ್ತತಿ ಕಾರಂ ನೂನ್‌ಮರಪು
(ಅಕ್ಷರಗಳ ಸಾಮಾನ್ಯ ಲಕ್ಷಣಗಳು)

1. ಎೞುತ್ತೆನ್ನಪ್ಪಡುಪ
ಅಕರ ಮುದಲ್ ನಕರ ಇಱುವಾಯ್
ಮುಪ್ಪ ∴ತು ಎನ್‌ಪ ;
ಚಾರ್‌ನ್ದುವರಲ್ ಮರಪಿನ್ ಮೂನ್‌ಱಲಂ ಕಡೈಯೋ.

ಅಕ್ಷರಗಳೆಂದು ಹೇಳುವುವು ಅಕಾರದಿಂದ ನಕಾರದವರೆಗಿರುವ ಮುವತ್ತು. ಮತ್ತೊಂದನ್ನು ಆಶ್ರಯಿಸಿ ಬರುವ ಮೂರು (ಚಾರ್ಪೆೞುತ್ತುಗಳು) ಅಕ್ಷರಗಳನ್ನು ಬಿಟ್ಟು.

2. ಅವೈತಾಂ
ಕುಟ್ರಿಯಲಿಕರಂಕುಟ್ರಿಯಲುಕರಂ ಆಯ್ದಂ ಎನ್ಱ
ಮುಪ್ಪಾಲ್‌ಪುಳ್ಳಿಯುಂ ಎೞುತ್ತೋರನ್ನ

ಅವು 'ಕುಟ್ರಿಯಲಿಕರಂ' (ಸಂವೃತ ಇಕಾರ) 'ಕುಟ್ರಿಯಲುಕರಂ' (ಸಂವೃತ ಉಕಾರ), 'ಆಯ್ದ' ಎನ್ನುವುವು. ಆಯ್ದಾಕ್ಷರದ ರೂಪ ಮೂರು ಬಿಂದುಗಳು (∴) ಈ ಮೂರನ್ನೂ ಮೇಲೆ ಹೇಳಿದ ಮುವತ್ತು ಅಕ್ಷರಗಳೊಂದಿಗೆ ಸೇರಿಸಿ ಪರಿಗಣಿಸ ಬೇಕು.

3. ಅವಟ್ರುಳ್ (ಅವುಗಳು)
ಅ ಇ ಉ ಎ ಒ ಎನ್ನುಂ
ಅಪ್ಪಾಲ್ ಐನ್ದುಂ
ಓರಳ ಪಿಚೈಕ್ಕುಂ ಕುಟ್ರೆೞುತ್ತೆನ್ಪ.

ಒಂದು ಮಾತ್ರೆಯ ಅಳತೆಯುಳ್ಳ ಅ ಇ ಉ ಎ ಒ ಎನ್ನುವ ಅಕ್ಷರಗಳನ್ನು 'ಕುಱ್ಱೆೞುತ್ತು' (ಹ್ರಸ್ವಾಕ್ಷರ) ಎಂದು ಹೇಳಲಾಗುತ್ತದೆ.

4. ಆ ಈ ಊ ಏ ಐ
ಓ ಔ ಎನ್ನುಂ ಅಪ್ಪಾಲ್ ಏೞುಂ
ಈರಳ ಪಿಚೈಕ್ಕುಂ ನೆಟ್ಟೆೞುತ್ತೆನ್ಪ.

ಎರಡು ಮಾತ್ರೆಗಳ ಅಳತೆಯುಳ್ಳ ಆ ಈ ಊ ಏ ಐ ಓ ಔ- ಎನ್ನುವ ಏಳು ಅಕ್ಷರಗಳನ್ನು 'ನೆಟ್ಟೆೞುತ್ತು' (ದೀರ್ಘಾಕ್ಷರ) ಎಂದು ಹೇಳಲಾಗುತ್ತದೆ.

5. ಮೂಅಳ ಪಿಚೈತ್ತಲ್ ಒರೆೞುತ್ತಿನ್ಱೇ.
ಮೂರು ಮಾತ್ರೆಗಳ ಅಳತೆಯುಳ್ಳ ಏಕಾಕ್ಷರವಿಲ್ಲ.

6. ನೀಟ್ಟಂ ವೇಣ್ಡಿನ್ ಅವ್ವಳ ಪುಟೈಯ
ಕೂಟ್ಟಿ ಎೞೂಉತಲ್ ಎನ್ಮನಾರ್ ಪುಲವರ್.

(ವೃತ್ತ ಪೂರ್ತಿಗಾಗಿಯೋ ಶ್ರವಣ ಮಾಧುರ್ಯಕ್ಕಾಗಿಯೋ) ಒಂದು ಅಕ್ಷರವನ್ನು ಎಳೆದು (ಅದರ ಮಾತ್ರೆಯಲ್ಲಿ ಹೆಚ್ಚಾಗಿ) ಉಚ್ಚರಿಸಬೇಕಾಗಿ ಬರುವ ಸಂದರ್ಭಗಳಲ್ಲಿ ಅಗತ್ಯವಿರುವಷ್ಟು ಅಕ್ಷರಗಳನ್ನು ಸೇರಿಸಿ ಉಚ್ಚರಿಸಬೇಕೆಂದು ಪಂಡಿತರು ಹೇಳುತ್ತಾರೆ.

ಉದಾ : ಎೞೂ ಉತಲ್.

7. ಕಣ್ಣಿಮೈ ನೊಡಿಯೆನ ಅವ್ವೇ ಮಾತ್ತಿರೈ
ನುಣ್ಣಿತಿನ್ ಉಣರ್ನ್ದೋರ್ ಕಣ್ಡವಾಱೇ

ಕಣ್ಣೆವೆಯಾಡಿಸುವಷ್ಟು ಸಮಯ ಅಥವ ನೆಟಿಗೆ ತೆಗೆಯುವುದಕ್ಕೆ ಬೇಕಾಗುವಷ್ಟು ಸಮಯ. ಇದನ್ನು ಕುರಿತು ಸೂಕ್ಷ್ಮವಾಗಿ ಪರಿಶೀಲಿಸಿದವರ ಅಭಿಪ್ರಾಯ ಇದು.

8. ಔ ಕಾರ ಇಱುವಾಯ್
ಪ್ಪನ್ನೀರೆೞುತ್ತುಂ ಉಯಿರೆನ ಮೊೞಿಪ.

ಔಕಾರದ ವರೆಗಿರುವ ಹನ್ನೆರಡು ಅಕ್ಷರಗಳನ್ನು 'ಉಯಿರ್' (ಸ್ವರ) ವೆಂದು ಹೇಳಲಾಗುತ್ತದೆ.

(ಅ, ಆ, ಇ, ಈ, ಉ, ಊ, ಎ, ಏ, ಐ, ಒ, ಓ, ಔ)

9. ನಕಾರ ಇಱುವಾಯ್
ಪ್ಪತಿನೆಣ್ ಎೞುತ್ತುಂ ಮೆಯ್ ಎನ ಮೊೞಿಪ.

ನ ಕಾರದವರೆಗಿರುವ ಹದಿನೆಂಟು ಅಕ್ಷರಗಳನ್ನು 'ಮೆಯ್' (ವ್ಯಂಜನ) ಎಂದು ಹೇಳಲಾಗುತ್ತದೆ.

(ಕ್, ಙ್, ಚ್, ಞ್, ಟ್, ಣ್, ತ್, ನ್, ಪ್, ಮ್, ಯ್, ರ್, ಲ್, ವ್, ೞ್, ಳ್, ಱ್, ನ್).

10. ಮೆಯ್ಯೋಟಿಯೈಯಿನುಂ ಉಯಿರಿಯಿಲ್ ತಿರಿಯಾ.

ವ್ಯಂಜನದೊಂದಿಗೆ ಸೇರಿದಾಗಲೂ ಸ್ವರದ ಮಾತ್ರೆ ವ್ಯತ್ಯಾಸಗೊಳ್ಳುವುದಿಲ್ಲ.

11. ಮೆಯ್ಯಿನ್ ಅಳಪೇ ಅರೈಯಿನ ಮೊಟಿಪ.

ವ್ಯಂಜನದ ಅಳತೆ ಅರ್ಧಮಾತ್ರೆ ಎಂದು ಹೇಳಲಾಗುತ್ತದೆ.

12. ಅವ್ವಿಯಲ್ ನಿಲೈಯುಂ ಎನ್ಪೈ ಮೂನ್ಱೇ

ಉಳಿದ ಮೂರಕ್ಕೂ ಅದೇ ಸ್ವಭಾವ.

(ಸಂವೃತಗಳಿಗೂ ಆಯ್ದಾಕ್ಷರಕ್ಕೂ ಅರ್ಧಮಾತ್ರೆ ಎಂದರ್ಥ)

13. ಅರೈಅಳಪು ಕುಱುಕಲ್ ಮಕರಂ ಉಡೈತ್ತೇ.
ಇಚೈಯಿಡನ್ ಅರುಕುಂ ತೆರಿಯುಂ ಕಾಲೈ.

ಮತ್ತೊಂದು ವ್ಯಂಜನದೊಂದಿಗ ಸೇರಿ ಮ್ ಅರ್ಧಮಾತ್ರೆಗೆ ಕಡಿಮೆಯಾಗಿಯೂ ಬರಬಹುದು.

ಉದಾ : ಕೊಣ್ಮ್ (ಕೊಳ್ಳುಂ)
ಪೋನ್ಮ್ (ಪೋಲುಂ)

14. ಉಳ್ಪೆಱು ಪುಳ್ಳಿ ಉರುವಾ ಕುಮ್ಮೇ

ಒಳಗೆ ಚುಕ್ಕಿಯನ್ನಿಟ್ಟು ಬರೆಯುವುದು ಅದರ ರೂಪ.

15. ಮೆಯ್ಯಿನ್ ಇಯಱ್ಕೈ ಪುಳ್ಳಿಯೊಟು ನಿಲೈಯಲ್.

ಮೇಲೆ ಚುಕ್ಕಿಯನ್ನಿಟ್ಟು ಎಲ್ಲ ವ್ಯಂಜನಗಳನ್ನೂ ಬರೆಯುವುದು.

16. ಎಕರ ಒಕರತ್ತು ಇಯಱ್ ಕೈಯುಂ ಅಟ್ಱೇ.

ಎ ಕಾರ ಒ ಕಾರಗಳೂ ಅದೇ ರೀತಿ.

17. ಪುಳ್ಳಿ ಇಲ್ಲಾ ಎಲ್ಲಾ ಮೆಯ್ಯುಂ
ಉರುವುರು ವಾಕಿ ಅಕರಮೋಟುಯಿರ್ತ್ತಲುಂ

ಎನ್ನೈ ಉಯಿರೋಟುರುವ್ಪ್ರಿರಿನ್ಸ್ಟುಯಿರ್ತ್ತಲುಂ
ಆಯೀ ರಿಯಲ ಉಯಿರ್ತ್ತ ಲಾಟೀ

ವ್ಯಂಜನಗಳಲ್ಲಿ ಅ ಕಾರದೊಂದಿಗೆ ಸೇರುವಾಗ ಚುಕ್ಕಿಯಿಲ್ಲದಿರುವ ಆಯಾ ರೂಪ ದೊಂದಿಗೆ ಕೂಡಿಯೂ ಉಳಿದ ಸ್ವರಗಳೊಂದಿಗೆ ಸೇರುವಾಗಲೂ ರೂಪವ್ಯತ್ಯಾಸವಾಗಿ ಬರುತ್ತದೆ.

ಉದಾ : ಕ್+ಅ=ಕ
ಕ್+ಆ=ಕಾ
ಕ್+ಇ=ಕಿ

18. ಮೆಯ್ಯಿನ್ ಇಯಕ್ಕಮ್ (ತು) ಉಯಿರ್ ತೋನ್ರು ನಿಲೈಯೇ.

(ಸ್ವರವೂ ವ್ಯಂಜನವೂ ಸೇರಿದಾಗ) ಮೊದಲು ವ್ಯಂಜನವನ್ನೂ ಅನಂತರ ಸ್ವರ ವನ್ನೂ ಉಚ್ಚರಿಸಬೇಕು.

19. ವಲ್ಲೆಟುತ್ತೆನ್ಪ ಕ ಚ ಟ ತ ಪ ಱ.

ಕ. ಚ. ಟ. ತ. ಪ, ಱ—ಈ ಅಕ್ಷರಗಳನ್ನು ವಲ್ಲಿನಮ್ (ಖರಾಕ್ಷರಗಳು) ಎಂದು ಹೇಳಲಾಗುತ್ತದೆ.

20. ಮೆಲ್ಲೆಮಿತ್ತೆನ್ಪ ಙ ಞ ಣ ನ ಮ ನ

ಙ. ಞ, ಣ, ನ. ಮ. ನ—ಈ ಅಕ್ಷರಗಳನ್ನು ಮೆಲ್ಲಿನಮ್ (ಅನುನಾಸಿಕಾಕ್ಷರ ಗಳು) ಎಂದು ಹೇಳಲಾಗುತ್ತದೆ.

21. ಇಟೈಯೆಮಿತ್ತೆನ್ದ ಯ ರ ಲ ವ ೞ ಳ

ಯ, ರ, ಲ. ವ. ೞ. ಳ—ಈ ಅಕ್ಷರಗಳನ್ನು ಇಡೈಯಿನಮ್ (ಮಧ್ಯಮಾಕ್ಷರ ಗಳು) ಎಂದು ಕರೆಯಲಾಗುತ್ತದೆ.

22. ಅಮ್ಮೂವಾಱುಂ ವ಴ಙ್ಕಿಯಲ್ ಮರುಙ್ಕಿನ್
ಮೆಯ್‌ಮಯಕ್ ಕ್ಕಟ ನಿಲೈ ತೆರಿಯುಂ ಕಾಲೈ.

ಶಬ್ದಗಳಲ್ಲಿ ಪ್ರಯೋಗಿಸುವಾಗ ಮೇಲೆ ಹೇಳಿದ ಹದಿನೆಂಟು ವ್ಯಂಜನಗಳೂ ಒಂದರೊಡನೊಂದು ಸೇರುತ್ತವೆ. ಒಂದು ವ್ಯಂಜನದೊಂದಿಗೆ ಅದೇ ವ್ಯಂಜನ ಸೇರಿ

ದ್ವಿತ್ವವಾಗುವುದು—ಒಂದು ವ್ಯಂಜನದೊಂದಿಗೆ ಮತ್ತೊಂದು ವ್ಯಂಜನ ಸೇರುವುದು ಎಂದು ಎರಡು ರೀತಿಯಲ್ಲಿರುತ್ತದೆ.

23. ಟ ಱ ಲ ಳ ಎನ್ನುಂ ಪುಳ್ಳಿ ಮುನ್ನರ್
ಕ ಚ ಪ ವೆನ್ನುಂ ಮೂವಮಿತ್ತಿರಿಯ್ಯ.

ಟ, ಱ, ಲ, ಳ–ಈ ವ್ಯಂಜನಗಳಿಗೆ ಕ ಚ ಪ ಎನ್ನುವ ಮೂರು ವ್ಯಂಜನಗಳು ಪರವಾಗುತ್ತವೆ.

ಉದಾ : ಕೇಟ್ಕ, ನಿಱ್ಕ, ಚೆಲ್ಕ, ಕೊಳ್ಕ,
ಕಾಟ್ಚಿ, ಪಯಿಱ್ಚಿ, ಪಟ್ಚಿ, ನೀಳ್ಚಟ್ಟೈ,
ಕೇಟ್ಪ, ನಿಱ್ಪ, ಚೆಲ್ಪ, ಕೊಳ್ಪ.

24. ಅವಟ್ಟುಳ್
ಲಳ ஃ ಕಾನ್ ಮುನ್ನರ್ ಯ ವವುಂ ತೋನ್ಱುಂ.

ಅವುಗಳಲ್ಲಿ ಲ ಕಾರ ಳ ಕಾರಗಳಿಗೆ ಯ ಕಾರ ವ ಕಾರಗಳು ಪರವಾಗುತ್ತವೆ.

ಉದಾ : ಕೊಲ್‌ಯಾನೈ, ಕೊಳ್‌ಯಾನೈ.
ಚೆಲ್‌ವತು, ಕೊಳ್‌ವತು.

25. ಙ ಞ ಣ ನ ಮ ನ ಎನ್ನುಂ ಪುಳ್ಳಿಮುನ್ನರ್
ತತ್ತಂ ಇಚೈಕಳ್ ಒತ್ತನ ನಿಲೈಯೇ

ಙ, ಞ, ಣ, ನ, ಮ, ನ–ಎನ್ನುವ ವ್ಯಂಜನಗಳಿಗೆ ಆಯಾ ವರ್ಗಾಕ್ಷರಗಳು ಪರವಾಗುತ್ತವೆ.

(ಙ ಕಾರಕ್ಕೆ ಕ ಕಾರ
ಞ ,, ಚ ,,
ಣ ,, ಟ ,,
ನ ,, ತ ,,
ಮ ,, ಪ ,,
ನ ,, ಱ ,,)

ಉದಾ : ತೆಙ, ಅಞ್ಕ, ವಣ್ಚು, ಪನ್ತು, ಇರುನ್ಪು, ಕನ್‌ಱು.

26. ಅವಟ್ಟುಳ್
ಣ ನ ஃ ಕಾನ್ ಮುನ್ನರ್
ಕ ಚ ಞ ಪ ಮ ಯ ವ ಎ ಟುಂ ಉರಿಯ.

ಅವುಗಳಲ್ಲಿ ಣ ಕಾರ ನ ಕಾರಗಳಿಗೆ ಕ, ಚ, ಞ, ಪ, ಮ.

ಯ, ವ,–ಎನ್ನುವ ಏಳು ಅಕ್ಷರಗಳೂ ಪರವಾಗುತ್ತವೆ.

ಉದಾ : ಪಣ್ಕು (ಕರಡಿ). ಪೆಣ್ಟುಮರಂ. ಪೆಣ್ಞಾಣ್
ಪೆಣ್ಪು. ಕಣ್ಮಣಿ. ಮಣ್ಯಾತು (ದು)
ಮಣ್ವಲಿತು (ದು). ಪೊನ್ಕು. ಪೊನ್ಚರಿಪ್ಪು.
ನೋನ್ಞಾಣ್, ಞಣ್ಪಂ ; ನನ್ಮೈ,
ಪೊನ್ಯಾಡು (ದು). ಪೊನ್ವಳೈ.

27. ಞ ನ ಮ ವ ಎನ್ನುಂ ಪುಳ್ಳಿ ಮುನ್ನರ್
ಯ ∴ ಕಾನ್ ನಿಟ್ಟಿಲ್ ಮೆಯ್ಪ್ಪಿಟ್ಟನ್ನೇ.

ಞ, ನ, ಮ, ವ–ಎನ್ನುವ ವ್ಯಂಜನಗಳಿಗೆ ಯ ಕಾರವೂ ಪರವಾಗುತ್ತದೆ.

ಉದಾ : ಉರಿಞ್ಯಾತು (ದು)
ಪೊರುನ್ಯಾಡು (ದು)
ಕಳಂಯಾತು (ದು)
ಅವುಯಾನೈ

28. ಮ ∴ ಕಾನ್ ಪುಳ್ಳಿಮುನ್ ವಯ್ಯುಂ ತೋನ್ರುಂ.

ಮಕಾರಕ್ಕೆ (ಮೇಲೆ ಹೇಳಿದವುಗಳಲ್ಲದೆ) ವಕಾರವೂ ಪರವಾಗುತ್ತದೆ.

ಉದಾ : ತಂವಣ್ಟಿ (ಣ್ಡಿ)

29. ಯರಳ–ಎನ್ನುವ ವ್ಯಂಜನಗಳಿಗೆ ಪದಾರಂಭದಲ್ಲಿ ಬರುವ ವ್ಯಂಜನಗಳೂ ಙಕಾರವೂ ಪರವಾಗುತ್ತದೆ. ಪದಾರಂಭದಲ್ಲಿ ಬರುವವು. ಕ, ಚ, ಞ, ತ, ನ, ಪ, ಮ, ಯ, ವ.

ಉದಾ : ಚೆಯ್ಕ, ಚೆಯ್ಚ್ಲೈ. ಚೆಯ್ಞಾಯಿಱು.
ಚೆಯ್ತಿ ದಿ, ಚೆಯ್ನ್ನಾಳ್, ಆಯ್ಪು.
ಚಾಯ್ಮಾರ್. ಪಾಯ್ವತು ದು ಉಯರ್ಕ,
ಉಯರ್ಚ್ಚರನ್. ಉಯರ್ಞಾಯಿಱು. ಚೇರ್ತಿ,
ಚೇರ್ನ್ನಾಳ್, ಚೇರ್ಪು.
ಅಯರ್ಮಾರ್, ಉಯರ್ಯಾನೈ. ಚೇರ್ವು. ವಾಳ್ಕ,
ತಾವಿುಚಿನ್ನೈ, ವೀಳ್ಞಾಯಿಱು, ವಾಳ್ತ್ತಿ,

ವಾಟಿಡ್‌ನರ್, ಚೂಟಿವು. ಕಲೀರ್‌ಮೇ,
ವಾಟಿಡ್‌ಯಾನೈ, ತಾಟಿಡ್‌ವು.

ಜಕಾರ ಬರುವ ಪದ ಪ್ರಯೋಗದಲ್ಲಿ ಕಂಡುಬರುವುದಿಲ್ಲ. ವೇಯುಜನಂ, ವೇರ್ ಜನಂ. ಏಟಿಡ್‌ಜನಂ,–ಇವುಗಳನ್ನು ಇಳಂಪೂರಣರು ಉದಾಹರಣೆಯಾಗಿ ಕೊಟ್ಟಿದ್ದಾರೆ.

30. ಮೆಯ್‌ನ್ನಿಲೈ ಚುಟ್ಟಿನ್ ಎಲ್ಲಾ ಎಟುತ್ತುಂ.
ತಮ್ಮುನ್‌ತಾಂ ವರೂಳಂ ರಟಅಲಂ ಕಟೈಯೇ.

ರ ಕಾರ ಏಕಾರಗಳನ್ನು ಬಿಟ್ಟು ಉಳಿದ ವ್ಯಂಜನಗಳು ದ್ವಿತ್ವಗೊಳ್ಳುತ್ತವೆ.

ಉದಾ : ಪಿರಿಕ್ಕುಂ. ಎಜನಂ. ಪಿಚ್ಚಿ, ಮಞ್ಞೈ.
ಕಟ್ಟಂ, ಎಣ್ಣಂ, ಪತ್ತು, ಅನ್ನಾಳ್, ಅಪ್ಪಂ,
ಅಮ್ಮೈ, ಚೆಯ್ಯುಂ, ನೆಲ್ಲಿ, ನವ್ವಿ,
ಕೊಳ್ಳುಂ, ಚುಟ್ಟುಂ, ಅನ್ನಂ.

31. ಅ ಇ ಉ ಅಮ್ಮೂನ್ರುಂ ಚುಟ್ಟು.

ಅ, ಇ. ಉ–ಈ ಮೂರೂ ಚುಟ್ಟೆಮಿತ್ತುಗಳು.

ಅವನ್, ಇವನ್, ಉವನ್,
ಅಮ್ಮರಂ, ಇಮ್ಮರಂ, ಉಮ್ಮರಂ.

32. ಆ, ಏ, ಓ ಅಮ್ಮೂನ್ರುಂ ವಿನಾ.

ಆ, ಏ, ಓ–ಇವು ಮೂರೂ ಪ್ರಶ್ನೆಯನ್ನು ಸೂಚಿಸುತ್ತವೆ.

ಉದಾ : ವರುಮಾ ? ವರುಮೇ ? ವರುಮೋ ?

33. ಅಳಪಿಱನ್ತುಯಿರ್‌ತ್ತಲುಂ ಒಟ್ಟಿಚೈ ಸೀಟಲುಂ
ಉಳ ಎನ ಮೊಟಿಪ ಇಚೈಯೊಡು ಚಿವಣಿಯ
ನರಮ್ಬಿನ್ ಮಱೈಯ ಎನನಾರ್ ಪುಲವರ್.

ಸಂಗೀತದಲ್ಲಿ ಸ್ವರಗಳನ್ನೂ ವ್ಯಂಜನಗಳನ್ನೂ ಮಾತ್ರೆಗಳಾಗಿ ಪರಿಗಣಿಸಿ ಉಚ್ಚರಿಸುತ್ತಾರೆನ್ನುವುದು ಪಂಡಿತರ ಅಭಿಪ್ರಾಯ.

ಎಚ್. ಶೇಷಾದ್ರಿ

ಭಾರತ–ಒಂದು ಅದಮ್ಯ ಚೇತನ

ಇದು ಭಾರತ ಹಸಿರು ಜಡೆ ಹೆಣೆದ ಜಪ್ಪುಗಟ್ಟಿದ ಆಲ
ತುಳಿತ ಹೊಡೆತಕೆ ಸಿಕ್ಕಿಯೂ ನಲುಗದು ಎದುರಾಳಿಯೆ ಇಪ್ಪರೂ ಕಾಲ
ಶತ ಶತಮಾನ ಪ್ರಹಾರಕೂ ವಜ್ರಕಾಠಿಣ್ಯ ದೇಹವೀ ಕಾಂಡ
ಚಿಗುರ ಸಣ್ಣ ಟೊಂಗೆಯೂ ಬಲಿತು ಕಟುರವಾಗಿಹ ಕಾಂಡ
ಕೆಂಧೂಳನೆಬ್ಬಿಸುತಿಹ ಬುಸುಗುಟ್ಟುವ ಹಗೆಯು ಕಾವಿನ ಪಿತ್ತ
ಬುಡವಲಿ ಇಹುದು ನಳನಳಿಸುತಿಹ ವಿಷ ಸರ್ಪಗಳ ಹುತ್ತ
ತಮ್ಮಲೇ ತರಿದಾಡುವ ಕಟುಕ ಕಾಡು ಮೃಗಗಳ ಕಾದಾಟ
ಗೊರಸಲಿ ಒದೆಯುತ ದೀನ ಮೂಕವ ತೊತ್ತಳದುಳಿಯುವ ನೋಟ
ಬಡಗೆದ್ದಲೂ ಬಿಡದೆ ಸಿಕ್ಕ ಜಡ ಬೇರಿನ ಬುಡವನೆ ಜಗಿಯುವ ಆಟ
ಸಾಗುತಲಿದೆ ಹೀಗೆಯೇ ಜೀವನದ ಹೊಸಕಾಟ ಮಿಡುಕಾಟ
ಜೀವರಸ ಮೇಲೇರುತಲಿದೆ ಎತ್ತರ ಅತಿ ಎತ್ತರಕೂ ಪಸರಿಸಿದೆ
ಮೇಲೆ ಕಂಪಿಸಿಹ ಒಂದೊಂದು ಕಿರು ಟೊಂಗೆಯ ಬಳಿಯೂ ಉಸುರಿದೆ
ಕೊನರಿಡಿಸಲು ನಗಿಸಲು ಹವಣಿಕೆ ನಡೆಸುತ ಮಾಡಿದೆ ಜತನ
ನೇಸರ ಆಶಾರಶ್ಮಿಯನೋಲೈಸುತ ನೀಡಿದೆ ಹಾರ್ದಿಕ ಆಮಂತ್ರಣ
ರೆಂಬೆ ಕೊಂಬೆಗಳ ತೋರಿಸಿ ಕೂಗಿಕರೆಯುತಿದೆ ಪಕ್ಷಿ ಸಂಕುಲವ
ನಿಜ ತನ್ನಯ ರಾಗದೆ ಹಾಡಲು ಕಾಲನ ಕಠೋರ ಸತ್ಯದ ಸಂಭವ
ಜರ್ಝರಿತವಾಗದೆ ನಿಂತಿಹುದು ಅಚಲಿತವಾಗಿ ಅದಮ್ಯ ಶಕ್ತಿಯು ತೇರು
ಅನೂಹ್ಯ ನಮ್ಮ ಭಾರತವು ಧರ್ಮ ಸಹಿಷ್ಣುತೆ ಶಾಂತಿ ಸಹನೆ ಕೀರ್ತಿಯ ಮೇರ

ಡಾ. ಟಿ. ವಿ ವೆಂಕಟಾಚಲ ಶಾಸ್ತ್ರೀ

ಜೈನಪುರಾಣವಾಗಿ 'ಮಲ್ಲಿನಾಥಪುರಾಣ'

ನಾಗಚಂದ್ರನ 'ಮಲ್ಲಿನಾಥ ಪುರಾಣ' (=ಮಲ್ಲಿಪು) ಕನ್ನಡ ಜೈನ ತೀರ್ಥಂಕರ ಪುರಾಣಗಳಲ್ಲಿ, ಈಗ ತಿಳಿದ ಮಟ್ಟಿಗೆ ಏಳನೆಯದು; ದೊರೆತು ಪ್ರಸಿದ್ಧವಾದವುಗಳಲ್ಲಿ, ಐದನೆಯದು. ಸಮಗ್ರ ಭಾರತೀಯ ಭಾಷಾ ಸಾಹಿತ್ಯದಲ್ಲಿಯೇ ಇದು ಸರ್ವ ಪ್ರಥಮವಾದ ಮಲ್ಲಿನಾಥ ಚರಿತ್ರೆ ಎಂಬ ಅಭಿಪ್ರಾಯವಿದ್ದು, ಅದು ಇನ್ನೂ ದೃಢಪಡಬೇಕಾಗಿದೆ. ಸ್ವಲ್ಪವಾದ ಕಥಾವಸ್ತುವನ್ನು ಪುರಾಣಕಾವ್ಯದ ವ್ಯಾಪ್ತಿಗೆ ಹಿಗ್ಗಿಸಿದ ಕನ್ನಡ ಜೈನ ಪುರಾಣಗಳಲ್ಲಿ ಇದನ್ನು ಬೇರಾವುದೂ ಮೀರಿಸಲಾರದೆಂದೇ ತೋರುತ್ತದೆ; ಈಚಿನ 'ಪುಷ್ಪದಂತ ಪುರಾಣ'ವೊಂದು ಇದನ್ನು ಹೋಲುತ್ತದೆ.

ವಸ್ತು ಪರಿಚಿತವಾದ್ದು, ಭಿತ್ತಿ ಸರಳವಾದ್ದು. ವೈಶ್ರವಣ–ಲಕ್ಷ್ಮೀ ಮಹಾದೇವಿಯರ ಕಥೆಯಾಗಿ ಮೊದಲಾಗುವ ಈ ಪುರಾಣ ಕಥೆ ವೈಶ್ರವಣಚರ ಮಲ್ಲಿನಾಥ ತೀರ್ಥಂಕರನ ಕಥೆಯಾಗಿ ಬೆಳೆದು, ಆತ ತೀರ್ಥಂಕರ ಸಿದ್ಧನಾಗುವುದರೊಂದಿಗೆ ಮುಗಿಯುತ್ತದೆ. ಇದು ಜೈನ ಪರಂಪರೆ ಒಪ್ಪಿದ ಕಥೆ; ಶ್ರುತಸ್ಕಂಧದ ಪ್ರಥಮಾನುಯೋಗದ ಕಾಲದಿಂದ ಪುರಾಣ ಕವಿಗಳಿಗೆ ಪಥ್ಯವಾದ ಕಥೆ, ಮೊದಲು ತಾರಾದ್ರಿಯಲ್ಲಿ ಪುರುಪರಮೇಶ್ವರನ ಸನ್ನಿಧಿಯಲ್ಲಿ ವೃಷಭಸೇನ ಗಣಧರನಿಂದ ಭರತ ಚಕ್ರವರ್ತಿಗೆ, ಅನಂತರ ವಿಪುಲಾದ್ರಿಯಲ್ಲಿ ವರ್ಧಮಾನ ತೀರ್ಥಂಕರನ ಸನ್ನಿಧಿಯಲ್ಲಿ ಗೌತಮ ಗಣಧರನಿಂದ ಮಗಧೇಶ್ವರನಿಗೆ ಈ ಕಥೆ ನಿರೂಪಿತವಾಯಿತು ಎಂದಿದೆ. ಇದು ಸಂಪ್ರದಾಯವನ್ನು ಗೌರವಿಸುವ, ವಸ್ತುವಿನ ಪೂಜ್ಯತೆಯನ್ನು ಸ್ಥಾಪಿಸುವ ಮಾತು. ಕವಿಯೇ ಹೇಳುವಂತೆ ಈ ಪುರಾಣ 'ಜಿನಚರಿತೆ', 'ರಾಜವಿಟ ಚೋರಕಥೆ'ಯಲ್ಲ; 'ವಿಕಥಾವರ್ಣನ'ವಾಗಲಿ, 'ಅಲ್ಪ ಸಂಸ್ತವನ'ವಾಗಲಿ ಅಲ್ಲ. ಇದು ಕಾಲಕ್ಷೇಪಕ್ಕೆ ಹೇಳಿದ್ದಲ್ಲ. 'ದುರಿತಕ್ಷಯ'ವಾಗಲಿ ಎಂದು ಹೇಳಿದ್ದು. ಉನ್ನತ ಸಂದರ್ಭ ವಿಶೇಷಗಳು, ಉದಾತ್ತ ಸ್ತ್ರೀ ಪುರುಷರು ಇವನ್ನೇ ನಾವು ಇಲ್ಲಿ ನಿರೀಕ್ಷಿಸಬೇಕು. ಒಟ್ಟಿನಲ್ಲಿ ಇದೊಂದು ಆದರ್ಶ ಲೋಕ ಸೃಷ್ಟಿ: ಆಮುಷ್ಮಿಕ ಸಾಧನಾ ಕ್ಷೇತ್ರ. ಎಲ್ಲ ಜೈನ ಪುರಾಣಗಳೂ ಹೀಗೆಯೇ. ಆದ್ದರಿಂದ ಈಚಿನ ಕಾಲದ ವಿಮರ್ಶೆಯ ವಿಧಾನಗಳು ಇಲ್ಲಿ ಅನ್ವಯವಾಗುವುದಾದರೆ, ಕೆಲವು ತೊಡಕುಗಳು ಹುಟ್ಟುವುದು ತಪ್ಪದು.

ಮಲ್ಲಿಪು. ಸಕಲಜ್ಞ ಪ್ರತಿಪಾದ ಭುವನ, ದೇಶ, ಪುರ, ರಾಜ(ಜ್ಯ) ವೃತ್ತಕ ಅರ್ಹದ್ವಿಭವ, ಚತುರ್ಗತಿ, ತಪೋಮಾರ್ಗ, ಫಲ ಎಂಬ ಪುರಾಣ ಕಥಾಂಗಗಳಿಂದ ಕೂಡಿದ ಯೆಂದು ಕವಿಯೇ ಸೂಚನೆ ನೀಡಿದ್ದಾನೆ (೧-೫೪). ಪೂರ್ವಪುರಾಣ ಆದಿಪುರಾಣಗಳಲ್ಲಿ ಹೇಳಿರುವಂತೆಯೇ ಇಲ್ಲಿಯೂ ಇವು ಹೇಳಲ್ಪಟ್ಟಿವೆ. ಇವುಗಳಲ್ಲಿ ದೇಶ, ಪುರ ಮತ್ತು ರಾಜ್ಯಗಳೆಂಬವು ಜನ್ನನೂ ತಿಳಿಸುವಂತೆ (ಅನಂಪು. ೧-೭೭) ಜೈನ ವಿಶಿಷ್ಟವಾದ ವೇನಲ್ಲ: ಕಥಾಪೋಷಣೆಗೆ ಸಾರ್ವತ್ರಿಕವಾದವು.

ಸಂಕಲ್ಪದಂತೆ ಮಲ್ಲಿಪು. ಲೋಕಾಕಾರಕಥನದಿಂದ ಆರಂಭವಾಗಿದೆ. ಸಹಜವಾಗಿಯೆ ಲೋಕತ್ರಯಗಳು, ಜಂಬೂದ್ವೀಪ, ಹಾಗೂ ಪೂರ್ವಾಪರ ವಿದೇಹಗಳ ವರ್ಣನೆಗಳ ಇಲ್ಲಿ ಸೇರಿವೆ. ಇವು 'ಆದಿಪುರಾಣ'ದಲ್ಲಿಯಷ್ಟು ವಿಸ್ತಾರದಲ್ಲಿಲ್ಲ: ಶಾಂತಿಪುರಾಣ ಅಜಿತ ಪುರಾಣಗಳಲ್ಲಿಯಷ್ಟು ಹ್ರಸ್ವವಾಗಿಯೂ ಇಲ್ಲ: ಉಚಿತ ಪ್ರಮಾಣದಲ್ಲಿವೆ. ಪೂರ್ವವಿದೇ ಹದ ಕಚ್ಛಕಾವತೀ ವಿಷಯದ ವರ್ಣನೆಯಲ್ಲಿ, ಅದರಲ್ಲಿಯು ವೀತಶೋಕಪುರದ ವರ್ಣ ನೆಯಲ್ಲಿ ಈ ಪುರಾಣ ಕಥಾಂಗಗಳಲ್ಲಿ ದೇಶ, ಪುರ ಮತ್ತು ರಾಜ್ಯಾಖ್ಯಾನಗಳು ಸಂಪನ್ನ ಗೊಂಡಿವೆ. ಎರಡನೆಯ ಆಶ್ವಾಸ ಪೂರ್ತಿ ಪುರವರ್ಣನೆಯನ್ನೇ ಕುರಿತಿರುವುದು ನೋಡಿ ದರೆ, ಈ ಕೃತಿಯಲ್ಲಿ ವರ್ಣನೆಗಳೇ ಹೆಚ್ಚು ಮೆರೆಯುವುದು ನಿಶ್ಚಯ ಎನ್ನುವುದರ ಮುನ್ಸೂಚನೆ ನಮಗೆ ದೊರೆಯುತ್ತದೆ. ಅಷ್ಟಾದಶ ಕಾವ್ಯಾಂಗಗಳಲ್ಲಿ ಒಂದನ್ನು ಪೂರೈಸಿದ ತೃಪ್ತಿಯೂ ಕವಿಗೆ ಇಲ್ಲಿ ಆಗಿರಬಹುದು. ಈ ಪುರಾಣ ಮತ್ತು ಕಾವ್ಯಾಂಗಗಳ ಅವಿ ಭಕ್ತವಾದ ಅಂಗ ತಾನೇ,ರಾಜ ದಂಪತಿಗಳ ಭೋಗಭಾಗ್ಯಗಳ ವರ್ಣನೆ ? "ರಸಾವಳಿಂ ಮೆನೆ ಮಲ್ಲಿ ಜಿನೇಂದ್ರ ಮಹಾಪುರಾಣಮಂ । ವಿರಚಿಸಿದಂ ಪ್ರಸಿದ್ಧ ಕವಿ ಪದ್ಧತಿಯಿಂ ಕವಿತಾ ಮನೋಹರಂ" ಎಂದು (೧೪-೨೦೮) ಹೇಳಿಕೊಳ್ಳಲು ಸಾಧ್ಯವಾಗುವುದು ಇಂತಹ ವರ್ಣನೆಗಳಿಂದ ತಾನೆ ? ಇಲ್ಲಿ ಪುರಾಣ ಕಾವ್ಯಗಳ ನಡುವೆ ಭೇದವೇನೂ ಇಲ್ಲ

ಮಲ್ಲಿಪು. ದಲ್ಲಿ ರಾಜಪತ್ನಿಯ ಪುತ್ರದೋಹಳವರ್ಣನೆ ಪುರಾಣ ವಿರಕ್ತ ಅಥವಾ ಗಂಭೀರ ವಾತಾವರಣದ ನಡುವೆ ಸಾಹಿತ್ಯ ಪ್ರೀತಿ ಜೀವನ ಪ್ರೀತಿಗಳನ್ನು ಸಿಂಪಡಿಸಿರು ರಮಣೀಯವಾದ ಭಾಗ. ಕುಮಾರೋದಯ ವರ್ಣನೆಯೆಂಬ ಕಾವ್ಯಾಂಗವನ್ನೂ ಇದು ಪೋಷಿಸುತ್ತದೆ. ಆದರೆ ಈ ವರ್ಣನೆಯನ್ನು ಶ್ರೀಧರನ ಜನನಕ್ಕೆ ತಾರದೆ, ವೈಶ್ರವಣನ ಇಲ್ಲವೆ ಮಲ್ಲಿನಾಥನ ಜನನಕ್ಕೆ ತಂದಿದ್ದರೆ ಕಾವ್ಯ ಶೋಭೆ ಇನ್ನೂ ಹೆಚ್ಚುತ್ತಿತ್ತು. ಅಲ್ಲದ ಪುರಾಣ ಲಕ್ಷಣಕ್ಕೆ ಬಾಧಕವೇನೂ ಇರಲಿಲ್ಲ. ರಾಜ ದಂಪತಿಗಳು ವ್ರತನಮಿತಿಯನ್ನು ಕೈಕೊಂಡುದು, ನೈಮಿತ್ತಿಕನು ಪಾತ್ರದಾನ ಜಿನಾರ್ಚನೆಗಳನ್ನು ಅವರಿಗೆ ಸೂಚಿಸಿದ್ದು ಪುರೋಹಿತ ಸ್ವಪ್ನಫಲಗಳನ್ನು ನಿರೂಪಿಸಿದ್ದು ಇವುಗಳ ಪರುಠವಣೆಯನ್ನು ನೋಡಿದರೆ ಶ್ರೀಧರನೇ ಮುಂದೆ ಜಿನನಾಗುವ ಜೀವವೆಂದು ಭ್ರಮಿಸುವಂತೆ ಆಗುತ್ತದೆ. ವೈಶ್ರವಣ ಒಬ್ಬ ಜಿನಭಕ್ತನಾದ ಸಜ್ಜನ ತಂದೆ, ಸಜ್ಜನಪತಿ ಎಂದು ಅಭಿಪ್ರಾಯವಾಗುವಂತೆ ಕ ಅವನ ಸುತ್ತ ಸಾತ್ತ್ವಿಕ ಪರಿವೇಷವನ್ನು ನಿರ್ಮಿಸುವುದರಲ್ಲಿ ಕೃತಕೃತ್ಯನಾಗಿದ್ದಾನೆ.

ಮುಂದೆ ಎಂಟನೆಯ ಆಶ್ವಾಸದ ವರೆಗೆ ಕಾವ್ಯಾಂಗಗಳಾದ ಅಷ್ಟಾದಶಸ್ಥಲಗಳಲ್ಲಿ ಕೆಲವಕ್ಕೆ ಒಳ್ಳೆಯ ಪುಷ್ಟಿ ದೊರೆತಿದೆ. ಋತುಗಳು, ವನಜಲ ಕೇಳಿಗಳು. ಚಂದ್ರಾರ್ಕೋದಯಗಳು, ರತೋತ್ಸವಾದಿಗಳು ಈ ಮೊದಲಾದವುಗಳಿಂದ ಗುಡ್ಡದಂತೆ ವರ್ಣನೆಗಳು ದಟ್ಟೈಸಿವೆ. ಇವೆಲ್ಲ ಕವಿಸಮಯದ, ಅಲಂಕಾರ ಕವಿತ್ವದ ಭಾಗಗಳೇ ಎನ್ನುವಂತಿಲ್ಲ; ಒಂದು ಕಾಲದ ಸಮೃದ್ಧಿ ಜೀವನ, ಕಾವ್ಯ ಮತ್ತು ಕಲಾಭಿರುಚಿಗಳ ಪ್ರತೀಕಗಳೂ ಹೌದು. ಆಧುನಿಕರಾದ ನಮಗೆ, ತಾಳ್ಮೆ ವ್ಯುತ್ಪತ್ತಿಗಳು ಸಾಲದೆ, ಇವು ಬೇಸರವನ್ನೂ ತಾತ್ಸಾರವನ್ನು ಸ್ವಲ್ಪ ಹುಟ್ಟಿಸಬಹುದು. ಕವಿಗೆ ಇದರಿಂದ ಆಗಬೇಕಾದ್ದು ಏನೂ ಇಲ್ಲ! ಆವನು ಸಂತೃಪ್ತ, ಸುಖಿ! ಕವಿತಾಸೌಂದರ್ಯ ಔಚಿತ್ಯಗಳ ದೃಷ್ಟಿಗಳಿಂದ ಈ ವರ್ಣನೆಗಳ ಗುಣಾವಗುಣ ಪ್ರಯೋಜನಗಳು ಏನೇ ಇರಲಿ, ಜೈನಪುರಾಣಕಾರನ ದೃಷ್ಟಿಯಲ್ಲಿ ಅವಕ್ಕೆ ಒಂದು ಸಾರ್ಥಕತೆಯಿರುವಂತೆ ತೋರುತ್ತದೆ. ರಾಗ ಭೋಗಗಳ ನಿರರ್ಥಕತೆಯನ್ನು ಜೀವಿಗೆ ಅವುಗಳ ಅಭಾವದಿಂದ ಅಲ್ಲ, ಆಧಿಕ್ಯದ ಮೂಲಕವೇ ಮಾಡಿಕೊಡಬೇಕು ಎನ್ನುವುದು ಆತನ ಹಂಚಿಕೆಯಿರಬೇಕು. ದೇವೇಂದ್ರ ವಿಲಾಸದ ಅತಿಶಯ ಭೋಗಭಾಗ್ಯಗಳಲ್ಲಿ ಈಜಾಡುತ್ತಿದ್ದ ಜೀವವೊಂದು ಕೊನೆಗೊಮ್ಮೆ ಅವನ್ನೆಲ್ಲ ಜರತ್ತೃಣವಾಗಿ ಕಂಡು ಹೇಗೆ ವೈರಾಗ್ಯಕ್ಕೆ ಮನಸ್ಸು ಮಾಡುತ್ತದೆ ಎಂಬುದನ್ನು ವಿಶದವಾಗಿ ತೋರಿಸಿದರೆ, ಏನೇಯು ಜನ ಆತ್ಮೋನ್ನತಿಯ ಮಾರ್ಗವನ್ನು ನಿಚ್ಚಳವಾಗಿ ಕಂಡುಕೊಳ್ಳುತ್ತಾರೆ ಎನ್ನುವುದು ಆತನ ಹವಣಿಕೆಯಿರಬೇಕು. ಆದರೆ ಈ ಹಂಚಿಕೆ ಹವಣಿಕೆಗಳು ಈ ಕವಿಕೃತಿಗಳಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ? ಕಾವ್ಯ ಸೌಂದರ್ಯವರ್ಧಕಗಳೆಂದು ಒಂದು ಕಾಲಕ್ಕೆ ತಿಳಿದಿದ್ದ ಅಷ್ಟಾದಶಸ್ಥಲಗಳ ವರ್ಣನೆಯ ವ್ಯಾಮೋಹಕ್ಕೆ ಸಿಕ್ಕಿ ಅವು ನರಳಿಲ್ಲವೇ? ಕಾವ್ಯನಾಯಕ ಬೆಳದಿಂಗಳ ರಾತ್ರಿಯಲ್ಲಿ ವಿಟವಿದೂಷಕಾದಿಗಳೊಂದಿಗೆ ವೇಶ್ಯಾವಾಟಿಗಳಲ್ಲಿ ಸುತ್ತಾಡಿಯೂ ಮನೆಗೆ ಮರಳಿದ ಮೇಲೆ ಸಮಾಹಿತಮನಸ್ಕನಾಗಿ ನಿದ್ರಿಸಿ, ಮಾರನೆಯ ದಿನ ವೈಶ್ರವಣನಂತೆ ಜಿನಾಲಯಕ್ಕೆ ತೆರಳಿ ಜಿನಸ್ತುತಿ ಮಾಡಿ ಧನ್ಯನಾದನೆಂದು ಕವಿ ವರ್ಣಿಸಿದರೆ, ಈ ಮನೋಧರ್ಮವನ್ನು ನಾವು ಬೆದಕದಿರುವುದು ಸಾಧ್ಯವೆ? ಐಹಿಕ ಸುಖಭೋಗಗಳನ್ನು ಅವುಗಳ ಸೋಂಕಿಲ್ಲದೆ ಅನುಭವಿಸುವ ಅಸಾಧಾರಣ ವ್ಯಕ್ತಿಗಳು ಇವರು ಎಂದು ನಮ್ಮ ಕವಿಗಳು ನಂಬಿದರೆ, ನಾವು ಅದನ್ನು ಪ್ರಶ್ನಿಸಬಾರದೇ? ಇರಲಿ.

ವೈಶ್ರವಣನು ಚಿತ್ರ ಗೀತ ನೃತ್ಯ ಮತ್ತು ವಾದ್ಯಕಲೆಗಳಲ್ಲಿಯೂ ಅಶ್ವಪ್ರದಯದಲ್ಲಿಯೂ ಅಭಿಜ್ಞನೆಂದು ತಿಳಿಯುವಂತೆ ನಾಗಚಂದ್ರ ಕೆಲವು ಸನ್ನಿವೇಶಗಳನ್ನು ಹೆಣೆದಿದ್ದಾನೆ. ವೈರಾಗ್ಯ ಚಕ್ರವರ್ತಿಯಾಗಲಿರುವವನ ವೆಗ್ಗಳ ಭೋಗಾನುಭವಗಳನ್ನು ತೋರಿಸಲೆಂದೇ ಈ ಪೂರ್ವರಂಗವನ್ನು ಕವಿ ಸಮೆದಿದ್ದಾನೆ. ಹೀಗೆ ಮಾಡುವಲ್ಲಿ ಸಮಕಾಲೀನ ದೊರೆಗಳ ಕಲಾಭಿಜ್ಞತೆ, ವೈಭವ ವಿಲಾಸಗಳು, ಶೌರ್ಯಸ್ಥೈರ್ಯಗಳು, ಒಟ್ಟಿನಲ್ಲಿ ಅವರ ದಿನಚರಿಯ ವಿಶೇಷಗಳು ಇಲ್ಲಿ ಕಥಾನಾಯಕನ ವ್ಯಾಜದಿಂದ ನಿರೂಪಿತವಾಗಿರುವುದೂ ಸಾಧ್ಯ; ಮೇಲಾಗಿ ಕವಿಯ ಕಲಾಭಿಜ್ಞತೆ, ಪ್ರಕೃತಿ ಪ್ರೇಮ, ಪಾಂಡಿತ

ಪ್ರದರ್ಶನದ ಅಹಮಿಕೆ ಇವು ಇಲ್ಲಿ ಪ್ರತಿಫಲಿಸಿರುವುದು ಶಕ್ಯ. ಆದರೆ ನಿರೂಪಣೆಯಲ್ಲಿಯ ಚತುರಂಗ ಬಲದ ಸಂಖ್ಯೆ, ಸಮಪ್ರಯಾಣ ಇತ್ಯಾದಿ ಅತಿಶಯೋಕ್ತಿ ಅನೌಚಿತ್ಯಗಳನ್ನೆಲ್ಲ ನಾವು ಮಿಣ್ಣನೆ ನುಂಗಿಕೊಳ್ಳಬೇಕು!

ವೈಶ್ರವಣ ಉದ್ಯಾನದ ಮಾರ್ಗವಾಗಿ ಅರಮನೆಗೆ ಮರಳುವಾಗ ಸಿಡಿಲಿನ ಹೊಡೆತಕ್ಕೆ ಉರುಳಿಬಿದ್ದ ಆಲದ ಮರವೊಂದನ್ನು ನೋಡಿ ವೈರಾಗ್ಯಗೊಂಡುದು ಮುಂದಿನ ಗದ್ಯ ಕಥಾಂಶ. ಜೈನ ಪುರಾಣಗಳ ಪರಿಚಯವಿರುವವರಿಗೆ ವೈಶ್ರವಣನ ವೈರಾಗ್ಯ ಹೇತುವಾದ ಸಂದರ್ಭ ಅಸಾಧಾರಣ ಎಂದು ತೋರದಿರಬಹುದು: ಆತನ ಸಂಸಾರಾನಿತ್ಯತೆಯ ಭಾವನೆ ಯಾಂತ್ರಿಕ ಕೃತಕ ಎಂದು ಗೋಚರಿಸಬಹುದು. ಆದರೆ ಕವಿಗೆ ಅದರ ಪರಿಗಣನೆಯಿಲ್ಲ. ವೈರಾಗ್ಯ ಹೇತುವಾದ ಸಂದರ್ಭ ಭವಭವಗಳ ಒಳ್ಳೆಯ ಸಂಸ್ಕಾರ ಪಡೆಗೊಂಡು ಪಕ್ವಾವಸ್ಥೆಯುದಕ್ಕೆ ಒಂದು ನಿಮಿತ್ತ ಸಂಕೇತ: ಊರ್ಧ್ವಜೀವನದ ಕರೆಗೆ ಆ ಜೀವದ ಕಾಲಬಲ್ಪ ಬಾಗಿಸಿದ ಮಿಂಚಿನ ಮಿಂಚುಗೋಲು ಅದು. ತೀರದ ದಾಹವನ್ನು ಹುಟ್ಟಿಸುತ್ತ, ಭವಗಳ ಚಕ್ರದಲ್ಲಿ ಸುತ್ತುತ್ತಿರುವಂತೆ ಮಾಡುವ, ಜೀವನನ್ನು ಕಾಲಸಿಗೆ ಮತ್ತೆ ಮತ್ತೆ ಕೈತುತ್ತು ಮಾಡುತ್ತ ಹೋಗುವ ಭೋಗ ಜೀವನಕ್ಕೆ ಕೊನೆಯ ತೆರೆಯೆಳೆಯುವ ಈ ಪುಣ್ಯ ಮುಹೂರ್ತದಲ್ಲಿ ವೈಶ್ರವಣ ಜೀವವಿಕಾಸ ಕ್ರಮವನ್ನನುಸರಿಸಿ ಸ್ವಾಭಾವಿಕವಾಗಿಯೇ ಕಾಲಿರಿಸಿದನು. ಭೋಗ ಜೀವನ ದೋಷವಲ್ಲ, ಆದರೆ ಅದೇ ಪರಮವೂ ಅಲ್ಲ ಎನ್ನುವುದರ ನಿದರ್ಶನವೂ ಅದು.

ಶ್ರೀಧರನಿಗೆ ಪಟ್ಟ ಕಟ್ಟಿ ತಾನು ತಪಶ್ಚರ್ಯೆಗೆ ಹೊರಟ ವೈಶ್ರವಣನು ಆ ರಾತ್ರಿಯನ್ನು ನಿಸ್ತಬ್ಧ ಪ್ರಶಾಂತವಾಗಿ ಕಳೆದುದರ ನಿರೂಪಣೆ ಚೆಲುವಾಗಿದೆ. ಅವನು ವನಾಭಿಮುಖವಾಗಿ ಹೊರಟಾಗ ಪೌರರು, ರಾಣೀವಾಸದವರು ಮತ್ತು ಮಗ ಶ್ರೀಧರ ವ್ಯಕ್ತಪಡಿಸಿದ ಅಂತಃಕರಣಪೂರ್ವಕವಾದ, ಸ್ವಾಭಾವಿಕವೆನ್ನಬಹುದಾದ ಪ್ರತಿಕ್ರಿಯೆ, ತಪಶ್ಚರ್ಯೆಯೆನ್ನುವುದು ಎಂಥ ಅಲಭ್ಯಲಾಭವೋ, ಅದರ ಪುಣ್ಯಫಲ ಇನ್ನೆಂತೋ ಎಂದು ಯೋಚಿಸುವಂತೆ ಮಾಡುತ್ತದೆ. ಆ ಪ್ರತಿಕ್ರಿಯೆಗಳಿಗೆ ನಮ್ಮ ಹೃದಯಗಳು ಆರ್ದ್ರಗೊಳ್ಳುವುದು ಕವಿಯ ಯಶಸ್ಸಿನ ಗುಟ್ಟು. ನಾಗದತ್ತ ಭಟ್ಟಾರಕರಿದ್ದ ಶ್ರೀಪರ್ವತಕ್ಕೆ ಏಕರಾಗಿ ತೆರಳಿದ ವೈಶ್ರವಣ ಅಲ್ಲಿಯ ಜಿನಾಲಯಗಳಲ್ಲಿ ದರ್ಶನ ಸ್ತುತಿಗಳ ಸೇವೆಯನ್ನೊಪ್ಪಿಸಿ, ಅವರ ಹರಕೆಯನ್ನು ಪಡೆದನೆಂಬ ಕಥಾಂಶ, ಮುಂದಿನ ಕಥಾಗತಿ ವೈರಾಗ್ಯದ ವಿಜೃಂಭಣೆಗೆ ಮೀಸಲು ಎನ್ನುವುದರ ಮುನ್ಸೂಚನೆಯಾಗಿದೆ. ಕವಿಸಮಯದ ಕೈಗೂಸಾದ ಅಲಂಕಾರ ಚಮತ್ಕಾರಗಳ ಅರಣ್ಯ ಪ್ರಾಂತವನ್ನಲ್ಲಿ ನಾವು ಪರಿಚಯ ಮಾಡಿಕೊಳ್ಳುತ್ತೇವೆ: ಜೊತೆಗೆ ಕವಿಯ ಜಿನಭಕ್ತಿ ಜೈನಶ್ರದ್ಧೆಗಳ ಪ್ರತಿಬಿಂಬವನ್ನೂ ಸ್ಫುಟವಾಗಿ ಕಾಣುತ್ತೇವೆ.

ಇನ್ನು ಹಾಡಿನ ಧಾಟಿ ಬೇರೆ. ವೈಶ್ರವಣನ ದೀಕ್ಷಾವಿಧಿಯೊಂದಿಗೆ ಮಲ್ಲಿಪು, ಜೈನಧರ್ಮದ ಆಚಾರ ವಿಚಾರಗಳ ಚಕ್ರತೀರ್ಥದ ಸುಳಿಗೆ ಹತ್ತಿರವಾದಂತೆ ತೋರುತ್ತದೆ;

ಅವರ ಕವಿಗೆ, ವಿನೇಯ ಜನರಿಗೆ ಅದು ಗಪ್ಪು ಸ್ಥಾನವನ್ನು ಸಮೀಪಿಸುತ್ತಿರುವುದೆಂದು ತಿಳಿದು, ಅವರ ಅರ್ಹದ್ಭಕ್ತಿ ಆಗಮಶ್ರದ್ಧೆಗಳು ಉದ್ಘೋಷಗೊಳ್ಳುತ್ತವೆ. ಕಥೆ ಕವಿತೆಗಳ ರಂಜನೆ ಕುಗ್ಗಿ, ಜೈನಧರ್ಮದ ಕೈಪಿಡಿಯ ಪುಟಗಳನ್ನು ತೆರೆಯುವುದು ನಮಗೆ, ವಿನೇಯ ಜನರಲ್ಲದವರಿಗೆ, ಅನಿವಾರ್ಯವಾಗುತ್ತದೆ.

ವೈಶ್ರವಣ ಯತಿಯ ಸಾಧನೆ, ಈಗ ಸಂವರೆಯನ್ನು ಸಾಧಿಸುವುದರಿಂದ ತೊಡಗುತ್ತದೆ. ಅವನು ವ್ರತಗಳು, ಸಮಿತಿಗಳು, ಗುಪ್ತಿಗಳು, ಧರ್ಮಗಳು, ಬಾಹ್ಯಾಭ್ಯಂತರ ತಪಸ್ಸುಗಳು, ಭಾವನೆಗಳು ಇವನ್ನೆಲ್ಲ ನಿಷ್ಠೆಯಿಂದ ಕ್ರಮವಾಗಿ ಸಾಧಿಸಿ, ಪರೀಷಹಗಳನ್ನು ಜಯಿಸಿ, ಋದ್ಧಿಸಂಪನ್ನನಾಗಿ ತೀರ್ಥಂಕರನಾಗುವ ಪುಣ್ಯವನ್ನು ಕಟ್ಟಿಕೊಳ್ಳುತ್ತಾನೆ : ಫಲವಾಗಿ, ಅಪರಾಜಿತ ವಿಮಾನದಲ್ಲಿ ಅಹಮಿಂದ್ರನಾಗುತ್ತಾನೆ. ಈ ಅಹಮಿಂದ್ರನೂ ಅನ್ಯ ಜಿನ ಪುರಾಣಗಳ ಅಹಮಿಂದ್ರನ ಹಾಗೆಯೇ ; ಕವಿಯು ಮಾತಿನ ರೀತಿಯಿಂದಾಗಿ ಹೊಸಬನೆಂಬಂತೆ ತೋರಿದ್ದಾನೆ.

ಮುಂದೆ ಅರ್ಹದ್ವಿಭವವೇ ಆದಿಯಾಗಿ ಪಂಚಕಲ್ಯಾಣಗಳೂ ಒದಗಿಬರುತ್ತಾ ತೀರ್ಥಂಕರ ಚರಿತೆ ತನಿಯಾಗಿ ವಿಸ್ತಾರಗೊಳ್ಳುತ್ತದೆ. ಅವಧಿಜ್ಞಾನದಿಂದ ಮಲ್ಲಿನಾಥನ ಜನನವನ್ನು ತಿಳಿದು ಸೌಧರ್ಮೇಂದ್ರನು ಸಂಭ್ರಮಿಸಿದನೆಂದು ಕವಿ ತಿಳಿಸಿದ್ದಾನೆ. ಸಂಭ್ರಮಿಸಿದವನು ಸೌಧರ್ಮೇಂದ್ರನಲ್ಲ. ನಾಗಚಂದ್ರನೇ ! ಗರ್ಭಾವತರಣ ಕಲ್ಯಾಣ ಮಲ್ಲಿ ಜಿನ ಕಥೆಗೆ ಮೊದಲ ಘಟ್ಟ. ಇಲ್ಲಿಯ ಪ್ರಕ್ರಿಯಾ ವಿವರಗಳು ಇತರ ಜಿನ ಪುರಾಣಗಳಲ್ಲಿರುವುದಕ್ಕಿಂತ ಸ್ವಲ್ಪ ಕಡಿಮೆ ಎನ್ನುವುದೇ ಇದರ ಗುಣವಲ್ಲ ; ಔಚಿತ್ಯ ಪ್ರಜ್ಞೆಯ ಫಲವಾಗಿ ಕಾವ್ಯ ಗುಣವೂ ಎದ್ದು ತೋರುತ್ತವೆ. ಚಿನ್ನದ ಮಳೆ, ಜಿನಜನನಿಯು ಪರಿಚರ್ಯೆ, ಗರ್ಭಶೋಧನೆ, ಜಿನ ಶಿಶುವಿನ ಜನನ ಇವುಗಳೊಂದಿಗೆ ಪ್ರಥಮ ಕಲ್ಯಾಣದ ಘಟ್ಟ ಅರ್ಹದ್ವಿಭವದ ಆರಂಭದಿಂದ ಜೊತೆಗೂಡಿ ಮುಗಿಯುತ್ತದೆ. ಮುಂದುವರಿದು, ಜಿನ ಶಿಶುವಿನ ಜನ್ಮಾಭಿಷೇಕ, ನಾಮಕರಣೋತ್ಸವ ಮತ್ತು ಇಂದ್ರನ ಆನಂದ ನೃತ್ಯ ಇವುಗಳಿಂದ, ಮುನ್ನಡೆದ ಅರ್ಹದ್ವಿಭವದ ಜೊತೆಗೂಡಿ, ದ್ವಿತೀಯ ಕಲ್ಯಾಣದ ಘಟ್ಟವೂ ಮುಗಿಯುತ್ತದೆ. ಈ ಎರಡನೆಯ ಕಲ್ಯಾಣದ ಕಥನ ವರ್ಣನೆಗಳು ೧೦ನೆಯ ಆಶ್ವಾಸವನ್ನು ತುಂಬಿ, ಸ್ವಲ್ಪಭಾಗ ೧೧ನೆಯದರಲ್ಲಿ ಕೂಡ ತುಳುಕಿದೆ. ಈ ಎರಡೂ ಘಟ್ಟಗಳ ವಸ್ತುಕಥನದಲ್ಲಿ ಪ್ರಾಯಃ ಹೊಸತನ ಹೆಚ್ಚಾಗಿ ಇಲ್ಲ ; ರೀತಿಯಲ್ಲಿ ಹೊಸತನ ಸ್ವಾಭಾವಿಕವಾದದ್ದು.

ಭೋಗಿ ವೈಶ್ರವಣ ಉರುಳಿದ ಆಲದ ಮರವನ್ನು ನೋಡಿ ವೈರಾಗ್ಯಗೊಂಡರೆ, ಜನ್ಮತಃ ರಾಗ ದ್ವೇಷ ವಿರಹಿತನಾದ ಮಲ್ಲಿನಾಥ, ನಡೆಯಲಿದ್ದ ತನ್ನ ಮದುವೆಯ ಮಂಟಪವನ್ನು ನೋಡಿ ವೈರಾಗ್ಯಗೊಂಡನು. ಅವಧಿಜ್ಞಾನದಿಂದ ತನ್ನ ಅರ್ಹಮಿಂದ್ರಭವ ಸ್ಮರಣೆಗೆ ಬಂದು, ಸುಲಭವಾಗಿಯೇ ಆತನು ವಿಷಯ ವ್ಯಾಮೋಹವನ್ನು ತಳ್ಳಿ ಹಾಕಿದನು. ಜೀವವನ್ನು ಭವಗಳಲ್ಲಿ ಬಿಡದೆ ಸುತ್ತಿಸುವ ಚತುರ್ಗತಿ ಸ್ವರೂಪವನ್ನು ವಿವರವಾಗಿ

ಪರಿಭಾವಿಸಿದನು. ತೀರ್ಥವಂದನಾ ಸಮರ್ಥನದ ಬಳಿಕ ಬಂದಿರುವ ಈ ಗತ್ಯಾಖ್ಯಾನದಿಂದ ಆ ಪುರಾಣಾಂಗದ ಪೂರೈಕೆಯೂ ಆದಂತಾಗಿದೆ. ಸಂಸಾರದ ಅಸಾರತೆ, ಮೃತ್ಯುವಿನ ಅನಿವಾರ್ಯತೆ, ನರಕ ದುಃಖ ಇವನ್ನು ಮಲ್ಲಿನಾಥನ ಮುಖದಿಂದ ಕವಿಯೇ ನಮಗಾಗಿ ಉಪದೇಶಿಸುತ್ತಿರುವಂತೆ ತೋರುತ್ತದೆ. ಇಲ್ಲಿಯ ವೈರಾಗ್ಯದ ಭಾರವಾದ ಧ್ವನಿಗೆ ಜೀವನೋತ್ಸಾಹವೇ ಕುಗ್ಗಿ ಕುಸಿದಂತೆ ತೋರಿದರೆ, ಅದು ಸಹಜವಾದ್ದು, ಕಠೋರ ಮುನಿಚರ್ಯೆಗೆ ಪಟ್ಟಿ ಕಟ್ಟುವ ಸನ್ನಾಹದ ಮಂಗಳಾನಕ ಧ್ವನಿ ಇಲ್ಲಿ ಕಿವಿಗಡಚಿಕ್ಕುವಂತೆ ಕೇಳುತ್ತದೆ.

ಮಲ್ಲಿ ಜಿನನ ವೈರಾಗ್ಯ ದೃಢಪಡುವಂತೆ ಲೋಕಾಂತಿಕ ದೇವರು ಆತನನ್ನು ಪ್ರತಿಬೋಧಿಸಿದ್ದು. ಸೌಧರ್ಮೇಂದ್ರನು ಚತುರ್ನಿಕಾಯಾಮರರೊಂದಿಗೆ ಪರಿನಿಷ್ಕ್ರಮಣ ಮಂಗಳಸ್ನಾನವನ್ನು ಜಿನನಿಗೆ ನಿರ್ವರ್ತಿಸಿದ್ದು, ದೇವತೆಗಳು ತಂದ ಜಯಂತಿಯೆಂಬ ಸಿವಿಗೆಯನ್ನೇರಿ ಶ್ವೇತವನಕ್ಕೆ ಬಂದುದು. ಅಲ್ಲಿ ಯಥೋಚಿತಕ್ರಮದಲ್ಲಿ ದೀಕ್ಷಾಗ್ರಹಣ ಮಾಡಿದ್ದು ಈ ಕೆಲವು ವಿವರಗಳೊಂದಿಗೆ ತೃತೀಯ ಕಲ್ಯಾಣದ ಘಟ್ಟ ಮುಗಿದಿದೆ, ನಿರೂಪಣೆ ಹೆಚ್ಚು ವಿವರಗಳಿಂದ ತೊಡರಿಕೊಳ್ಳದೆ, ನಿರರ್ಗಳಗತಿಯಲ್ಲಿರುವುದನ್ನು ಮೆಚ್ಚಬೇಕು. ಮುಂದೆ ಷಷ್ಠೋಪವಾಸ ನಿಯಮದ ಬಳಿಕ ಮಲ್ಲಿನಾಥನಿಗೆ ಮನಃಪರ್ಯಾಯ ಜ್ಞಾನ ಹುಟ್ಟಿತೆಂದೂ ಕೇವಲ ಜ್ಞಾನಾವಾಪ್ತಿಗೆ ಮೊದಲು ಆತ ಮಿಥಿಳೆಯ ಬೀದಿಯಲ್ಲಿ ತೆರಳಿ, ನಂದಿಷೇಣನಿಂದ ಪ್ರಥಮಭಿಕ್ಷೆಯನ್ನೂ ಸ್ವೀಕರಿಸಿದನೆಂದೂ, ಆಗ ಪಂಚಾಶ್ಚರ್ಯಗಳಾದವು ಎಂದೂ ಕವಿ ನಿರೂಪಿಸಿದ್ದು. ಇಲ್ಲಿ ತಪೋದಾನ ಕಥನದ ಉಪಾಂತ್ಯ ಪುರಾಣಾಂಗವನ್ನು ಅವನು ಪೂರೈಸಿರುವಂತೆ ತೋರುತ್ತದೆ.

ಮುಂದಿನ ಕಥಾಂಶ ಮಲ್ಲಿನಾಥನ ಕೇವಲಜ್ಞಾನಾವಾಪ್ತಿಯನ್ನು ಕುರಿತದ್ದು. ಇದು ಕೇವಲಜ್ಞಾನ ಕಲ್ಯಾಣವೆಂಬ ನಾಲ್ಕನೆಯ ಕಲ್ಯಾಣದ ಘಟ್ಟವನ್ನೂ ಫಲಾಖ್ಯಾನವೆಂಬ ಅಂತಿಮ ಪುರಾಣಕಥಾಂಗವನ್ನೂ ಪೂರೈಸುವ ಭಾಗವೆಂದು ಹೇಳಬಹುದಾಗಿದೆ. ಮಲ್ಲಿನಾಥನು ಶ್ವೇತವನದಲ್ಲಿ ತಪಸ್ಥನಾಗಿದ್ದಾಗ, ವನ್ಯಜೀವಿಗಳು ತಮ್ಮ ಸ್ವಾಭಾವಿಕ ಗುಣಗಳನ್ನು ಮರೆತು ಅನ್ಯೋನ್ಯವಾಗಿ ಸಹಕರಿಸಿದುವೆಂದು ನಾಗಚಂದ್ರ ವರ್ಣಿಸಿದ್ದಾನೆ. ಇದು ಪುರಾಣ ಕವಿಗಳ ವರ್ಣನೆಯ ಸಾಮಾನ್ಯ ಪರಿಕ್ರಮ. ಈ ಕವಿಸಮಯ ನಿಜವಾಗಿ ಸನ್ನಿವೇಶದ ಸತ್ವಾತಿಶಯವನ್ನು ಸೂಚಿಸುವ ಒಂದು ಪ್ರತಿಮಾ ಸೃಷ್ಟಿಯೇ. ಈ ಸಂದರ್ಭದಲ್ಲಿ ಮನ್ಮಥನು ಮಲ್ಲಿನಾಥನಿಗೆ ಚಿತ್ತಸ್ಖಲನೆಯನ್ನು ಉಂಟುಮಾಡಲು ಪ್ರಯತ್ನಿಸಿ ವಿಫಲನಾದುದನ್ನು ತಿಳಿಸುವ ಒಂದು ಸ್ವಾರಸ್ಯಕರ ಸನ್ನಿವೇಶವನ್ನು ಕವಿ ನಿರೂಪಿಸಿದ್ದಾನೆ. 'ಉತ್ತರ ಪುರಾಣ' ಮೂಲದಲ್ಲಿಲ್ಲದ ಈ ಸನ್ನಿವೇಶ ಕವಿಕಲ್ಪಿತವೇ ಇರಬಹುದಾದರೂ, ಇದರ ಪ್ರೇರಣೆಯಲ್ಲಿ ರಾಮಾಯಣ, ಶೈವಪುರಾಣಗಳು, ಕುಮಾರಸಂಭವ ಮೊದಲಾದವುಗಳ ಹಿಂದೂ ಕಲ್ಪನೆಯ ಕಾಮದಹನ ಪ್ರಸಂಗವೂ, ಲಲಿತವಿಸ್ತರ ಮೊದಲಾದವುಗಳ ಬೌದ್ಧ ಕಲ್ಪನೆಯ ಮಾರಪರಾಜಯ ಪ್ರಸಂಗವೂ ಇದ್ದಿರಬಹುದೆಂದು ತೋರುತ್ತದೆ. ''ಅಪಗುಣನೆನಿಪ್ಪ ಕುಮಂಗವಸಾನಮನೀಯೆ ರತಿಯುಮೊಡನಟೆಯೆ

...." ಎಂಬ ಕವಿಯ ಮಾತಿನಲ್ಲಿ ಮಲ್ಲಿಜಿನನು ಕೇವಲಜ್ಞಾನ ಪಡೆಯುವ ಮೊದಲು ಆಸೆ ಆಕಾಂಕ್ಷೆಗಳನ್ನೂ ವಿಷಯಾಸಕ್ತಿಯನ್ನೂ ಗೆದ್ದನೆಂದು ಧ್ವನಿಸುವುದೇ ಉದ್ದೇಶವಿರಬಹುದು. ಆದರೆ ಈ ಸನ್ನಿವೇಶವನ್ನು ದೀಕ್ಷಾಗ್ರಹಣ ಪೂರ್ವದಲ್ಲಿ, ಮಲ್ಲಿನಾಥನು ವಿವಾಹ ಮಂಟಪವನ್ನು ಕಂಡು ವೈರಾಗ್ಯಗೊಂಡನೆಂದು ವರ್ಣಿಸಿದ ಸಂದರ್ಭದಲ್ಲಿ ನಿರೂಪಿಸಿದ್ದರೆ ಚೆನ್ನಾಗಿತ್ತು : ಅದಕ್ಕೆ ಪ್ರತಿಯಾಗಿ ಆತ ಮನಃಪರ್ಯಯಜ್ಞಾನವನ್ನು ಗಳಿಸಿ, ಸಂಯಮಿಯಾದುದು ಸಿದ್ಧಪಟ್ಟವೇಲೆ ಬಂದಿರುವುದು ಸ್ಥಾನೋಚಿತವಾಗಿಲ್ಲ ಎನ್ನಬೇಕು.

ಅನಂತರದಲ್ಲಿ ಮಲ್ಲಿನಾಥನು ಸಮಸ್ತ ಕರ್ಮಪ್ರಕೃತಿಗಳನ್ನೂ ಕಳೆದುಕೊಂಡವನಾಗಿ ಕೇವಲ ಜ್ಞಾನವನ್ನು ಪಡೆದುಕೊಂಡುದು ಜೈನಾಗಮ ಪರಿಕ್ರಮದಂತೆ ನಿರೂಪಿತವಾಗಿದೆ. ಧನದ ವಿನಿರ್ಮಿತವಾದ ಸಮವಸರಣ ಮಂಡಲದ ವ್ಯಾವರ್ಣನೆಯೂ ಸೌಧರ್ಮೇಂದ್ರನು ನೆರವೇರಿಸಿದ ಕೇವಲಜ್ಞಾನ ಕಲ್ಯಾಣದ ವಿಭವ ನಿರೂಪಣೆಯೂ ಸಮೃದ್ಧವಾಗಿ ಬಂದು, ಈ ಪುರಾಣ ಕಾವ್ಯವನ್ನು ಅತಿಶಯ ಗಂಭೀರದ ನೆಲೆಗೆ ಕವಿ ಕೊಂಡೊಯ್ದಿರುವುದು ವಿಶದವಾಗುತ್ತದೆ. ಮುಂದೆ ಜಿನನ ಧರ್ಮೋಪದೇಶ ವಿಹಾರವರ್ಣನೆಯ ಕೊನೆಗೆ ಸಮ್ಮೇದ ಶೈಲದಲ್ಲಿ ಆತನ ಪರಿನಿರ್ವಾಣವಾಗುವವರೆಗೆ ಕಥಾ ವಿವರಗಳು ವೇಗಗತಿಯಲ್ಲಿ ಸಾಗಿ, ಅದು ಜಿನಸ್ತುತಿಯೊಂದಿಗೆ ಉಚಿತ ಮುಕ್ತಾಯವನ್ನು ಪಡೆಯುತ್ತದೆ ; ಸೌಧರ್ಮೇಂದ್ರನು ನಿರ್ವರ್ತಿಸಿದ ನಿರ್ವಾಣ ಕಲ್ಯಾಣದೊಂದಿಗೆ, ಅಂತಿಮ ಪುರಾಣಾಂಗವಾದ ಫಲಾಖ್ಯಾನವೆಂಬುದು ಸಂಪೂರ್ತಿಯನ್ನು ಪಡೆಯುತ್ತದೆ. ಹೀಗೆ ಹಿಂದೆ ಹಲವು ಜನ್ಮಗಳನ್ನೆತ್ತಿ ಬಂದಿರಬಹುದಾದ ವೈಶ್ರವಣ ಜೀವ ತನ್ನ ವಿಕಾಸ ಕ್ರಮದಲ್ಲಿ ಮಲ್ಲಿ ತೀರ್ಥಕರನಾಗಿ ಹುಟ್ಟಿ ತನ್ನ ಜೀವಿತಾದರ್ಶವನ್ನು ಸಾಧಿಸುವುದರ ಕಥನವೇ 'ಮಲ್ಲಿನಾಥ ಪುರಾಣ'.

ಈ ಪುರಾಣದ ಕೆಲವು ವಿಶೇಷಗಳೆಂದರೆ : (೧) ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ೧೯ನೆಯ ಮಲ್ಲಿನಾಥ ತೀರ್ಥಕರನ ಚರಿತವನ್ನು ನಿರೂಪಿಸುವ ಏಕೈಕ ಗ್ರಂಥವಿದು. (೨) ಇದರಲ್ಲಿ ತೀರ್ಥಂಕರನ ಪೂರ್ವಭವಗಳಲ್ಲಿ ವೈಶ್ರವಣ ಮತ್ತು ಅಹಮಿಂದ್ರ ಎಂಬ ಎರಡು ಪೂರ್ವಭವಗಳ ಕಥನವಷ್ಟೇ ಬಂದಿದೆ ; ಅಜಿತ ಪುಷ್ಪದಂತ ಮತ್ತು ಅನಂತನಾಥ ಪುರಾಣಗಳನ್ನು ಈ ಪರಿಕ್ರಮ ಹೋಲುತ್ತದೆ. (೩) ಇಲ್ಲಿ ಈ ತೀರ್ಥಂಕರನ ಕಾಲದ ಚಕ್ರವರ್ತಿ ಪದ್ಮನೆಂಬವನ, ಬಲದೇವ ವಾಸುದೇವರಾದ ನಂದಿ ಮಿತ್ರ ಮತ್ತು ದತ್ತರ, ಪ್ರತಿವಾಸುದೇವನಾದ ಬಲಿಯ ಚರಿತ್ರೆಗಳನ್ನು ನಿರೂಪಿಸಿಲ್ಲ. ಈ ಸ್ವಾತಂತ್ರ್ಯ ಅನನ್ಯವಾದ್ದು. (೪) ಇಲ್ಲಿಯ ಕಾಮದಹನದ ಪ್ರಸಂಗ ಬೇರೆ ಜೈನಪುರಾಣಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. (೫) ಈ ಪುರಾಣದ ಪ್ರಭಾವ ಈಚೆಯ ನೇಮಿಚಂದ್ರಾದ್ಯರಾದ ಕವಿಗಳಲ್ಲಿ ಕಂಡುಬರುತ್ತದೆ.

ಪ್ರಧಾನ್ ಗುರುದತ್ತ

ಭಾಷೆಗಳು*

ನನ್ನ ಬಹುಭಾಷೆ ತಾಯ್ನಾಡು ರಶಿಯಾವನು
ಇಲ್ಲಿ ನೆನೆಯುವೆನು ಮತ್ತೆ ಮತ್ತೆಯು ನಾನು :
ಇಲ್ಲಿ ಈ ಮಹಾನಾಡಿನಲಿ ಎಲ್ಲೆಡೆಗಳಲು
ಕೇಳುವೆವು ನಾವದೆನಿತು ಭಾಷೆಗಳನು ;
ಇವರೆಲ್ಲ ಒಂದುಗೂಡಿಹುದು ಸಾಧ್ಯವಹುದೆಂತು ?
"ಭ್ರಾತೃತ್ವ ಭಾವದಲಿ !"-ಕಿರಿಯ ಸಾಧನೆಯೇನಲ್ಲಿದು !

---

* ಸೆರ್ಗೆಯಿ ಬರೂಜ್‌ದಿನ್ ಅವರ 'ಭಾರತವನ್ನು ಕುರಿತ ಕವನಗಳು' ಸಂಕಲನದಿಂದ. ವಾಲ್ಟರ್ ಮೇ
ಅವರ ಅನುವಾದವನ್ನು ಅನುಸರಿಸಿ.

ಕಲಮರಹಳ್ಳಿ ಮಲ್ಲಿಕಾರ್ಜುನ

ನೋವಿನ ಸುಳಿಯಲ್ಲಿ, ಭರತೇಶವೈಭವ

ರತ್ನಾಕರ ವರ್ಣಿ ತನ್ನ ಅಪೂರ್ವ ಕಲ್ಪನಾವಿಲಾಸದಿಂದ 'ಭರತೇಶ ವೈಭವ'ದಲ್ಲಿ ಸಂಧಿ ಸಂಧಿಗಳನ್ನು ವಿಸ್ತರಿಸಿ "ಕಾಮನಬಿಲ್ಲು ಬಿಲ್ಲಿಂ ಬೆರಗಾಗು"ವಂತೆ ಬಣ್ಣ ಬಣ್ಣದ ಮನಮೋಹಕ ಚಿತ್ರಗಳನ್ನು ಬಿಡಿಸಿರುವನು. ಕವಿತೆ. ಗಾನ, ನರ್ತನ. ಆದರ್ಶದಾಂಪತ್ಯ, ಭಾವ ನಾದಿನಿಯರ ಮಧುರ, ತುಂಟತನ, ಅತ್ತೆ ಸೊಸೆಯರ ಸಾಮರಸ್ಯ, ಬಂಧು ಬಳಗದ ಕ್ಷೇಮಪಾಲನೆ ಮುಂತಾದ ನೂರೆಂಟು ಸಾಂಸಾರಿಕ ಚಿತ್ರಣಗಳು ಬೆಳದಿಂಗಳ ಬೆಳಕಿನ ನಿರ್ಮಲ ಆಗಸದಲ್ಲಿ ರಂಜಿಸುವ ತಾರಾಗಣಗಳಂತೆ ಮೂಡಿಬರುವುದರೊಂದಿಗೆ ಕಾವ್ಯದುದ್ದಕ್ಕೂ ಬಹು ಭಾಗದವರೆಗೆ ಭರತನ ಹಂಸತತ್ವ ಮಿಂಚಿ ಮಾಯವಾಗುತ್ತದೆ. ಇದರಿಂದ ಓದುಗರಿಗೆ ಇದೊಂದು ಸುಖಸಂಕಥಾ ವಿನೋದ ಮಹಾಸಾಗರವೆಂದು ಪರಿಗಣಿತವಾಗುತ್ತದೆ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾವ್ಯದೊಳಗಿನ ಪಾತ್ರಗಳ ಮಾನಸಿಕ ಮಿಡಿತ, ಹೃದಯದ ತುಡಿತ, ಆಂತರಂಗಿಕ ವೇದನೆ ಕೃತಿಯೊಳಗೆ ಆವಿರ್ಭವಿಸಿರುವುದು ಗೋಚರಿಸುತ್ತದೆ.

ಭರತೇಶನ ದಿಗ್ವಿಜಯ ಸಹೋದರರ ಅಸಹಕಾರದಿಂದಲೇ ಉದ್ಘಾಟನೆಯಾಗುತ್ತದೆ. ಆ ಸಂದರ್ಭದಲ್ಲಿ ಶಾಂತಿಪ್ರಿಯನೂ, ಸದ್ಗೃಹಸ್ಥನೂ ಆದ ಭರತೇಶ ತನ್ನ ಸಹೋದರರ ನಡವಳಿಕೆಯನ್ನು ಕಂಡು ಮಮ್ಮಲ ಮರುಗುತ್ತಾನೆ. ಮೂಕನೋವನ್ನು ಅನುಭವಿಸುತ್ತಾನೆ. ಅಂತೆಯೇ ತನ್ನ ಸೋದರಮಾವನ ಮಗನಾದ ನಮಿರಾಜ ಬಿಂಕತೋರಿ ದೂರದಲ್ಲಿ ಉಳಿದಾಗ ಭರತೇಶ ಉಗುಳಲಾರದ ಬಿಸಿ ತುಪ್ಪ ಬಾಯೊಳಗೆ ಇಟ್ಟುಕೊಂಡಂತೆ ಪರಿತಪಿಸುತ್ತಾನೆ. ಇದೇ ದಿಗ್ವಿಜಯದಲ್ಲಿ ದಕ್ಷಿಣಾಂಕ ಬಾಹುಬಲಿಯ ಆಸ್ಥಾನಕ್ಕೆ ಹೋಗಿ ತನ್ನ ರಾಜಕೀಯ ಚಾತುರ್ಯದಿಂದ ಸಂಧಾನಕ್ಕೆ ಪ್ರಯತ್ನಿಸುತ್ತಾನೆ. ಆದರೆ ಬಾಹುಬಲಿ ಇವನ ಚಾಣಾಕ್ಷತನಕ್ಕೆ ಬಗ್ಗದೆ ಆಕ್ರೋಶವನ್ನು ಕಾರುತ್ತಾನೆ, ಪರಿಣಾಮವಾಗಿ ದಕ್ಷಿಣಾಂಕ,

"ಒಡೆಯರಿಬ್ಬರನೊಡಗೂಡಿ, ನೋಡುವೆವೆಂದು, ಸಡಗರಗೊಂಬೆವು.
ನಾವು ಕಡುಪಾಪಿಗಳು, ನೆನೆದುದು ಫಲಿಸುವುದೇ ಚಿಕ್ಕೊಡೆಯಾ"

ಎಂಬುದಾಗಿ ಗದ್ಗದ ಸ್ವರದಿಂದ ಬಿಕ್ಕುತ್ತಾನೆ.

ನಂತರ ಭರತ ಬಾಹುಬಲಿಯರು ರಣರಂಗದಲ್ಲಿ ಮುಖಾಮುಖಿಯಾಗಿ ಭೇಟಿಯಾಗುವ ಸಂದರ್ಭ, ಬಾಹುಬಲಿ ನಿರ್ವೇಗ ಹೊಂದುವ ಸನ್ನಿವೇಶ ಕರುಣಾಮಯವಾಗಿದೆ.

"ಮನಸಿಜ ಕೇಳಣ್ಣ ನಿನಗೆನಗಿಂದು ದು । ರ್ಮದದಿಂದ ಜಗಳವಪ್ಪುದಕೆ
ಘನವೇನು ಹೇಳು ನಿಷ್ಕರುಣ ಕದನವ । ಜನಪರೆಸಗುವರೆಯೆಂದಾ
ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ ನೀ । ನೆನ್ನೊಡವೆಯ ಕೊಂಡುದಿಲ್ಲ ॥

(50–70)

"ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀ । ನನುಜನೆಂಬಕ್ಕರುಂಟಪ್ಪ"

(50-106)

ಈ ಮೊದಲಾದ ಭರತನ ನುಡಿಗಳಿಂದ ಆತನ ಹೃದಯದಲ್ಲಿರುವ ಸಹಜ ಭ್ರಾತೃಪ್ರೇಮದೊಂದಿಗೆ ಈ ಸ್ಥಿತಿಯಲ್ಲಿ ಒದಗಿಬಂದ ಮಾನಸಿಕ ನೋವು ಸ್ಪಷ್ಟವಾಗಿ ವ್ಯಕ್ತವಾಗುವುದು. ಅಂತೆಯೇ ಅಣ್ಣನ ಗುಣವಾಕ್ಯಗಳಿಗೆ ತನ್ನ ಮನಃಪರಿವರ್ತಿಸಿಕೊಂಡ ಬಾಹುಬಲಿ ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಪಡುತ್ತಾನೆ.

"ನೀತಿವೇಳ್ವಾಗ ನಿನ್ನಣ್ಣನೆಂ । ದೋತೆಲ್ಲರೊರೆವಾಗ ನಾನೇ
ಆತನನೀತನು ಚಕ್ರಿಯಂದೇನಗ್ರಜನೆಂಬ । ಮಾತನಾಡಿದನೆ ಹಾಯೆಂದ"

(51-143)

ಈ ತೆರನಾಗಿ ಪಶ್ಚಾತ್ತಾಪ ಪಡುತ್ತಾ ತಪಸ್ಸಿಗೆ ಹೋಗಲು ನಿರ್ಧರಿಸುತ್ತಾನೆ. ಈ ನಿರ್ಧಾರಕ್ಕೆ ಮೊದಲು ಭರತನ ಸಮ್ಮತಿ ದೊರೆಯಲಿಲ್ಲ. ಆದಾಗ್ಯೂ ತನ್ನ ನಿರ್ಧಾರವನ್ನು ಬದಲಾಯಿಸದೆ ಮುಂದಕ್ಕೆ ಅಡಿಯಿಟ್ಟಾಗ 'ಕಂಬನಿ ಗುಳಗುಳನೊಕ್ಕವೇಳಣ್ಣ ನೀ ಬಯಸಿದುದಾಗಲಿ' ಎಂದು ಭರತ ದುಃಖಿತಪ್ತನಾಗಿ ಹರಸುತ್ತಾನೆ.

ಬಾಹುಬಲಿ ತಪಸ್ಸಿಗೆ ಹೊರಟುಹೋದ ವಿಷಯವು ತಾಯಿ ಸುನಂದಾ ದೇವಿಗೆ ಮುಟ್ಟಿದಾಗ ಮೂರ್ಛೆಹೋಗುತ್ತಾಳೆ, ಪರಿಪರಿಯಾಗಿ ತಪಿಸುತ್ತಾಳೆ. ಅವಳ ಮುಖ ಮೈಯೆಲ್ಲಾ ಕಣ್ಣೀರಿನಿಂದ ತೋಯುತ್ತದೆ.

"ಚಿತ್ತಜ ನನ್ನಾಕೊಂದ್ಯೆ ಕಂದ ಹಾಹಾ ಗು । ಣೋತ್ತಮಯೆಂದಳಲಿದಳು
ಮಕ್ಕಳ ನೆನೆಯದೆ ಹೆಂಡಿರನೋಡದೆ । ಲೆಕ್ಕಕ್ಕೆ ತಾರದೆ ನನ್ನ
ಚಿಕ್ಕ ಪ್ರಾಯದೊಳಿಂತು ದೀಕ್ಷೆಗೆ ಲಂಘಿಸ । ತಕ್ಕುದೆ ನಿನಗೆ ಕಂದರ್ಪ"

(52–62.63)

ತಾಯಿಯ ಸಂಕಟ ಈ ತೆರನಾದರೆ ಆತನ ಹೆಂಡತಿಯರ ದುಃಖ ಹೇಳತೀರದು.

"ನಲ್ಲ ಹಾಹಾ ನಮ್ಮ ಬಿಟ್ಟುಹೋದ್ಯೆ ಕಬ್ಬು । ದಿಲ್ಲ ಹಾಹಾ ನಮ್ಮ ತೊರೆದ್ಯೆ
ಕೊಲ್ಲದೆ ಕೊಂದೆ ನೀನೆಮ್ಮನೆಂದಬಲೆಯ। ರೆಲ್ಲರು ಪಳಪಳಿಸಿದರು"

(52–69)

"ನೀರಾ ನಿನಗೆ ಅಂಗನೆಯರ ಕೂಟ ಸಾಕಾಯ್ತೆ ಮುಕ್ತ್ಯಂಗನೆಯರ ಕೂಟ ಬೇಕಾಯ್ತೆ ಸಂಗರವೆಂಬೊಂದು ನೆವದೋರಿ ವಿಧಿ ನಿನ್ನ ಮುಂಗಡೆಗೊಯ್ಯುದೇ" ಮುಂತಾಗಿ ದುಃಖಿಸುತ್ತಾ ಪತಿಯು ಹೋದೆಡೆಗೆ ಅವರೂ ಹೊರಡಲು ಸಿದ್ಧರಾದರು. ಇದೇ ಸಂದರ್ಭದಲ್ಲಿ ಕರುಳು ಮಿಡಿಯುವಂತಹ ಮತ್ತೊಂದು ಪ್ರಸಂಗ ಬರುತ್ತದೆ. ಬಾಹುಬಲಿಯ ಮಗ ಸಬಲರಾಜ ತನ್ನ ತಾಯಿಯ ಬಳಿ ಬಂದು 'ಅಯ್ಯನ ತೋರೆಂದು' ಪೀಡಿಸತೊಡಗುವನು. ಸುನಂದೆಗೆ ಆಗ ಹುಣ್ಣಿನ ಮೇಲೆ ಬರೆ ಇಟ್ಟಂತಾಗುತ್ತದೆ. ಭರತನನ್ನೇ ತನ್ನ ತಂದೆಯೆಂದು ತೋರಿಸಲು ತಿಳಿಸುತ್ತಾಳೆ. ಅಲ್ಲಿದ್ದಂತಹ ಭಟರೆಲ್ಲರಿಗೂ ಸಹ ಯಾವುದೋ ಒಂದು ರೀತಿಯ ಆತ್ಮವೇದನೆ ಉಂಟಾಗುತ್ತದೆ ಸಬಲರಾಜನನ್ನು ನೋಡಿಕೊಂಡು.

ಇಲ್ಲಿ ತನಕ ಸುಂಟರಗಾಳಿಯಂತೆ ಸುತ್ತಿ ಸುಳಿದು ಬೀಸುತ್ತಿದ್ದ ವೈರಾಗ್ಯದ ಅಳಲಿನ ಆರ್ತಸ್ವರ 'ಯೋಗವಿಜಯ' ಹಾಗೂ ಆ ಮುಂದಿನ ವಿಭಾಗಗಳಲ್ಲಿ ಚಂಡಮಾರುತದಂತೆ ಆವರಿಸುತ್ತದೆ. ಈ ಚಂಡಮಾರುತದ ಹೊಡೆತಕ್ಕೆ ಸಿಕ್ಕಿ ಭರತೇಶನ ಸಂಸಾರವೃಕ್ಷ ಜೊಂಪೆಜೊಂಪೆಯಾಗಿ ಕಳಚಿ ಬಿದ್ದು ಕರುಣಾಜನಕ ವಾತಾವರಣವೇರ್ಪಡುತ್ತದೆ. ಭರತನ ತಾಯಿ ನಿರ್ವೇಗ ಹೊಂದಲು ಸಿದ್ಧಳಾದಾಗ ಅನುವ್ರತಪತ್ನಿಗಳಿಲ್ಲದ ಷಟ್ಖಂಡಾಧಿಪತಿ ನಿಸ್ಸಹಾಯಕನಾಗಿ ನೋಡಿಕೊಂಡು ಸುಮ್ಮನಿರಬೇಕಾಯಿತು. ಆದರೆ ಸೊಸೆಯರ ಆಕ್ರಂದನ ಹೇಳತೀರದು.

"ಹೆತ್ತು ಬಿಸಾಡುವಂತೀಡಾಡಿ ಪೋಗಲ್ಕೇ । ಚಿತ್ತವೆಂತೆಳಸಿತ್ತಮ್ಮಾ
ಈ ನಮ್ಮ ಮನೆ ಬಿಮ್ಮಗಾಯ್ತೆ......."

ಎಂದು ಮಾನಿನಿಯರು ಹಲುಬುತ್ತಾರೆ. ತಮ್ಮಂತರಂಗದ ಶೋಕವನ್ನು ಬಯಲುಮಾಡಿ ತೊಳಲುತ್ತಾರೆ. ಚಕ್ರೇಶನ ನೂರು ಜನ ಮಕ್ಕಳು ಆಟವಾಡಲೆಂದು ಹೋದವರು ಆಟದ ಬಯಲಿನಲ್ಲಿಯೇ ಸಂಸಾರ ನಾಟಕಕ್ಕೆ ಹೇಸಿ ತಮ್ಮಜ್ಜನ ಮೊರೆ ಹೊಕ್ಕು ದಿಗಂಬರ ದೀಕ್ಷೆಗಾಗಿ ಅಂಗಲಾಚುವ ದೃಶ್ಯ ಸಹೃದಯರ ಕಣ್ಣಿನಲ್ಲಿ ನೀರು ತಾರದೇ ಇರದು. ರಾಜಕುಮಾರರು ದೀಕ್ಷೆಪಡೆದ ಸುದ್ದಿಯನ್ನು ಚಕ್ರೇಶನಿಗೆ ತಿಳಿಸಲು ಹೊರಟ ಭಟರಿಗೂ ಕೂಡ ತಮ್ಮ ಎರಡು ತುಟಿಗಳನ್ನು ಅಲುಗಾಡಿಸಲಿಕ್ಕೂ ನಿತ್ರಾಣವಾಗುತ್ತದೆ.

ಮಕ್ಕಳ ಸನ್ಯಾಸತ್ವದ ವಿಷಯವನ್ನು ತಿಳಿದ ಚಕ್ರಿ ದಿಗ್ಭ್ರಾಂತನಾಗುತ್ತಾನೆ. ಆಗ ಚಕ್ರಿಯಲ್ಲಿ ಉಂಟಾದ ಖೇದದ ಕುರುಹುಗಳು ಈ ತೆರನಾಗಿ ಕಾಣಿಸಿಕೊಳ್ಳುತ್ತವೆ.

"ಮೋರೆ ಕಂದಿತು ಮಾತು ನಿಂದಿತು ಹದ್ದನೇ। ಹಾರಿತು ನೃಪನೆದೆ ಕೂಡೆ
ಮೂಗಿನ ಮೇಲೆ ಬೆರಳನಿಟ್ಟು ಮರುಗಿದ। ತೂಗಿ ತಾನುಸ್ಸೆಂದು ಸುಯ್ಯು
ಆಗಳೆ ಕಣ್ಣ ನೀರ್ಗ್ಗಳನೊಕ್ಕವು। ಬೇಗೆ ಹೆಚ್ಚಿದುದೊಡಲೊಳಗೆ....

(71— 17,18)

ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಭರತೇಶ ದಿಗ್ವಿಜಯದಲ್ಲಿ ಅತ್ಯುತ್ಸಾಹದಿಂದ ವೈಭವಪೂರಿತವಾಗಿ ಚಿಕ್ಕಚಿಕ್ಕ ಕಥೆಯೆಲ್ಲಾ ವಿವಾಹವಾಗಿ ಪುತ್ರಸಂತಾನದ ವೈಜಯಂತಿಯನ್ನು ಮೊಳಗಿಸುತ್ತಾನೆ. ಉಲ್ಲಾಸದ ಶಂಖವನ್ನು ಊದುತ್ತಾನೆ. ಸಡಗರದ ಡೋಲನ್ನು ಬಾರಿಸುತ್ತಾನೆ. ಸಂಗೀತದ ಕೊಳಲನ್ನು ಊದುತ್ತಾನೆ. ಆದರೆ 'ಯೋಗವಿಜಯ' ಹಾಗೂ ಅಲ್ಲಿಂದ ಮುಂದಿನ ಅಧ್ಯಾಯಗಳಲ್ಲಿ ಭರತೇಶ ಹಿಂದಿನ ಆ ಎಲ್ಲಾ ರೀತಿಗಳಿಗೆ ವ್ಯತಿರಿಕ್ತನಾಗಬೇಕಾಗುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಪುತ್ರಸಂತಾನದ ಬಿಸ್ಸಿಲಿಯಲ್ಲಿ ನಿರ್ಮಲ ಗಗನದ ವೈಶಾಖ ಶುಕ್ಲ ಪೂರ್ಣಿಮೆಯ ಹಾಲ್ಬೆಳಕಾದರೆ ಇದೇ ಮಕ್ಕಳ ವಿಯೋಗದಿಂದ ಮುಂಗಾರಿನ ಕಾರ್ಮೋಡವಾಗುತ್ತಾನೆ. ಅಂತೆಯೇ ಅರಮನೆಯ ಮಹಾರಾಣಿಯರು ಮುಖಬಿಗುಟಿದರೆ ಹನಿರಕ್ತವೂ ಬಾರದಷ್ಟು ದುಃಖದಿಂದ ಕಂದಿಹೋಗುತ್ತಾರೆ. ತಮ್ಮ ತಮ್ಮ ಕರುಳ ಕುಡಿಗಳನ್ನು ನೆನೆನೆನೆದು ಬಿಕ್ಕಿಬಿಕ್ಕಿ ಅಳುತ್ತಾರೆ.

ಸೋದರರು ಯತಿಗಳಾದರು. ತಾಯಿ ಆರ್ಯಿಕೆಯಾದಳು. ಸೇನಾನಿ ಮೇಘೇಶ ಮಹರ್ಷಿಯಾದನು. ನೂರಾರು ಮಕ್ಕಳಿಗೂ ವೈರಾಗ್ಯ ಬಂದಿತು. ಈ ಎಲ್ಲವೂ ಭರತೇಶನ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಇರುವಾಗಲೇ ಆದಿದೇವನ ವೃತ್ತಾಂತ ಒದಗುತ್ತದೆ. ಆದಿದೇವನು ನಿರಾಕಾರನಾಗಿ ಸಿದ್ಧನಾಗುವ ಕಾಲ ಸಮೀಪಿಸಿತು. ಭರತೇಶ ಇದನ್ನರಿತು ತನ್ನ ತಂದೆಯ ಸಮವಸರಣಕ್ಕೆ ಹಾಜರಾಗಿ

"ಹಾಹಾ ಸ್ವಾಮಿ ನನ್ನೊಡೆಯ ನನ್ನಪ್ಪಾಜಿ। ಮೋಹಾಸುರದರ್ಪಮದನ
ಬಾಹಿರದೊಳಗೆನ್ನನೀಡಾಡಿ ಮುಕ್ತಿಗೆ। ಹೋದರೆ ಪುರುಪರಮೇಶ"

(74—54)

ಮಗುವಾಗಿ ಭರತ ದೇಗರುಳಿಗನಾಗಿ ಇಲ್ಲಿ ಬೊಬ್ಬೆ ಹಾಕುವುದು ಕಾಣಬರುತ್ತದೆ. ಈ ತನಕ ಭಾವತಾಪಸಿಯಾಗಿದ್ದವನು ಈಗ ನಿಜವಾಗಿಯೂ ಸಂಸಾರವನ್ನು ತೊರೆದು ಬಿಡಬೇಕೆಂಬ ತಳಮಳವೇಳುತ್ತದೆ. ಇದಕ್ಕೆ ಪೂರಕವಾಗಿ ದಿನಬೆಳಗಾದರೆ ಸಾಕು. ಯಾರಾದರೂ ಬಂಧುಗಳು ಜಿನದೀಕ್ಷೆ ಹೊಂದುವ ಸುದ್ದಿಯನ್ನು ಕೇಳುವ ಸ್ಥಿತಿ ಬಂದೊದಗುತ್ತದೆ. ಭರತನ ಭಾವಮೈದುನರಲ್ಲಿ ಅಗ್ರಗಣ್ಯರಾದ ನಮಿವಿನಮಿಯ ಅಗಲಿಕೆಯ ಕಹಿಯನ್ನು ಭರತ ಉಣ್ಣಬೇಕಾಗುತ್ತದೆ.

ಚಿಂತೆಯೇ ಮುಪ್ಪು ಸಂತೋಷವೇ ಯೌವನವೆಂಬಂತೆ ಭರತ ಆ ಎಲ್ಲಾ ಚಿಂತಾಸಮುದ್ರದಲ್ಲಿ ಮುಳುಗಿರುವಾಗ ಒಮ್ಮೆ ಇದ್ದಕ್ಕಿದ್ದ ಹಾಗೆ ತನ್ನ ಮೊಗದಲ್ಲಿ ನೆರೆಗೂದ

ಲೊಂದನ್ನು ಕಾಣುತ್ತಾನೆ. ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತೆ ಭರತನಿಗೆ ನೆರೆಗೂದಲೊಂದು ಕಾರಣವಾಗುತ್ತದೆ, ವೈರಾಗ್ಯ ಹೊಂದಲು. ಭವ್ಯಪರಿಣಾಮಿಯಾದ ಈತ ಅಂದೇ ಮನೆ ತೊರೆದವನು ಮರುಕ್ಷಣದಲ್ಲಿಯೇ ದಿಗಂಬರನಾದನು. ನೋಡುತ್ತಿದ್ದಂತೆ ಸಿದ್ಧನಾಗುವನು. ಪರಿಣಾಮವಾಗಿ ಬಂಧುವರ್ಗ, ಸಾಮಾಜಿಕವರ್ಗದವರು ಶೋಕಸಾಗರದಲ್ಲಿ ಮುಳುಗುತ್ತಾರೆ.

ಕೃತಿಯ ಅರ್ಧಭಾಗದವರೆಗೆ ಎಲ್ಲಿ ನೋಡಿದರಲ್ಲಿ ಸಂಭ್ರಮವೋ ಸಂಭ್ರಮ. ಮಂಗಳ ಲೋಕದ ಅಂಗಳದೊಳಗಿಂ ಪ್ರೇಮ ತಂಗಾಳಿ ಜೀವನದ ಹೂದೋಟವನ್ನು ಹೊಕ್ಕು ಸಂತಸದ ಸುಧಾಕಂಪನ್ನು ಸುತ್ತಲೂ ಹರಡಿ ಸಹೃದಯರನ್ನು ಸಮ್ಮೋಹನಗೊಳಿಸುವ ಸನ್ನಿವೇಶಗಳನ್ನು ಕಂಡರೆ ಉತ್ತರಾರ್ಧದಿಂದ ಬರೀ ಗೋಳಾಟ, ಚೀರಾಟ, ದುಃಖದುಮ್ಮಾನ, ಸಂಕ್ಲಿಷ್ಟ ಸನ್ನಿವೇಶಗಳನ್ನೆಲ್ಲ ಕಾಣಬೇಕಾಗುತ್ತದೆ. ಇಂತಹ ಪ್ರಕ್ಷುಬ್ಧ ಪರಿಸ್ಥಿತಿ ಭರತ ನಿರ್ವೇಗ ಹೊಂದಿದ ಸಂದರ್ಭದಲ್ಲಿ ಮುಗಿಲು ಮುಟ್ಟುತ್ತದೆ.

ವಸುಧಾಧಿಪತಿ ದೀಕ್ಷೆಗೊಂಡನೆಂದು ಕೇಳಿದಾಕ್ಷಣ ಆತನ ನಾರೀಮಣಿಯರೆಲ್ಲ ದುಃಖಭರಿತ ವಿರಹ ತಾಪದಲ್ಲಿ ಬಿಸಿಲಲ್ಲಿ ಬಿಸುಟ ಮಾವಿನ ತಳಿರಂತೆ ಆಗುತ್ತಾರೆ. ಅರಮನೆಯೊಳಗೆ ಭರತನಿಲ್ಲದೆ ನಾವಿರುವುದುಚಿತವಲ್ಲವೆಂದು ತೀರ್ಮಾನಿಸಿದ ಅರಸಿಯರು ಭರತನನ್ನು ಮುಂದಿಟ್ಟುಕೊಂಡು ತಾವು ಹಿಂದುಹಿಂದಾಗಿ ನಡುಬೀದಿಗಳಲ್ಲಿ ಹೋಗುತ್ತಿರುವಾಗ ಪುರಕಾಂತೆಯರೆಲ್ಲ ಕೊನೆಯ ದರ್ಶನವೆಂದು ಮೊರಬಂದು ಕಣ್ಣೀರ್ಗರೆಯುತ್ತಾರೆ. ಇತರ ಪುರಜನರೂ ಕೂಡ ಚಿಕ್ಕ ಹುಡುಗರಿಂದ ಮುದುಕಮುದುಕಿಯರವರೆಗೆ ಚಕ್ರಿಯನ್ನು, ಆತನ ಪತ್ನಿಯರನ್ನು ನೆನೆನೆನೆದು ಗದ್ಗದ ಗಂಟಲಿನಿಂದ ಅಳತೊಡಗುತ್ತಾರೆ.

ಹರಿವ ಬೆಳ್ಮುಗಿಲೊಳು ತೋರಿ ಮರೆಸುವ ಚಂದಿರನೊ, ಭಾಸ್ಕರನೊ ಎಂಬಂತೆ ಇರುವ ಭರತ, ಅಂಗಕ್ಕೆ ತಕ್ಕ ಲಾವಣ್ಯ, ಲಾವಣ್ಯಕ್ಕೆ ತಕ್ಕ ಪ್ರಾಯ, ಇವುಗಳ ಸಂಯೋಗದಿಂದುದಯಿಸುವ ಸಿರಿ ಗಂಭೀರ ವಿಕ್ರಮ ಶೃಂಗಾರ ಶೋಭೆಯಿಂದ ಕೂಡಿರುವ ಭರತ, ನಿಟ್ಟಿಸಿದರೆ ಮುತ್ತಮುದುಕಿಯರಿಗೂ ರಘುಂ ರಘುಂ ಎನಿಸುವ ರೂಪಿನಿಂದ ಕೂಡಿದ ಭರತೇಶ, ಸಾವಿರ ಸಾವಿರ ಲಲನಾ ನಾರಿಯರೊಂದಿಗೆ ಅಷ್ಟು ಜನರಿಗೊಬ್ಬೊಬ್ಬನಾಗಿ ಶೃಂಗಾರ ಲಾವಣ್ಯ ಸಾಗರದಲ್ಲಿ ಸರಸವಾಡಿದ ಭರತೇಶ, ತನ್ನ ತಲೆಯನ್ನು ಬೋಳಿಸಿಕೊಳ್ಳುವ, ತೊಟ್ಟ ಆಭರಣಗಳನ್ನೆಲ್ಲ ಕಳಚಿ ದಿಗಂಬರನಾಗಿ ಮೋಕ್ಷಶ್ರೀಯನ್ನು ಆಲಂಗಿಸಲು ಪ್ರಯತ್ನಪಡುವ ಸನ್ನಿವೇಶವನ್ನು ಗಮನಿಸಿದಾಗ ಎಂತಹ ಕಲ್ಲೆದೆಯವರೂ ಕರಗದೆ ಇರಲಾರರು, ಪತಿಭಕ್ತಿಯಿಂದ. ಪತಿಪ್ರೇಮದಿಂದ, ಕುಶಲತೆಯಿಂದ, ಮೋಹಕ ರೂಪದಿಂದ, ಕೋಮಲ ಸ್ವಭಾವಗಳಿಂದ, ಬೆಡಗುಬಿನ್ನಾಣದಿಂದ. ಶೃಂಗಾರರಸವನ್ನು ಬುಗ್ಗೆಯಾಗಿ ಹರಿಸುವ ಒನಪುಒಯ್ಯಾರದಿಂದ ಕೂಡಿರುವ ಭರತನ ರೂಪರಾಣಿಯರು ಮೋಕ್ಷಗಾಮಿ ಭರತನೆದುರು ತಮ್ಮತಮ್ಮ ಬಳೆಗಳನ್ನು ಒಡೆದುಕೊಂಡು, ಹಣೆಯಮೇಲೆ ಸಂಧ್ಯಾಮಣಿಯಂತೆ ತೋರುವ ಕುಂಕುಮ ಮುದ್ರೆಯನ್ನು ಅಳಿಸಿಕೊಳ್ಳುವ ಈ ಮೊದಲಾದ ದೃಶ್ಯಗಳು ನೋಡಲಿಕ್ಕೂ ಸಲ್ಲ; ಕೇಳಲಿಕ್ಕೂ ಕರ್ಣಕಠೋರ!

ಭರತ ಕೈವಲ್ಯ ಪಡೆದ ವಿಷಯ ತಿಳಿದ ಮಾಗಧ ತನ್ನೊಡೆಯನ ನೆನೆದು ಮರುಗುತ್ತಾನೆ. ಪರಿಪರಿಯಾಗಿ ಪರಿತಪಿಸುತ್ತಾನೆ.

"ಪುರುಷ ರೂಪಿನ ಕಲ್ಪತರುವೆ ನೀನೆಂತು ಪೋದೋ। ಪರೆ ಕೆಟ್ಟೆನೊಡೆಯ ಹಾಯೆಂದ,
ವೀರಕೆ ವಿನಯಕೆ ವಿದ್ಯಾಪರೀಕ್ಷೆಗು। ದಾರಕೆ ಶೃಂಗಾರ ರಸಕೆ,
ಧೀರಕೆ ಜಗದೊಳಪ್ರತಿಯಾದ ಪೊಸ ಪೊಂತ। ಕಾರಿ ಹಾಹಾ ಕೆಟ್ಟೆನೆಂದ...."

(78—69)

ಇವನು ಈ ತೆರನಾಗಿ ಪರಿತಪಿಸುತ್ತಿರುವಾಗಲೇ ಸಿಂಧೂದೇವ–ಗಂಗಾದೇವರು ಸಹ ಮಾಗಧನ ಧ್ವನಿಗೆ ಧ್ವನಿಗೂಡಿಸುತ್ತಾರೆ. ಇವರ ಸರದಿಗೆ ಭರತನ ಸೋದರಿಯರು ಸೇರುತ್ತಾರೆ. ಭರತನ ಕೈವಲ್ಯದಿಂದ ತಮ್ಮ ಹೊಟ್ಟೆಯೊಳಗೆ ಬೆಂಕಿ ಬಿದ್ದಂತಾಗಿ ದುಃಖಿಸುತ್ತಾರೆ. ಪಟ್ಟದ ರಾಣಿಯರಾದರೇನು? ಒಡಹುಟ್ಟಿದ ಹೆಣ್ಣುಮಕ್ಕಳಾದರೇನು? ಎಲ್ಲರನ್ನೂ ಸಮಾನ ದಂಡದಿಂದ ಆಳುತ್ತಿದ್ದ ಭರತನ ದೊಡ್ಡಗುಣವನ್ನು ಸ್ಮರಿಸುತ್ತಾ ಕಣ್ಣೀರ್ಗರೆಯುತ್ತಾರೆ.

"ಪೊಡವಿಯ ಸಿರಿಯಿಂದು ಹಾರಿತೆ ತವರೂರ। ಕಡೆಯಾಸೆ ಬಯಲಾಯ್ತೆ ನಮಗೆ
ಕಡು ಪಾಪಿಗಳ ಕಣ್ಣ ಮುಂದೆ ನೀನಿಹೆಯ ಕ। ನ್ನಡಿರೂಪಾ ಎಂದೊರಲಿದರು"

ತವರೂರ ತಂಪು, ಅಣ್ಣನ ಮಮತೆಯ ತಂಪು. ಈ ಎರಡರ ಮಧ್ಯೆ ಮೂಡಿದ ಸಹೋದರಿಯರ ಪ್ರೀತಿವಾತ್ಸಲ್ಯದ ನಾದದ ಇಂಪು– ಇವು ಭರತನ ನಿರ್ವೇಗದಿಂದ ಇಲ್ಲವಾಗುವುದನ್ನು ಕಂಡು ಕಂಬನಿ ಮಿಡಿದ ಭರತನ ಸೋದರಿಯರೊಂದಿಗೆ ಭರತನ ಹೆಣ್ಣುಮಕ್ಕಳೂ ದನಿಗೂಡಿಸುತ್ತಾರೆ.

"ಕುವರರು ಸೊಸೆಯರು ಪೆಂಡಿರನೆಲ್ಲರ। ಸವರಿಕೊಂಡಿಂತೆಯ್ದಿ ನಮ್ಮ
ತವರು ಮನೆಯ ಹಾಳು ಮಾಳ್ಪುದು ನಿನಗೆ ಬ। ಲ್ಲವಿಕೆಯೆ ಷಟ್ಖಂಡದೊಡೆಯ.
ಆವಾವ ಕಾರ್ಯಕೂ ನೀನೆಮ್ಮ ಕರೆಸುವೆ। ಈ ವೇಳೆಯೊಳಗೇಕೆ ಮರೆತೆ.
ಹಾ ವಿಧಿಯೆಂದಳಲಿದರು ಮೂವತ್ತು। ಸಾವಿರ ಕುವರಿಯರೆಲ್ಲ"

(78—83)

ಭರತನ ಅಳಿಯಂದಿರ ರಾಶಿಗೆ ಇಳಿವರೆ ಅಲ್ಲಿಯೂ ಸಹ ಹಾಹಾಕಾರ. ಆರ್ಭಟ ಕಂಡುಬರುತ್ತದೆ. ಭರತನ ವಿಷಯ ತಿಳಿದ ಅಳಿಯಂದಿರು ಸಂಕಟ ತಡೆಯಲಾರದೆ ಬಿದ್ದು ಬಿದ್ದು ಒದ್ದಾಡುತ್ತಾರೆ. ಹೊಟ್ಟೆ ಬಡಿದುಕೊಂಡು ಉರುಳಾಡುತ್ತಾರೆ.

"ಸುಡು ಸುಡು ಸಿರಿಯು ನಿನ್ನಯ ಪಸ್ತದೊಳಿದೀಕ್ಷೆ । ಪಡೆಯಸ್ಯೆಪಲ್ಲಾಯ್ತ್ತು ನಮಗೆ,
ಸಿಡಿಪು ಪೋಡೆಯ ಹಾಹಾಯೆಂದು ವಿಳ್ಳಾಸ। ವಿಡುಕಿತಿರ್ದರಾ ಮೂವರತ್ತ"
(78—88)

ಇದೇ ತೆರನಾಗಿ ಭರತೇಶನ ಸುತ ಅರ್ಕಕೀರ್ತಿ ತನ್ನ ತಂದೆ ಕುಳಿತುಕೊಳ್ಳುವ ಗದ್ದುಗೆಯ ಪೀಠವನ್ನು ಕಂಡು ಮಮ್ಮಲ ಮರುಗುತ್ತಾನೆ. ಪೀಠವಲ್ಲಿ ಭರತ ಕುಳಿತುಕೊಳ್ಳುತ್ತಿದ್ದ ಗತ್ತು, ಗಮ್ಮತ್ತು, ಆತನ ಪರಿವಾರ ಇವೆಲ್ಲವೂ ಕೂಡ ಅವನ ಕಣ್ಪರದೆಯ ಮೇಲೆ ಸುತ್ತಿ ಸುಳಿಯುತ್ತವೆ. ಇವರಲ್ಲದೆ ಸೊಸೆಯಂದಿರು, ವಿದ್ವಾಂಸರು, ಇತರ ನೃಪರು ಪೂರ್ವನಗ್ರಜ ಮುಕ್ತಿಗೈದ ಸುದ್ದಿ ತಿಳಿದು ನೀರುಗಣ್ಣಿನಿಂದ ಹಗಲಿರುಳು ಗೋಳಿಡುತ್ತಾರೆ.

ಕೋಮಲಾಂಗನು. ಹೇಮವರ್ಣನು. ಜಗವೆಲ್ಲ ಕಾಮಿಸತಕ್ಕ ಚಿನ್ಹಿಗಳನು ಅಪೋದವ್ರಕ್ಕಿಸುವ ಜವ್ವನಿಗನು, ಸರ್ವಭೂಮೀಶರೊಡೆಯ, ತೊಂಬತ್ತುಸಾವಿರ ಹೆಣ್ಣುಗಳ ಪ್ರಾಣೇಶನಾದ ಭರತ ಚಕ್ರಿ ಗಣನೆಯಿಲ್ಲದೆ ರಾಜ್ಯ ಸುಖದೊಳೋಲಾಡಿ ಕೊನೆಗೆ ಜಿನಯೋಗಿಯಾದ ಭರತೇಶ ಹಾಗೂ ಅವನ ಸುತ್ತಮುತ್ತಿನ ಸಮೂಹ, ಅವರ ನಿಜ ಜೀವನದ ವಾಸ್ತವ ಸಂಗತಿಗಳಿಂದ ಕೂಡಿದ ಈ ಕಾವ್ಯದಲ್ಲಿ ಎಲ್ಲಿಯೂ ಹಿಂಸಾತ್ಮಕ ಸಾವನ್ನು ಕಾಣಲಾರೆವು. ಆದರೆ ನೋವು ಮಾತ್ರ ಕಾವ್ಯದ ಮಧ್ಯಭಾಗದ ಮೊದಮೊದಲು ಸಣ್ಣ ಝರಿಯಂತೆ ಕಾಣಿಸಿಕೊಂಡು ಕಾವ್ಯದ ಅಂತ್ಯದಲ್ಲಿ ಕ್ರಮಕ್ರಮವಾಗಿ ಹಿಂತೊರೆಯಾಗಿ ಉಪಕ್ರಮಿಸಿರುವುದು ಗೋಚರವಾಗುತ್ತದೆ.

ಪ್ರಧಾನ್ ಗುರುದತ್ತ

ಹೋಟೆಲ್ ಜನಪಥ*

'ಜನಪಥ'ವು ನಿಜಕು ತಾನದೊಂದು ವಿಶಿಷ್ಟ ಹೋಟೆಲ್
ಮತ್ತೆ ಅಲ್ಲಿಗೆ ಹೋಗುವಾ ಭಾಗ ಒದಗಿದೆ ನನಗೆ.
ದೆಹಲಿಯಲಿ ಇರುವೆನಿತೊ ಉತ್ತಮ ತರದ ಹೋಟೆಲುಗಳು
ಸಾಗಿ ಹೋಗಿಹುವು ತಾವು ನನ್ನ ಕಣ್ಣೆದುರಿನಲಿ.

ಆದರೂ ಉಳಿಸಿಕೊಂಡಿದೆ ಈ ಹಳೆಯ 'ಜನಪಥ'ವು
ತನ್ನ ಆ ವಿಶೇಷವನು, ಹುಟ್ಟಿಸುತೆ ನನ್ನನು
ತನ್ನದೆಂದೆನಿಸುವಾ ಅಚ್ಚುಕಟ್ಟಿನಿಂದಲಿ ಎಂದೆಂದು.
ಗಣ್ಯರೊಡನಲ್ಲಿ ನಾವಿರುವೆವು ರಶಿಯಾದ ಪೌರರು.

ಮಾಸ್ಕೋದ ರೀತಿಯಲಿ ಪಡೆಯುವೆವು ಚಹವನಿಲ್ಲಿ ನಾವು
ಗಲಭೆಗೊಂದಲಗಳನು ಎಬ್ಬಿಸದೆ ಇಲ್ಲಿ ಎಂದೆಂದು.
'ಮಿಸ್ಟರ್', 'ಸರ್'–ಎನುವಾ ನುಡಿಗಳಿಗೆ ಬದಲಾಗಿ
ಮರುದನಿಗೊಳುವುದಿಲ್ಲಿ 'ತೊವಾರಿಶ್' ಎಂಬ ನಲ್ನುಡಿಯು.

---

* ಸೆರ್ಗೆಯಿ ಬರೂಜ್‌ದಿನ್ ಅವರ 'ಭಾರತವನ್ನು ಕುರಿತ ಕವನಗಳು' ಸಂಕಲನದಿಂದ. ವಾಲ್ಟರ್ ಮೇ ಅವರ ಅನುವಾದವನ್ನು ಅನುಸರಿಸಿ.

ಡಾ. ಎಂ. ಚಿದಾನಂದಮೂರ್ತಿ

ಜಿನವಲ್ಲಭನ ಕುರಿಕ್ಯಾಲ ಶಾಸನ: ಹೆಚ್ಚಿನ ಶೋಧಗಳು ಮತ್ತು ವ್ಯಾಖ್ಯಾನಗಳು

1968ರಲ್ಲಿ ಡಾ. ಎಸ್. ವೆಂಕಟರಮಣಯ್ಯನವರ "ಜಿನವಲ್ಲಭನ ಗಂಗಾಧರದ ಶಿಲಾಶಾಸನ" (ಅನು: ಸೀತಾರಾಮ ಜಾಗೀರದಾರ್) ಎಂಬ ಲೇಖನ ಪ್ರಕಟವಾದಂದಿನಿಂದ[1] ಆ ಶಾಸನವು ವಿಶೇಷವಾಗಿ ಕನ್ನಡದಲ್ಲಿ (ಸ್ವಲ್ಪಮಟ್ಟಿಗೆ ತೆಲುಗಿನಲ್ಲಿ) ಬಹುವಾದ ಚರ್ಚೆಗೆ ಒಳಗಾಗಿದೆ. ಆ ಚರ್ಚೆಗಳ ಎಲ್ಲ ಸಾರಾಂಶವನ್ನು ಇಲ್ಲಿ ಕೊಡುವುದಕ್ಕಿಂತ. ಕೆಲವು ಅಂಶಗಳನ್ನೂ ಅವುಗಳ ಹಿನ್ನೆಲೆಯಲ್ಲಿ ನಾನು ನಡಸಿರುವ ಸಂಶೋಧನೆಗಳನ್ನೂ ಇಲ್ಲಿ ಕೊಡುತ್ತೇನೆ. (ಶಾಸನವು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕೇಂದ್ರವಾದ ಕರೀಂನಗರಕ್ಕೆ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದ ಕುರಿಕ್ಯಾಲ ಗ್ರಾಮದ ಬಳಿಯ ಬೊಮ್ಮಲಮ್ಮಗುಟ್ಟದಲ್ಲಿದೆಯೆಂಬುದನ್ನು ಶಾಸನಾಭ್ಯಾಸಿಗಳೆಲ್ಲರೂ ಬಲ್ಲರು.)

ಬೊಮ್ಮಲಮ್ಮಗುಟ್ಟ

ಶಾಸನವನ್ನು ಮೊದಲು ಪ್ರಕಟಿಸಿದ ಡಾ. ವೆಂಕಟರಮಣಯ್ಯನವರು ಶಾಸನವನ್ನು "ಗಂಗಾಧರನ ಶಾಸನ" ವೆಂದು ಕರೆದರು. ಅದಕ್ಕೆ ಕಾರಣ, ಅವರ ಪ್ರಕಾರ ಶಾಸನವಿರುವ 'ಬೊಮ್ಮಲಗುಟ್ಟ'ವು 'ಗಂಗಾಧರ' ಎಂಬ ಹಳ್ಳಿಯ ಸೀಮೆಯಲ್ಲಿದ್ದುದೇ. ಆದರೆ

---

1. ಪ್ರಬುದ್ಧ ಕರ್ಣಾಟಕ, 50 : 3 (ಅಕ್ಟೋಬರ್, 1968), ಪು. 23-41. ಇದಕ್ಕೂ ಮೊದಲು ಈ ಲೇಖನದ ತೆಲುಗು ಮೂಲವು "ಭಾರತಿ"ಯಲ್ಲಿ ಪ್ರಕಟವಾಯಿತು (ಮಾರ್ಚ್, 1967). ಅದಕ್ಕೆ ಮೊದಲೇ ಡಾ. ವೆಂಕಟರಮಣಯ್ಯನವರ ಇಂಗ್ಲಿಷ್ ಲೇಖನದ ಪೂರ್ಣ ಪಾಠವನ್ನು 1966ರ ಡಿಸೆಂಬರಿನಲ್ಲಿ ಅವರ ಬಾಯಿಂದ ಕೇಳಿದ ನಾನು ಅವರ ಒಪ್ಪಿಗೆ ಪಡೆದು ಜಿನವಲ್ಲಭನ ಶಾಸನದ ಪರಿಚಯವನ್ನು ಒಂದು ಚಿಕ್ಕ ಟಿಪ್ಪಣಿಯಲ್ಲಿ ಮಾಡಿಕೊಟ್ಟಿದ್ದೆ (ಪ್ರಬುದ್ಧ ಕರ್ಣಾಟಕ, 48 : 4 ವಸ್ತುಕೋಶ). ಪಂಪನ ತಮ್ಮನ ಶಾಸನದ ಬಗ್ಗೆ ಕನ್ನಡದಲ್ಲಿ ಬಂದ ಮೊದಲ ಲೇಖನ ಅದೇ. (ಲೇಖಕರ ಬಾಯಿಂದ ಕೇಳಿ ಬರೆದ ಪರಿಚಯಾತ್ಮಕ ಟಿಪ್ಪಣಿಯಾದುದರಿಂದ ಅದರಲ್ಲಿ ಒಂದೆರಡು ತಪ್ಪುಗಳು ನುಸುಳಿವೆ.)

ಮುಂದೆ 1968ರಲ್ಲಿ ಕುರಿಕ್ಯಾಲ ಗ್ರಾಮಕ್ಕೆ ಭೇಟಿಕೊಟ್ಟು ಅದೇ ಶಾಸನದ ಪರಿಷ್ಕೃತ ಪಾಠವನ್ನು ಪ್ರಕಟಿಸಿದ ಡಾ. ಜಿ. ಎಸ್. ಗಾಯಿಯವರು[2] ಬೆಟ್ಟದ ಹೆಸರು 'ಬೊಮ್ಮಲಮ್ಮಗುಟ್ಟ'ವೆಂಬುದನ್ನು (ಚಿತ್ರ 1)ಸರಿಯಾಗಿ ಗುರುತಿಸಿರುವುದಲ್ಲದೆ. ಆ ಬೆಟ್ಟವು ಕುರಿಕ್ಯಾಲ ಹಳ್ಳಿಯ ಸೀಮೆಯಲ್ಲಿರುವುದರಿಂದ ಶಾಸನವನ್ನು 'ಕುರಿಕ್ಯಾಲ ಶಾಸನ' ವೆಂದು ಕರೆಯಬೇಕೆಂದು ಸಕಾರಣವಾಗಿ ಸೂಚಿಸಿದರು. ಡಾ. ಗಾಯಿಯವರ ಬಳಿಕ 1970ರಲ್ಲಿ ಕುರಿಕ್ಯಾಲ ಗ್ರಾಮಕ್ಕೆ ಹೋದ ಡಾ. ಕಲಬುರ್ಗಿಯವರು ಶಾಸನವನ್ನು 'ಗಂಗಾಧರಂ ಶಾಸನ' ವೆಂದೇ ಕರೆಯುವದಲ್ಲದೆ, ಹಳ್ಳಿಗರ ಬಾಯಿಂದ ಉಚ್ಚಾರವಾಗುವ ಬೆಟ್ಟದ ಹೆಸರನ್ನು ಸರಿಯಾಗಿ ಗಮನಿಸದೇ ಹೋದಕಾರಣ 'ಬೊಮ್ಮಲಗುಟ್ಟ'ವೆಂದೇ ಅದನ್ನು ತಮ್ಮ ಒಂದು ಲೇಖನದಲ್ಲಿ ಕರೆದಿದ್ದಾರೆ.[3] ಈಚೆಗೆ (ಫೆಬ್ರವರಿ, 1985) ನಾನು ಅದೇ ಊರಿಗೆ ಭೇಟಿ ನೀಡಿ ಹಳ್ಳಿಗರೆಲ್ಲ ಆ ಬೆಟ್ಟವನ್ನು "ಬೊಮ್ಮಲಮ್ಮಗುಟ್ಟ"ವೆಂದೇ ಕರೆಯುತ್ತಿರುವುದನ್ನು (= ಬೊಂಬೆಗಳ ಅಮ್ಮನ ಗುಡ್ಡ) ಗಮನಿಸಿದ್ದೇನೆ. ಆ ಗುಡ್ಡವನ್ನು "ಬೊಮ್ಮಲಮ್ಮಗುಟ್ಟ" ವೆಂದೇ ವ್ಯವಹರಿಸಬೇಕೆಂಬುದನ್ನು ಮತ್ತೆ ಒತ್ತಿ ಹೇಳಬೇಕಾಗಿಲ್ಲ.

"ಗಂಗಧಾರಾ"

ಬೊಮ್ಮಲಮ್ಮಗುಟ್ಟದ ಪಶ್ಚಿಮಕ್ಕೆ (ಸರಿಯಾಗಿ ಹೇಳಬೇಕೆಂದರೆ ವಾಯುವ್ಯಕ್ಕೆ) ಸುಮಾರು ಎರಡು ಮೈಲು ದೂರದ ಊರಿನ ಹೆಸರಿನ ಜನರ ಉಚ್ಚಾರವನ್ನು ಯಾರೂ ಗಮನಿಸಿದಂತೆ ತೋರುವುದಿಲ್ಲ. ಅದು ಎಲ್ಲರೂ ಭಾವಿಸಿರುವಂತೆ "ಗಂಗಾಧರ" ಅಲ್ಲ,[4] "ಗಂಗಧಾರ್". "ಗಂಗಧಾರ" ಅಥವಾ "ಗಂಗಧಾರ್" ಎಂಬ ಉಚ್ಚಾರ ಬಹುಮುಖ್ಯವಾದ ಸಂಗತಿ. ಏಕೆಂದರೆ ಹತ್ತನೆಯ ಶತಮಾನದ ಸೋಮದೇವನು ತನ್ನ ಯಶಸ್ತಿಲಕ ಚಂಪೂಕಾವ್ಯವನ್ನು ಕ್ರಿ.ಶ. 959ರಲ್ಲಿ "ಗಂಗಧಾರ"ದಲ್ಲಿ ಬರೆದೆನೆಂದು ಹೇಳಿಕೊಂಡಿದ್ದಾನೆ.[5] ("ಶ್ರೀಕೃಷ್ಣರಾಜದೇವೇ ಸತಿ ತತ್ಪಾದಪದ್ಮೋಪಜೀವಿನಃ.... ಚಾಲುಕ್ಯಜನ್ಮನಃ ಸಾಮಂತಚೂಡಾಮಣೇಃ ಶ್ರೀಮದರಿಕೇಸರಿಣಃ ಪ್ರಥಮಪುತ್ರಸ್ಯ ಶ್ರೀಮದ್ವಾಗರಾಜ ಪ್ರವರ್ಧಮಾನ ವಸುಧಾರಾಯಾಂ ಗಂಗಾಧಾರಾಯಾಂ ವಿನಿರ್ಮಿತಮಿದಂ ಕಾವ್ಯಮಿತಿ") ಆ "ಗಂಗಧಾರಾ" ಊರೇ ಈಗಿನ "ಗಂಗಧಾರ್"—ಸಾವಿರ ವರ್ಷಗಳಾದರೂ ಮೂಲ ಉಚ್ಚಾರವನ್ನು ಜನ ತಮ್ಮ ಬಾಯಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಆ ಊರಿನ ಹೊಲಗಳಲ್ಲಿ ಸೋಮದೇವ ತನ್ನ ಕೃತಿಯನ್ನು ಬರೆದ ಬಸದಿಯ

---

2. ಅದೇ, 53:4. (ಜನವರಿ. 1972). ಪು. 73–83. ಇದಕ್ಕೆ ಮೊದಲು ಶಾಸನಪಾಠದ ಬಗ್ಗೆ ಒಂದು ಚಿಕ್ಕ ಲೇಖನವನ್ನೂ ಡಾ. ಗಾಯಿ ಪ್ರಕಟಿಸಿದ್ದಾರೆ (ಅದೇ.50:4. ಡಿಸೆಂಬರ್, 1968)
3. ಕರ್ಮವೀರ, (24-5-1970)
4. 'Gangadhara' ಎಂಬ ರೋಮನ್ ಲಿಪ್ಯಂತರದಿಂದ ಆಗಿರುವ ಗೊಂದಲವಿರಬಹುದು ಇದು.
5. Quoted by Handiqui: Yashastilaka and Indian Culture, Sholapur, 1949. p. 3

ಅವಶೇಷಗಳಿರುವಂತಿವೆ (ನೋಡಿ–ಪ್ರಬುದ್ಧ ಕರ್ಣಾಟಕ. 50: 3, ಪ್ರ. 32). ನನ್ನ ಈಚಿನ ಭೇಟಿಯಲ್ಲಿ ತೀರ ಆಯಾಸವಾಗಿದ್ದುದರಿಂದ ಆ ಊರಿಗೆ ಹೋಗಲಾಗಲಿಲ್ಲ.

'ಧರ್ಮಪುರ'

ಪಂಪ ವಿಕ್ರಮಾರ್ಜುನವಿಜಯವನ್ನು ಬರೆದುದಕ್ಕೆ ತನಗೆ ಅರಿಕೇಸರಿಯು 'ಧರ್ಮಪುರ' ಎಂಬ ಅಗ್ರಹಾರವನ್ನು ವೃತ್ತಿಯಾಗಿ ಬಿಟ್ಟುಕೊಟ್ಟಂತೆ ತನ್ನ ಕೃತಿಯಲ್ಲಿ ಹೇಳಿಕೊಂಡಿರುವುದಲ್ಲದೆ ಕುರಿಕ್ಯಾಲ ಶಾಸನವೂ ಅದನ್ನೇ ಹೇಳುತ್ತದೆ. (ಶಾಸನವು ಧರ್ಮಪುರವನ್ನು 'ದ್ವಿಜಾವಸಥಗ್ರಾಮ' ಅಥವಾ ಬ್ರಾಹ್ಮಣರ ಊರೆಂದೂ, ಪಕ್ಕದ ಗುಡ್ಡವನ್ನು 'ದ್ವಿಜಾವಸಥಪರ್ವತ' ಅಥವಾ ಅಗ್ರಹಾರದ ಗುಡ್ಡವೆಂದೂ ಕರೆದಿರುವುದನ್ನು ಗಮನಿಸಿ.)

ಈ 'ಧರ್ಮಪುರ' ಯಾವುದು? ಅದು ಎಲ್ಲಿತ್ತು? ಈ ಬಗ್ಗೆ ಡಾ. ವೆಂಕಟರಮಣಯ್ಯನವರು ಹೀಗೆ ಹೇಳಿದ್ದಾರೆ :

"....ಮೊಟ್ಟಮೊದಲು ಧರ್ಮಪುರವನ್ನು ಗುರುತಿಸದೆ ಈ ವೃಷಭಾದ್ರಿಯನ್ನು ಗುರುತಿಸಲು ಸಾಧ್ಯವಿಲ್ಲ.[6] ಸಬ್ಬಿನಾಡಿಗೆ ಸರಿಹೋಗುವ ಕರೀಂನಗರ ಜಿಲ್ಲೆಯಲ್ಲಿ ಇರುವ ಧರ್ಮಪುರವು ಒಂದಲ್ಲ. ಇದು ಈ ಕರೀಂನಗರಕ್ಕೆ ಉತ್ತರದಲ್ಲಿ 40 ಮೈಲಿನ ಮೇಲೆ ಗೋದಾವರಿಯ ದಕ್ಷಿಣ ತಟದಲ್ಲಿ ಇದೆ. ಈಗಲೂ ಇಲ್ಲಿ ಬ್ರಾಹ್ಮಣರ ಬಾಹುಳ್ಯವಿದೆ; ಯಾತ್ರಾಸ್ಥಳವಾಗಿದೆ. ಧರ್ಮಪುರ ನಿವಾಸಿಯಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯನ್ನು ಸೇವಿಸುವುದಕ್ಕೆ ಪರಿಸರಪ್ರದೇಶದವರು ಬರುತ್ತಿರುತ್ತಾರೆ. ಶಾಸನದಲ್ಲಿ ಹೇಳಲಾದ ಧರ್ಮಪುರವು ಇದೇ ಆಗಿರಬಹುದು. 'ವಿಕ್ರಮಾರ್ಜುನವಿಜಯ'ದ ರಚನೆಗೆ ಮೆಚ್ಚಿ ಅರಿಕೇಸರಿಯು ಪಂಪನಿಗೆ ಇತ್ತ ಅಗ್ರಹಾರವು ಇದೇ ಆಗಿರಬಹುದು. ಆಗ ಈ ಅನಾದಿಸಿದ್ಧ ತೀರ್ಥವಾದ ವೃಷಭಾದ್ರಿಯು ಈ ಧರ್ಮಪುರದ ಉತ್ತರಕ್ಕಿರುವ ಗೋದಾವರಿಯ ಉತ್ತರ ತಟದಲ್ಲಿರುವ ಅದಿಲಾಬಾದು ಜಿಲ್ಲೆಯ ಕೊಂಡಗಳಲ್ಲಿ (ಗುಡ್ಡ) ದ್ದಿರಬಹುದು. ಆಗ ಒಂದು ಆಕ್ಷೇಪ ಸಹಜವಾಗಿ ಏಳುತ್ತದೆ. ಅದೆಂದರೆ ಶಾಸನದಲ್ಲಿ ಹೇಳಿದ ಧರ್ಮಪುರವು ಸಬ್ಬಿನಾಡ ನಡುವಿದ್ದಿತಲ್ಲವೆ ಎಂದು. ಮೇಲೆ ಹೇಳಿದ ಗೋದಾವರಿ ತಟದ ಧರ್ಮಪುರವು ಈ ಧರ್ಮಪುರವು ಒಂದೇ ಆಗಿದ್ದು ಅದು ಆ ಕಾಲದಲ್ಲಿ ಸಬ್ಬಿನಾಡೊಳಗಿದ್ದಿರಬಹುದು. ಆದರೆ ಗೋದಾವರಿಯ ಉತ್ತರ ಪಾರ್ಶ್ವಕ್ಕೂ ಸಬ್ಬಿನಾಡು ವ್ಯಾಪಿಸಿತ್ತೆಂದು ಹೇಳುವಂತಹ ಶಾಸನಾದ್ಯಾಧಾರಗಳು ಇದುವರೆಗೆ ಒಂದೂ ಹೊರಬಿದ್ದಿಲ್ಲ. ಆದುದರಿಂದ ಗೋದಾವರಿ ತಟದ ಧರ್ಮಪುರ ಮತ್ತು ಈ ಶಾಸನೋಕ್ತ ಧರ್ಮಪುರಗಳನ್ನು ಒಂದೇ ಎಂದು ಹೇಳುವುದಕ್ಕೆ ಸಂಕೋಚಪಡಬೇಕಾಗಿದೆ.

---

6. ವೃಷಭಾದ್ರಿಯು ಯಾವುದೂ ಅಲ್ಲ, ಈಗಿನ ಬೊಮ್ಮಲಮ್ಮಗುಟ್ಟವೇ ಎಂಬಲ್ಲಿ ಅನುಮಾನಗಳಿಲ್ಲ.

ಇನ್ನೂ ವಿಶೇಷವೆಂದರೆ ಈ ಕರೀಂನಗರ ಜಿಲ್ಲೆಯಲ್ಲಿ ಒಂದಲ್ಲ ಹಲವು ಧರ್ಮಪುರವೆಂಬ ಗ್ರಾಮಗಳಿವೆ. 'ಧರ್ಮಾರ' ಎಂಬುದು ಧರ್ಮಪುರಕ್ಕೆ ಈ ರೂಪಾಂತರಿತ ರೂಢಿಯ ಹೆಸರು. ಧರ್ಮಪುರ—ಧರ್ಮಪುರ—ಧರ್ಮವರ—ಧರ್ಮಾರ ಆಗಿದೆ. ಒಂದು ಧರ್ಮಾರವು ವೇಮುಲವಾಡಕ್ಕೆ ಪಶ್ಚಿಮದಲ್ಲಿ ಹತ್ತು ಮೈಲುಗಳ ಅಂತರದಲ್ಲಿರುವ 'ಸಿರಿಸಿಲ್ಲಾ'ಕ್ಕೆ 15 ಮೈಲುಗಳ ಅಂತರದ ಮೇಲೆ ಪಶ್ಚಿಮೋತ್ತರ ದಿಶೆಯಲ್ಲಿದೆ. ಇನ್ನೊಂದು 'ಮಂಥನಿ'ಗೆ 15 ಮೈಲು ದಕ್ಷಿಣದಲ್ಲಿದೆ: ಮಗುದೊಂದು 'ಓರುಗಂಟಿ'ಗೆ ಪಶ್ಚಿಮದಲ್ಲಿ 20 ಮೈಲುಗಳ ಅಂತರದಲ್ಲಿದೆ. ಇವೆಲ್ಲವೂ ಸಬ್ಬಿನಾಡಲ್ಲಿವೆ. ಕಾರಣ ಪ್ರಸ್ತುತ ಶಾಸನೋಕ್ತ ಧರ್ಮಪುರವು ಇವುಗಳಲ್ಲಿ ಯಾವುದಾದರೊಂದು ಆಗಿರಬಹುದು. **ಭಾವಿ ಪರಿಶೋಧನೆಯಲ್ಲಿ ನಿಜ ಹೊರಬೀಳಬೇಕಾಗಿದೆ.**"[7] (ದಪ್ಪಕ್ಷರಗಳು ನನ್ನವು)

ಅವರ ಪ್ರಕಾರ ಧರ್ಮಪುರವನ್ನು ಅವರಿಗೆ ಗುರುತಿಸಲಿಕ್ಕಾಗಲಿಲ್ಲ. 1968 ರಲ್ಲಿ ಬೊಮ್ಮಲಮ್ಮಗುಟ್ಟಕ್ಕೆ ಭೇಟಿ ನೀಡಿದ ಡಾ. ಜಿ. ಎಸ್. ಗಾಯಿಯವರು 'ಧರ್ಮಪುರ'ದ ಬಗ್ಗೆ ಹೀಗೆ ಹೇಳುತ್ತಾರೆ.

"....ಈ ವೃಷಭಗಿರಿಯು ಪಂಪನು ವೃತ್ತಿಯಾಗಿ ಪಡೆದ ಧರ್ಮಪುರ ಅಥವಾ ಧರ್ಮವುರದ ಉತ್ತರದಿಕ್ಕಿನಲ್ಲಿದೆಯೆಂದು ಶಾಸನದಲ್ಲಿ ಹೇಳಿದುದರಿಂದ ಧರ್ಮಪುರವು ವೃಷಭಾದ್ರಿಯ ದಕ್ಷಿಣದಲ್ಲಿದ್ದಿತೆಂಬುದು ಸ್ಪಷ್ಟ. ಮತ್ತು ಈ ಧರ್ಮಪುರಕ್ಕೆ ಹೋದರೆ ಅಲ್ಲಿಂದ ಕ್ಷೀರಾಭಿಷೇಕದಿಂದ ಮುಳುಗಿದ ವೃಷಭಪರ್ವತವನ್ನು ನೋಡಬಹುದೆಂದು ಶಾಸನದ ಸಂಸ್ಕೃತ ಶ್ಲೋಕದಲ್ಲಿ ಹೇಳಿರುವುದರಿಂದ ಧರ್ಮಪುರವು ಆ ಬೆಟ್ಟದ ದಕ್ಷಿಣ ಭಾಗದಲ್ಲಿ ಅತಿ ಸಮೀಪದಲ್ಲಿಯೇ ಇದ್ದಿತೆಂದು ತಿಳಿಯುವುದು. ಅಂದರೆ ಧರ್ಮವುರದಲ್ಲಿ ನಿಂತರೆ ಬಂಡೆಗಲ್ಲಿನ ಮೇಲಿರುವ ಚಕ್ರೇಶ್ವರಿ ಹಾಗೂ ಜಿನಬಿಂಬಗಳನ್ನು ಪೂಜಿಸುವುದನ್ನು ನೋಡಬಹುದಾಗಿತ್ತು. ವೃಷಭಾದ್ರಿ ಅಥವಾ ಈಗಿನ ಬೊಮ್ಮಲಮ್ಮಗುಟ್ಟ ಎಂಬ ಬೆಟ್ಟದ ದಕ್ಷಿಣಕ್ಕೆ ಇಷ್ಟು ಹತ್ತಿರದಲ್ಲಿ ಈಗ ಧರ್ಮಪುರ ಅಥವಾ ಧರ್ಮವುರ ಎಂಬ ಹೆಸರಿನ ಗ್ರಾಮವಿರುವುದಿಲ್ಲ. ಆದರೆ ಈಗಿನ ಕುರಿಕ್ಯಾಲ ಎಂಬ ಗ್ರಾಮವು ಶಾಸನದಲ್ಲಿರುವ ಧರ್ಮವುರ ಗ್ರಾಮದ ವರ್ಣನೆಗೆ ಸರಿಹೋಗುತ್ತದೆ. ಮೇಲೆ ಹೇಳಿದಂತೆ ಕುರಿಕ್ಯಾಲ ಗ್ರಾಮವು ಬೊಮ್ಮಲಮ್ಮಗುಟ್ಟದ ದಕ್ಷಿಣಕ್ಕೆ 5-6 ಫರ್ಲಾಂಗಿನಷ್ಟು ದೂರದಲ್ಲಿದೆ.ಆದುದರಿಂದ **ಈಗಿನ ಕುರಿಕ್ಯಾಲ ಗ್ರಾಮ ಹಾಗೂ ಆದರ ಜೊತೆಗಿರುವ ನೇಲಕೊಂಡಪಲ್ಲಿ ಮತ್ತು ಕೊಂಡನಪಲ್ಲಿ ಎಂಬ ಉಪ ಗ್ರಾಮಗಳೂ ಸೇರಿ ಶಾಸನದಲ್ಲಿ ಉಕ್ತವಾದ ಧರ್ಮಪುರ ಅಥವಾ ಧರ್ಮವುರವಾಗಿರಬೇಕೆಂದು ನಮಗನಿಸುವುದು** (ದಪ್ಪಕ್ಷರಗಳು ನನ್ನವು). ಕರೀಂನಗರ ಜಿಲ್ಲೆಯಲ್ಲಿರುವ ಧರ್ಮಪುರ, ಧರ್ಮಾರ ಮುಂತಾದ

7. ಪ್ರಬುದ್ಧ ಕರ್ನಾಟಕ, 50: 3, ಪು. 31-2.

ಊರುಗಳು ಶಾಸನದಲ್ಲಿ ವರ್ಣಿಸಿದ ಧರ್ಮಪುರಕ್ಕೆ ಸರಿಹೋಗುವುದಿಲ್ಲವಾದುದ ರಿಂದ ಅವು ಪಂಪನು ಪಡೆದ ಧರ್ಮಪುರವಲ್ಲವೆಂದು ಹೇಳಬಹುದು. ಡಾ. ವೆಂಕಟ ರಮಣಯ್ಯನವರು ತಮ್ಮ ಲೇಖನದಲ್ಲಿ ಶಾಸನದಲ್ಲಿ ಉಕ್ತವಾದ ವೃಷಭಾದ್ರಿ ಯನ್ನು ಗುರುತಿಸುವುದು ಸಾಧ್ಯವಿಲ್ಲ ಎಂದು ಹೇಳಿ ಅದನ್ನು ಹಾಗೂ ಧರ್ಮ ಪುರವನ್ನು ಗುರುತಿಸುವ ಬಗ್ಗೆ ಮಾಡಿದ ವಿವರವಾದ ಚರ್ಚೆಯು ಸರಿಯಲ್ಲವೆಂದು ನಮ್ಮ ಅಭಿಪ್ರಾಯ.''[8]

ಡಾ. ಗಾಯಿಯವರ ಕೊನೆಯ ವಾಕ್ಯ ಸಾಧುವಾಗಿದೆ. ಆದರೆ ವಾಸ್ತವವಾಗಿ ಧರ್ಮಪುರವು ಒಂದು ಅಗ್ರಹಾರವಾಗಿದ್ದುದರಿಂದ ಅದು ಈಗಿನ ಕುರಿಕ್ಯಾಲ, ನೇಲಕೊಂಡ ಲಪಲ್ಲಿ. ಕೊಂಡನಪಲ್ಲಿ ಎಂಬ ಗ್ರಾಮಗಳ ಸಂಕೀರ್ಣವೆಂದು ಭಾವಿಸುವುದು ಸರಿಯಾಗು ವುದಿಲ್ಲ. ಈ ಊರುಗಳು ಪರಸ್ಪರ ಒಂದೊಂದು ಮೈಲು ದೂರದಲ್ಲಿವೆ ಮತ್ತು ಆ ಇಡೀ ಸಂಕೀರ್ಣ ಇಂದಿನ ಒಂದು ನಗರದಷ್ಟು ದೊಡ್ಡದಾಗುತ್ತದೆ. ''ಈಗಿನ ಕುರಿಕ್ಯಾಲ ಎಂಬ ಗ್ರಾಮವು ಶಾಸನದಲ್ಲಿರುವ ಧರ್ಮಪುರ ಗ್ರಾಮದ ವರ್ಣನೆಗೆ ಸರಿಹೋಗುತ್ತದೆ'' ಎಂದು ಡಾ. ಗಾಯಿಯವರು ಹೇಳಿರುವರಾದರೂ ಅವರು ಪ್ರಾಚೀನ ಸ್ಮಾರಕ ಅಥವಾ ಅವಶೇಷಗಳ ದೃಷ್ಟಿಯಿಂದ ಆ ಗ್ರಾಮವನ್ನು ಪರಿಶೀಲಿಸಿದಂತೆ ತೋರುವುದಿಲ್ಲ.

1970ರಲ್ಲಿ ಕುರಿಕ್ಯಾಲಕ್ಕೆ ಭೇಟಿ ನೀಡಿದ ಡಾ. ಎಂ. ಎಂ. ಕಲಬುರ್ಗಿಯವರು ತಮ್ಮ ಪ್ರವಾಸ ಕಥನರೂಪದ ಲೇಖನದಲ್ಲಿ[9] ಹೀಗೆ ಹೇಳಿದ್ದಾರೆ:

''ಗುಡ್ಡದ ದಕ್ಷಿಣಕ್ಕೆ ಒಂದು ಮೈಲು ದೂರದಲ್ಲಿ ಕುರ್ಕಿಯಾಲ್ ಎಂಬ ಗ್ರಾಮ ವಿದೆ. ಇದೇ ಪ್ರಾಚೀನ ಧರ್ಮಪುರವಾಗಿರಬಹುದೇ? ಎಂದು ಹಳ್ಳಿಯನ್ನೆಲ್ಲಾ ಸುತ್ತಾಡಿದೆವು. ಅಲ್ಲಿ ಪ್ರಾಚೀನ ಅವಶೇಷಗಳ ಒಂದು ತುಣುಕೂ ಕಂಡು ಬಾರದ ಕಾರಣ ಅದು ಇತ್ತೀಚಿಗೆ ಹುಟ್ಟಿದ ಹಳ್ಳಿಯೆಂದು ಖಚಿತವಾಯಿತು. ಊರ ಜನ ರನ್ನು ವಿಚಾರಿಸಲಾಗಿ ಗುಡ್ಡದ ಮಗ್ಗುಲಲ್ಲಿ ದಕ್ಷಿಣಕ್ಕೆ ಅಗೆದರೆ ಈಗಲೂ ಒಂದು ಗ್ರಾಮವಿದ್ದ ಅವಶೇಷಗಳು ದೊರೆಯುವವೆಂದು ತಿಳಿದುಬಂದಿತು. ಗುಡ್ಡದ ಸಮೀಪ ಕೆರೆಯಿದೆ. ಕೆರೆಯ ನೆರೆಯಲ್ಲಿ ಗ್ರಾಮವಿರುವದೂ ಸ್ವಾಭಾವಿಕ. ಆದಕ್ಕಾಗಿ ಗುಡ್ಡದ ದಕ್ಷಿಣಕ್ಕೆ ಹೊಂದಿಯಿದ್ದ ಧರ್ಮಪುರವು ಈಗ ಭೂಗತವಾಗಿರ

---

8. ಪ್ರಬುದ್ಧ ಕರ್ಣಾಟಕ, 53: 4. (ಜನವರಿ. 1972), ಪು. 80–1. ಇದರ ಜೊತೆಗೆ ಅವರದೇ ಇನ್ನೊಂದು ಲೇಖನವನ್ನೂ ನೋಡಿ. ಪ್ರಬುದ್ಧ ಕರ್ಣಾಟಕ, 50: 4 (ಡಿಸೆಂಬರ್, 1968).

9. ಕರ್ಮವೀರ, 24. 5. 1970, ಪು, 21. ಬೊಮ್ಮಲಮ್ಮಗುಟ್ಟವನ್ನು ಹತ್ತಿ ಅಲ್ಲಿನ ಶಾಸನ ವನ್ನು ಪರಿಶೀಲಿಸಿ, ಪಂಪನ ಇನ್ನೊಂದು ಶಾಸನವಿರಬಹುದೆಂದು ಬಂಡೆಗಳ ಮಧ್ಯೆ ಹುಡುಕಿ, ಬೆಟ್ಟದಿಂದ ಇಳಿದು ಕುರಿಕ್ಯಾಲ ಗ್ರಾಮಕ್ಕೆ ಸಂಜೆ ಹೊತ್ತಿಗೆ ಬಂದುದರ ವರ್ಣನೆ ಮೇಲಿನ ಉದ್ಧರಣೆಯಲ್ಲಿದೆ. ಈ ಉದ್ಧರಣೆಯೊಡನೆ ಲೇಖನ ಮುಕ್ತಾಯಗೊಳ್ಳುತ್ತದೆ.

ಬೇಕಿತ್ತು. ಅಲ್ಲಿ ಭೂಶೋಧನ ಕಾರ್ಯ ನಡೆದರೆ ಧರ್ಮಪುರ ಕಂಡುಬಂದೀತು ಎಂದು ಬಗೆಯುತ್ತಾ ಐದು ಗಂಟೆಗೆ ಕಾರು ಹತ್ತಿದೆವು. ಕಾರು ವೇಮುಲವಾಡದತ್ತ ನಡೆಯಿತು."

ಡಾ. ಕಲಬುರ್ಗಿ ಹಳ್ಳಿಯವರ ಬಾಯಿಂದ ಬಂದ ಸೂಚನೆಯನ್ನನುಸರಿಸಿ ಮತ್ತೆ ಒಂದಕ್ಕೆ ಕೇವಲ ಒಂದು ಕಿಲೋಮೀಟರ್ ದೂರದ ನಿವೇಶನಕ್ಕೆ ಹೋಗದೆ, ಜೊಮ್ಮಲಮ್ಮ ಗುಟ್ಟದ ದಕ್ಷಿಣ ತಪ್ಪಲಲ್ಲಿ ಧರ್ಮಪುರವಿರಬೇಕೆಂಬ ಊಹೆಯನ್ನು ಮಾಡಿಕೊಂಡು ಹಾಗೆಯೇ ವಾಪಸ್ ಬಂದುದರಿಂದ ಒಂದು ಒಳ್ಳೆಯ ಸಂಶೋಧನೆಯ ಅವಕಾಶವನ್ನು ಕಳೆದುಕೊಂಡಿದ್ದಾರೆ. ಅವರು ಊಹಿಸಿದ ನಿವೇಶನವೇ ಧರ್ಮಪುರವೆಂಬಲ್ಲಿ ಅನುಮಾನವಿಲ್ಲ (ಮುಂದೆ ನೋಡಿ). ಸಂಶೋಧನೆಯಲ್ಲಿ ತಾಳ್ಮೆ, ಉದ್ವೇಗರಹಿತ ಶೀಲ, ಪ್ರತ್ಯಕ್ಷ ಪರಿಶೀಲನೆಯ ತುಡಿತ, ಎಚ್ಚರಿಕೆಯ ಪರೀಕ್ಷೆ ಇಲ್ಲದಿದ್ದರೆ ಅನಾಹುತಗಳಾಗುವ ಸಂಭವವಿರುತ್ತದೆ. ಹಳ್ಳಿಯವರು ಹೇಳಿದ್ದು ನಿಜವೇ ? ಅಲ್ಲಿ ನೆಲದ ಮೇಲೆ ಏನಾದರೂ ಅವಶೇಷಗಳು ದೊರಕುತ್ತವೆಯೋ?[10] ಆ ಅವಶೇಷಗಳ ಕಾಲ ಯಾವುದು ಇತ್ಯಾದಿ ಸಂದೇಹಗಳನ್ನು ಮುಂದಿಟ್ಟುಕೊಂಡು ಅವರು ಆ ನಿವೇಶನವನ್ನು ಪರಿಶೀಲಿಸಿದ್ದರೆ ಅವರು ಅದನ್ನು ಖಚಿತವಾಗಿ ಗುರುತಿಸಬಹುದಿತ್ತು. ಹಳ್ಳಿಯವರು ಹೇಳಿದುದು ಮಟ್ಟಿನ ಸಂಶೋಧನೆಗೆ ಒಂದು ಸೂಚನೆಯಾಗಬಹುದೆ (clue) ಹೊರತು ಒಂದು ನಿರ್ಣಯಕ್ಕೆ ಬರಲು ಸಾಕ್ಷ್ಯಾಧಾರವಾಗಲಾರದು (evidence). ಅಗೆದರೆ ಚಿನ್ನ ಸಿಗುತ್ತದೆಂಬ ಹಳ್ಳಿಗರ ಮಾತನ್ನು ಸುಮ್ಮನೆ ಕೇಳಿಕೊಂಡು ಬಂದ ಭೂಗರ್ಭಶೋಧಕನ ಬರಹಕ್ಕೆ ಏನು ಬೆಲೆಯೋ ಅಷ್ಟೇ ಮೇಲಿನ ಮಾತುಗಳಿಗೆ ಬೆಲೆ. ಅಲ್ಲಿ ಬಂಗಾರ ಸಿಗಬಹುದು, ಕಾ

10. ಗುಡ್ಡದಿಂದ ಇಳಿದು ಬರುವಾಗ ತಮಗೆ ಇಟ್ಟಿಗೆ ಮಡಕೆ ಚೂರುಗಳು ಕಂಡುಬಂದುವೆಂದು ಈಚೆಗೆ (ಕನ್ನಡಪ್ರಭ, 5. 3. 1985) ಹೇಳಿದ್ದಾರೆ. ತಮ್ಮ ಭಾವುಕವಾದ ವಿಸ್ತಾರವಾದ ಪ್ರವಾಸಕಥನದಲ್ಲಿ ಏನೇನೋ ವಿವರಗಳನ್ನು ಬಿಡಿಸಿಟ್ಟವರು ಈ ಸಂಗತಿಯನ್ನು ಹೇಳದೆ ಏಕೆ ಬಿಟ್ಟರು ಎಂಬ ಪ್ರಶ್ನೆ ಏಳುತ್ತದೆ. ಕುರಿಕ್ಯಾಲ ಗ್ರಾಮಕ್ಕೆ ಹೋದೆವಷ್ಟೆ. ತಾವು ಕಂಡ ಹಳೆಯ ನಿವೇಶನದ ಬಗ್ಗೆ ಪ್ರಸ್ತಾಪಿಸಿದಂತೆಯೂ ತೋರುವುದಿಲ್ಲ. ಅಲ್ಲದೆ, ಹಳ್ಳಿಯ ಜನ ಆ ನಿವೇಶನದಲ್ಲಿ ಅಗೆದರೆ ಪ್ರಾಚೀನ ವಸ್ತುಗಳು ದೊರಕುತ್ತವೆ ಎಂದು ಹೇಳಿದಾಗ, ತಾವು ಮೊದಲೇ ನೋಡಿದ್ದ ಅವಶೇಷಗಳನ್ನು ಸ್ಮರಿಸಿಕೊಂಡ ಬಗ್ಗೆಯೂ ಸೂಚನೆಯಿಲ್ಲ. ಇವೆಲ್ಲವೂ ಅವರ ಹೇಳಿಕೆಯನ್ನು ಸಂದೇಹದಲ್ಲಿ ನಿಲ್ಲಿಸುತ್ತದೆ.

ಒಂದು ವೇಳೆ ಕಂಡದ್ದು ನಿಜವಾದರೂ, ಅವುಗಳ ಕಾಲವನ್ನು ನಿರ್ಧರಿಸಿಕೊಳ್ಳಲು ಯಾವುದೇ ಪ್ರಯತ್ನವನ್ನೂ ಅವರು ಮಾಡಿಲ್ಲ. ಧರ್ಮಪುರದ ಶೋಧದ ಚರಿತ್ರೆಯನ್ನು (Historiography) ಅವರು 1970ರಲ್ಲಿ ಏನು ಬರೆದರು, ಮತ್ತು ಧರ್ಮಪುರದ ನನ್ನ ಶೋಧ ಪತ್ರಿಕೆಗಳಲ್ಲಿ ಪ್ರಕಟವಾಗುವವರೆಗೆ (ಕನ್ನಡಪ್ರಭ, 16. 2. 85) ಅವರು ಏನೆ ಬರೆದಿದ್ದಾರೆ, ಅಷ್ಟನ್ನು ಮಾತ್ರ ನಾನು ಗಂಭೀರವಾಗಿ ಲಕ್ಷಿಸುತ್ತೇನೆ. ಈ ಸಂಪ್ರಬಂಧದಲ್ಲಿ.

ಬರ್ಗಿರ ಸಿಗಬಹುದು. ಪಳ್ಳಿಯವರು ದೊರಕುತ್ತವೆಯೆಂದು ಹೇಳಿದ ಅವಶೇಷಗಳು ಇನ್ನೂರು ಮುನ್ನೂರು ವರ್ಷದ ಹಿಂದಿನವಾಗಿದ್ದರೆ, ಆಗ ? ಡಾ. ಕಲಬುರ್ಗಿಯವರ ಊಹೆಯ ಮಾತುಗಳು ಹೆಚ್ಚೆಂದರೆ ಧರ್ಮಪುರದ ಶೋಧದಲ್ಲಿ ಒಂದು ಪ್ರಮೇಯದ (hypothesis) ಮಟ್ಟದಲ್ಲಿ ನಿಲ್ಲುತ್ತವೆ. (''ಭೂಗತವಾಗಿರಬೇಕೆನಿಸಿತು'', ''ಕಂಡು ಬಂದೀತು'' ಎಂಬಂತಹ ಸಂದೇಹದ ಮಾತುಗಳನ್ನು ಅವರ ಬರಹದಲ್ಲಿ ಗಮನಿಸಬೇಕು. ಕುರಿಕ್ಯಾಲ ಈಚಿನ ಹಳ್ಳಿಯೆಂಬುದು ಅವರಿಗೆ ''ಖಚಿತ''ವಾಗಿದೆ: ಧರ್ಮಪುರದ ನಿವೇಶನದ ಬಗ್ಗೆ ಇನ್ನೂ ಸಂದೇಹವಿದೆ). ಪ್ರಮೇಯವು ಒಂದು ಸಮಸ್ಯೆಗೆ ಇರುವ ಸಾಧ್ಯ ಉತ್ತರಗಳಲ್ಲಿ ಒಂದೇ ಹೊರತು, ಉತ್ತರವಲ್ಲ. ಹೆಚ್ಚಿನ ಪ್ರಮಾಣಾಧಾರಗಳಿಂದ ಪೋಷ್ಯವಾದಾಗ ಮಾತ್ರ ಅದು ನಿರ್ಣಯವೆನ್ನಿಸಿಕೊಳ್ಳುತ್ತದೆಯೆಂಬುದನ್ನು ಸಂಶೋಧಕರು ಬಲ್ಲರು.

ಧರ್ಮಪುರದ ನಿವೇಶನವನ್ನು ಗುರುತಿಸುವ ಪ್ರಮುಖ ಉದ್ದೇಶವನ್ನು ಹೊಂದಿ ಬೊಮ್ಮಲಮ್ಮ ಗುಟ್ಟಕ್ಕೆ ನಾನು ಹೋಗುವ (4–5. 2. 1985) ಮುನ್ನವೇ ಆ ಊರು ಆ ಗುಡ್ಡದ ದಕ್ಷಿಣಕ್ಕೆ ಅನತಿ ದೂರದಲ್ಲಿದ್ದಿರಬೇಕೆಂದೂ ಆ ಜಾಗದಲ್ಲಿ ಕೊನೆಯ ಪಕ್ಷ ಎರಡು ಕೆರೆಗಳಿದ್ದಿರಬೇಕೆಂದೂ (ಮುಂದೆ ನೋಡಿ) ಮತ್ತು ಆ ಕೆರೆಗಳ ಹಿಂದಿನ ಜಮೀನು ಬ್ರಾಹ್ಮಣರ ಉಂಬಳಿ ಭೂಮಿಗಳಾಗಿದ್ದಿರಬೇಕೆಂದೂ ಕಲ್ಪಿಸಿಕೊಂಡಿದ್ದೆ.[11] ಬೊಮ್ಮಲಮ್ಮ ಗುಟ್ಟದ ದಕ್ಷಿಣದ ತಪ್ಪಲಲ್ಲಿ ಮೊದಲಿಗೇ ನಮಗೆ ಸಾಕಷ್ಟು ಸಂಖ್ಯೆಯ ಇಟ್ಟಿಗೆ ಮಡಕೆ

---

11. ಈ ಸಂದರ್ಭದಲ್ಲಿ ನಾನು ಡಾ. ಕಲಬುರ್ಗಿಯವರ 'ಕರ್ಮವೀರ'ದ ಲೇಖನವನ್ನು ಅದು ಪ್ರಕಟವಾದಾಗ ಓದಿದ್ದರೂ ಅದರ ವಿವರಗಳು ಸಂಪೂರ್ಣ ಮರೆತುಹೋಗಿದ್ದುವೆಂಬುದನ್ನು ಇಲ್ಲಿ ದಾಖಲು ಮಾಡಬಯಸುತ್ತೇನೆ. ಅವರ 'ಕರ್ಮವೀರ'ದ ಲೇಖನ ಮುಂದೆ ಅವರ ಲೇಖನಗಳ ಸಂಗ್ರಹಗಳಲ್ಲಿ ಪ್ರಕಟವಾಗಿಲ್ಲ. ವಿದ್ವತ್ ಪತ್ರಿಕೆಯಲ್ಲಿ ಅಥವಾ ಗ್ರಂಥದಲ್ಲಿ ಪ್ರಕಟವಾಗುವ ಸಂಶೋಧನೆಯ ಬರಹಕ್ಕೂ ದಿನಪತ್ರಿಕೆ ವಾರಪತ್ರಿಕೆಗಳಲ್ಲಿ ಪ್ರಕಟವಾಗುವ ಜನಪ್ರಿಯ ಲೇಖನಕ್ಕೂ ನಾವು ವ್ಯತ್ಯಾಸವನ್ನು ಮಾಡಬೇಕು. ದಿನಪತ್ರಿಕೆ ಅಥವಾ ವಾರಪತ್ರಿಕೆಗಳಲ್ಲಿ ಬಂದುದನ್ನು ಯಾರೂ ಸಂಗ್ರಹಿಸಿ ಇಡುವುದಿಲ್ಲ ಮತ್ತು ಅವುಗಳ ವಿವರಗಳು ಮರೆತುಹೋದರೆ ಕ್ಷಮ್ಯ. ಆದರೆ ಅದೇ ಮಾತನ್ನು ಮೊದಲ ವರ್ಗದ ಬರಹಗಳಿಗೆ ಅನ್ವಯಿಸಲಾಗುವುದಿಲ್ಲ.

ಹೈದರಾಬಾದ್ ಪುರಾತತ್ವ ವಿಭಾಗದ ನಿವೃತ್ತ ಶಾಸನತಜ್ಞ ಶ್ರೀ ಪಿ. ವಿ. ಪರಬ್ರಹ್ಮ ಶಾಸ್ತ್ರಿಯವರಿಂದಾಗಿ ಅದೇ ವಿಭಾಗದ ಡಾ. ರಾಮಚಂದ್ರಮೂರ್ತಿಗಳು ಕುರಿಕ್ಯಾಲದ ಭೇಟಿಯ ಸಂದರ್ಭದಲ್ಲಿ ನನ್ನ ಜೊತೆ ಬರಲು ಸಾಧ್ಯವಾಯಿತು. ಅಲ್ಲದೆ ನನ್ನ ಜೊತೆ ಇದ್ದು ಹಲವು ರೀತಿಗಳಲ್ಲಿ ಸಹಕರಿಸಿ, ಚಿತ್ರಗಳನ್ನು ತೆಗೆದುಕೊಟ್ಟವರು ಡಾ. ಆರ್, ಶೇಷಶಾಸ್ತ್ರಿ (ಕನ್ನಡ ಅಧ್ಯಾಪಕ, ಕೃಷ್ಣದೇವರಾಯ ವಿಶ್ವವಿದ್ಯಾಲಯ, ಅನಂತಪುರ). ಇಬ್ಬರಿಗೂ ನಾನು ಕೃತಜ್ಞ.

ದಕ್ಷಿಣದಲ್ಲಿ 'ಪಾತಚೆರುವು' (=ಹಳೆಯ ಕೆರೆ) ಎಂಬ ಸಾಕಷ್ಟು ದೊಡ್ಡ ಕೆರೆ ಇದೆ (ಚಿತ್ರ 6). ಪಂಪನಿಗಿಂತ ಹಿಂದೆ ಆ ಕೆರೆಯನ್ನು ಅಗ್ರಹಾರಕ್ಕಾಗಿ ರಾಜನೊಬ್ಬ ಕಟ್ಟಿಸಿದ್ದರೆ ಅದು ದೊಡ್ಡದೇ ಆಗಿರಬೇಕು. ಆದ್ದರಿಂದ 'ಪಾತಚೆರುವು' (ಹೆಸರು ಗಮನಾರ್ಹ) ಪಂಪನಿಗೆ ಧರ್ಮಪುರವು ದತ್ತಿಯಾಗಿ ಬಂದಾಗಲೇ ಇದ್ದ ಕೆರೆ, ಮತ್ತು ಮೇಲಿನ ಎರಡನೆಯ ಪದ್ಯದಲ್ಲಿ ವರ್ಣಿತವಾಗಿರುವ ಕೆರೆ ಅದೇ. ಈಗಿನ ಧರ್ಮಪುರದ ನಿವೇಶನವನ್ನು ಪರಿಶೀಲಿಸಿದರೆ, ಧರ್ಮಪುರದ ಜಮೀನುಗಳಿಗೆ ನೀರುಣ್ಣಿಸುತ್ತಿದ್ದ ಕೆರೆ ಇದೇ ಆಗಿದೆ. ಗುಡ್ಡದ ಹಿಂಭಾಗದ ಕಣಿವೆಯಲ್ಲಿ ಉತ್ತರಕ್ಕಿರುವ ಉಪನ್‌ಚೆರುವು ಬಹು ಚಿಕ್ಕ ಕೆರೆ (ಚಿತ್ರ 7) ಮತ್ತು ಜಿನವಲ್ಲಭ ತನ್ನ ಅಣ್ಣನ ಹೆಸರಲ್ಲಿ ಕಟ್ಟಿಸಿದ ಕವಿತಾಗುಣಾರ್ಣವ ಕೆರೆ ಬಹುಶಃ ಇದೇ. ಈ ಕೆರೆಯ ಪಕ್ಕದಲ್ಲೇ ಗುಡ್ಡದಲ್ಲಿ ಹಲವು ಗುಹೆಗಳಿದ್ದು ಅಲ್ಲಿ ಜಿನಮುನಿಗಳು ವಾಸವಾಗಿದ್ದರೆಂಬುದಕ್ಕೆ ಕುರುಹುಗಳಿವೆ (ಪಾತಚೆರುವು ಬಳಿ ಯಾವುದೇ ಗುಹೆಗಳಿಲ್ಲ). ಜಿನವಲ್ಲಭ ಈ ಕೆರೆಯನ್ನು ಜಿನಮುನಿಗಳಿಗಾಗಿ ಮತ್ತು ಜೈನ ಯಾತ್ರಾರ್ಥಿಗಳಿಗಾಗಿ ಕಟ್ಟಿಸಿರುವ ಸಾಧ್ಯತೆ ಇದ್ದು, ಅದರ ಪಕ್ಕದಲ್ಲೋ ಹಿಂಭಾಗದಲ್ಲೋ ಯಾತ್ರಾರ್ಥಿಗಳ ವಿಶ್ರಾಮಕ್ಕೆ ಮದನ ವಿಲಾಸ ಎಂಬ ಬನವನ್ನು ಮಾಡಿಸಿರಬಹುದು. (ಬನ ಇದ್ದುದಕ್ಕೆ ಈಗ ಕುರುಹುಗಳನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ.) ದಕ್ಷಿಣದ ಪಾತಚೆರುವು ಉತ್ತರದ ಉಪನ್‌ಚೆರುವುಗಳ ಮಧ್ಯದ ತಪ್ಪಲಿನ ಎತ್ತರದ ಬಯಲೇ ಧರ್ಮಪುರದ ನಿವೇಶನ. ಉಪನ್‌ಚೆರುವಿನ ನೀರಿನಿಂದ ಸ್ವಲ್ಪ ಜಮೀನು ನೀರನ್ನು ಪಡೆಯುತ್ತಿದೆ.

ಜೈನಗುಹೆಗಳು

ಬೊಮ್ಮಲಮ್ಮಗುಟ್ಟದಲ್ಲಿ ಹಲವು ಜೈನಗುಹೆಗಳಿದ್ದುದನ್ನು ಯಾರೂ ಇಲ್ಲಿಯವರೆಗೆ ಗಮನಿಸಿಲ್ಲ. ಬೊಮ್ಮಲಮ್ಮಗುಟ್ಟದಲ್ಲಿ (ಆಗಿನ ವೃಷಭಾದ್ರಿ) ಜಿನವಲ್ಲಭನು ತೀರ್ಥಂಕರರ ವಿಗ್ರಹಗಳನ್ನು ಚಕ್ರೇಶ್ವರಿಯ ಪ್ರತಿಮೆಯನ್ನೂ ಮಾಡಿಸಿ ಜಿನಾಲಯವನ್ನು ಕಟ್ಟಿಸಿದ ಮೇಲೆ ಅಲ್ಲಿ ನಡೆಯುತ್ತಿದ್ದ ಪೂಜಾದಿಗಳನ್ನು ನೋಡಲು ಬಹುಸಂಖ್ಯೆಯ ಜೈನಮುನಿಗಳೂ ಶ್ರಾವಕರೂ ಇತರ ಪ್ರಜೆಗಳೂ ಬಂದರೆಂದು ಶಾಸನವು ಹೇಳುತ್ತದೆ.

> ಭ್ರಾತರ್ಧರ್ಮಪುರಂ ಪ್ರಯಾಮ ಕಮತೋ ಜೈನಾಭಿಷೇಕೋತ್ಸವ
> ಕ್ಷೀರ ಪ್ಲಾವಿತ ತುಂಗಶೃಂಗ ವೃಷಭಕ್ಷೋಣೀಧ್ರಮೀಕ್ಷಾಮಹೇ
> ಯಾತ್ರಾಯಾತ ಸಮಸ್ತ ಭವ್ಯ ಜನತಾ ಸನ್ಮಾನ ದಾನೋನ್ನತಂ
> ಪಂಪಾರ್ಯಾನುಜಮತ್ರ ಭೀಮತನುಜಂ ಸಮ್ಯಕ್ತ್ವರತ್ನಾಕರಂ ॥
>
> ಅಜಸ್ರ ಜಿನವಂದನಾಗತ ಮುನೀಶ್ವರ ಶ್ರಾವಕ
> ಪ್ರಜಾಸ್ತವರವ ಪ್ರತಿಧ್ವನಿತ ಕೋಟಾವಳೈಃ
> ಅಧಿಷ್ಠಿತದಿಗಂಬರೋ ವೃಷಭಶೈಲ ಏಷ ಸ್ವಯಂ
> ಪರಾಂ ವಹತಿ ವಾಚಕಾಭರಣಕೀರ್ತಿಮಾಕಲ್ಪತಃ ॥

ಬೊಮ್ಮಲಮ್ಮಗುಟ್ಟದ ಪೂರ್ವದಿಕ್ಕಿನಲ್ಲಿ ಬೆಟ್ಟದ ಅರ್ಧ ಭಾಗದಲ್ಲಿ ಗುಹೆಯೊಂದಿದ್ದು (ಚಿತ್ರ 8) ಅದರ ಮುಂದೆ ಗಿಡಮರ ಬೆಳೆದುಕೊಂಡಿವೆ. ಅಲ್ಲೇ ಕೆಳಗೆ ಗುಹೆಯೊಂದಿದೆ (ಚಿತ್ರ 9). ಅದರ ಒಂದೆರಡು ಪಾರ್ಶ್ವಗಳನ್ನು ಮೇಲಿನಿಂದ ನೀರು ಹರಿದು ಬಾರದಂತೆ ಮಣ್ಣುಗೋಡೆಯಿಂದ ಮುಚ್ಚಿದ್ದ ಕುರುಹುಗಳಿವೆ. ಗುಡ್ಡದ ಹಿಂಭಾಗದ ಉತ್ತರ ಪಾರ್ಶ್ವದಲ್ಲಿ ಎರಡು ಗುಹೆಗಳಿವೆ: ಒಂದು ಗುಹೆಗಂತೂ ಹತ್ತಿಹೋಗಲು ಮೆಟ್ಟಿಲುಗಳನ್ನು ಮಾಡಿರುವುದು ಸ್ಪಷ್ಟವಾಗಿದೆ. (ಎಲ್ಲ ಗುಹೆಗಳಲ್ಲೂ ಮಣ್ಣಿನ ಬೋಕಿ ಚೂರುಗಳು ಯಥೇಷ್ಟವಾಗಿದ್ದು, ಅವು ಪ್ರಾಚೀನ ಮನುಷ್ಯ ವಸತಿಯಾಗಿರುವ ಲಕ್ಷಣಗಳಿವೆ.) ಉತ್ತರ ಪಾರ್ಶ್ವದ ಒಂದು ಕಡೆ ದೊಡ್ಡ ಬಂಡೆಗಲ್ಲಿನ ಮೇಲೆ ಮೆಟ್ಟಿಲುಗಳನ್ನು ಕೊರೆದಿದೆ. ಆ ಜಾಗದಲ್ಲಿ ಬೆಟ್ಟದ ಮೇಲಕ್ಕೆ ಹೋಗಬಾರದೆಂದೂ ಹೋದರೆ ಜನ ಸಾಯುತ್ತಾರೆಂದೂ ನಂಬಿಕೆ ಇದೆ. ಹಿಂದೆ ಗುಹೆಗಳಲ್ಲಿದ್ದ ದಿಗಂಬರ ಮುನಿಗಳು ಬೆಟ್ಟದ ಮೇಲಿನ ಜಿನಾಲಯಕ್ಕೆ ಹೋಗುವ ದಾರಿ ಅದಾಗಿದ್ದು, ಅವರಿಗಾಗಿ ಮೀಸಲಾಗಿದ್ದ ಆ ಮಾರ್ಗವನ್ನು ಜನಸಾಮಾನ್ಯರಿಗೆ ನಿಷೇಧಿಸಲಾಗಿತ್ತೆಂದು ತೋರುತ್ತದೆ. ಗುಹೆಗಳಿರುವ ಉತ್ತರ ಪಾರ್ಶ್ವದ ಕೆಳಗೆ ತಪ್ಪಲಿನಲ್ಲೇ ಕವಿತಾಗುಣಾರ್ಣವ ಕೆರೆ (ಈಗಿನ ಉದನ್‌ಚೆರವು) ಇತ್ತು.

'ತ್ರಿಭುವನತಿಲಕ ಬಸದಿ'

ಬೆಟ್ಟದ ತಪ್ಪಲಲ್ಲಾಗಲಿ ಬೆಟ್ಟದ ಮೇಲಾಗಲಿ ಜಿನವಲ್ಲಭ ಕಟ್ಟಿಸಿದ ತ್ರಿಭುವನತಿಲಕ ಬಸದಿಯ ಅವಶೇಷಗಳು ಎಲ್ಲೂ ಕಾಣಿಸಲಿಲ್ಲ. ಶಾಸನವಿರುವ ಸಿದ್ಧ ಶಿಲೆಯ ಹಿಂಭಾಗದ ಬೆಟ್ಟದ ತುದಿಗೆ ಜನಸಾಮಾನ್ಯರು ಹೋಗಲು ಪಶ್ಚಿಮದಿಂದ ದಾರಿ ಮಾಡಿದ್ದಾರೆ. ಅಲ್ಲಲ್ಲಿ ಬಂಡೆಗಳಿಗೆ ಮೆಟ್ಟಿಲುಗಳಿವೆ. ಬೆಟ್ಟದ ಮೇಲೆ ಹಳೆಂಟು ಒರಳು ಗುಂಡಿಗಳಿರುವುದು ಅಲ್ಲಿಗೆ ಜನರು ಬಂದು ಹೋಗುತ್ತಿದ್ದರೆಂಬುದಕ್ಕೆ ಚಿಹ್ನೆಗಳಾಗಿವೆ. ಅಲ್ಲೇ ಎರಡು ಮನುಷ್ಯ ನಿರ್ಮಿತ ದೋಣೆಗಳಿವೆ (ಚಿತ್ರ 10). ನಾವು ಹೋದಾಗ ಕೆರೆಗಳೂ ಆ ದೋಣೆಗಳೂ ಪೂರ್ತಿ ಬಣಗಿಹೋಗಿದ್ದರೂ. ಒಳ್ಳೆಯ ಮಳೆ ಆದಾಗ ವರ್ಷದ ಬಹುಭಾಗ ಅವುಗಳಲ್ಲಿ ನೀರು ಇದ್ದಿರಬೇಕು. ಆ ದೋಣೆಗಳ ಸಮೀಪ ಇಡೀ ಬೆಟ್ಟದ ಮೇಲೆ ಏಕೈಕವಾದ ಸಮತಟ್ಟಾದ ಪ್ರದೇಶವಿದ್ದು, ಈಗ ಅಲ್ಲಿ ಮಣ್ಣು ಬಿದ್ದು ಹುಲ್ಲು ಬೆಳೆದಿದೆಯಾದರೂ ಅಲ್ಲಿ ತ್ರಿಭುವನತಿಲಕ ಬಸದಿ ಇದ್ದಿರಬೇಕೆಂದು ಊಹಿಸುವ ಮನಸ್ಸಾಗುತ್ತದೆ. ಏಕೆಂದರೆ ತುದಿಯ ಬಯಲ ಪ್ರದೇಶದಿಂದ ಕೆಳಗಿಳಿಯಲು ಪಕ್ಕದ ಕಡಿದಾದ ಬಂಡೆಯಲ್ಲಿ ಚಿಕ್ಕ ಚಿಕ್ಕ ಮೆಟ್ಟಿಲುಗಳನ್ನು ಕೊರೆದಿದ್ದಾರೆ. ಆ ಬಯಲು ಬೆಟ್ಟದ ಪೂರ್ವದ ಅಂಚಿನಲ್ಲಿ ಮತ್ತು ತ್ರಿಭುವನತಿಲಕ ಬಸದಿ ಅಲ್ಲಿ ಇದ್ದಿರಬೇಕು ಎಂಬ ಊಹೆಗೆ ಒರಳುಗುಂಡಿಗಳು, ದೋಣೆಗಳು, ಮೆಟ್ಟಿಲುಗಳು ಸಾಕ್ಷಿಯಾಗಿವೆ. ಅಲ್ಲಿ ಯಾವ ಕಟ್ಟಡವೂ ಇರದಿದ್ದರೆ ಅವುಗಳ ಅಸ್ತಿತ್ವಕ್ಕೆ ಬೇರೆ ಕಾರಣವೇ ಇರುವುದಿಲ್ಲ. ತ್ರಿಭುವನತಿಲಕ ಬಸದಿಯು ಆದಿವೃಷಭ ತೀರ್ಥಂಕರನದಾಗಿರಬೇಕು. ಶಾಸನದ ಈ ಪದ್ಯವನ್ನು ಗಮನಿಸಿ–

ಇದು ಕವಿತಾ ಗುಣಾರ್ಣವನ ಕೀರ್ತಿಯ ಮೂರ್ತಿವೊಲಾಗಿ ದಕ್ಷಿಣಾ
ರ್ಧದ ವೃಷಭಾದ್ರಿಯ[ಕ್ಕೆ] ವೃಷಭೇಶ್ವರ ಬಿಂಬ ಸನಾಥ ಮೆಂಬಲಂ
ಪೊಡವೆ ನಿಜದ್ವಿಜಾವಸಥಪರ್ವತಮಂ ಜಿನಚೈತ್ಯದಾಗೆ ಮಾ
ಡಿದ ಜಿನವಲ್ಲಭಂಗೆ ಜಿನವಲ್ಲಭನಪ್ಪುದು ಮೊಂದು ಚೋ[ಜೋ]ದ್ಯಮೋ ॥

ಆ 'ದ್ವಿಜಾವಸಥಪರ್ವತ' ಅಥವಾ ಅಗ್ರಹಾರದ ಬೆಟ್ಟವು ಮೊದಲು ಅನಾಥವಾಗಿದ್ದು, ಈಗ ಜಿನವಲ್ಲಭ ಹೊಸದಾಗಿ ಮಾಡಿಸಿದ ವೃಷಭೇಶ್ವರ ಪ್ರತಿಮೆಯಿಂದ ಸನಾಥವಾಗಿದೆ. ಬೆಟ್ಟದ ಮೇಲೆ ಬಸದಿಯಿತ್ತು ಎಂಬುದಕ್ಕೆ ಇದೂ ಸಾಕ್ಷಿಯಾಗಿದೆ. ಬೆಟ್ಟದ ತುದಿಯ ಬಸದಿಯಲ್ಲಿ ಆದಿವೃಷಭ ತೀರ್ಥಂಕರನ ವಿಗ್ರಹ; ಸಿದ್ಧ ಶಿಲೆಯ ಮೇಲೆ ಆದಿವೃಷಭ ತೀರ್ಥಂಕರನ ಯಕ್ಷ ಚಕ್ರೇಶ್ವರಿ. "ಪಂಪನಿಗೆ ಧರ್ಮಪುರವು ದತ್ತಗ್ರಾಮವಾಗಿ ಸೇರಿದ ಮೇಲೆ ಆ ವೈದಿಕ ಅಗ್ರಹಾರದಲ್ಲಿ ಜೈನಧರ್ಮದ ಪ್ರಭಾವವು ಬೆಳೆದು ಅದು ಸುತ್ತ ಮುತ್ತ ಕೂಡ ವ್ಯಾಪಿಸಿರಬೇಕು ಎಂಬುದನ್ನಿದು ಸೂಚಿಸುತ್ತದೆ" ಎಂಬ ಮತ್ತು "ವೃಷಭಗಿರಿ ಒಂದು ಖ್ಯಾತ ಜೈನ ಕ್ಷೇತ್ರವೆನ್ನಿಸಿದ್ದು ಜಿನವಲ್ಲಭನ ಪರಿಶ್ರಮದಿಂದ" ಎಂಬ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಯವರ ಮೇಲಿನ ಪದ್ಯದ ವ್ಯಾಖ್ಯಾನವು ಸರಿಯಾಗಿದೆ.[16] ಆ ಬಯಲಿನ ಮಣ್ಣನ್ನು ಅಗೆದರೆ ಅಥವಾ ಅಕ್ಕ ಪಕ್ಕದ ಆಳವೂ ದುರ್ಗಮವೂ ಆದ ಬಂಡೆಗಳ ಸಂದುಗೊಂದುಗಳಲ್ಲಿ ಹುಡುಕಿದರೆ ಆ ಬಸದಿಯ ಅವಶೇಷಗಳು ಸಿಗಬಹುದು.

ಜಿನವಲ್ಲಭನ ಈ ಕೆಳಗಿನ ಮಾತುಗಳಲ್ಲಿ ಅವನು ಆ ಬೆಟ್ಟದ ಮೇಲೆ ಮಾಡಿಸಿದ ಸ್ಮಾರಕಗಳ ಒಂದು ಕ್ರಮಾನುಗತವಾದ ಪಟ್ಟಿಯಿದೆ:[17]

"....ಜಿನವಲ್ಲಭಂ ಸಬ್ಬಿನಾಡ ನಟ್ಟ ನಡುವಣ ಧರ್ಮಪುರದುತ್ತರ ದಿಗ್ಭಾಗದ ವೃಷಭಗಿರಿಯೆಂಬನಾದಿ ಸಂಸಿದ್ಧ ತೀರ್ಥದ ದಕ್ಷಿಣದಿಶಾಭಾಗದೊಳ್ ಸಿದ್ಧ ಶಿಲೆಯೊಳ್ತಮ್ಮ ಕುಲದೈವಮಪ್ಪಂತ ಜಿನಬಿಂಬಂಗಳುಮಂ ಚಕ್ರೇಶ್ವರಿಯುಮಂ ಪೆಱವು ಜಿನಪ್ರತಿಮೆಗಳುಮಂ ತ್ರಿಭುವನತಿಲಕಮೆಂಬ ಬಸದಿಯುಮುಂ ಕವಿತಾಗುಣಾರ್ಣವಮೆಂಬ ಕೆಱೆಯುಮಂ ಮದನವಿಳಾಸಮೆಂಬ ಬನಮುಮಂ ಮಾಡಿಸಿದ್ದಂ ॥"

ಬೆಟ್ಟದ ದಕ್ಷಿಣದ ಸಿದ್ಧ ಶಿಲೆಯ ಮೇಲೆ ಮೊದಲ ಮತ್ತು ಕೊನೆಯ ತೀರ್ಥಂಕರರ ಜಿನಬಿಂಬಗಳು (ಚಿತ್ರ 11) : ಕೆಳಗೆ ಚಕ್ರೇಶ್ವರಿಯ ವಿಗ್ರಹ (ಚಿತ್ರ 12) ; ಅದರ ಅಕ್ಕಪಕ್ಕದಲ್ಲಿ ಕೆಲವು ಜಿನಪ್ರತಿಮೆಗಳು (ಚಿತ್ರ 13): ಸಿದ್ಧ ಶಿಲೆಯ ಹಿಂಭಾಗದ ಬೆಟ್ಟದ ತುದಿಯಲ್ಲಿ ಬಸದಿ : ಅಲ್ಲಿಂದ ಉತ್ತರದ ಕಡೆಗೆ ಇಳಿದರೆ ಅಲ್ಲೇ ಕವಿತಾ ಗುಣಾರ್ಣವ ಕೆರೆ ; ಅದರ ಹಿಂಭಾಗದಲ್ಲಿ ಮದನವಿಲಾಸ ಎಂಬ ಬನ.

---

16. 'ಜಿನವಲ್ಲಭನ ಕುರಿಕ್ಯಾಲ ಶಾಸನದ ಅರ್ಥ', ಶಬ್ದಾರ್ಥವಿಚಾರ, ಮೈಸೂರು, 1979, ಪು. 30.

17, ಈ ಅಂಶವತ್ತ ನನ್ನ ಗಮನವನ್ನು ಸೆಳೆದವರು ಡಾ. ಆರ್. ಶೇಷಶಾಸ್ತ್ರೀ.

‘ಚಕ್ರೇಶ್ವರಿ’ ಬಗ್ಗೆ ದಂತಕಥೆ

ಈಗ ಕುರಿಕ್ಯಾಲ ಪರಿಸರದಲ್ಲಿ ಯಾರೂ ಜೈನರಿರದಿದ್ದರೂ, ಬಸದಿ ಹಾಳಾಗಿ ಹೋಗಿದ್ದರೂ, ಸಿದ್ಧ ಶಿಲೆಯ ಮೇಲಿನ ವಿಗ್ರಹಗಳೂ ಶಾಸನವೂ ಮುಕ್ಕಾಗದೆ ಉಳಿದಿವೆ. ಚಕ್ರೇಶ್ವರಿಯನ್ನು ಹಳ್ಳಿಯ ಜನ ರಾಮನ ಹೆಂಡತಿಯೆಂದು ನಂಬುತ್ತಾರೆ. ಒಮ್ಮೆ ಈ ‘ಬೊಮ್ಮಲಮ್ಮ’ ಬೆತ್ತಲೆ ಕುಳಿತು ಸ್ನಾನ ಮಾಡುತ್ತಿರುವಾಗ ಅಲ್ಲಿಗೆ ಬಂದ ರಾಮದೇವರು ಕೋಪದಿಂದ ತನ್ನ ಮುಂಗಾಲನ್ನು ಕುರಿಕ್ಯಾಲ ಗ್ರಾಮದಲ್ಲಿ (ಆದ್ದರಿಂದ ಆ ಗ್ರಾಮಕ್ಕೆ ಆ ಹೆಸರು ಬಂತಂತೆ. ‘ಕಾಲು’ ಎಂಬ ಉತ್ತರಾರ್ಧ ಪದವನ್ನು ಗಮನಿಸಿ) ಊರಿ ತನ್ನ ಕುದುರೆಯನ್ನು ಹತ್ತಿಕೊಂಡು ಕೋಪದಿಂದ ಹೊರಟುಹೋಗಿ ಆರೆಂಟು ಮೈಲಿ ದೂರದ ಗುಡ್ಡದಲ್ಲಿ ನೆಲೆಸಿದನಂತೆ (ಆ ಗುಡ್ಡದಲ್ಲಿ ಅಶ್ವಾರೋಹಿ ರಾಮನ ವಿಗ್ರಹವಿದೆ). ಬೊಮ್ಮಲಮ್ಮನಿಗೆ ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ. ಸುತ್ತ ಮುತ್ತಣ ಜನ ಮಕ್ಕಳಾಗದಿದ್ದರೆ ಕಾಯಿಲೆ ಕಸಾಲೆ ಆದರೆ ಬೊಮ್ಮಲಮ್ಮನಿಗೆ ಹರಸಿಕೊಳ್ಳುತ್ತಾರೆ. ಒಂದು ವಿಗ್ರಹ ಧಾರ್ಮಿಕವಾಗಿ ನಿಷ್ಕ್ರಿಯವಾದರೂ ಜಾನಪದರು ಅದನ್ನು ತಮ್ಮದೇ ಆದ ರೀತಿಯಲ್ಲಿ ತಮ್ಮ ಸಾಮಾಜಿಕ ಬದುಕಿನ ಭಾಗವಾಗಿ ಮಾಡಿಕೊಳ್ಳುವುದನ್ನು ಶೇಷಶಾಯಿ ಶಿಲ್ಪದ ಉದಾಹರಣೆಯೊಂದರಲ್ಲಿ ನಾನು ಹಿಂದೆ ತೋರಿಸಿದ್ದೇನೆ; ಇದು ಅದೇ ಮಾದರಿಯ ಇನ್ನೊಂದು ಉದಾಹರಣೆ.

ಇನ್ನೊಂದು ಶಾಸನ?

ಅರಿಕೇಸರಿ ಪಂಪನಿಗೆ ದತ್ತಿ ಸಮೇತ ಕೊಟ್ಟ ಮೂಲ ಶಾಸನವು ಶಿಲಾಶಾಸನವಲ್ಲಿ ಒಂದು ತಾಮ್ರಪಟವೆಂಬುದು ಜನವಲ್ಲಭನ ಶಾಸನದಿಂದ ಗೊತ್ತಾಗುತ್ತದೆ:

> ಬರೆಯದೆ ತಾಂಬ್ರ ಶಾಸನಮದೇಯುಮೆ ಧರ್ಮಪುರಂ ನೆಗೞ್ತೆವೆ
> ತ್ತರಿಗನ ಕೊಟ್ಟುದೇ ನೆಗೞ್ದ ಪಂಪನ ಪೆತ್ತುದೆ ಪೇೞಿಯೆನ್ನು ನೀ
> ಮ್ಮರುಳೆ ಪಲರ್ಮ್ಮಯುಂ ಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸು
> ನ್ದರ ವೃಷಭಾಚಳೋನ್ನತ ಶಿಲಾತಳದೊಳ್ ಬರೆದಕ್ಕರಂಗಳಂ ॥

ಇದರಲ್ಲಿನ ‘‘ಪೋಗಿ ನೋಡ... ’’ ಎಂಬ ವಾಕ್ಯವನ್ನು ಗಮನಿಸಿ. ಜಿನವಲ್ಲಭನ ಶಾಸನವಲ್ಲದೆ ಅರಿಕೇಸರಿಯು ಪಂಪನಿಗೆ ಹಾಕಿಸಿಕೊಟ್ಟ ಶಿಲಾಶಾಸನವಿನ್ನೊಂದು ಬೊಮ್ಮಲಮ್ಮ ಗುಟ್ಟದಲ್ಲಿದೆಯೆಂದೂ ಹುಡುಕಿದರೆ ಸಿಗಬಹುದೆಂದೂ ನಂಬಿರುವ ಹಲವು ವಿದ್ವಾಂಸರಿದ್ದಾರೆ. ಅಂಥ ಶಾಸನವೊಂದು ಅಲ್ಲಿರುವ ಸಾಧ್ಯತೆಯಿಲ್ಲವೆಂದು ನನಗೆ ಖಚಿತವಾಗಿದ್ದರೂ (ಮುಂದೆ ನೋಡಿ), ಪ್ರಮುಖ ಜಾಗಗಳಲ್ಲಿನ ಬಂಡೆಗಳನ್ನೆಲ್ಲಾ ಎರಡು ದಿನ ನಾವು ಕಣ್ಣಲ್ಲಿ ಕಣ್ಣಿಟ್ಟು ನೋಡಿದೆವು; ಇತರರಿಗೂ ಹೇಳಿ ಹುಡುಕಿಸಿದೆವು. ಅಂತಹ ಯಾವುದೇ ಶಾಸನವು ಅಲ್ಲಿಲ್ಲ. ದಿನ ಬೆಳಗಾದರೆ ಬೆಟ್ಟವನ್ನು ಕಟ್ಟಿಗೆ ಹುಲ್ಲು ಹಣ್ಣುಗಳಿಗಾಗಿ ಅಲೆಯುವ ಹಳ್ಳಿಗರಿಗೆ ಅಂತಹ ಯಾವುದೇ ಶಾಸನವೂ ಕಾಣಿಸಿಲ್ಲ. ವಾಸ್ತವ ಸಂಗತಿಯೆಂದರೆ ‘‘ಪೋಗಿ ನೋಡು....’’ ಎಂಬ ವಾಕ್ಯನಲ್ಲಿರುವ ಶಾಸನ ಬೇರೆ ಯಾವುದೂ ಅಲ್ಲ, ಜಿನವಲ್ಲಭನ ಈಗ ದೊರಕಿರುವ ಶಾಸನವೇ.

"ಹೋಗಿ ನೋಡು...." ಎಂದು ಜಿನವಲ್ಲಭನ ಶಾಸನ ಹೇಳುತ್ತಿದೆ ಎಂಬ ಗ್ರಹಿಕೆಯೇ ಇದೀ ತಪ್ಪು ಕಲ್ಪನೆಗೆ ಕಾರಣವಾಗಿದೆ. ಹಾಗೆ ಹೇಳುತ್ತಿರುವುದು ಶಾಸನ ಕರ್ತೃ ಜಿನವಲ್ಲಭನೇ ಹೊರತು ಶಾಸನ ಅಲ್ಲ. ಅವನು ಧರ್ಮಪುರದ ತನ್ನ ಮನೆಯಲ್ಲೋ ಬೇರೆ ಕಡೆಯೋ ಕುಳಿತು ಶಾಸನ ಪಾಠವನ್ನು ರಚಿಸುತ್ತಿರುವಾಗ ಬಂಡೆಯನ್ನೂ ಅದರ ಮೇಲೆ ಕೆತ್ತಿಸಲಿರುವ ಶಾಸನವನ್ನೂ ಒಳಗಣ್ಣಿಂದ ಕಲ್ಪಿಸಿಕೊಂಡಿದ್ದಾನೆ. ಜನರು ತಮಗೆ ಬಂದ ಸಂದೇಹವನ್ನು ಪರಿಶೀಲಿಸಿಕೊಳ್ಳಲು ಆ ಶಾಸನವನ್ನು ಹೋಗಿ ನೋಡಿ ಎಂದು ಕವಿ ಹೇಳುತ್ತಿದ್ದಾನೆ ಎಂದು ಭಾವಿಸುವುದಾದರೆ ಆಗ ಬೇರೊಂದು ಶಾಸನವನ್ನು ನಾವು ಹುಡುಕುವ ಪ್ರಶ್ನೆಯೇ ಏಳುವುದಿಲ್ಲ. ಅರಿಕೇಸರಿ ಪಂಪನಿಗೆ ಬರೆಸಿಕೊಟ್ಟ ಶಿಲಾಶಾಸನವೊಂದು ದೊರಕುವುದಾದರೆ ಅದಕ್ಕಿಂತ ಸಂತೋಷದ ಸಂಗತಿ ಮತ್ತೊಂದು ಇರಲಾರದು. ಅದೃಷ್ಟವಿದ್ದರೆ ಅರಿಕೇಸರಿ ಪಂಪನಿಗೆ ಕೊಟ್ಟ ತಾಮ್ರಶಾಸನ ದೊರಕೀತು. ಅರಿಕೇಸರಿ ಕೊಟ್ಟ ತಾಮ್ರಪಟ ಕಳೆದುಹೋದುದರಿಂದ ಪಂಪನ ಕಾಲಾನಂತರ ಜನರಿಗೆ ಹಲವು ಸಂದೇಹಗಳು ಬಂದು ಆ ಸಂದೇಹವನ್ನು ಪರಿಹರಿಸಲಿಕ್ಕಾಗಿ ಜಿನವಲ್ಲಭನು ಈ ಶಾಸನವನ್ನು ಹಾಕಿಸಿರಬಹುದೆಂದು ಡಾ. ಗಾಯಿಯವರ ಊಹೆ. "ಧರ್ಮಪುರದ ವೃತ್ತಿಯನ್ನು ಊರ್ಜಿತಪಡಿಸಿಕೊಳ್ಳಲು ಜಿನವಲ್ಲಭನು ವೃಷಭಗಿರಿಯ ಬಂಡೆಯ ಮೇಲೆ ಅದನ್ನು ಶಾಶ್ವತವಾದ ದಾಖಲೆಯಾಗುವಂತೆ ಬರೆಸಿರಬಹುದು" ಎಂದು ಡಾ. ವೆಂಕಟಾಚಲಶಾಸ್ತ್ರಿಯವರು ಅಭಿಪ್ರಾಯಪಡುತ್ತಾರೆ. ತಾಮ್ರಪಟ ಕಳೆದು ಹೋಗಿತ್ತು ಎಂಬುದಾಗಲಿ ಇದು ಪಂಪನ ಮರಣೋತ್ತರ ಶಾಸನ ಎಂಬುದಾಗಲಿ ಊಹೆಗಳು. ಪಂಪ ಈ ಶಾಸನ ಹುಟ್ಟುವ ಹೊತ್ತಿಗೆ ಗತಿಸಿದ್ದನೆಂದು ಹೇಳಲು ಶಾಸನದ ಯಾವ ಭಾಗವೂ ಅವಕಾಶಮಾಡಿಕೊಡುವುದಿಲ್ಲ. ಪಂಪನಿಗೆ ಧರ್ಮಪುರವು ವೃತ್ತಿಯಾಗಿ ಬಂದ ಸಂಗತಿ ಜನರಲ್ಲಿ ಹುಟ್ಟಿಸಿದ ಸಂಭ್ರಮವನ್ನು "ಬರೆದುದೆ ತಾಂಬ್ರ ಶಾಸನಂ...." ಎಂಬ ಪದ್ಯವು ಧ್ವನಿಸುತ್ತದೆ. "ಬರ್ಮನಿವಾಗ್ವಧೂವರವಲ್ಲಭಂ ಜಿನವಲ್ಲಭಂ" ಎಂದು ಜಿನವಲ್ಲಭ ಹೇಳಿಕೊಂಡಿರುವುದು ಸ್ವಪ್ರಶಂಸೆಯೇ ಹೊರತು ಅಂತಹ ಮಾತುಗಳಿಗೆ ಹೆಚ್ಚಿನ ಬೆಲೆ ಕೊಡಲಾಗುವುದಿಲ್ಲ. "ಕೀರ್ತಿಯ ಮೂರ್ತಿ", "ಕೀರ್ತಿಶಾಸನ" ಇಲ್ಲೆಲ್ಲ 'ಕೀರ್ತಿ' ಮಾತಿಗೆ ಪ್ರಸಿದ್ಧಿ ಎಂಬರ್ಥವೇ ಹೊರತು ಬೇರೆ ಇಲ್ಲ. ಖಚಿತ ಉಲ್ಲೇಖದ ಅಥವಾ ಯಾವುದೇ ಸೂಚನೆಯ ಗೈರುಹಾಜರಿಯಲ್ಲಿ ಈ ಶಾಸನ ಹುಟ್ಟಿದಾಗ ಪಂಪ ಇನ್ನೂ ಬದುಕಿದ್ದನೆಂದು ಭಾವಿಸುವುದೇ ಯೋಗ್ಯವಾಗಿ ತೋರುತ್ತದೆ. ವ್ಯಕ್ತಿಗಳು ಬದುಕಿರುವಾಗಲೇ ಅವರ ಹೆಸರಲ್ಲಿ ದೇವಾಲಯಗಳನ್ನೂ ಕೆರೆಗಳನ್ನೂ ಕಟ್ಟಿಸುತ್ತಿದ್ದುದು ಉಂಟು. ಹಾಗಿರುವಾಗ, ಕವಿತಾಗುಣಾರ್ಣವ ಕೆರೆಯು ಆ ಕಾಲಕ್ಕೆ ಗತಿಸಿದ್ದ ಪಂಪನ ಹೆಸರಲ್ಲಿ ನಿರ್ಮಾಣವಾದುದೆಂದು ಭಾವಿಸಬೇಕಾಗಿಲ್ಲ.[18]

---

18. "ಅರ್ಣವ" ಎಂದರೆ ಸಮುದ್ರ; "ಕವಿತಾಗುಣಾರ್ಣವ" ಎಂಬ ಪಂಪನ ಬಿರುದನ್ನು ಕೆರೆಗೆ ಇಡುವಲ್ಲಿ ಅಂತ್ಯದ ಶಬ್ದ ಕೆಲಸ ಮಾಡಿದೆ. –ಸಮುದ್ರ (–ಸಂದ್ರ), –ಸಾಗರ ಹೀಗೆ ಕೊನೆಯಾಗುವ ಹೆಸರುಗಳನ್ನು ಕೆರೆಗಳಿಗೆ ಇಡುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.

‘ಆದಿಪುರಾಣ’ ಮತ್ತು ಜಿನವಲ್ಲಭನ ಶಾಸನ

ಜಿನವಲ್ಲಭನ ಶಾಸನದಲ್ಲಿ ವಿಕ್ರಮಾರ್ಜುನವಿಜಯದ ಹೆಸರು ಬಂದಿರುವುದೂ, ಎಲ್ಲೂ ಆದಿಪುರಾಣದ ಉಲ್ಲೇಖವಿಲ್ಲದಿರುವುದೂ ಎದ್ದು ಕಾಣುವ ಸಂಗತಿಯಾದರೂ, ಇಡೀ ಶಾಸನ ಆದಿಪುರಾಣದ ನೆನಪನ್ನು ಹಲವು ಬಾರಿ ತರುವಂತಹ ವಾತಾವರಣವನ್ನು ಪಡೆದಿದೆಯೆಂಬುದನ್ನು ಗಮನಿಸಬೇಕು. “ದ್ವಿಜಾವಸಥಪರ್ವತ” ಅಥವಾ ಅಗ್ರಹಾರದ ಬೆಟ್ಟ ಎಂಬ ಹೆಸರಿದ್ದ ಆ ಗುಡ್ಡಕ್ಕೆ ಜಿನವಲ್ಲಭನು ವೃಷಭಾಚಲವೆಂದು ನಾಮಕರಣ ಮಾಡಲು ಆದಿಪುರಾಣದ ಕತೆಯೇ ಕಾರಣ. ಭರತ ತನ್ನ ದಿಗ್ವಿಜಯದ ಪ್ರಶಸ್ತಿ ಶಾಸನವನ್ನು ವೃಷಭಾಚಲದ ಬಂಡೆಯ ಮೇಲೆ ಬರೆಯಿಸಿದಂತೆ ಇಲ್ಲಿ ಜಿನವಲ್ಲಭ ಪಂಪನ (ಮತ್ತು ತನ್ನ) ಪ್ರಶಸ್ತಿಯನ್ನು ಬರೆದಿದ್ದಾನೆ. “ಇದು ಕವಿತಾಗುಣಾರ್ಣವನ ಕೀರ್ತಿಯ ಮೂರ್ತಿವೊಲಾಗಿ ದಕ್ಷಿಣಾರ್ಧದ ವೃಷಭಾದ್ರಿಯಕ್ಕೆ” ಎಂಬಲ್ಲಿ ಉತ್ತರದ ವೃಷಭಾಚಲವು ಭರತನ ಶಾಸನವನ್ನು ಹೊತ್ತಂತೆ ಈ ವೃಷಭಾಚಲವೂ ಪಂಪನ ಶಾಸನವನ್ನು ಹೊತ್ತಿದೆ (ಪುರಾಣಕತೆಯಲ್ಲಿ ಭರತ ಒಂದು ಶಾಸನವನ್ನು ಅಳಿಸಿ ಇನ್ನೊಂದು ಶಾಸನವನ್ನು ಬರೆಯಿಸಿದ. ಆಗ ಅವನ ಗರ್ವರಸ ಸೋರಿಹೋಯಿತು ಎಂಬ ವಿವರಗಳು ಕವಿಯ ಮನಸ್ಸಿನಲ್ಲಿ ಆಗ ಸುಳಿದಂತೆ ಕಾಣುವುದಿಲ್ಲ). ಶಾಸನದ ಈ ಮಾತನ್ನು ಗಮನಿಸಿ “....ಎಂದು ಲೋಕಮೆಲ್ಲಂ ಪೊಗೞೆನೆಗೞ್ದ ಜಿನವಲ್ಲಭನ ಸುಧರ್ಮ ಸಂತತಿಯೊಳ್ ತೊಟ್ಟ ಗುಣಾವಳಿಯನೀ **ವೃಷಭಗಿರಿಯ** ಸಿದ್ಧ ಶಿಲೆಯೊಳಜೀಯಮ್ಮಂ **ಟಂಕೋತ್ಕೀರ್ಣಂ** ಮಾಡಿದಂ” ಇದರ ಜೊತೆಗೆ ಆದಿಪುರಾಣದ “ಅಂತು ಬಂದು **ವೃಷಭಾಚಲ**ವಿಟಂಕದೊಳ್ ಅಪ್ರತಿಹತ ದಿಗ್ವಿಜಯ ಪ್ರಶಸ್ತಿಯಂ **ಟಂಕೋತ್ಕೀರ್ಣಂ ಮಾಡಿ**”[19] ಎಂಬುದನ್ನು ಹೋಲಿಸಿ ಶಾಸನವಿರುವ ಬಂಡೆಯನ್ನು ‘ಸಿದ್ಧ ಶಿಲೆ’ ಎಂದು ಕರೆಯಲು ವೃಷಭಾಚಲ ಅಥವಾ ಬೊಮ್ಮಲಮ್ಮಗುಟ್ಟದ ಮುಂಭಾಗದ ಅತಿ ದೊಡ್ಡ ಬಂಡೆ ಆಗಿರುವುದು ಮಾತ್ರವಲ್ಲ; ಮುಕ್ತರೂ ವಿದೇಹಿಗಳೂ ಪ್ರಪಂಚದ ಬಗ್ಗೆ ಅನಾಸಕ್ತರೂ ಆದ ಸಿದ್ಧರು ಅಗೋಚರರಾಗಿ ಸಿದ್ಧಶಿಲೆಯಲ್ಲಿ ವಿಹರಿಸುತ್ತಾರೆ ಎಂಬ ಜೈನಧರ್ಮದ ಲೋಕಾಕರ ಕಲ್ಪನೆಯೂ ಇಲ್ಲಿ ಕೆಲಸ ಮಾಡಿದೆ.[20] ಬೊಮ್ಮಲಮ್ಮಗುಟ್ಟದ ‘ಸಿದ್ಧಶಿಲೆ’

---

19. ಆದಿಪುರಾಣ (ಸಂ: ಎಲ್. ಬಸವರಾಜು), ಮೈಸೂರು, 1976. 14. 59. ವ.

20. ನೋಡಿ–ಮಿರ್ಜಿ ಅಣ್ಣಾರಾಯ: ಜೈನಧರ್ಮ. ಸೇಡಬಾಳ. 1952, ಪು. 506– “ಈ ಗುಣಗಳಿಂದ ಕೂಡಿದ ಸಿದ್ಧರು ಯಾವ ಕಾರ್ಯವನ್ನೂ ಮಾಡರು. ಅವರು ದರ್ಶನ ಜ್ಞಾನಗಳೇ ಆಗಿರುವಂತೆ. ಜೈನ ದಾರ್ಶನಿಕರ ಮತದಂತೆ ಅವರಿರುವ ಸ್ಥಳಕ್ಕೆ ‘ಸಿದ್ಧಶಿಲೆ’ಯೆಂಬ ಹೆಸರು. ಅದು ಶಾಂತಿಮಯವಾದುದು. ಅದರ ಸುತ್ತಲೂ ಮೇಲೂ ಸ್ವಚ್ಛವೂ ಅನಿರ್ದೇಶ್ಯವೂ ಅನಂತವೂ ಸ್ಥಿರವೂ ಆದ ಅಲೋಕಾಕಾಶವಿರುವುದು. ಅದರ ನಡುವೆ ಸಿದ್ಧರು ಸ್ವಭಾವಸ್ಥಿತರಾಗಿರುವರು. ಅದರಿಂದ ಕೆಳಗೆ ದೂರದಲ್ಲಿ ಕರ್ಮ ಬಂಧನವೆಸಗುವ ಜಗತ್ತು–ಲೋಕಾಕಾಶವು ಆಗಿರುವುದು.”

ಯ ತುದಿ ಖಾಲಿ: ಅಲ್ಲಿ ಏನೂ ಕೆತ್ತನೆಯಿಲ್ಲ. (ಅಲ್ಲಿ ಸಿದ್ಧರಿದ್ದಾರೆ ಎಂಬ ಕಲ್ಪನೆ ಜಿನವಲ್ಲಭನದು) ತುದಿಯಿಂದ ಕೆಳಗೆ ಬಂದರೆ ಎರಡು ಜಿನಬಿಂಬಗಳು–ಇವು ಆಗಲೆ ನೋಡಿದಂತೆ ಆದಿವೃಷಭ ಮತ್ತು ಮಹಾವೀರ ತೀರ್ಥಂಕರರವಾಗಿತ್ತು. ಇಪ್ಪತ್ತನಾಲ್ಕು ತೀರ್ಥಂಕರರನ್ನೂ ಪ್ರತಿನಿಧಿಸುತ್ತವೆ. ಜೈನರ ಕಲ್ಪನೆಯಂತೆ 'ಪಂಚಪರಮೇಷ್ಠಿ'ಗಳಲ್ಲಿ ಸಿದ್ಧರೂ ಮೇಲಿನವರು, ಅವರಿಗಿಂತ ಕೆಳಗೆ ಅನುಕ್ರಮದಲ್ಲಿ ತೀರ್ಥಂಕರರು ಬರುತ್ತಾರೆ. ತೀರ್ಥಂಕರರು ಸಿದ್ಧರಂತೆ ಮುಕ್ತರಾದರೂ ಲೋಕಾನುಗ್ರಹಕ್ಕಾಗಿ ದೇಹಧಾರಿಗಳಾಗಿರುತ್ತಾರೆ. ತೀರ್ಥಂಕರರ ಕೆಳಗೆ ಅನುಕ್ರಮದಲ್ಲಿ ಆಚಾರ್ಯ, ಉಪಾಧ್ಯಾಯ, ಸಾಧುಗಳು ಬರುತ್ತಾರೆ. ಇವರನ್ನು ಸಂಕೇತಿಸುವ ರೀತಿಯಲ್ಲಿ ಚಕ್ರೇಶ್ವರಿ ವಿಗ್ರಹದ ಅಕ್ಕಪಕ್ಕದಲ್ಲಿ ಆರು ಜನ ಜೈನಮುನಿಗಳ ವಿಗ್ರಹಗಳಿವೆ. (ಸಿದ್ಧ, ಅರ್ಹತ್, ಆಚಾರ್ಯ, ಉಪಾಧ್ಯಾಯ, ಸಾಧು- ಇವರೇ ಪಂಚಪರಮೇಷ್ಠಿಗಳು.) ಇಡೀ ಬಂಡೆಯನ್ನು ಸಿದ್ಧಶಿಲೆಯೆಂದು ಕರೆಯುವಲ್ಲಿ ಜಿನವಲ್ಲಭನ ತರ್ಕ ಮೇಲಿನ ರೀತಿಯಲ್ಲಿ ಕೆಲಸಮಾಡಿರುವಂತೆ ತೋರುತ್ತದೆ.

'ತ್ರಿಭುವನತಿಲಕ' ಎಂಬ ಬಸದಿಗೆ ಹೆಸರಿಡಲು ಕಾರಣ, ಅದು ಸಿದ್ಧಶಿಲೆಯ ಬಂಡೆಯ ಹಿಂಭಾಗದ ಇನ್ನೂ ಎತ್ತರದ ಗುಡ್ಡದ ತುದಿಯಲ್ಲಿ ಇದ್ದುದು ಕಾರಣವಿರಬಹುದು.[21] (ಆ ಬಸದಿಯು ಆದಿವೃಷಭತೀರ್ಥಂಕರನದು ಎಂಬುದು ಬಹುಮಟ್ಟಿಗೆ ಖಚಿತ. ಬನಕ್ಕೆ 'ಮದನವಿಲಾಸ' ಎಂದು ಹೆಸರು ಕೊಡಲು ಪಂಪನ ಆದಿಪುರಾಣದಲ್ಲಿ ಭರತನೂ ಪಂಪನ ರಾಣಿಯರೂ ವಿಲಾಸದಿಂದ ಕಾಲ ಕಳೆದ ಬನದ ವರ್ಣನೆ ಪ್ರೇರಣೆ ಕೊಟ್ಟಿರಬೇಕು (ನೋಡಿ ''ಭರತೇಶ್ವರನ್···· ಜನತಾನಂದಂ ಬನಮಂ ವಿಳಾಸದಿಂ ಪುಗುತಂದಂ'': ''....ವನಜಾನನೆಯರ್ ವಿಲಾಸವನಂ ಪೊಕ್ಕರ್'' ಇತ್ಯಾದಿ.[22] ಪಂಪನ ಆದಿಪುರಾಣದ ಪ್ರಕಾರ, ಪೌರಾಣಿಕ ವೃಷಭಾಚಲವಿದ್ದುದು ''ಉತ್ತರ ಭರತ ಮಧ್ಯಮ ಖಂಡದ ನಟ್ಟ **ನಡುವಣೆಡೆಯೊಳ್**'' (ಆದಿಪುರಾಣ 13. 69, ವ). ಜಿನವಲ್ಲಭನ ಪ್ರಕಾರ, ಅವನ ನಾಮಕರಣದ ವೃಷಭಾಚಲವಿದ್ದುದು ''ಸಬ್ಬಿನಾಡ ನಟ್ಟನಡುವಣ ಧರ್ಮಪುರದುತ್ತರ ದಿಗ್ಭಾಗದಲ್ಲಿ). ಆದಿಪುರಾಣದ ಕಥಾಪ್ರಸಂಗ, ಅಂಕಿತನಾಮಗಳು, ಭಾಷೆ ಇವುಗಳು ಶಾಸನದಲ್ಲಿ ಇಣುಕಿ ಹಾಕಿರುವುದನ್ನು ಯಾರಾದರೂ ಮನಗಾಣಬಹುದು.

---

21. 'ಪಂಪಭಾರತ'ದಲ್ಲಿ (14–20 ವ.) ಅರ್ಜುನನ ಪಟ್ಟದಾನೆ 'ತ್ರಿಭುವನಾಭರಣ'. ಪಟ್ಟದ ಕುದುರೆ ತ್ರಿಭುವನತಿಲಕ ಎಂಬ ಹೆಸರುಗಳು ಬರುತ್ತವೆ. ಕೇವಲ ಕುತೂಹಲಕ್ಕೆ ಈ ಅಂಶದತ್ತ ಗಮನವನ್ನು ಸೆಳೆದಿದ್ದೇನೆ ಹೊರತು ಬಸದಿಯ ಹೆಸರಿಗೂ ಕುದುರೆಯ ಹೆಸರಿಗೂ ಏನೂ ಸಂಬಂಧವಿಲ್ಲವೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.
22. 'ಆದಿಪುರಾಣ' (ಸಂ: ಎಲ್ ಬಸವರಾಜು). ಮೈಸೂರು, 1976. 11. 68; 11. 69 ಮತ್ತು ಮುಂದೆ.

ಜಿನವಲ್ಲಭ ಒಂದು ಕಡೆ ಮಾತ್ರ ಪಂಪನ 'ಆದಿಪುರಾಣ'ವನ್ನು ಸೂಚಿಸಿರುವಂತಿದೆ. ಈ ಶಾಸನ ಪದ್ಯವನ್ನು ಗಮನಿಸಿ :

ಎಸಗಲ್ಗಾಳಿ ಪುಗಲ್ ಪತಂಗಕಿರಣಂ ಸಾರಲ್ಮೃಗಂ ಪಾಱಲಾ
ಗಸದೊಳ್ ಪಕ್ಕಿಗಳಲ್ಲಿ ಸಲ್ಲವೆನಿಸಿರ್ದನ್ಯೋದಯಂ ಧರ್ಮದೊ
ಳ್ಪಸಮಂ ಪೊಂಪುಱಮಾಡೆ ಮೆಚ್ಚಿ ಹರಿಗಂ ಪಂಪಂಗೆಗೊಟ್ಟಾದ್ವಿಜಾ
ವಸಥಗ್ರಾಮಮದೇನ್ನೆಗೞ್ತೆಯ ಕಳಾಪಗ್ರಾಮಮಂ ಪೋಲ್ತುದೋ ॥

ದಕ್ಕೆ ಡಾ. ವೆಂಕಟಾಚಲ ಶಾಸ್ತ್ರಿಯವರ ಅರ್ಥ ಹೀಗಿದೆ—"ಅಲ್ಲಿ ಗಾಳಿ ಬೀಸಲು, ಸೂರ್ಯ ಕಿರಣ ಪ್ರವೇಶಿಸಲು, ಮೃಗಗಳು ಸುಳಿಯಲು, (ಅದರ ಮೇಲೆ) ಪಕ್ಕಿಗಳು ಹಾರಾಡಲು ಸಾಧ್ಯವಿಲ್ಲ ಎನಿಸಿದ್ದು, ಅನ್ಯತ್ವದ ಉದಯವು ಧರ್ಮದಲ್ಲಿ ಯಶಸ್ಸನ್ನು ಬೆಳಸುವಂತೆ ಮೆಚ್ಚಿ (ಮಾಡಿದ ಧರ್ಮ ಕಾರ್ಯದಿಂದ ತನ್ನ ಕೀರ್ತಿ ಹೆಚ್ಚಲು) ಅರಿಕೇಸರಿ ಪಂಪನಿಗೆ ಕೊಟ್ಟ ಆ ಅಗ್ರಹಾರವು ಖ್ಯಾತವಾದ ಕಳಾಪ ಗ್ರಾಮವನ್ನು ಏನು ಹೋಲು ವುದಾಯಿತೋ"[23] ಅವರು ತಮ್ಮ ಟಿಪ್ಪಣಿಯಲ್ಲಿ[24] "ಅನ್ಯದ ಉದಯ ಎಂದರೆ ಪಾರಲೌಕಿಕದ ಅಪೇಕ್ಷೆ ಎಂದು ಆಗಬಹುದು: ಆದರೆ ದ್ವಾದಶಾನುಪ್ರೇಕ್ಷೆಗಳಲ್ಲಿ ಒಂದಾದ ಅನ್ಯತ್ವದ ಉದಯ ಎಂದು ಇಲ್ಲಿ ತಾತ್ಕಾಲಿಕವಾಗಿ ಅರ್ಥಮಾಡಿದೆ. 'ಅನ್ಯತ್ವ' ಎಂದರೆ ಸಂಸಾರದಲ್ಲಿ ಕ್ಲೇಶಗಳನ್ನು ತಂದೊಡ್ಡುವ ಧನ ಧಾನ್ಯ ಪುತ್ರ ಕಲತ್ರಾದಿಗಳು ತನ್ನವಲ್ಲ, ಅವು ಅನ್ಯವಸ್ತುಗಳು ಎಂದು ಚಿಂತಿಸುವುದು". ಆದರೆ ಡಾ. ಶಾಸ್ತ್ರಿಗಳ ವಿವರಣೆಯು ಅಷ್ಟು ಉಚಿತವಾಗಿಲ್ಲ: "ಎಸಗಲ್ಗಾಳಿ...ಸಲ್ಲವು" ಎಂಬ ಮಾತುಗಳನ್ನು "ಧರ್ಮ"ಕ್ಕೆ ಅನ್ವಯ ಮಾಡಬೇಕು ('ಅನ್ಯೋದಯ'ಕ್ಕಂತೂ ಅನ್ವಯಿಸಲು ಸಾಧ್ಯವಿಲ್ಲ. "ಎನಿ ರ್ದ" ಎಂಬ ಮಾತು ಗಮನಾರ್ಹ).

ಮೇಲಿನ ಪದ್ಯದ ಹಿಂದಿನ ಪದ್ಯದಲ್ಲಿ ಜಿನವಲ್ಲಭ ವಿಕ್ರಮಾರ್ಜುನವಿಜಯದ ಹೆಸರನ್ನು ಹೇಳಿದ್ದಾನೆ; ಮತ್ತು ಮೇಲಿನ ಪದ್ಯದಲ್ಲಿ ಅರಿಕೇಸರಿಗೆ ಪಂಪನ ಬಗ್ಗೆ ಏಕೆ ಮೆಚ್ಚುಗೆ ಆಯಿತು ಎಂಬುದರ ವಿವರಣೆ ಇದೆ. ಇಲ್ಲಿ ಒಂದು ಸಂಗತಿಯನ್ನು ಲಕ್ಷಿಸಬೇಕು. ಪಂಪನು ಆದಿಪುರಾಣದಲ್ಲಿ ಬರೆದಾಗಲೇ ಅರಿಕೇಸರಿಯ ಗಮನಕ್ಕೆ ಬಂದಿದ್ದನೆಂಬುದಕ್ಕೆ ಅವನು ತನ್ನ 'ಕವಿತಾಗುಣಾರ್ಣವ' ಎಂಬ ಬಿರುದನ್ನು ಹಲವೆಡೆ ಆದಿಪುರಾಣದಲ್ಲಿ ಹೇಳಿಕೊಂಡಿರುವುದೇ ಸಾಕ್ಷಿಯಾಗಿದೆ.ಅರಿಕೇಸರಿ ದತ್ತಿಯನ್ನು ಕೊಟ್ಟುದು ವಿಕ್ರಮಾರ್ಜುನ ವಿಜಯಕ್ಕಾದರೂ, ಆ ಮೊದಲೇ ಪಂಪನು ಆದಿಪುರಾಣದಲ್ಲಿ 'ಧರ್ಮ'ವನ್ನು ಪ್ರತಿಪಾದಿ ಸಿದ್ದುದು ಅರಿಕೇಸರಿಯ ಮೆಚ್ಚುಗೆಯನ್ನು ಪಡೆದಿರಬೇಕು. ಪಂಪ ಆದಿಪುರಾಣದಲ್ಲಿ ಧರ್ಮ'ವನ್ನು ಗಳಿಸಿದರೆ ಅವನಿಗೆ 'ಜಸ' (ಕೀರ್ತಿ, ಯಶಸ್ಸು) ಬಂದುದು ವಿಕ್ರಮಾ

23. ಪೂರ್ವೋಕ್ತ ಗ್ರಂಥ, ಪು. 27
24. ಅದೇ. ಪು. 28

ರ್ಜುನ ವಿಜಯದಿಂದ. ಮೊದಲ ಕಾವ್ಯದ 'ಧರ್ಮ'ವು[25] ಎರಡನೆಯ ಕಾವ್ಯದ ಜಸದಿಂದ ವೃದ್ಧಿಯಾದುದು ಅರಿಕೇಸರಿಗೆ ಹರ್ಷವಾಗಿ ಅವನು ಧರ್ಮಪುರವನ್ನು ದತ್ತಿಯಾಗಿ ಕೊಟ್ಟನೆಂಬುದು ಮೇಲಿನ ಪದ್ಯದಿಂದ ಸೂಚಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಮೇಲಿನ ಪದ್ಯಕ್ಕೆ ಹೀಗೆ ವ್ಯಾಖ್ಯಾನಿಸಬಹುದು—

"ಪಂಪನು ಪ್ರತಿಪಾದಿಸಿರುವ ಧರ್ಮವು ಅನ್ಯದಿಂದ ಉದಯವಾದುದು (ಎಂದರೆ ಈ ಹಿಂದೆ ಹೇಳಿದ ಕಾವ್ಯ ವಿಕ್ರಮಾರ್ಜುನ ವಿಜಯದಿಂದ ಭಿನ್ನವಾದ ಆಕರದಿಂದ. ಅರ್ಥಾತ್ ಆದಿಪುರಾಣದಿಂದ ಮೂಡಿಬಂದುದು.) ಆ ಧರ್ಮವು ಎಷ್ಟು ಉನ್ನತವಾದುದೆಂದರೆ ಅಲ್ಲಿ ಗಾಳಿ ಬೀಸಲಾರದು, ಸೂರ್ಯನ ಕಿರಣ ಹೊಗಲಾರವು. ಮೃಗಗಳು ಸಮೀಪಿಸಲಾರವು. ಮೇಲೆ ಹಕ್ಕಿಗಳು ಹಾರಲಾರವು. "ಅಷ್ಟು ಉನ್ನತವಾದ ಧರ್ಮದ ಜೊತೆ (ವಿಕ್ರಮಾರ್ಜುನ ವಿಜಯದಿಂದ ಸಂಪಾದಿಸಿದ)" 'ಜಸ' ಅಥವಾ ಯಶಸ್ಸನ್ನು ಸೇರಿಸಿ ವೃದ್ಧಿಪಡಿಸಿದ ಕಾರ್ಯಕ್ಕೆ ಅರಿಕೇಸರಿ ಮೆಚ್ಚಿ ಪಂಪನಿಗೆ ಕೊಟ್ಟ ಆ ಅಗ್ರಹಾರವು ಪ್ರಸಿದ್ಧವಾದ ಕಲಾಪ ಗ್ರಾಮವನ್ನು ಹೋಲುತ್ತದೆ. ಏನು ಆಶ್ಚರ್ಯ."

ಜಿನವಲ್ಲಭ ಮೇಲಿನ ಪದ್ಯದ ಮೂಲಕ. ಅರಿಕೇಸರಿ ಲೌಕಿಕ ಕಾವ್ಯವಾದ ವಿಕ್ರಮಾರ್ಜುನ ವಿಜಯವನ್ನು ಮಾತ್ರ ಮೆಚ್ಚಿಕೊಂಡು. ಜೈನಧರ್ಮದ ಆದಿಪುರಾಣವನ್ನು ಉಪೇಕ್ಷೆಮಾಡಿದನೆಂಬ, ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲವೆಂಬ ಆರೋಪದಿಂದ ಅರಿಕೇಸರಿಯನ್ನು ಮುಕ್ತಗೊಳಿಸಿದ್ದಾನೆ. ಕಾವ್ಯಜ್ಞನಾಗಿದ್ದ ಅರಿಕೇಸರಿಗೆ ಎರಡೂ ಕೃತಿಗಳೂ ಮೆಚ್ಚುಗೆಯಾಗಿವೆ. ಪ್ರಶಸ್ತಿ ಅಥವಾ ದತ್ತಿಯನ್ನು ನೀಡುವಾಗ ವಿಕ್ರಮಾರ್ಜುನ ವಿಜಯವನ್ನು ಮಾತ್ರ ಹೆಸರಿಸಿದ್ದಾನೆ. ಈ ವ್ಯಾಖ್ಯಾನ ಅರಿಕೇಸರಿಯ ಕಾವ್ಯಾಭಿರುಚಿಯ ಬಗ್ಗೆ ನಮ್ಮ ಗೌರವವನ್ನು ಹೆಚ್ಚಿಸುವಂತಹದೂ ಆಗಿದೆಯೆಂಬುವನ್ನು ಇಲ್ಲಿ ಸೂಚಿಸುವುದು ಅಗತ್ಯವಾಗಿದೆ.

ಪಂಪನನ್ನು ಕುರಿತಂತೆ ಸಂಶೋಧನೆ ಕೈಗೊಳ್ಳುವವರು ವೇಮುಲವಾಡ ಸುತ್ತಮುತ್ತ ಎಚ್ಚರಿಕೆಯಿಂದ ಪರಿಶೀಲಿಸುವ ಅಗತ್ಯವಿದೆ. ಇಂದಿನ ಹಲವು ಪದ್ಧತಿಗಳು, ವೇಷಭೂಷಣಗಳು, ನಂಬಿಕೆಗಳು ಪಂಪನ ಕೃತಿಗಳ ಮೇಲೆ ಬೆಳಕು ಚೆಲ್ಲುವ ಸಾಧ್ಯತೆಗಳಿವೆ. ಪಂಪನಲ್ಲಿ 'ಇರ್ಕಟ್ಟೆ'ಯನ್ನು ಒಬ್ಬಳು ಕಟ್ಟಿದ ಉಲ್ಲೇಖವಿದೆ. ಕರೀಂನಗರ ಜಿಲ್ಲೆಯಲ್ಲಿ ಹೆಂಗಸರು 'ಇರ್ಕಟ್ಟೆ'ಯನ್ನು ಕಟ್ಟುವುದು ಇಂದಿಗೂ ಸಾಮಾನ್ಯವಾಗಿದೆ. ಪಾಂಡವರು ತಮ್ಮ ರಥದಲ್ಲಿ ಹೋಗುವಾಗ ನಡೆ, ನುಡಿ, ವೇಷಭೂಷಣಗಳ ವೈಚಿತ್ರ್ಯವನ್ನು ಕಂಡು ಮುಗುಳ್ನಗುತ್ತಿದ್ದರೆಂದು ಪಂಪ ವರ್ಣಿಸಿದ್ದಾನೆ. ಪಂಪ ತನ್ನ ಕಾಲದ ಮತ್ತು ಪರಿಸರದ ಬದುಕಿನ ಎಷ್ಟೋ ವಿವರಗಳನ್ನು ತನ್ನ ಕೃತಿಯಲ್ಲಿ ತಂದಿರುವ ಸಾಧ್ಯತೆಗಳಿವೆ. ಅವನು ಹುಟ್ಟಿ ಬೆಳೆದಿರಬಹುದಾದ ಅಣ್ಣಿಗೇರಿಯ ಪರಿಸರದಲ್ಲೂ ಸಂಶೋಧಕರು ಕ್ಷೇತ್ರಕಾರ್ಯವನ್ನು ಕೈಗೊಳ್ಳಬಹುದು.

---

25. ನೋಡಿ: "ಆದಿಪುರಾಣದೊಳಜಿಪ್ಪುದು ಕಾವ್ಯಧರ್ಮಮುಂ ಧರ್ಮಮುಮಂ" (ಆದಿಪುರಾಣ. 1. 37).

ಮೇಲೆ ಸೇರಿಸಿದ್ದು

ಜಿನವಲ್ಲಭನು ತಾನು ಕಟ್ಟಿಸಿದ ಜಿನಾಲಯಕ್ಕೆ 'ತ್ರಿಭುವನತಿಲಕ'ವೆಂದು ನಾಮ ರಣ ಮಾಡಲು ಆದಿಪುರಾಣದ ಈ ಭಾಗಗಳು ಪ್ರಚೋದನೆ ನೀಡಿರುವಂತಿವೆ—

"....ಕೈಲಾಸ ಶೈಲಮನೇಱ಼ಿ....ವೃಷಭನಾಥನಾಸ್ಥಾನ ಮಂಟಪಮಂ ೋಡುತ್ತುಂ....ಸಿಂಹಾಸನ ಮಸ್ತಕದೊಳಿರ್ದ **ಜಗತ್ತ್ರಿತಯ** ತಿಲಕನ ಪಾದಪದ್ಮಂಗಳ್ಗೆ ರತೇಶ್ವರ ಚಕ್ರವರ್ತಿ....ವಿಹಿತೋಪಚಾರನಾಗಿ" (ಆಪು. 13,82,ವ)

ಭುವನಖ್ಯಾತಂ ಜಿನೇಂದ್ರಾಲಯ" (ಆಪು. 13.68)

ಎಂದು **ಜಗತ್ತ್ರಯ ಚೈತ್ಯಾಲಯ** ಸ್ತೋತ್ರ ಪವಿತ್ರ ಮುಖಾರವಿಂದನಾಗಿ........"

(ಆಪು. 16.72,ವ.)

ಶಾಸನದಲ್ಲಿ ಬರುವ "ಎಸಗಲ್ಕಾಳಿ ಪುಗಲ್ ಪತಂಗ ಕಿರಣಂ............" ಂಬ ಪದ್ಯದಲ್ಲಿ "ಧರ್ಮ" ಮತ್ತು "ಜಸ"ಗಳ ಉಲ್ಲೇಖ ಬರುವುದನ್ನು ಹಿಂದೆಯೇ ಮನಿಸಲಾಗಿದೆ. ಅಲ್ಲಿ "ಅನ್ಯೋದಯಂ" ಎಂಬ ಕಡೆ ಪಂಪನ ಆದಿಪುರಾಣ ಕಾವ್ಯದ ೋಜನೆ ಇರಬಹುದೆಂಬ ನನ್ನ ವ್ಯಾಖ್ಯಾನವನ್ನು ಓದುಗರು ಗಮನಿಸಿದ್ದಾರೆ. ಬೇರೊಂದು ಚ್ಚು ಸಮರ್ಪಕ ವ್ಯಾಖ್ಯಾನ ಬರುವವರೆಗೆ ಅಥವಾ ಅದು ಸರಿಯಲ್ಲ ಎಂದು ಾರಾದರೂ ಖಚಿತವಾಗಿ ತೋರಿಸುವವರೆಗೆ ಅದನ್ನು ಸದ್ಯಕ್ಕೆ ಸಾಧುವಾದ ವ್ಯಾಖ್ಯಾನ ಂದೇ ನಾನು ಭಾವಿಸುತ್ತೇನೆ. ಈ ಮಧ್ಯೆ ಧರ್ಮ, ಜಸಗಳ (ಯಶ) ಉಲ್ಲೇಖ ಬರುವ ದಿಪುರಾಣದ ಪದ್ಯದ ಕಡೆಗೆ (1, 27)-ಅದೂ ಪಂಪನಿಗೆ ಸಂಬಂಧಿಸಿದುದೇ-ಕೇವಲ ತೂಹಲಕ್ಕಾಗಿ ಓದುಗರ ಗಮನವನ್ನು ಸೆಳೆಯಬಯಸುತ್ತೇನೆ :

ಇದು ನಿಚ್ಚಂ ಪೊಸತರ್ಣವಂ ಬೊಲತಿ ಗಂಭೀರಂ ಕವಿತ್ವಂ ಜಗ
ಕ್ಕದಱಿಂದಂ ಕವಿತಾಗುಣಾರ್ಣವನೆಳಾ ಲೋಕೈಕ ವಿಖ್ಯಾತನ-
ಭ್ಯುದಯ ಪ್ರಾಪ್ತಿ ನಿಮಿತ್ತ ಮುತ್ತಮ**ಯಶಂ** ಸಂಸಾರದೊಳ್ ಸಾರಮ
ಪ್ಪುದು ತಾಂ **ಧರ್ಮ**ಮದಂ ನಿಮಿರ್ಚ್ಚುವುದಱಿಂ ಸಂಸಾರ ಸಾರೋದಯಂ॥

ಜಿನವಲ್ಲಭ ಆದಿಪುರಾಣದ ಹೆಸರನ್ನು ನೇರವಾಗಿ ಹೇಳದೆ ಅದರ ಪೂರ್ಣ ಭಾವಕ್ಕೆ ತನ್ನನ್ನು ತಾನು ಒಳಗು ಮಾಡಿಕೊಂಡು ಆ ಕೃತಿಗೆ ಪರೋಕ್ಷವಾಗಿ ತನ್ನ ರವವನ್ನು ಸಲ್ಲಿಸಿದ್ದಾನೆ.

"ಅನ್ಯೋದಯಂ ಧರ್ಮದೊಳ್" ಎಂಬಲ್ಲಿ "ಅನ್ಯೋದಯಂ" ಪದವು ಶೇಷಣದ ಜಾಗದಲ್ಲಿ ಬಂದಿದ್ದರೆ, ಅದೂ ಸಪ್ತಮಿ ವಿಭಕ್ತಿಯಲ್ಲಿಯೇ ಇರಬೇಕಾಗಿ ದು ಕೆಲವು ಮಿತ್ರರು ಆಕ್ಷೇಪವೆತ್ತಿದ್ದಾರೆ. ಅವರ ಪ್ರಕಾರ "ಅನ್ಯೋದಯದೊಳ್ ರ್ಮದೊಳ್" ಎಂದಿರಬೇಕಾಗಿತ್ತು. ಆದರೆ, ವಿಶೇಷ್ಯದ ವಿಭಕ್ತಿಯು ವಿಶೇಷಣಗಳಿಗೆ ್ವಯವಾಗುತ್ತದೆಂದು ಕೇಶಿರಾಜ ಹೇಳಿ ಹಲವು ಉದಾಹರಣೆಗಳನ್ನೇ ಕೊಟ್ಟಿದ್ದಾನೆ. ೋಡಿ-ಸೂತ್ರ 143 (ಮದ್ರಾಸ್ ಆವೃತ್ತಿ). ಇದಕ್ಕೆ ವೃತ್ತಿ ಹೀಗಿದೆ:

"ವಾಕ್ಯದ ಮೊದಲೊಳ್ ಅವು ವಿದಿತ ವಿಶೇಷಣಪದಂ ಮೊದಲ ವಿಭಕ್ತಿಗಳನಂತ ಪದವೆತ್ತು ಅಗ್ರಕಾರಕ ಪದದ ವಿಭಕ್ತಿಯನೇ ಅನ್ವಯ ಮುಖದೊಳ್ ತಳೆವುವು."

ಇದಕ್ಕೆ ಪ್ರಯೋಗ-"ವೀರನುದಾರಂ ಶುಚಿ ಗಂಭೀರಂ ನಯಶಾಲಿ ಕೈದುವೊತ್ತ ದೇವಂ ಗಾರೆಜಗರ್ ನೃಪತುಂಗಂಗೆ...." ಇದರ ಅನ್ವಯವು "ವೀರಂಗೆ, ಉದಾರಂಗೆ, ಶುಚಿಗೆ, ಗಂಭೀರಂಗೆ, ನಯಶಾಲಿಗೆ.......ನೃಪತುಂಗಂಗೆ" ಎಂದಾಗುತ್ತದೆ. ಎಂದರೆ ವಿಶೇಷ್ಯದ ಚತುರ್ಥಿಯೇ ವಿಶೇಷಣದ ಪ್ರಥಮೆಗೂ ಅನ್ವಯದಲ್ಲಿ ಪ್ರಾಪ್ತವಾಗುತ್ತದೆ. ಮತ್ತು "ಎನ್ನ ಗೆಳೆಯಂ ಕರ್ಣನೊಳ್" ಇತ್ಯಾದಿ ಪ್ರಯೋಗಗಳು ಹಳಗನ್ನಡಕ್ಕೆ ಅಪರೂಪವಲ್ಲ. ಆ ಕಾರಣ, "ಅನ್ಯೋನ್ಯದಯಂ ಧರ್ಮದೊಳ್" ಎಂಬುದನ್ನು ಅಖಂಡವಾಗಿ ತೆಗೆದುಕೊಳ್ಳುವುದರಲ್ಲಿ, ಅವೆರಡಕ್ಕೂ ವಿಶೇಷಣ ವಿಶೇಷ್ಯ ಸಂಬಂಧವಿದೆಯೆಂದು ಭಾವಿಸುವುದರಲ್ಲಿ ಛಂದೋರಚನೆ ಯಾವ ಅಡ್ಡಿಯೂ ಆಗದು.

ಪಂಪನಿಗೆ ದತ್ತಿಯಾಗಿ ಬಂದ ಧರ್ಮಪುರಕ್ಕೆ ಮೊದಲಿದ್ದ ಹೆಸರೇನು ? ಮೊದಲು ಬೇರೊಂದು ಹೆಸರು ಆ ಊರಿಗಿದ್ದು, ಪಂಪನಿಗೆ ದತ್ತಿ ಕೊಡುವಾಗ ಅದಕ್ಕೆ 'ಧರ್ಮಪುರ'ವೆಂದು ಅರಿಕೇಸರಿ ನಾಮಕರಣ ಮಾಡಿರಬಹುದೆಂಬ ಊಹೆಯನ್ನು ಡಾ. ಕಲಬುರ್ಗಿಯವರು ಮಾಡಿದ್ದು ಆ ಊಹೆ ಸರಿಯಾಗಿರುವಂತೆ ತೋರುತ್ತದೆ. ಅವರು ಪಂಪನ "....ಪೆಸರಿಟ್ಟು ತಾನೀಯೆ ಪರಿಗನ ಧರ್ಮಭಂಡಾರದಂತೆ ಸಾರವಾದುದು ಬಿಟ್ಟ ಗ್ರಹಾರಮಾ ಬಚ್ಚೆ (ಸಬ್ಬಿ) ಸಾಸಿರದೊಳಂ ಧರ್ಮಪುರಂ" ಎಂಬ ಪದ್ಯವನ್ನು (ಪಂಪಭಾರತ,14.56) ಹುಣಸೂರು ತಾಲೂಕಿನ ಒಂದು ಶಾಸನವನ್ನು (ಎಕ. iv ಮೈಸೂರು ಆವೃತ್ತಿ. ಹುಣಸೂರು. 24) ಆಧಾರವಾಗಿ ತೆಗೆದುಕೊಂಡಿದ್ದಾರೆ. (ಶಾಸನ ವ್ಯಾಸಂಗ, II, 1975. ಪು.40) ಹುಣಸೂರಿನ ಕ್ರಿ.ಶ.1162ರ ಶಾಸನ ಪ್ರಕಾರ, ಆರಿದವಾಳಿಕೆ ಎಂಬ ನಾಡಿನ ತೊಗರವಾಡಿ ಎಂಬ ಹೆಸರಿನ ಊರಿಗೆ "ಧರ್ಮಾಪುರ" ಎಂದು ಹೊಸದಾಗಿ ನಾಮಕರಣ ಮಾಡಿ ಆ ಧರ್ಮಾಪುರಕ್ಕೆ ಮಂಟೆಯ ಬೂವನಹಳ್ಳಿ ಮೊದಲಾದ ಗ್ರಾಮಗಳನ್ನು ಸೇರಿಸಿ ಆ ಊರಿನ "ಕೇಶವ ದೇವಸ್ಥಾನದ"ದ ಪೂಜಾದಿಗಳಿಗೆ ದತ್ತಿಯನ್ನು ಬಿಟ್ಟು ಕೊಡಲಾಗುತ್ತದೆ. (ದತ್ತಿಯನ್ನು ಸ್ವೀಕರಿಸಿದ ವ್ಯಕ್ತಿ ಶ್ರೀಧರಯ್ಯನು ಒಬ್ಬ ಬ್ರಾಹ್ಮಣನೆಂಬುದೂ ಗಮನಾರ್ಹ.)[26] ಇಲ್ಲಿಯ ಸ್ವಾರಸ್ಯವೆಂದರೆ

26. ಡಾ. ಕಲಬುರ್ಗಿಯವರು 'ಅಗ್ರಹಾರ'ವೆಂಬುದು ಬ್ರಾಹ್ಮಣರಿಗೆ ಕೊಟ್ಟ ದತ್ತಿಯನ್ನು ಹೇಳುವಂತೆ, 'ಶಿವಪುರ'ವು ಶೈವರಿಗೆ ಕೊಟ್ಟ ದತ್ತಿಯನ್ನು ಹೇಳುವಂತೆ, 'ಧರ್ಮಪುರ'ವು ಜೈನರೂ ಸೇರಿದಂತೆ ಉಳಿದ ಮತೀಯರಿಗೆ ಕೊಡುತ್ತಿದ್ದ ದತ್ತಿಗಳಿಗೆ ಇದ್ದ ಪಾರಿಭಾಷಿಕ ಹೆಸರೆಂದು ಸಂದೇಹಿಸುತ್ತಾರೆ. ತಾವೇ ಉಲ್ಲೇಖಿಸಿರುವ ಶಾಸನದ ವಿವರಗಳನ್ನು ನೋಡದೆ ಅವಸರದಿಂದ ಮೇಲಿನ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಹುಣಸೂರು ತಾಲ್ಲೂಕಿನ ಈ ಶಾಸನವು ಕೇಶವ ದೇವರಿಗೆ ಕೊಟ್ಟ ದತ್ತಿಯನ್ನು ಹೇಳುವುದಲ್ಲದೆ, ಸ್ವೀಕರಿಸಿದಾತ ಹಾರೀತ ಗೋತ್ರದ ಶ್ರೀಧರಯ್ಯನೆಂದೇ ಹೇಳುವುದರಿಂದ ಅವರ ಸಂದೇಹ ತೀರಾ ನಿರಾಧಾರವಾದುದಾಗುತ್ತದೆ.

ಬೋಗರವಾಡಿ ಎಂಬ ಹೆಸರು ಜನರ ಬಾಯಿಂದ ಅಳಿಸಿ ಹೋಗಿ, ‘ಧರ್ಮಪುರ’ ಎಂಬ ಹೊಸ ಹೆಸರೇ ಜಾರಿಗೆಬಂದು ಇಂದಿಗೂ ಉಳಿದುಕೊಂಡುಬಂದಿರುವುದು. (ಶಾಸನದಲ್ಲಿ ಧರ್ಮಪುರದ ಹೆಸರು ಹಲವು ಕಡೆ ಬರುತ್ತದೆ) ; ಈ ದಿನ ಊರಿಗೆ ಧರ್ಮಪುರವೆಂಬುದೇ ಹೆಸರು. ಊರುಗಳನ್ನು ದತ್ತಿಯಾಗಿ ಕೊಡುವಾಗ ಕೆಲವೊಮ್ಮೆ ಹೆಸರನ್ನು ಬದಲಾಯಿಸುವ ಪದ್ಧತಿಯಿದ್ದುದಕ್ಕೆ, ಹಾಗೆ ಬದಲಾದ ಹೆಸರುಗಳು "ಧರ್ಮ"ದಿಂದ ಆರಂಭವಾಗುತ್ತಿದ್ದುದಕ್ಕೆ ಇದು ಉದಾಹರಣೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ಪಂಪನಿಗೆ ದತ್ತಿಯಾಗಿ ಬಂದ ಊರಿನ ಹೆಸರು ಮೊದಲು ಧರ್ಮಪುರ ಆಗಿರಲಿಲ್ಲವೆಂದೂ, ಆ ಹಿಂದೆ ಇದ್ದ ಬ್ರಾಹ್ಮಣರ ಅಗ್ರಹಾರಕ್ಕೆ ‘ಧರ್ಮಪುರ’ವೆಂಬ ಪುನರ್ನಾಮಕರಣಮಾಡಿ ಅರಿಕೇಸರಿ ಅದನ್ನು ಪಂಪನಿಗೆ ದತ್ತಿಯಾಗಿ ಕೊಟ್ಟನೆಂದೂ ಊಹಿಸುವುದರಲ್ಲಿ ತಪ್ಪೇನೂ ಕಾಣಿಸುವುದಿಲ್ಲ. ಹಾಗಾದರೆ, ಪಂಪನಿಗೆ ದತ್ತಿಯಾಗಿ ಬಂದ ಧರ್ಮಪುರದ ಹಿಂದಿನ ಹೆಸರೇನು ? ಇಲ್ಲಿ ಕೆಲವು ಆಂತರಿಕವಾದ ಸೂಕ್ಷ್ಮ ಸೂಚನೆಗಳಿವೆ. ಪಂಪ "ಶಾಸನವಗ್ರಹಾರಂ" ಎಂದು ಹೇಳುವುದರಿಂದ ಆ ಊರಿಗೆ "ಅಗ್ರಹಾರ" ಎಂಬುದೇ ಅಂಕಿತ ನಾಮವಾಗಿರಬಹುದು. ಆದರೆ, ಜಿನವಲ್ಲಭನು ಶಾಸನದಲ್ಲಿ ಊರನ್ನು "ದ್ವಿಜಾವಸಥ ಗ್ರಾಮ"ವೆಂದೂ (=ಬ್ರಾಹ್ಮಣರ ಊರು) ಪಕ್ಕದ ಗುಡ್ಡವನ್ನು "ದ್ವಿಜಾವಸಥ ಪರ್ವತ"ವೆಂದೂ (=ಬ್ರಾಹ್ಮಣರ ಊರಬೆಟ್ಟ) ಕರೆದಿದ್ದಾನೆ. ಇವು ಸಂಸ್ಕೃತೀಕೃತ ರೂಪಗಳೆಂಬಲ್ಲಿ ಅನುಮಾನವಿಲ್ಲ. ಊರಿನ ಹೆಸರೇ ಊರಿನ ಪಕ್ಕದ ಬೆಟ್ಟಕ್ಕೂ ಆ ಕಾಲಕ್ಕೆ ಅನ್ವಯವಾಗುತ್ತಿತ್ತು. ಊರಿನ ಹಳೆಯ ಹೆಸರನ್ನು ತೆಗೆದು ‘ಧರ್ಮಪುರ’ ಎಂದು ನಾಮಕರಣ ಮಾಡಿದಾಗ, ಹಳೆಯ ಹೆಸರು ಹೋಗಿ ಹೊಸ ಹೆಸರು ರೂಢಿಗೆ ಬಂದಿರಬೇಕು. ಆದರೆ, ಬೆಟ್ಟದ ಹಳೆಯ ಹೆಸರೂ ನಾಶವಾಯಿತೆಂದು ಹೇಳುವುದು ಹೇಗೆ ? ಈಗಿನ ಬೆಟ್ಟದ ಹೆಸರು "ಬೊಮ್ಮಲಮ್ಮ ಗುಟ್ಟ" ಎಂದಿದೆ "ಬೊಮ್ಮಲು" ಎಂದರೆ ಬೊಂಬೆಗಳು ಎಂದು ತೆಲುಗಿನಲ್ಲಿ ಅರ್ಥವಿರುವುದರಿಂದ, ಬೊಂಬೆಗಳ ಅಮ್ಮನ ಬೆಟ್ಟ ಎಂದು ವಿವರಣೆ ಕೊಡುವುದರಲ್ಲಿ ತಪ್ಪೇನೂ ಕಾಣಿಸದು. ಆದರೆ, ಕರ್ನಾಟಕದಲ್ಲಿ (ಹಾಗೆಯೇ ಬಹುಶಃ ಆಂಧ್ರದಲ್ಲಿಯೂ) ಹಲವು ಅಗ್ರಹಾರಗಳ ಹೆಸರುಗಳು ಹಾರುವ-(<ಪಾರ್ವ), ಬೊಮ್ಮ-(<ಬ್ರಾಹ್ಮಣ)ದಿಂದ ಆರಂಭವಾಗುವುದನ್ನು ನಾನು ಸಾಧಾರವಾಗಿ ತೋರಿಸಿದ್ದೇನೆ. (ನನ್ನ "ವಾಗರ್ಥ" ಕೃತಿಯಲ್ಲಿ ಬ್ರಾಹ್ಮಣರ ಊರಿನ ಹೆಸರುಗಳ ಸಂಪ್ರಬಂಧವನ್ನು ನೋಡಿ) ಉದಾ: ಹಾರೋಹಳ್ಳಿ, ಹಾರೋಕಟ್ಟೆ, ಬೊಮ್ಮನಹಳ್ಳಿ, ಬೊಮ್ಮೇನಹಳ್ಳಿ, ಬೊಮ್ಮೂರು ಇವೆಲ್ಲ ಬ್ರಾಹ್ಮಣರಿದ್ದ ಊರುಗಳನ್ನು ಹೇಳುತ್ತವೆ. ಹಾಗಿದ್ದರೆ "ಬೊಮ್ಮಲಮ್ಮ ಗುಟ್ಟ"ದ ಹೆಸರಿನ ಪೂರ್ವಾರ್ಧ "ಬೊಮ್ಮಲು" ಎಂಬುದು ಬ್ರಾಹ್ಮಣರು ಎಂಬರ್ಥದ ತೆಲುಗು ಪದ ಏಕಾಗಿರಬಾರದು? ಬೆಟ್ಟಕ್ಕೆ ಹೆಸರು ಬಂದುದು ಊರಿನಿಂದ ಎಂಬುದು ಜಿನವಲ್ಲಭನ ಶಾಸನದಿಂದ ಸೂಚಿತವಾಗಿದೆ. ಹಾಗಿದ್ದರೆ, "ಧರ್ಮಪುರ" ಎಂಬ ನಾಮಕರಣಕ್ಕೆ ಮೊದಲು ಆ ಊರಿಗೆ "ಬೊಮ್ಮಲು-" ದಿಂದ ಆರಂಭವಾಗುವ ಯಾವುದೋ

ಹೆಸರಿದ್ದಿರಬಹುದೇ ? ಅದು *ಬೊಮ್ಮಲೂರು ಇರಬಹುದು. *ಬೊಮ್ಮಲುಪಲ್ಲಿ ಇ
ಬಹುದು(ನಕ್ಷತ್ರ ಚಿಹ್ನೆ ಪುನಾರಚಿತವಾದ ಕಲ್ಪಿತ ರೂಪವನ್ನು ಹೇಳುತ್ತದೆ).ಈಗಿನ ಹಲ
ಊರಿನ ಪಟ್ಟಿಗಳ ಹೆಸರುಗಳಲ್ಲಿ ಬಹು ಹಿಂದಿನ ಹೆಸರುಗಳೂ ಅವುಗಳ ಉಚ್ಚಾರವ
ಉದಾ:ಗೆ ''ಧರ್ಮಪುರ'', ''ಗಂಗಧಾರ್'' ಅವಶೇಷ ರೂಪದಲ್ಲಿ ಉಳಿದು ಬಂದಿರ
ವುದಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು. ಆ ಕಾರಣ, ಧರ್ಮಪುರದ
ಹಿಂದಿನ ಹೆಸರು 'ಅಗ್ರಹಾರ' ವೆಂದೇ ಇರಬಹುದು. ಆದರೆ, ''ಬೊಮ್ಮಲಮ್ಮಗುಟ್ಟ''
ಹೆಸರು ನೋಡಿದರೆ ಆ ಊರಿಗೆ ''ಬೊಮ್ಮಲು-'' ಪದದಿಂದ ಆರಂಭವಾಗುವ ಹೆಸರು
ಇದ್ದ ಸಾಧ್ಯತೆಗಳೇ ಹೆಚ್ಚು. (ಶಾಸನದ ''ದ್ವಿಜಾವಸಥಗ್ರಾಮ'' ಎಂಬುದೂ ಇದಕ್ಕೆ
ಪೋಷಕವಾಗಿದೆ) ಊರಿನ ಹಳೆಯ ಹೆಸರು ಮಾಯವಾಗಿ, ಧರ್ಮಪುರವೂ ನಾಶವಾಗಿ
ಹೋದಮೇಲೆ, ಎಂದರೆ ಅಲ್ಲಿಂದ ಬ್ರಾಹ್ಮಣರು ಬೇರೆ ಊರುಗಳಿಗೆ ಹೋಗಿ ನೆಲಸಿದ
ಮೇಲೆ, ''ಬೊಮ್ಮಲು'' ಪದಕ್ಕೆ ಬ್ರಾಹ್ಮಣರು ಎಂಬರ್ಥವನ್ನು ಹೇಳುವುದು ಜನಕ್ಕೆ
ಕಷ್ಟವಾದಾಗ, ಸಿಡ್ಡಿಶಿಲೆಯ ಮೇಲಿನ ಬೊಂಬೆಗಳ ಸಹಾಯದಿಂದ ಆ ಪದಕ್ಕೆ ಹೊಸ
ಅರ್ಥವನ್ನು ಕಲ್ಪಿಸುವುದು ಅನಿವಾರ್ಯವೂ ಆಯಿತು. ಸುಲಭವೂ ಆಯಿತು. ಆ ಹೆಸರಿನ
ಮಧ್ಯೆ ಚಕ್ರೇಶ್ವರಿ ದೇವತೆ ಬಿಟ್ಟ ''ಅಮ್ಮ''ನಾಗಿ ಸೇರಿಕೊಂಡಳು.

ತೆಲುಗಲ್ಲಿ 'ಬ್ರಾಹ್ಮಣ'ದ ತದ್ಭವವಾಗಿ ಬಮ್ಮ, ಬೊಮ್ಮ ಎರಡೂ ಉಂಟು.
ಆಂಧ್ರಪ್ರದೇಶದಲ್ಲಿ ಬ್ರಾಹ್ಮಣಪಲ್ಲಿ, ಬ್ರಾಹ್ಮಣ ಚೆರವು ಇತ್ಯಾದಿ ಊರ ಹೆಸರುಗಳಿರು
ವಂತೆ ಬೊಮ್ಮಕೊಂಡ ಪಳ್ಳಿ, ಬೊಮ್ಮಿಪರ್ತಿ, ಬೊಮ್ಮನಗುಂಟ ಇತ್ಯಾದಿ
ಹೆಸರುಗಳೂ ಇವೆ.

ಇದು ಒಂದು ಸಾಧ್ಯ ಪುನಾರಚನೆ. ಮತ್ತು ವಿದ್ವಾಂಸರ ಪರಿಶೀಲನೆಗೆ ಯೋಗ್ಯ
ವಾದ್ದು ಎಂಬುದು ನನ್ನ ನಂಬಿಕೆಯಾಗಿದೆ.



ಚಿತ್ರ ೧: ಬೊಮ್ಮಲಮ್ಮಗುಟ್ಟ. ಇಡೀ ಬೆಟ್ಟವನ್ನು 'ವೃಷಭಾಚಲ'ವೆಂದೂ. ಬೆಟ್ಟದ ಬಲ ಮಧ್ಯದ ದೊಡ್ಡ ಬಂಡೆಯನ್ನು 'ಸಿದ್ಧಶಿಲೆ'ಯೆಂದೂ ಕರೆಯಲಾಗಿದೆ. ಜನರಿರುವ ಜಾಗ 'ಪಾತಚೆರುವಿ'ನ ಉತ್ತರದ ತುದಿ–ಅಲ್ಲಿ ಬೊಮ್ಮಲಮ್ಮಗುಟ್ಟವಿದೆ. ದಕ್ಷಿಣದ ತುದಿಯಲ್ಲಿ ಕುರಿಕ್ಯಾಲ ಗ್ರಾಮ ಇದೆ. ಬೆಟ್ಟದ ಬಲಭಾಗದ ತಪ್ಪಲಿನ ಅಂಚು ಧರ್ಮಪುರ ನಿವೇಶನದ ಒಂದು ಭಾಗ.

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೨: ಧರ್ಮಪುರ ನಿವೇಶನದ ಇಟ್ಟಿಗೆ. ಮಡಕೆ ಅವಶೇಷಗಳು.



ಚಿತ್ರ ೩ : ಚಕ್ರೇಶ್ವರಿ ವಿಗ್ರಹದ ಮುಂದಿನ ಬಂಡೆಯಲ್ಲಿ ಪದ್ಮ–ಪಾದ
(ಪಾದಗಳು ಜಿನವಲ್ಲಭನ ಗುರು ಜಯಣಂದಿ ಭಟಾರ ಮುನಿಗಳವು ಇರಬಹುದು.)
[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೪: ಚಕ್ರೇಶ್ವರಿ ಶಿಲ್ಪವಿರುವ 'ಸಿದ್ಧಶಿಲೆ'ಯ ಮುಂಭಾಗದ ಬಂಡೆ. ಬೆಟ್ಟದ ಬುಡದಲ್ಲಿರುವ ಬಯಲೇ 'ಧರ್ಮಪುರ' ನಿವೇಶನ.
(ಸ್ಥಳೀಯ ಮಾರ್ಗದರ್ಶಕರು, ಲೇಖಕ ಮತ್ತು ಪುರಾತತ್ವಶೋಧಕ ಡಾ. ರಾಮಚಂದ್ರಮೂರ್ತಿ.)

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೫: ಧರ್ಮಾಪುರದ ನಿವೇಶನ–ಬೆಟ್ಟದ ಮೇಲಿಂದ ತೆಗೆದ ಚಿತ್ರ, ಬಂಡೆಗಳು, ಕೊರಕಲು,
ವಿದ್ಯುತ್ ಕಂಬಗಳು ಇರುವ ಜಾಗವೇ ಆ ನಿವೇಶನ.

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]





ಚಿತ್ರ ೭: 'ಉಡನ್ ಚೆರುವು'. ಎಡಗಡೆಯ ತುದಿಯಲ್ಲಿ ಬೊಮ್ಮಲಮ್ಮಗುಟ್ಟವೂ ಬಲತುದಿಯಲ್ಲಿ ಇನ್ನೊಂದು ಚಿಕ್ಕ ಗುಡ್ಡವೂ ಇವೆ.
'ಉಡನ್ ಚೆರುವು' ಎಂಬುದೇ ಪಂಪನ ಹೆಸರಲ್ಲಿ ಕಟ್ಟಿಸಿದ್ದ ಕವಿತಾಗುಣಾರ್ಣವ ಕೆರೆ.

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೮: ಬೆಟ್ಟದ ಪೂರ್ವದ ಬುಡದಲ್ಲಿನ ಒಂದು ಗುಹೆ.

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೯: ಬೆಟ್ಟದ ಮೇಲಿನ ದೊಣೆ.

[ಚಿತ್ರ: ಡಾ. ಆರ್. ಶೇಷಶಾಸ್ತ್ರಿ]



ಚಿತ್ರ ೧೦: "ಅನ್ವಂತ ಜಿನಬಿಂಬ"ಗಳ ಬಳಿಯ ಆದಿನಾಥ ಮತ್ತು ಮಹಾವೀರ ತೀರ್ಥಂಕರರು.

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೧೧ : ಚಕ್ರೇಶ್ವರಿ ವಿಗ್ರಹ (ಕೆಳಗೆ ಉದ್ದಕ್ಕೂ ಜಿನವಲ್ಲಭನ ಶಿಲಾಶಾಸನವನ್ನು ಕೆತ್ತಲಾಗಿದೆ)

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಬಿ. ಕೇಸರ್‌ಸಿಂಗ್]



ಚಿತ್ರ ೧೨ : ಒಂದು ಪಾರ್ಶ್ವದ ಜಿನಪ್ರತಿಮೆಗಳ ಸಮೀಪದ ನೋಟ.

[ಚಿತ್ರ : ಡಾ. ಆರ್. ಶೇಷಶಾಸ್ತ್ರಿ ಮತ್ತು ಜಿ. ಕೇಸರ್‌ಸಿಂಗ್]

ಶಾ. ಆರ್ಶ್ವಿಯುಸ್

ಬಾಣನ ಪ್ರಕೃತಿವರ್ಣನಾ ಕೌಶಲ

ಕಾವ್ಯವೆಂಬುದು ಲೋಕೋತ್ತರ ವರ್ಣನಾ ನಿಪುಣನಾದ ಕವಿಯ ಕರ್ಮವೆಂದು ಮಮ್ಮಟ ಹೇಳಿದ್ದಾನೆ. ಲೋಕೋತ್ತರ ವರ್ಣನಾನೈಪುಣ್ಯ ಪ್ರತಿಭೈಕಸಾಧ್ಯವಾದುದು. ಭಟ್ಟತೌತನ 'ಕಾವ್ಯಕೌತುಕ'ದಿಂದ ಆಲಂಕಾರಿಕರು ಉದ್ಧರಿಸಿರುವ ಕೆಳಗಿನ ವಾಕ್ಯಗಳು ತುಂಬ ಪ್ರಸಿದ್ಧವಾಗಿವೆ :

ಪ್ರಜ್ಞಾನವನವೋನ್ಮೇಷ ಶಾಲಿನೀ ಪ್ರತಿಭಾಮತಾ
ತದನುಪ್ರಾಣನಾ ಜೀವದ್ವರ್ಣನಾ ನಿಪುಣಃ ಕವಿಃ
ತಸ್ಯ ಕರ್ಮಸ್ಮೃತಂ ಕಾವ್ಯಂ........[1]

ಪ್ರತಿಭೆಯ ಉಸಿರಿನಿಂದ ಜೀವತುಂಬಿ ವರ್ಣಿಸಬಲ್ಲ ನಿಪುಣನೇ ಕವಿಯೆಂಬ ಮೇಲಿನ ಹೇಳಿಕೆ ಆಮೋದಯೋಗ್ಯವಾದುದು. ದರ್ಶನ ವರ್ಣನೆಗಳಿಂದ ಕವಿಯೆಂಬ ಪ್ರಸಿದ್ಧಿ ಉಂಟಾಗುತ್ತದೆಂದು ಕೂಡ ಭಟ್ಟತೌತ ಹೇಳಿದ್ದಾನೆ. ಈ ಎಲ್ಲ ಹೇಳಿಕೆಗಳಿಗೂ ಸಾಕಾರ ನಿದರ್ಶನವಂತೆ ಬಾಣನ ಕಾದಂಬರೀ ಕಾವ್ಯ ರಚಿತವಾಗಿದೆ.

ಪರಂಪರೆ

ಬಾಣನಿಗಿಂತ ಮೊದಲೇ ಸಂಸ್ಕೃತದಲ್ಲಿ ಭವ್ಯವಾದ ವರ್ಣನಾ ಪರಂಪರೆ ಇದೆ. ಸಂಸ್ಕೃತ ಸಾಹಿತ್ಯದ ವರ್ಣನಾ ವೈಶಿಷ್ಟ್ಯ ಬೆರಗುಗೊಳಿಸುವಂತಹದು. ಪ್ರಕೃತಿ ಶಕ್ತಿಗಳನ್ನು ದೇವತಾ ಸ್ವರೂಪವೆಂದು ಆರಾಧಿಸಿದ ಪ್ರಾಚೀನ ಸಮಾಜಗಳಲ್ಲಿ ಸ್ತುತಿರೂಪವಾಗಿ ಕಾವ್ಯ ಹುಟ್ಟಿದುದಕ್ಕೆ ನಿದರ್ಶನಗಳಿವೆ. ಭಾರತದ ಪ್ರಾಚೀನಾರ್ಯ ಸಮಾಜದ ಋಗ್ವೇದ ಸಂಹಿತೆ ಪ್ರಕೃತಿ ಶಕ್ತಿಗಳ ವರ್ಣನೆಗಳಿಂದ ಕೂಡಿದ ಅತಿ ಪ್ರಾಚೀನ ಗ್ರಂಥ. ಈ ಗ್ರಂಥದ ವರ್ಣನೆಗಳೇ ಅನಂತರ ಕಾಲದ ಭಾರತೀಯ ಕಾವ್ಯರೀತಿಗಳಿಗೆ ಬೀಜಪ್ರಾಯವಾಗಿವೆ.

---

1. ಔಚಿತ್ಯ ವಿಚಾರ ಚರ್ಚಾ. 35ನೆಯ ವೃತ್ತಿ 'ಪ್ರಜ್ಞಾನವನವೋಲ್ಲೇಖಶಾಲಿನೀ....' ಎಂಬ ಪಾಠಾಂತರವೂ ಇದೆ (ಹೇಮಚಂದ್ರನ ಕಾವ್ಯಾನುಶಾಸನ, ಪು. 3)

ವಿಸ್ತಾರವಾಗಿ ವರ್ಣನೆಗಳನ್ನು ಪ್ರಯೋಗಿಸಿದ ಪ್ರಪ್ರಥಮ ಆರ್ಯಕವಿ ವಾಲ್ಮೀಕಿ. ಕಾದಂಬರೀ ಕಾವ್ಯದ ವರ್ಣನೆಗಳಲ್ಲಿ ವಾಲ್ಮೀಕಿ ಪ್ರಭಾವ ಹಲವೆಡೆಗಳಲ್ಲಿ ಕಾಣುತ್ತದೆ. ವಾಲ್ಮೀಕಿಯ ವಸ್ತು-ಸ್ಥಿತಿ-ವ್ಯಕ್ತಿ-ಚೇಷ್ಟಾ-ಘಟನಾದಿ ವರ್ಣನೆಗಳು ಅನಂತರ ಕಾಲದ ಕವಿಗಳ ಮೇಲೆ ಅಪಾರವಾದ ಪ್ರಭಾವವನ್ನು ಬೀರಿವೆ. ಗದ್ಯಕಾವ್ಯ ರೀತಿಯಲ್ಲಿ ಬಾಣನಿಗೆ ಸುಬಂಧು ಮಾರ್ಗದರ್ಶಕನಾದರೂ, ಕಾವ್ಯ ರಚನೆಯಲ್ಲಿ ವಾಲ್ಮೀಕಿ, ಕಾಳಿದಾಸರು ಗುರುಗಳೆಂದು ಹೇಳಬಹುದು. ಕವಿಕುಲ ಗುರುವಾದ ಕಾಳಿದಾಸನ ವರ್ಣನೆಗಳು ಕೂಡ ಅನಂತರ ಕಾಲದ ಕವಿಗಳಿಗೆ ಮಾರ್ಗದೀಪಗಳಾಗಿವೆ.

ಬಾಣನ ಕಾಲಕ್ಕೆ ವಿವಿಧ ಕಾವ್ಯಗಳಲ್ಲಿ ವೈವಿಧ್ಯಮಯವಾದ ವರ್ಣನೆಗಳು ಮೂಡಿಬಂದರೂ, ವರ್ಣನೆಗಳಿಗೆ ಒಂದು ಲಾಕ್ಷಣಿಕ ಸಂಪ್ರದಾಯ ಏರ್ಪಟ್ಟಂತೆ ಕಾಣುವುದಿಲ್ಲ. ಭಾಮಹ ಕೆಲವು ವರ್ಣನೆಗಳನ್ನು ಹೆಸರಿಸಿರುವನಾದರೂ,[2] ಅವುಗಳನ್ನು ವರ್ಣನೆಗಳೆಂದು ಕರೆದಿಲ್ಲ. ಈ ವರ್ಣನೆಗಳಲ್ಲಿ ಪ್ರಕೃತಿ ವರ್ಣನೆಗಳು ಯಾವುವೂ ಇಲ್ಲ. ದಂಡಿ ತನ್ನ 'ಕಾವ್ಯಾದರ್ಶ'ದಲ್ಲಿ ಹದಿನೆಂಟು ವರ್ಣನೆಗಳನ್ನು ಹೆಸರಿಸಿ[3] ಒಂದು ಲಾಕ್ಷಣಿಕ ಸಂಪ್ರದಾಯವನ್ನು ಏರ್ಪಡಿಸಿದ್ದಾನೆ. ಈ ಕಾರಣಗಳಿಂದ ಬಾಣ ಮಹಾಕವಿ ಆಲಂಕಾರಿಕ ವರ್ಣನಾವಿಧಿಗಿಂತ ಹೆಚ್ಚಾಗಿ ಪೂರ್ವಕಾವ್ಯ ಪ್ರಯೋಗಗಳನ್ನು ಮಾತ್ರ ಆದರ್ಶವಾಗಿಟ್ಟುಕೊಂಡಿರಬಹುದೆಂದು ತೋರುತ್ತದೆ.

ಬಾಣನ ವರ್ಣನೆಗಳು

ಬಾಣನ ವರ್ಣನೆಗಳು ವಿಪುಲವಾಗಿ, ವೈವಿಧ್ಯಮಯವಾಗಿ, ಸೂಕ್ಷ್ಮವಾಗಿ, ಸುಂದರವಾಗಿ ಮೂಡಿಬಂದಿವೆ. ಕಾದಂಬರೀ ಕಾವ್ಯದ ವರ್ಣನಾ ವೈಶದ್ಯವನ್ನು, ವೈವಿಧ್ಯವನ್ನು ತಿಳಿದುಕೊಳ್ಳಲು ಕೆಳಗಿನ ಪ್ರಕೃತಿ ವರ್ಣನೆಗಳ ಪಟ್ಟಿ ಸಹಾಯ ಮಾಡುತ್ತದೆ :

	ವರ್ಣಿತವಾದ ಅಂಶ	ಕಾಲೆಪ್ರತಿಯಲ್ಲಿ ಪುಟಸಂಖ್ಯೆ
1	ವಿಂಧ್ಯಾಟವಿಯ ವರ್ಣನೆ	36–40
2	ಅಗಸ್ತ್ಯಾಶ್ರಮ	41–42
3	ಪಂಚವಟಿ	43–44
4	ಪಂಪಾಸರಸ್	44–46

2 'ಮಂತ್ರದೂತ ಪ್ರಯಾಣಾಜಿ ನಾಯಕಾಭ್ಯುದಯೈಃ ಚಯತ್'-ಭಾಮಹಾಲಂಕಾರ, 1-20

3. 'ನಗರಾರ್ಣವ ಶೈಲರ್ತು ಚಂದ್ರಾರ್ಕೋದಯ ವರ್ಣನೈಃ।
ಉದ್ಯಾನ ಸಲಿಲ ಕ್ರೀಡಾಮಧುಪಾನ ರತೋತ್ಸವೈಃ॥
ವಿಪ್ರಲಂಭೈರ್ವಿವಾಹೈಶ್ಚ ಕುಮಾರೋದಯ ವರ್ಣನೈಃ।
ಮಂತ್ರದೂತ ಪ್ರಯಾಣಾಜಿ ನಾಯಕಾಭ್ಯುದಯೈರಪಿ॥

—ದಂಡಿ, ಕಾವ್ಯಾದರ್ಶ, 1-16, 1-17, 1-18

5	ಶಾಲ್ಮಲೀತರು	46–47
6	ಅಲ್ಲಿಯ ಹಕ್ಕಿಗಳು	47–48
7	ಪ್ರಭಾತ ವರ್ಣನೆ	49–52
8	ಜಾಬಾಲಿಯ ಆಶ್ರಮ	68–72
9	ಸೂರ್ಯಾಸ್ತಮಯ	81–82, 237–238
0	ಚಂದ್ರೋದಯ	82–84
1	ತರುಷಂಡ	196–197
2	ಅಚ್ಛೋದ	197–200
3	ಚಂದ್ರೋದಯ	249–250
4	ಹಿಮಗೃಹ	321–323

ಬಾಣೋಚ್ಛಿಷ್ಟಂ ಜಗತ್ಸರ್ವಂ'

ಭಾರತೀಯ ಸಾಹಿತ್ಯದ ಮೇಲೆ ಬಾಣನ ಪ್ರಭಾವ ಎಂಥದೆಂಬುದನ್ನು ಮೇಲಿನ ...ಳಿಕೆ ಸೂಚಿಸುತ್ತದೆ. ವರ್ಣನೆಗಳಲ್ಲಿ ಬಾಣನ ಸಮಗ್ರತೆ, ಸೂಕ್ಷ್ಮಪರಿಶೀಲನೆ, ವಿಸ್ತಾರ ...ಣಗಳಿಗೆ ಒಂದೊಂದು ವರ್ಣನೆಯೂ ನಿದರ್ಶನವಾಗಿರುತ್ತದೆ. ಅಚ್ಛೋದ ಸರೋ...ರದ ವರ್ಣನೆಯಂತಹದು ಜಗತ್ತಿನ ಸಾಹಿತ್ಯದಲ್ಲೇ ಅಪೂರ್ವ ಮತ್ತು ಅದ್ವಿತೀಯ ...ಂದು ಹೇಳಬಹುದು.

. ಮರಗಳ ತೋಪಿನ ಮಧ್ಯದಲ್ಲಿ ತ್ರೈಲೋಕ್ಯಲಕ್ಷ್ಮಿಯ ರನ್ನಗನ್ನಡಿಯಂತೆ, ...ೂಮಾತೆಯ ಸ್ಫಟಿಕ ಶಿಲಾಗೃಹದಂತೆ, ಸಾಗರಗಳ ನಿರ್ಗಮನ ಮಾರ್ಗದಂತೆ, ದಿಕ್ಕುಗಳೇ ...ರಗಿ ನಿರ್ಮಿತವಾದಂತೆ, ಆಕಾಶವೇ ನೀರಿನ ರೂಪಿನಿಂದ ಧರೆಗಿಳಿದು ಬಂದಂತೆ ಇತ್ಯಾದಿ ...ನಾಗಿ ಊಹಿಸಲಾಗಿದೆ. ಅಷ್ಟೇ ಅಲ್ಲದೆ ಅಚ್ಛೋದ ಸರೋವರ ಸಪ್ತರ್ಷಿಗಳಿಗೂ ...ಷ್ಟದಿಕ್ಪಾಲಕರಿಗೂ ಪ್ರಿಯವಾದುದೆಂದು ಹೇಳಲಾಗಿದೆ. ಶ್ಲಿಷ್ಟೋಪಮೆಗಳನ್ನು ಮಾಲೆ ...ಾಲೆಯಾಗಿ ಬಳಸುತ್ತಾ ಸರೋವರದ ಭವ್ಯತೆಯನ್ನು ಮನದಟ್ಟಾಗುವಂತೆ ಮಾಡುವ ...ಾಣನ ಜಾಣ್ಮೆ ಬೆರಗುಂಟುಮಾಡುತ್ತದೆ. ಅಚ್ಛೋದ ಸರೋವರ ದರ್ಶನೀಯ ...ಾದುದೆಂಬುದನ್ನು ಅತಿಶಯವಾಗಿ ತಿಳಿಸಲು ಬಾಣಕವಿ ಬಳಸಿರುವ ಪರ್ಯಾಯ ...ಬ್ದಗಳ ಮಾಲೆಯನ್ನು ಕೆಳಗಿನ ಭಾಗದಲ್ಲಿ ಕಾಣಬಹುದು.

> "ಅಹೋ ! ನಿಷ್ಫಲಮಪಿ ಮೇ ತುರಗ ಮಿಥುನಾನುಸರಣಮ್
> ಏತದಾಲೋಕಯತಃ ಸರಃ ಸಫಲತಾಮುಪಗತಮ್ ಅದ್ಯ
> ಪರಿಸಮಾಪ್ತಮೀಕ್ಷಣಯುಗಲಸ್ಯ ದ್ರಷ್ಟವ್ಯದರ್ಶನ ಫಲಮ್
> ಆಲೋಕಿತಃ ಖಲು ರಮಣೀಯಾನಾಮನ್ತಃ, ದೃಷ್ಟ

ಆಪ್ಲಾವನೀಯಾನಾಮವಧಿಃ ವೀಕ್ಷಿತಾ ಮನೋಹರಣಾಂ
ಸೀಮಾನ್ತಲೇಖಾ, ಪ್ರತ್ಯಕ್ಷೀಕೃತಾ ಪ್ರೀತಿಜನನಾನಾಂ ಪರಿಸಮಾಪ್ತಿಃ
ವಿಲೋಕಿತಾ ದರ್ಶನೀಯಾನಾಮವಸಾನಭೂಮಿಃ"

ಅಚ್ಛೋದ ಸರೋವರದ ವರ್ಣನೆಯಿಂದ ಮುಂದಿನ ಕಥಾಭಾಗಕ್ಕೆ ಹಿನ್ನೆಲೆಯಾಗಿ ಒಂದು ದಿವ್ಯ ವಾತಾವರಣವನ್ನು ಬಾಣ ಸೃಷ್ಟಿಸಿದ್ದಾನೆ. ಒಂದುಕಡೆ ಭವ್ಯವಾದ ಸರೋವರ, ಇನ್ನೊಂದು ಕಡೆ ಪವಿತ್ರ ಶಿವಾಲಯ ಸರಿಯಾದ ವಾತಾವರಣವನ್ನು ಸೃಷ್ಟಿಸಿವೆ. ಪ್ರಕರಣ ಯೋಗ್ಯವಾಗಿ ವರ್ಣಿಸುವ ಜಾಣ್ಮೆ ಇಲ್ಲಿದೆ.

ಕೆಲವು ಆಕ್ಷೇಪಗಳು

ಬಾಣನ ವರ್ಣನಾವಿಧಾನದ ಬಗೆಗೆ ಕೆಲವು ಆಕ್ಷೇಪಗಳಿಲ್ಲದಿಲ್ಲ. ಸಮಗ್ರವಾಗಿ ಅತ್ಯಂತ ಸೂಕ್ಷ್ಮವಾಗಿ ವರ್ಣಿಸುವುದರಿಂದ ಬಾಣನ ವರ್ಣನೆಗಳಲ್ಲಿ ವಿಶೇಷ ಗುಣಗಳು ಒಂದೇ ಮೊತ್ತವಾಗಿ ಕಾಣಿಸುತ್ತವೆಯೇ ಹೊರತು, ವರ್ಣಿತ ವಸ್ತು ಪ್ರತ್ಯೇಕವಾಗಿ ಕಾಣಿಸುವುದಿಲ್ಲವೆಂದು ಒಂದು ಆಕ್ಷೇಪ. ಅಚ್ಛೋದ ಸರೋವರವಾಗಲಿ, ಶಾಲ್ಮಲೀತರುವಾಗಲಿ ಅತಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆಯಾದರೂ ಅವುಗಳ ಪ್ರತ್ಯೇಕಗುಣ ಏನು ಕಾಣದೆಂದು ಕೆಲವರು ವಿಮರ್ಶಿಸಿದ್ದಾರೆ. ಆದರೆ ಬಾಣನ ದೃಷ್ಟಿ ಅತ್ಮಗೋಚರವಾದ ಸಾಮಾನ್ಯಗುಣ ಪ್ರತಿಪಾದನೆ ಅಲ್ಲ. ಅವನ ವರ್ಣನೆಗಳು ಅವಾಸ್ತವಿಕವಾಗಿರಬಹುದು; ಆದರೆ ಕಾವ್ಯ ಕಲೆಯನ್ನು ಅತ್ಯುನ್ನತವಾಗಿ ಪ್ರತಿಬಿಂಬಿಸುತ್ತವೆಂಬುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಬಾಣನ ಪ್ರಕೃತಿ ವರ್ಣನೆಗಳು ಸರ್ವ ಪ್ರಕೃತಿ ವಸ್ತು ರಮಣೀಯತಾಪುಂಜೀಭಾವಗಳೆನ್ನಬಹುದು.

ಬಾಣಕವಿ ಅಲ್ಪವಸ್ತುವನ್ನೂ ಭೂರಿವರ್ಣನೆಗೆ ಗುರಿಮಾಡುತ್ತಾನೆಂಬುದು ಇನ್ನೊಂದು ಆಕ್ಷೇಪ. ಯಾವುದನ್ನು ವರ್ಣಿಸಿದರೂ ಅದೇ ಸರ್ವಶ್ರೇಷ್ಠವೆಂದು ಈ ಕವಿ ಹೇಳುತ್ತಾನೆ. ಆದರೆ ಕಥಾಗಮನದಲ್ಲಿ ಕೌತುಕವನ್ನೂ ಆಶ್ಚರ್ಯವನ್ನೂ ಆಸಕ್ತಿಯನ್ನೂ ಹುಟ್ಟಿಸಲು ಬಾಣನ ಶೈಲಿ ಸಾಕಷ್ಟು ಯಶಸ್ವಿಯಾಗಿದೆ ಎಂದು ಹೇಳಬಹುದು.

ಪ್ರಕೃತಿ ವರ್ಣನೆಗಳು-ಬಾಣನ ಕೊಡುಗೆ

ವ್ಯಕ್ತ ಪ್ರಕೃತಿಯು ಮನುಷ್ಯೇತರ ಜೀವ. ನಗತರು ಸರೋವರ ನದ್ಯಾದಿಗಳು, ದಿವಾರಾತ್ರಿ, ಸೂರ್ಯಚಂದ್ರ ನಕ್ಷತ್ರಾದಿಗಳು, ಋತು ಸಮುದ್ರ ಗಗನಾದಿಗಳ ರಮಣೀಯ ವರ್ಣನೆಗಳಿಂದ ಸಂಸ್ಕೃತ ಸಾಹಿತ್ಯ ಸಂಪದ್ಭರಿತವಾಗಿದೆ. ಈ ರೀತಿಯ ಕಾವ್ಯ ಸಾಮಗ್ರಿ ವೇದಕಾಲದಿಂದಲೂ ಭಾರತೀಯ ಸಾಹಿತ್ಯದಲ್ಲಿದೆ. ವಾಲ್ಮೀಕಿ ವ್ಯಾಸ ಕಾಳಿದಾಸರ ಅನಂತರ ಪ್ರಕೃತಿ ವರ್ಣನೆಗಳ ವಿಷಯದಲ್ಲಿ ಹೆಸರಿಸಬೇಕಾದ ಕವಿಗಳೆಂದರೆ ಬಾಣ ಮತ್ತು ಭವಭೂತಿ. ಕಾಳಿದಾಸನ ಮನೋಹರ ಗುಣ, ಭವಭೂತಿಯ ತೀವ್ರತೆ ಕಾದಂಬರಿಯಲ್ಲಿ ಬೆರೆತಿವೆ.

ಕಾದಂಬರೀ ಕಾವ್ಯ ಪ್ರಕೃತಿ ವರ್ಣನೆಗಳಿಗೆ ನಿಧಿಯಾಗಿದೆ. ಕೆಲವೆಡೆ ಸ್ವಭಾವೋಕ್ತಿ ಈ ಕವಿಯ ಅಭಿವ್ಯಕ್ತಿ ರೀತಿಯಾದರೆ. ಕೆಲವೆಡೆ ವಕ್ರೋಕ್ತಿ ಪ್ರಕೃತಿಗೆ ವಿನೂತ್ನ ರೂಪ ವನ್ನು ನೀಡಿದೆ. ಕವಿಗಳಲ್ಲಿ ಕೆಲವರು ಪೂರ್ವಕವಿ ವರ್ಣನೆಗಳನ್ನೇ ಆಧಾರವಾಗಿಟ್ಟುಕೊಂಡು ಬರೆಯುವುದನ್ನು ನೋಡುತ್ತೇವೆ, ಅಂತಹವರಿಗೆ ಸ್ವಾನುಭವ ಶೂನ್ಯವಾಗಿರುತ್ತದೆ. ಆ ರೀತಿಯ ವರ್ಣನೆಗಳು ಕೃತಕವಾಗಿ ಕಂಡುಬರುತ್ತವೆ. ಆದರೆ ಬಾಣನ ಕೈಯಲ್ಲಿ ಪ್ರಕೃತಿ ಆಶ್ಚರ್ಯಕರವಾಗಿ, ಅತ್ಯಂತ ವಿವರವಾಗಿ, ರಮಣೀಯವಾಗಿ ಮೂಡಿಬಂದಿದೆ.

ಕಾದಂಬರಿಯ ಕಥೆ ಹೆಚ್ಚಾಗಿ ಅರಣ್ಯ ಪ್ರದೇಶಗಳಲ್ಲೇ ನಡೆಯುತ್ತದೆ. ಈ ಕಾರಣದಿಂದ ಕಥೆಗೆ ಪ್ರಕೃತಿಯೇ ಹಿನ್ನೆಲೆಯಾಗಿ ಮೂಡಿಬಂದಿದೆ. ಅಚ್ಛೋದ ಸರೋವರಕ್ಕೆ ಹೋಗುವ ದಾರಿಯ ಗಜಯೂಥಮಾರ್ಗ ವರ್ಣನೆಯನ್ನು ಇಲ್ಲಿ ಉದಾಹರಣೆಯಾಗಿ ಹೆಸರಿಸಬಹುದು :

"ಆಗ ತಾನೆ ತಾವರೆ ಕೊಳದಲ್ಲಿ ಮಿಂದು ಬಂದ ಭಾರಿ ಗಾತ್ರದ ಕಾಡಾನೆಗಳ ಕಾಲ ತುಳಿತದಿಂದ ಕೆಸರು ತುಂಬಿದ ಆ ದಾರಿ ಪಕ್ಕದಲ್ಲಿರುವ ಜಲಾಶಯವನ್ನು ಸೂಚಿಸುತ್ತಿತ್ತು. ಅಲ್ಲಲ್ಲಿ ಆನೆಯ ಸೊಂಡಿಲಿನಿಂದ ಜಾರಿ ಬಿದ್ದ ತಾವರೆಯ ಹೂವುಗಳು, ಅಲ್ಲಲ್ಲಿ ಒದ್ದೆ ಹಾವಸೆಯಿಂದ ಹಸಿರಾದ ನೆಲ, ಅಲ್ಲಲ್ಲಿ ಕಿತ್ತು ಚೆಲ್ಲಿದ ಕುಮುದ, ಕುವಲಯ, ಕಲ್ಹಾರ ಮುಂತಾದ ಹೂವುಗಳ ಮೊಗ್ಗುಗಳು, ಅಲ್ಲಲ್ಲಿ ಚದರಿರುವ ಕೆಸರಿಡಿದ ತಾವರೆ ಗಡ್ಡೆಗಳು, ಅಲ್ಲಲ್ಲಿ ತುಂಡಾಗಿ ಬಿದ್ದಿರುವ ಹೂಗೊಂಚಲಿಂದ ನಳನಳಿಸುವ ತಳಿರುಗಳು, ಅಲ್ಲಲ್ಲಿ ಬುಡತರಿದು ಬಿದ್ದಿರುವ ಕಾಡು ಬಳ್ಳಿಗಳು; ಅವುಗಳ ಹೂಗೊಂಚಲ ಮೇಲೆಲ್ಲ ಝೇಂಕರಿಸುವ ತುಂಬಿವಿಂಡು ಹೊಸದಾಗಿ ಬಾಯಿಬಿಡುವ ಹೂವಿನಂತೆ ಕಂಪು ಬೀರುವ ತಮಾಲದ ತಳಿರಿನಂತೆ ಕಪ್ಪಾದ ಮದಜಲ ನೆಲದ ಮಣ್ಣನ್ನೆಲ್ಲ ಮೀಯಿಸಿತ್ತು."

ಪ್ರಕೃತಿಯ ನಿರಂತರವಾದ ನಿಶಿತ ಪರಿಶೀಲನೆ ಇಲ್ಲದ ಕವಿ ಇಂತಹ ವರ್ಣನೆಯನ್ನು ಮಾಡಲು ಸಾಧ್ಯವಿಲ್ಲ. ಇನ್ನು ಅಚ್ಛೋದ ಸರೋವರ ವರ್ಣನೆಯಲ್ಲಿ ಪೂರ್ವಕಾವ್ಯ ಅಭ್ಯಾಸಬಲ ಸ್ವೀಯ ವೀಕ್ಷಣಾನುಭವ ಸೇರಿ ಅನನ್ಯ ಸಾಮಾನ್ಯವಾದ ರಚನಾರೀತಿಗೆ ನಿದರ್ಶನವಾಗಿ ಆ ವರ್ಣನೆ ನಿಂತಿದೆ.

ಪ್ರಕೃತಿ ವರ್ಣನೆಗಳಲ್ಲಿ ಗದ್ಯಕವಿ ವಿಶೇಷವಾದ ಒಂದು ಉಕ್ತಿವೈಚಿತ್ರ್ಯವನ್ನು ಬಾಣನಲ್ಲಿ ನೋಡಬಹುದು. ಅಚೇತನ ಪ್ರಕೃತಿಯ ವಿವಿಧಾಂಶಗಳು ಮಾನವ ಸುಖ ದುಃಖಗಳಲ್ಲಿ ಭಾಗವಹಿಸಿದಂತೆ ನಿರೂಪಿಸುವುದನ್ನು ಕಾದಂಬರಿಯಲ್ಲಿ ನೋಡುತ್ತೇವೆ. ಉದಾಹರಣೆಗೆ ಸೂರ್ಯಚಂದ್ರರನ್ನು ಮಾನವ ಕುಲದ ಸಹಾನುಭೂತಿಯುಳ್ಳವರಂತೆ ಚೇತನತ್ವಾರೋಪ ಮಾಡುವುದನ್ನು ಹೇಳಬಹುದು. ಜಗತ್ಸಾಕ್ಷಿಗಳಾದ ಸೂರ್ಯಚಂದ್ರರನ್ನು ಹೀಗೆ ನಿರೂಪಿಸುವುದು ಸೂಕ್ತವೇ. ಮಹಾಶ್ವೇತೆಯ ದುಃಖವನ್ನು ಕೇಳಿದ ಶೋಕದಿಂದಲೋ ಎನ್ನುವಂತೆ ಸೂರ್ಯ ದಿವಸ ವ್ಯಾಪಾರವನ್ನು ಬಿಟ್ಟು ಅಸ್ತಂಗತನಾದುದನ್ನು ಬಾಣ ವರ್ಣಿಸಿದ್ದಾನೆ :

"ಸ್ರ್ರತ ಮಹಾಶ್ವೇತಾಪ್ರತಂ ತೋಪಜಾತ ಶೋಕ ಇವ
ಸಮುತ್ಸೃಷ್ಟ ದಿವಸವ್ಯಾಪಾರೋ ರವಿರಪಿ ಭಗವಾನಧೋಮುಖಿತಾ
ಮಯಾಸೀತ್."

ಹಾಗೆಯೇ ಶೋಕಾನಲದಗ್ಧವಾದ ಮಹಾಶ್ವೇತೆಯ ಹೃದಯವನ್ನು ಅನುಕರಿಸುತ್ತಿರುವಂತೆ ತಾರಕರಾಜ ಉದಯವಾದುದನ್ನು ಬಾಣ ವರ್ಣಿಸಿದ್ದಾನೆ.

"ಲಾಂಛನಚ್ಛಲೇನ ಪಿಡಂಬಯನ್ನಿವ ಶೋಕಾನಲ ದಗ್ಧಮಧ್ಯಂ
ಮಹಾಶ್ವೇತಾಹೃದಯಂ ಉದಗಾತ್ ತಾರಕರಾಜಃ."

ಈ ರೀತಿ ಅಚೇತನ ಪದಾರ್ಥಗಳಲ್ಲಿ ಚೇತನತ್ವಾರೋಪ. ಮಾನವ ಚೇಷ್ಟಾರೋಪ ಸಂಸ್ಕೃತ ಕಾವ್ಯದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಇಂತಹವನ್ನು ನಮ್ಮ ಆಲಂಕಾರಿಕರು ಪ್ರತ್ಯೇಕವಾಗಿ ಒಂದು ಅಲಂಕಾರವೆಂದು ಹೇಳಿಲ್ಲ. ಪಾಶ್ಚಾತ್ಯ ಸಂಪ್ರದಾಯದಲ್ಲಿ ಇವನ್ನು ಮಿಥ್ಯಾನುಭೂತಿ ಅಥವಾ ಭಾವಾಭಾಸ (pathetic fallacy) ಎಂಬ ಅಲಂಕಾರ ವಿಶೇಷವೆಂದು ಹೇಳಿರುತ್ತಾರೆ, ಇಂತಹ ಅಲಂಕಾರ ಬಾಣನ ಪ್ರಕೃತಿ ವರ್ಣನೆಗಳಲ್ಲೂ ಕಂಡುಬರುತ್ತದೆ.

ಅತ್ಯಂತ ವಿಪುಲವಾಗಿ ಮೂಡಿಬಂದಿರುವ ಬಾಣನ ವರ್ಣನಾವೈಭವ ಕಾವ್ಯಶಕ್ತಿಯ ಪ್ರಥಮನಿದರ್ಶನವಾಗಿರುವುದು ಮಾತ್ರವಲ್ಲದೆ, ಬಾಣನ ಕಾಲದ ವನಶ್ರೀಯನ್ನು, ಪ್ರಕೃತಿ ವೈವಿಧ್ಯವನ್ನು ತಿಳಿಸುತ್ತದೆ. ಅಷ್ಟೇ ಅಲ್ಲ. ಈ ಕವಿಯ ವರ್ಣನೆಗಳು ಸಮಕಾಲೀನ ಸಾಮಾಜಿಕ ವಿಷಯದ್ಯೋತಕವಾಗಿವೆ ಎನ್ನಬಹುದು. ಸಮಗ್ರ ವರ್ಣನಾಕಾಂಕ್ಷೆಯಿಂದ ಬಾಣಕವಿ ಪ್ರಾಸಂಗಿಕವಾಗಿ ಅನೇಕ ವಿಷಯಗಳನ್ನು ಹೇಳಿದ್ದಾನೆ. ಸರಸ್ವತೀದೇವಿಯ ವೀಣಾನಿಕ್ವಾಣವನ್ನೂ ಮೀರಿಸುವ ಭಟ್ಟಬಾಣನ ಮಾಧುರ್ಯ ಮತ್ತೊಬ್ಬ ಕವಿಗಿಲ್ಲವೆಂದು ಹೇಳಿದ ಗಂಗಾದೇವಿಯ (ಮಧುರಾ ವಿಜಯಮ್. 1–8) ವಾಕ್ಯಗಳನ್ನು ಇಲ್ಲಿ ಸ್ಮರಿಸಬಹುದು:

"ವಾಣೀಪಾಣಿ ಪರಾಮೃಷ್ಟ ವೀಣಾನಿಕ್ವಾಣ ಹಾರಿಣೀಮ್
ಭಾವಯಂತಿ ಕಥಂವಾಽನ್ಯೇ ಭಟ್ಟಬಾಣಸ್ಯ ಭಾರತೀಮ್"

ಗ್ರಂಥಋಣ

1. ಕಾದಂಬರೀ. ಪೂರ್ವಭಾಗ. ಎಂ. ಆರ್. ಕಾಲೆ ಅವರ ವ್ಯಾಖ್ಯೆ, ಮೋತಿಲಾಲ್ ಬನಾರಸೀದಾಸ್, 1968
2. ಕಾದಂಬರೀ. ಪೂರ್ವಭಾಗ. ಶ್ರೀ ಕೃಷ್ಣಮೋಹನಶಾಸ್ತ್ರೀ ವ್ಯಾಖ್ಯೆ, ಚೌಖಾಂಬ ಸಂಸ್ಕೃತ ಸೀರೀಸ್, 1961
3. ಬಾಣಭಟ್ಟನ ಕಾದಂಬರಿ. ಬನ್ನಂಜೆ ಗೋವಿಂದಾಚಾರ್ಯ, ಪ್ರಕಾಶ ಪ್ರಕಾಶನ, ಉಡುಪಿ, 1964
4. *History of Sanskrit Literature*, A.B. Keith, 1928
5. *History of Classical Sanskrit Literature*, M. Krishnamachariar

೨. ವೀರಭದ್ರಪ್ಪ

ದಿಬ್ಯಂಬಿಡಿವಂತೆವೋಲ್ ಪಿಡಿದು

ಇದು ಪಂಪಭಾರತದಲ್ಲಿ ಬರುವ ಮಾತು. ಶಂತನು ಮಹಾರಾಜ, ಬೇಟೆಗೆ ಹೋದಾಗ ಮತ್ಸ್ಯಗಂಧಿಯ ಮಿಲನವಾಗುತ್ತದೆ. ಆಗ ಪ್ರೇಮಾಸಕ್ತನಾದ ರಾಜ ಆ ಕನ್ಯೆಯ ಕೈ ಹಿಡಿಯುತ್ತಾನೆ.[1] ಅದಕ್ಕೆ 'ತತ್ ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ' ಎನ್ನುತ್ತಾಳೆ ಆ ಶೀಲವಂತೆ! ಈ ಕೈ ಹಿಡಿಯುವ ಪ್ರಸಂಗವನ್ನು ವರ್ಣಿಸುವಲ್ಲಿ ಕವಿ ತಾನೇ ಪ್ರವೇಶಿಸಿ "ದಿಬ್ಯಂಬಿಡಿವಂತೆ ವೋಲ್"[2] ಕೈಯನ್ನು ರಾಜನಾದ ಶಂತನು ಹಿಡಿದ ಎನ್ನುತ್ತಾನೆ. ಅದಕ್ಕೆ ನಾಚಿದ ಆ ಭಾವೀ ರಾಣಿ "ನೀವು ನನ್ನನ್ನು ಬಯಸುವ ಹಾಗಿದ್ದರೆ ನಮ್ಮ ತಂದೆಯನ್ನು ಕೇಳಿ" ಎನ್ನುವಳು. ಸಭ್ಯತೆಯನ್ನು ಮೆರೆಯುವಳು.

ಇಲ್ಲಿ ಬಂದಿರುವ ಸಮಸ್ಯೆ 'ದಿಬ್ಯ' ಎಂಬ ಪದದ್ದು. ದಿಬ್ಯ < ದಿವ್ಯ-ಈ ದಿವ್ಯ ಎಂಬುದನ್ನು ಡಾ॥ ಎಂ. ಚಿದಾನಂದಮೂರ್ತಿಯವರೂ ಹಾಗೂ ಗತಕಾಲದ ಸಾಂಸ್ಕೃತಿಕ ಪದ್ಧತಿಗಳ ಅಧ್ಯಯನ ಮಾಡಿದ ಡಾ॥ ಪಿ. ವಿ. ಕಾಣೆ ಮತ್ತು ಕೆಲವು ಲೇಖಕರೂ ಒಂದು ರೀತಿ ಅಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ. ಇಂಗ್ಲಿಷ್ ಗ್ರಂಥಕಾರರು ಹಾಗೂ ಪ್ರಸಿದ್ಧ ಇತಿಹಾಸಕಾರರು ಮಾಡಿದ ರೀತಿಯಲ್ಲೆ ಡಾ॥ ಚಿದಾನಂದಮೂರ್ತಿಯವರೂ ತಮ್ಮ ಪ್ರಾಚೀನ ಕರ್ನಾಟಕದಲ್ಲಿ 'ದಿವ್ಯ' ಮತ್ತು 'ಮುಂಡಿಗೆ'[3] ಎಂಬ ಲೇಖನದಲ್ಲೂ ಹಾಗೂ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'[4] ಎಂಬ ಗ್ರಂಥದಲ್ಲೂ ವ್ಯಾಖ್ಯಾನ ಮಾಡಿದ್ದಾರೆ. ಅವರ ಪ್ರಕಾರ 'ದಿಬ್ಯ' ಅಥವಾ 'ದಿವ್ಯ' ಎಂದರೆ ಕಳ್ಳರನ್ನು ಪರೀಕ್ಷೆಗೊಳಪಡಿಸುವ ಸಲುವಾಗಿ ಕೈಗೆ ಬೆಂಕಿಯನ್ನೊ, ಕಾದ ಕಬ್ಬಿಣದ ಸಲಾಕಿಯನ್ನೊ ಹಿಡಿಯಲು ಕೊಡುವಂಥದ್ದು. ಇದು ಸರಿಯಾದ ಅರ್ಥವಲ್ಲ. ನಮ್ಮ ಶಂತನು ಕಳ್ಳನಾಗದೆ ಮಹಾಭಾರತದ ಪೀಳಿಗೆಗೆ ಪೀಠಿಕೆ ಬರೆಯುವ ಮಹಾಪ್ರಭುವೂ, ಧೀರೋದಾತ್ತ ನಾಯಕ

---

1. ಪಂ.ಭಾ.-ಭಾಗ ೧. ಆ. ೧, ಪು, ೧೫, ಪ. ೭೦.
2. ಅದೇ, ಪ. ೭೦.
3. ಸಂಶೋಧನ ತರಂಗ–ಡಾ॥ ಎಂ. ಚಿದಾನಂದಮೂರ್ತಿ.
4. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ–ಡಾ॥ ಎಂ. ಚಿದಾನಂದಮೂರ್ತಿ.

ನಂತೆಯೂ ಆ ಸನ್ನಿವೇಶದಲ್ಲಿ ಕಾಣಬರುವುದರಿಂದ ಈ 'ದಿಬ್ಯ' ಪದಕ್ಕೆ ಸೂಚಿಸಿರುವ, ವ್ಯಾಖ್ಯಾನಿಸಿರುವ ಅರ್ಥ ಸರಿಯಾದುದಲ್ಲ.

ದಿಬ್ಯಂ+ಪಿಡಿವಂತೆ+ವೋಲ್

ಈ ಪದವಿಭಾಗದ ಪ್ರಕಾರ ದಿಬ್ಯಮ್ ಎಂದರೆ ದಿಬ್ಯವು ಹಿಡಿಯುವಂತೆ, ಹಾಗೆ ಎಂದರ್ಥವಾಗುತ್ತದೆ. ದಿಬ್ಯವನ್ನು ಹಿಡಿಯುವಂತೆ ಹಿಡಿದನು ಎಂಬ ದ್ವಿತೀಯ ವಿಭಕ್ತಿಯ 'ಅನ್ನು' ಎಂಬುದು ದಿಬ್ಯದ ಮುಂದಿಲ್ಲ. 'ದಿಬ್ಯಂ' ದಿವ್ಯವು ಎಂಬ ಪ್ರಥಮಾ ವಿಭಕ್ತಿ ಮಾತ್ರವಿದೆ. ಇಲ್ಲಿ ಊಹೆಗೆ, ಕಲ್ಪನೆಗೆ ಅವಕಾಶವಿಲ್ಲ. ಅದು ಇದ್ದ ಹಾಗೆಯೇ ಹೇಳಬೇಕು. ಇಲ್ಲಿ ಹಿಡಿಯುವುದು ದಿಬ್ಯ. ದಿಬ್ಯವಾಗಿರುವುದು ಶಂತನು. ದಿಬ್ಯವನ್ನು ಹಿಡಿಯುವಂತೆ ಹಿಡಿದನು ಎಂದು ಅರ್ಥಮಾಡಿದರೆ ದಿಬ್ಯವು ಯೋಜನಗಂಧಿಯಾಗುತ್ತಾಳೆ, ಕೈಹಿಡಿಯುವುದು ಶಂತನುವೇ ವಿನಾ ಯೋಜನಗಂಧಿಯಲ್ಲ. ಅರ್ಥದ ದೃಷ್ಟಿಯಿಂದಲೂ ವಾಕ್ಯದ ವ್ಯಾಕರಣ ದೃಷ್ಟಿಯಿಂದಲೂ 'ದಿಬ್ಯವು ಹಿಡಿಯುವಂತೆ ಯೋಜನಗಂಧಿಯ ಕೈಯನ್ನು ಹಿಡಿದು ನೀ ಬಾ ಪೋಪಂ' ಎಂದು ಮಧುರವಾಗಿಯೂ ರಾಜದರ್ಪದಿಂದಲೂ ಶಂತನು ಕರೆಯುತ್ತಾನೆ. ಅದಕ್ಕೆ ಆ ಕನ್ಯೆ (ಈ ಪದವೂ ಅಷ್ಟೇ ಮಹತ್ತರವಾದದ್ದು!) 'ನಾಣ್ಚಿ ನೀವ್ ಬೇಡುವೊಡೆಮ್ಮಯ್ಯನಂ ಬೇಡಿರೇ' ಎನ್ನುತ್ತಾಳೆ! ಹೆಣ್ಣಿಗೆ ಸಹಜವಾದ ನಾಚಿಕೆಯಿಂದಲೂ, ತನ್ನ ಹಿಂದಿನ ಬಾಳಿನ ಕಹಿಯಾದ ದುಡುಕಿನ ಬದುಕನ್ನೂ ನೆನೆದು ಬಹುಶಃ ಈ ಸನ್ನಿವೇಶದಲ್ಲಿ ದುಡುಕದೆ ಸಂಯಮದಿಂದ ವರ್ತಿಸಿ "ನೀವು ನನ್ನನ್ನು ಮದುವೆಯಾಗುವುದಿದ್ದರೆ ನನ್ನ ತಂದೆಯನ್ನು ಕೇಳಿರಿ" ಎನ್ನುತ್ತಾಳೆ. ಆ ವಾಕ್ಯದಲ್ಲಿ ಆ ಧ್ವನಿ ಸ್ಪಷ್ಟವಾಗಿದೆ. ಆದ್ದರಿಂದ ಕೈ ಹಿಡಿದವನು ಶಂತನು. ಅವನು ಹಿಡಿದದ್ದು 'ದಿಬ್ಯ' ಹಿಡಿದಂತೆ! ಕೈಹಿಡಿಸಿಕೊಂಡವಳು ಯೋಜನಗಂಧಿ ! ಇದೀ ಈ ಕ್ರಿಯೆ ಅಷ್ಟೇನೂ ಮಂಗಳಕರವಾಗಿರಲಿಲ್ಲ. ಅನಿಷ್ಟಸೂಚಕವೇ ಆಗಿತ್ತು ಮುಂದಿನ ಭಾರತದ ಬದುಕನ್ನು ನೆನೆದಾಗ! ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದಾಗ ಡಾ|| ಪಿ. ವಿ. ಕಾಣೆಯವರಾಗಲಿ ಡಾ|| ಎಂ. ಚಿದಾನಂದಮೂರ್ತಿಯವರಾಗಲಿ ಹಾಗೂ ಇತರೆ ಲೇಖಕರಾಗಲಿ 'ದಿಬ್ಯ' ವನ್ನು ಸರಿಯಾಗಿ ಅರ್ಥಮಾಡುವಲ್ಲಿ ಸೋತಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಈ ಲೇಖಕರು ಹೇಳುವಂತ 'ದಿಬ್ಯ' ಒಂದು ಕಾಸಿದ ಕಬ್ಬಿಣದ ಹಾರೆಯಾಗಲಿ, ತನ್ನ ನಿರ್ದೋಷಿತ್ವವನ್ನು ಸಾಬೀತು ಮಾಡುವ ಸಾಧನವಾದ ತಂಡುಲ, ವಿಷ, ತಾಲವ ಮುಂತಾದವುಗಳಾಗಲಿ ಅಲ್ಲವೇ ಅಲ್ಲ ಎಂಬುದು ಸ್ಪಷ್ಟ. ಇದನ್ನು ಇನ್ನೂ ವಿಸ್ತರಿಸುವ ಆವಶ್ಯಕತೆ ಇಲ್ಲ.

ಹಾಗಾದರೆ ಇದರ ಅರ್ಥವೇನು ? ಸರ್ವಜ್ಯೋತಿಷ್ಯರತ್ನದಲ್ಲಿ ಯಾವ ಜೋತಿಸ್ಸುಗಳು ಉದಯಾಸ್ತ ಗಣಿತದಿಂದ ಕಂಡುಹಿಡಿಯಲು ಸಾಧ್ಯವೋ ಅವುಗಳೇ

---

5. ಸರ್ವಜ್ಯೋತಿಷ್ಯರತ್ನ–ಪಂಡಿತ ರೇವಣಶಾಸ್ತ್ರಿ, ಪು. ೧೯-೨೦.

ಉತ್ಪಾತಗಳು. ಅಂತರಿಕ್ಷ-ಭೌಮ-ದಿವ್ಯವೆಂಬ ಮೂರು ವಿಧವಾಗಿದೆ.....ಅಂತರಿಕ್ಷ ಸಂಬಂಧವಾದವುಗಳು ನಕ್ಷತ್ರಗಳ ಮಧ್ಯದಲ್ಲಿ ಅಗ್ನಿಸ್ವರೂಪವಾಗಿ ಕಾಣಿಸುವ ಕೇತುಗಳೇ ದಿವ್ಯಗಳು, ಭೂಮಿಯಲ್ಲಿ ಕಾಣಿಸುವ ಕೇತುಗಳೇ ಭೌಮಗಳು....ಈ ಪ್ರಕಾರವಾಗಿ ರಕ್ತಕೇತು ಶ್ವೇತಕೇತು ಇವೇ ಮೊದಲಾದ ಅನೇಕ ಕೇತುಗಳು ಮೂಡುತ್ತಿರುವುವು. ಈ ಕೇತುಗಳು ನೂರಾರು ವರ್ಷಗಳಿಗೂ ಅಥವಾ ಸಾವಿರಾರು ವರ್ಷಗಳಿಗೂ ಒಂದೊಂದು ಮೂಡುತ್ತಿರುವುವು. ಇದಲ್ಲದೆ ೧೫೦ ವರ್ಷಗಳಿಗೊಂದು ಸಾರೆ ಶುಕ್ರಗ್ರಸ್ತ ಕಂಕಣ ಗ್ರಹಣವಾಗುವುದು. ಇದು ಕೂಡ ದೇಶಾರಿಷ್ಟ ಯೋಗವನ್ನು ಸೂಚಿಸುತ್ತದೆ ಎಂದಿದೆ.

ಧೂಮಕೇತುವನ್ನು ಕುರಿತು ವಿವರಿಸುವಾಗ ಮೇಲ್ಕಂಡಂತೆ ವಿವರಿಸಿದ್ದಾರೆ. ಧೂಮಕೇತುಗಳು ಮೂಡುವುದು ಅನಿಷ್ಟಸೂಚಕ, ನೋಡುವುದೂ ಅನಿಷ್ಟಸೂಚಕ. ಇನ್ನು ಧೂಮಕೇತು ಹಿಡಿಯುವುದೆಂದರೆ ಇನ್ನೂ ಅನಿಷ್ಟಸೂಚಕವೇ.

ಈ ನಿಟ್ಟಿನಲ್ಲಿ ವಿಚಾರ ಮಾಡಿದಾಗ ಶಂತನು ಮತ್ಸ್ಯಗಂಧಿಯ ಕೈಹಿಡಿದದ್ದೇ ಅನಿಷ್ಟಸೂಚಕವಾಗಿ ! ಶಂತನು ಭೂಮಿಯ ಧೂಮಕೇತುವಲ್ಲ. ಅಂತರಿಕ್ಷ ಧೂಮಕೇತು. ಆದರೂ ಏನಂತೆ ? ರಾಜನಾದರೂ ವಿಧಿಯಿಂದ ಮುಕ್ತನಲ್ಲವಲ್ಲ. ಸಾಕ್ಷಾತ್ ರಾಜನೇ ಮತ್ಸ್ಯಗಂಧಿಯ ಕೈಹಿಡಿದರೂ ಇವರೀರ್ವರ ದಾಂಪತ್ಯ ಸುಖಕರವಾಗಿರಲಿಲ್ಲ. ಅನಿಷ್ಟಗಳ ಮೇಲೆ ಅನಿಷ್ಟಗಳು ಬಂದೊದಗಿದವು. ಇಡೀ ಭಾರತದ ಇತಿಹಾಸವೇ ಧೂಮಕೇತು ಗ್ರಸ್ತವಾಗಿ ಹೋಯಿತು ! ಭೀಷ್ಮಪ್ರತಿಜ್ಞೆ, ಚಿತ್ರಾಂಗದ, ವಿಚಿತ್ರವೀರ್ಯರ ಮರಣ, ನಿಯೋಗದಿಂದ ಅಂಬಿಕೆ, ಅಂಬಾಲಿಕೆಯರ ಮೂಲಕ ಸಂತಾನವೃದ್ಧಿ, ಪಾಂಡವ ಕೌರವರ ದ್ಯೂತ, ವನವಾಸ, ಕುರುಕ್ಷೇತ್ರ ಯುದ್ಧ ಈ ಎಲ್ಲ ಅನಿಷ್ಟಗಳನ್ನು ನೋಡಿದರೆ ಶಂತನು ಮತ್ಸ್ಯಗಂಧಿಯ ದೃಷ್ಟಿಯಲ್ಲಷ್ಟೇ ಅಲ್ಲ. ಇಡೀ ಭಾರತದ ದೃಷ್ಟಿಯಲ್ಲಿ ಶಂತನು ಧೂಮ ಕೇತುವೇ! ಈ ಅಂತರಿಕ್ಷ ಧೂಮಕೇತು ಮತ್ಸ್ಯಗಂಧಿಯನ್ನು ಹಿಡಿಯಿತು. ಕೈಹಿಡಿದು ಕಾಡಿತು, ಕೊನೆಯವರೆಗೂ ಭಾರತದ ಬದುಕಿಗೆ ಅನಿಷ್ಟ ತಂದಿತು. ಈ ಧ್ವನಿತಾರ್ಥವೇ ಇವರಿಂದ ಹೊರಹೊಮ್ಮುತ್ತದೆಯೇ ವಿನಾ ಬೇರೆಯಲ್ಲ.

ಈ ಪದ್ಯವನ್ನು ನೋಡಿ—

"ಮೃಗಯಾ ವ್ಯಾಜದಿನೊರ್ಮೆ ಶಂತನು ತೊೞಲ್ದುರ್ವಂ ಪಳಂಚಲ್ಕೆ ತ ।
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂ ಬೋಲ್ ಸೋಲ್ತು ಕಂಡೊಲ್ದು ನ॥
ಲ್ಮೆಗೆ ದಿಬ್ಬಂಬಿಡಿಪಂತೆ ಪ್ರೋಲ್ ಪಿಡಿದು ನೀಂ ಬಾ ಪೋಪಮೆಂದಂಗೆ ಮ ।
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀಮೆಮ್ಮಯ್ಯನಂ ಬೇಡಿರೇ॥[6]

ಶಂತನು ಮತ್ಸ್ಯಗಂಧಿಯ ಕೈಯನ್ನು ಹಿಡಿದದ್ದು ದಿಬ್ಬವಿಡಿದಂತೆಯೆ ಸರಿ! ಶಂತನು ಮತ್ಸ್ಯಗಂಧಿಯರ ದಾಂಪತ್ಯ, ಭೀಷ್ಮನ ಬಲವಂತ ಬ್ರಹ್ಮಚರ್ಯ, ಧೃತರಾಷ್ಟ್ರ,

6. ಪಂಪಭಾರತ, ಭಾಗ ೧, ಆ. ೧, ಪು. ೧೫, ಪ. ೭೦.

ಪಾಂಡು, ವಿದುರರ ಜನನ. ಪಾಂಡುವಿನ ಅಕಾಲ ಮರಣ, ಪಾಂಡವ ಕೌರವರ ನಿರಂತರ ಜಗಳ, ಕುರುಕ್ಷೇತ್ರಯುದ್ಧ ಏನೆಲ್ಲ ಅನಿಷ್ಟಗಳು ಸಂಭವಿಸಿದವು! ಇವುಗಳನ್ನೆಲ್ಲ ನೋಡಿದರೆ ಇಲ್ಲಿ ಪಂಪ ಬಳಸಿರುವ 'ದಿಬ್ಯ' ಎಂಬ ಪದಕ್ಕೆ ಧೂಮಕೇತುವೆಂದೇ ಅರ್ಥೈಸಬೇಕೇ ವಿನಾ ಬೇರೆಯಲ್ಲ. ದಿಬ್ಯ ಅಥವಾ ದಿವ್ಯವೆಂಬ ಧೂಮಕೇತು ಹಿಡಿದಂತೆ ಶಂತನು ಮತ್ಸ್ಯ ಗಂಧಿಯ ಕೈಹಿಡಿದನು ಎಂಬುದೇ ಸರಿಯಾದ ವ್ಯಾಖ್ಯೆ. 'ದಿಬ್ಯಂಬಿಡಿವಂತೆ ಪೋಲ್' ಎಂದರೆ ದಿಬ್ಯ ಹಿಡಿಯುವಂತೆ, ಗ್ರಹ ಬಡಿಯುವಂತೆ ಬಡಿದನು, ಹಿಡಿದನು ಎಂದೇ ಅರ್ಥೈಸಬೇಕು,

ಡಾ॥ ಎಂ. ಚಿದಾನಂದಮೂರ್ತಿಯವರು, ಶ್ರೀ ಪೂರ್ಣಚಂದ್ರ ತೇಜಸ್ವಿಯವರು, ಪ್ರೊ. ಡಿ. ಎಲ್. ನರಸಿಂಹಾಚಾರ್‌ರವರು ಮತ್ತು ಇನ್ನೂ ಕೆಲವರು ಈ ಪದ್ಯಕ್ಕೆ ಅರ್ಥೈಸಲು ಪ್ರಯತ್ನಿಸಿದ್ದಾರೆ.

ಪ್ರಾಚೀನ ಕರ್ನಾಟಕದಲ್ಲಿ 'ದಿವ್ಯ' ಮತ್ತು 'ಮುಂಡಿಗೆ' ಎಂಬ ತಮ್ಮ ಲೇಖನದಲ್ಲಿ ಈ ಪದ್ಯದಲ್ಲಿ ಬರುವ 'ದಿಬ್ಯ' ವನ್ನು ಕುರಿತು ಮತ್ತು ಈ ಪದ ಕಂಡುಬರುವ ಇನ್ನಿತರ ಕಾವ್ಯಗಳ ಗ್ರಂಥಗಳ ಆಧಾರಸಹಿತ ವ್ಯಾಖ್ಯಾನಿಸಿದ್ದಾರೆ. ಅಲ್ಲಿ ಅವರು ಕೊಟ್ಟಿರುವ ಕೆಲವು ಸಂದರ್ಭಗಳಿಗೆ ಪಂಪಭಾರತದ 'ದಿಬ್ಯ'ದ ಅರ್ಥ ಬರುವುದೇ ಇಲ್ಲ. 'ದಿವ್ಯ ವಸ್ತುಗಳು' ಇದೇ 'ಧೂಮಕೇತು' (ಅರಿತು ನಡೆದರೆ ಲಿಂಗ ಮರೆತು ನಡೆದರೆ ಧೂಮಕೇತು–ಬಸವಣ್ಣನವರ ವಚನಗಳ ದಿಬ್ಯ) ಎಂಬರ್ಥ ಬರುವುದೇ ವಿನಾ ಬೇರೆಯಲ್ಲ.

ಅವರು ಆ ಪದದ ನಿಷ್ಪತ್ತಿ ಮತ್ತು ಅರ್ಥಗಳನ್ನು ಚರ್ಚಿಸುವುದಕ್ಕಾಗಿ ಮೇಲಿನ ಉಲ್ಲೇಖಗಳನ್ನು ಎತ್ತಿಕೊಂಡಿಲ್ಲ. ಆದರೆ 'ದಿಬ್ಯ' ಎಂಬ ಒಂದು ಪದ್ಧತಿ ಕರ್ನಾಟಕ ದಲ್ಲಿ ಸಾಕಷ್ಟು ಪ್ರಚಲಿತವಾಗಿತ್ತು ಎಂಬುವುದನ್ನು ತೋರಿಸುವುದಕ್ಕಾಗಿ ಅವುಗಳನ್ನು ಉಲ್ಲೇಖಿಸಿದ್ದಾರೆ. ಪೂರ್ವಗ್ರಹಪೀಡಿತರಾಗಿ ಹೊರಟಿದ್ದರಿಂದ ಇವರು 'ದಿಬ್ಯ'ವನ್ನು ಒಂದು ಪದ್ಧತಿ (Trial by ordeal) ಎಂದೇ ಸ್ವೀಕರಿಸಿ ವ್ಯಾಖ್ಯಾನಿಸಿರುವುದರಿಂದ ಕೆಲವು ಕಡೆ ಅರ್ಥಬಾಧೆಯುಂಟಾಗಿದೆ.

ಪ್ರಮಾಣ ಮಾಡುವ ಸಲುವಾಗಿ, ಸತ್ಯಸಂಧತೆಯನ್ನು ಪ್ರಕಟಗೊಳಿಸುವ ಸಲುವಾಗಿ 'ದಿಬ್ಯ' ಎಂಬ ಪದ್ಧತಿ ಇತ್ತು ಎಂದು ನಾವು ಸ್ವೀಕರಿಸಿದ್ದೇ ಆದರೆ, ಪಂಪ ಭಾರತದ ಆ ಪದ್ಯವನ್ನು ನಾವು ಸರಿಯಾಗಿ ಅರ್ಥೈಸಲು ಸಾಧ್ಯವಾಗದು. ಶಂತನು ಯಾವ ಕಳ್ಳತನ ಮಾಡಿದ್ದ ? ತಾನು ಸತ್ಯಸಂಧನೆನ್ನುವುದನ್ನು ತೋರಿಸಿಕೊಳ್ಳಲು ಮತ್ಸ್ಯಗಂಧಿಯ ಕೈ ಹಿಡಿದನೆ ? ಮತ್ಸ್ಯಗಂಧಿಯ ಕೈ ದಿಬ್ಯವೊ ? ಅಥವಾ ಶಂತನು ದಿಬ್ಯವೊ ? ಇದಕ್ಕೆ ಒಂದು ಲಾಜಿಕಲ್ ಥಾಟ್ ಬೇಡವೇ ? ಕಾರ್ಯಕಾರಣ ಸಂಬಂಧ, ತಾರ್ಕಿಕ ಕಲ್ಪನೆ ಇವು ಇರಬೇಡವೆ ?

ಕಳ್ಳತನಕ್ಕೆ ಗುರಿಯಾದ ವ್ಯಕ್ತಿಯನ್ನು ಪರೀಕ್ಷೆಗೊಳಪಡಿಸಲು ಇಂದಿಗೂ ಕೈಯಲ್ಲಿ ಬೆಂಕಿ ಹಿಡಿಸುವುದು, ದೇವರ ಮೇಲಿನ ಪುಷ್ಪ ತೆಗೆಯಿಸುವುದು, ಪ್ರಮಾಣ

ನಾಡಿಸುವುದು. ಬೆಂಕಿಯಲ್ಲಿ ನಿಲ್ಲಿಸುವುದು ಅಷ್ಟಾಗಿ ರೂಢಿಯಲ್ಲಿಲ್ಲದಿದ್ದರೂ ಮಾತಿನಲ್ಲಿ ಉಳಿದುಬಂದಿವೆ. ಕೆಲವು ಇಂದಿಗೂ ರೂಢಿಯಲ್ಲಿ ಉಳಿದಿವೆ. ಏನೂ ಆಗದಿದ್ದರೆ ಆತ ನಿರ್ದೋಷಿಯೆಂದು ಸಾಬೀತು ಮಾಡುತ್ತಾರೆ. ಆದರೆ ಅದು ಇಲ್ಲಿ ಮುಖ್ಯವಲ್ಲ. ಡಾ॥ ಎಂ. ಚಿದಾನಂದಮೂರ್ತಿಯವರ ಹಾಗೆ ದಿಬ್ಯವನ್ನು ಒಂದು ಪದ್ಧತಿ (Trial by ordeal) ಎಂದು ವ್ಯಾಖ್ಯಾನಿಸಲು, ಸ್ವೀಕರಿಸಲು, ಅರ್ಥೈಸಲು ಹೋದರೆ ಪಂಪಭಾರತದ ಈ ಪದ್ಯ ಭಾಗದ ಅರ್ಥ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಯಾವ ನಿರ್ದೋಷಿತ್ವವನ್ನೂ ಪ್ರಕಟಪಡಿಸಲು ಶಂತನು ಮತ್ಸ್ಯಗಂಧಿಯ ಕೈ ಹಿಡಿಯಲಿಲ್ಲ. ಬೇಟೆಗಾಗೇ ಕಾಡಿಗೆ ಹೋದ ಶಂತನುವಿಗೆ ಯೋಜನಗಂಧಿತ್ವದ ಸುಗಂಧ ಭರಿತ ಪರಿಮಳದ ವಾಸನೆ ಮೂಗು ತಟ್ಟಿತು. ಮೊದಲೇ ಗಂಗೆಯಿಂದ ಪರಿತ್ಯಕ್ತನಾಗಿ ಏಕಾಂಗಿಯಾಗಿದ್ದ. ರತಿಯ ರುಚಿಯಿಂದ ವರ್ಜಿತನಾದ ಈತ ಸುಂದರವಾದ ಮತ್ಸ್ಯಗಂಧಿಯನ್ನು ಕಾಡಿನಲ್ಲಿ ಏಕಾಂಗಿಯಾಗಿ ಕಂಡು ಮೋಹಪರವಶನಾಗಿ ಕೈ ಹಿಡಿಯುತ್ತಾನೆ. ಅಷ್ಟೇ ಅಲ್ಲ, "ಬಾ ಪೋಪಂ"[7] ಎನ್ನುತ್ತಾನೆ. ನಾಗರಿಕತೆಯನ್ನೂ, ಸಭ್ಯತೆಯನ್ನೂ ಮರೆತು ! ಎಲ್ಲಿಗೊ ? ಅವನ ಭಾವವನ್ನು ಅರ್ಥ ಮಾಡಿಕೊಂಡ ಆಕೆ ತಂದೆಯ ಅಧೀನಳು. ಆದ್ದರಿಂದ "ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ"[8] ಎನ್ನುತ್ತಾಳೆ. ಸರಿ, ಮುಂದಿನ ಕತೆ ಎಲ್ಲರಿಗೂ ತಿಳಿದೇ ಇದೆ.

ಪ್ರೊ. ಡಿ. ಎಲ್. ಎನ್. ರವರೂ ಈ ಪದ್ಯಕ್ಕೆ ಅರ್ಥವನ್ನು ಕೊಟ್ಟಿದ್ದಾರೆ. 'ಪಂಪಭಾರತ ದೀಪಿಕೆ' ಪಂಪಭಾರತದ ಪ್ರತಿಯೊಂದು ಪದ್ಯಕ್ಕೂ ವಿವರವಾಗಿ, ಪಾಂಡಿತ್ಯಪೂರ್ಣವಾಗಿ ಅರ್ಥ ಮಾಡಿರುವ ವಿದ್ವತ್ಪೂರ್ಣ ಗ್ರಂಥ. ಪ್ರಥಮಾಶ್ವಾಸದ ೭೦ ನೇ ಪದ್ಯಕ್ಕೆ ಪುಟ ೨೫-೨೬ ರಲ್ಲಿ ಸೊಗಸಾದ ಅರ್ಥ ಕೊಟ್ಟಿದ್ದಾರೆ. ಅದನ್ನೂ ಇಲ್ಲಿ ಸ್ವಲ್ಪ ವಿಚಾರ ಮಾಡಬೇಕಾಗಿದೆ.

ಅವರು ಈ ದಿಬ್ಯ ಪದ ಬಂದಿರುವ ಪದಗುಚ್ಛಗಳಿಗೆ ಕೊಟ್ಟಿರುವ ಅರ್ಥ ಹೀಗಿದೆ: "ನಲ್ಮೆಗೆ ದಿಬ್ಯಂ ಬಿಡಿವಂತೆವೋಲ್–ಪ್ರೀತಿಯನ್ನು ಪ್ರಮಾಣಿಸುವುದಕ್ಕಾಗಿ ದಿವ್ಯವನ್ನು ಹಿಡಿಯುವಂತೆ, ಪಿಡಿದು–ಅವಳ ಕೈಯನ್ನು ಹಿಡಿದುಕೊಂಡು. ನೀಂ ಬಾ ಪೋಪಂ–ನೀನು ಬಾ ಹೋಗೋಣ, ಎಂದಂಗೆ–ಎಂದು ಹೇಳಿದವನಿಗೆ, ಮೆಲ್ಲಗೆ–ಮೃದುವಾಗಿ. ತತ್ಕನ್ಯಕೆ–ಆ ಕನ್ನೆ, ನಾಣ್ಚಿ–ನಾಚಿ, ನೀಂ ಬೇಡುವೊಡೆ–ನೀವು ನನ್ನನ್ನು ಬಯಸುವ ಪಕ್ಷದಲ್ಲಿ, ಎಮ್ಮಯ್ಯನಂ–ನಮ್ಮ ತಂದೆಯನ್ನು, ಬೇಡಿರೇ–ಕೇಳಿರಿ, ಪ್ರಾರ್ಥಿಸಿಕೊಳ್ಳಿರಿ, ಯಾಚಿಸಿರಿ. ದಿಬ್ಯ–ಪ್ರಮಾಣಗಳಲ್ಲಿ ಮಾನುಷ ಪ್ರಮಾಣ, ದಿವ್ಯ ಪ್ರಮಾಣ ಎಂದೆರಡು ವಿಧ ; ಮಾನುಷ ಪ್ರಮಾಣವಿಲ್ಲದಿರುವಾಗ ದಿವ್ಯ ಪ್ರಮಾಣವು ಉಪಯೋಗವಾಗುತ್ತದೆ ; ಇದು ತುಲಾ, ಅಗ್ನಿ, ಆಪ (ನೀರು), ವಿಷ, ಕೋಶ–ಎಂದೈದು ವಿಧವೆಂದು

---

7. ಅದೇ, ಪು. ೧೫, ಪ. ೭೦.
8. ಅಲ್ಲೇ.

ನಾರದ ಯಾಜ್ಞವಲ್ಕ್ಯರ ಮತ; ಘಟ, ಅಗ್ನಿ, ಉದಕ, ವಿಷ, ಕೋಶ, ತಂಡುಲ, ತಪ್ತಮಾಷಕ, ಫಾಲ, ಧರ್ಮಜ ಎಂದು ಒಂಬತ್ತು ವಿಧಗಳೆಂದು ಬೃಹಸ್ಪತಿಯ ಮತ, ನಿನ್ನ ಪ್ರೇಮಕ್ಕೆ ಸಾಕ್ಷಿಯಾಗಿ ಅದಕ್ಕೆ ಪ್ರಮಾಣವಾಗಿ ನಿನ್ನ ಕೈಯೊಂಬ ದಿವ್ಯವನ್ನು ಹಿಡಿಯುತ್ತೇನೆ ಎಂದು ಶಂತನನ ಮಾತು."[9]

ಇಲ್ಲಿಯ ಘಟ ದಿವ್ಯವೊಂದನ್ನು ಬಿಟ್ಟು ಉಳಿದ ಎಲ್ಲ ದಿವ್ಯಗಳ ಬಗ್ಗೆ ಡಾ॥ ಎಂ. ಚಿದಾನಂದಮೂರ್ತಿಯವರು ಪ್ರಾಚೀನ ಕರ್ನಾಟಕದಲ್ಲಿ 'ದಿವ್ಯ' ಮತ್ತು 'ಮುಂಡಿಗೆ' ಎಂಬ ಲೇಖನದಲ್ಲಿ ವಿವರಿಸಿದ್ದಾರೆ. ಇವುಗಳ ವಿವರಣೆಗೆ ಆ ಲೇಖನವನ್ನು ನೋಡಬಹುದು. ಪ್ರೊ. ಡಿ. ಎಲ್. ನರಸಿಂಹಾಚಾರ್‌ರವರು ಕೂಡ 'ದಿವ್ಯ' ವನ್ನು Trial by ordeal ಎಂಬ ಅರ್ಥದಲ್ಲಿಯೇ ಸ್ವೀಕರಿಸಿದ್ದಾರೆ. ಆದ್ದರಿಂದ ಅವರು ಹೇಳುವ 'ನಿನ್ನ ಪ್ರೇಮಕ್ಕೆ ಸಾಕ್ಷಿಯಾಗಿ ಅದಕ್ಕೆ ಪ್ರಮಾಣವಾಗಿ ನಿನ್ನ ಕೈಯೊಂಬ ದಿವ್ಯವನ್ನು ಹಿಡಿಯುತ್ತೇನೆ ಎಂದು ಶಂತನುವಿನ ಮಾತು' ಎಂಬುದನ್ನು ಸ್ವಲ್ಪ ವಿವರವಾಗಿ ವಿಚಾರ ಮಾಡಬೇಕಾಗಿದೆ. ವಿವಾಹ ಮುಂತಾದವುಗಳಲ್ಲಿ ಸಾಮಾನ್ಯವಾಗಿ ಮಾನುಷ ಸಾಕ್ಷಿ ಇಲ್ಲದಿದ್ದಾಗ ಗಾಂಧರ್ವ ವಿವಾಹ ಮಾಡಿಕೊಳ್ಳುವುದು ಸಹಜ. ದುಷ್ಯಂತನೂ ಹೀಗೆ ಮಾಡಿದ್ದನು. ಅಲ್ಲಲ್ಲಿ ಗಾಂಧರ್ವ ವಿವಾಹವೆಂದೇ ವ್ಯಾಖ್ಯಾನಿಸುತ್ತಾರೆ. ಹಿಂದೆ ನೋಡಿದಂತೆ ವ್ಯಾಕರಣ ದೃಷ್ಟಿಯಿಂದ, 'ದಿವ್ಯಂ' ಎಂದರೆ 'ದಿವ್ಯವು' ಎಂದು ಅರ್ಥವೇ ವಿನಾ 'ದಿವ್ಯವನ್ನು' ಎಂದು ಅರ್ಥವಾಗದು. ಇಲ್ಲಿ ಹೋಲಿಕೆ, ಉಪಮಾನವಿದೆ. ದಿವ್ಯವು ಹಿಡಿಯುವ ಹಾಗೆ ಆಕೆಯ ಕೈ ಹಿಡಿದನು.

ಹಾಗಾದರೆ ದಿವ್ಯ ಯಾವುದು ? ಈ ದಿವ್ಯ ಸಂಸ್ಕೃತದ 'ದಿವ್ಯ'ದ ಆಗಿದೆ. ವಿ. ಎಸ್. ಆಪ್ಟೆಯವರ ಸಂಸ್ಕೃತ-ಇಂಗ್ಲಿಷ್ ನಿಘಂಟುವಿನಲ್ಲಿ[10] 'ದಿವ' ಎಂಬುದಕ್ಕೆ to shine, be bright, to be mad or drunk, heaven ಮುಂತಾದ ಅರ್ಥಗಳಿವೆ. 'ದಿವ್ಯ' ಎಂಬುದಕ್ಕೆ Divine, heavenly, celestial, supernatural, a superhuman, a celestial being, an epithet of Yama, an oath, solemn declaration, an ordeal ಮುಂತಾದ ಅರ್ಥಗಳಿವೆ.

ಪ್ರಣಯ ಪ್ರಸಂಗದ ಈ ಸಂದರ್ಭದಲ್ಲಿ to be mad or drunk ಎನ್ನಬೇಕೆ, celestial, supernatural, a superhuman, an epithet of Yama ಆಗಿ ಶಂತನು ಆಕೆಯ ಕೈ ಹಿಡಿದ ಎನ್ನಬೇಕೆ ? ಅಥವಾ Trial by ordeal ಎಂಬ ಅರ್ಥವಿಟ್ಟುಕೊಳ್ಳಬೇಕೆ ?

ordeal ಎಂಬುದಕ್ಕೆ ವೆಬ್‌ಸ್ಟರ್ ನಿಘಂಟಿನಲ್ಲಿ 1. An ancient form of trial in which the accused was exposed to physical dangers which were supposed to be harmless to him if he was innocent.

---

9. ಪಂಪಭಾರತ ದೀಪಿಕೆ–ಪ್ರೊ. ಡಿ. ಎಲ್. ನರಸಿಂಹಾಚಾರ್, ಪ.೭೦. ಪು. ೨೫-೨೬.
10. *Sanskrit-English Dictionary*-by V. S. Apte, p. 251.

2. Any painful or distressing trial or test as that endured under severe affliction calamity, or bereavement a severe trial[11] ಎಂದಿದೆ. ಹಾಗೆ ನೋಡಿದರೆ ಈ ಅರ್ಥಗಳು ಖಂಡಿತ ಪಂಪಭಾರತದ 'ದಿಬ್ಯ'ಕ್ಕೆ ಅನ್ವಯಿಸುವುದಿಲ್ಲ.

ಈ ಸನ್ನಿವೇಶದಲ್ಲಿ ಬರುವ 'ದಿಬ್ಯ' ಪದ ಪಂಚಾಂಗ-ಜ್ಯೋತಿಷ್ಯಗಳಲ್ಲಿ ಬರುವ ಒಂದು ಪದವೇ ವಿನಾ 'ಪದ್ಧತಿ'ಯನ್ನು ಸೂಚಿಸುವ ಪದವಲ್ಲ. ಭಾರತದ ಕತೆಯನ್ನು ಬಲ್ಲ ಎಲ್ಲರಿಗೂ ಅಲ್ಲಿ ನಡೆದ ಘೋರ ಹತ್ಯೆ, ಅನ್ಯಾಯ, ಅನಾಹುತಗಳು ತಿಳಿದೇ ಇವೆ. ಧೂಮಕೇತು ಮೂಡಿತೆಂದರೆ ಅನಿಷ್ಟ ತರುವ ಸೂಚಕ, ನೋಡುವುದು ಕೆಡುಕು. ಇನ್ನು ಹಿಡಿಯುವುದೆಂದರೆ ಇನ್ನೂ ಕೆಡುಕೆ! ಆದ್ದರಿಂದ ಧೂಮಕೇತುಗಳಲ್ಲಿ ಒಂದಾದ ಅಂತರಿಕ್ಷ ಧೂಮಕೇತು ದಿಬ್ಯವು ಪಿಡಿವಂತೆ ಮತ್ಸ್ಯಗಂಧಿಯ ಕೈಯನ್ನು ಶಂತನು ಹಿಡಿದನು. ಆದರಿಂದ ಅನಿಷ್ಟಗಳ ಪರಂಪರೆಯೆ ಪ್ರಾರಂಭವಾದವು.

ಹಾಗಾದರೆ ದಿವ್ಯ ಎಂದರೇನು ?

"ದಿವ್ಯವು ದೈವಕ್ಕೆ ಸಂಬಂಧಿಸಿದುದು. ಇಬ್ಬರ ಮಧ್ಯೆ ಎದ್ದ ವ್ಯವಹಾರ ಅಥವಾ ವಿವಾದವೊಂದರ ನಿರ್ಣಯಕ್ಕೆ ಮಾನುಷವಾದ ಅಥವಾ ಲೌಕಿಕವಾದ ಸಾಕ್ಷಿಗಳ ಅಭಾವವಿರುವಾಗ ದೈವದ ಸಹಾಯವನ್ನು ತೆಗೆದುಕೊಂಡು ಆ ವಿವಾದವನ್ನು ನಿರ್ಣಯಿಸುವ ವಿಧಾನವೇ ದಿವ್ಯ."[12]

ಈ ಸೂತ್ರದ ನೆರವಿನಿಂದ ಮೇಲಿನ ಪದ್ಯಭಾಗಗಳನ್ನು, ಸಾಲುಗಳನ್ನು ಅರ್ಥ ಮಾಡಲು ಹೋದರೆ ಅಸ್ಪಷ್ಟತೆ ಎದ್ದು ಕಾಣುತ್ತದೆ. ಆದ್ದರಿಂದ 'ದಿಬ್ಯ'ದ ಸರಿಯಾದ ಅರ್ಥ, ವ್ಯಾಖ್ಯಾನವನ್ನು ತಿಳಿದೇ ಅರ್ಥವ್ಯಾಖ್ಯಾನ ಮಾಡುವುದು ಕ್ಷೇಮಕರ.

ದಿಬ್ಯಕ್ಕೆ 'ಅಂತರಿಕ್ಷ ಧೂಮಕೇತು' ಎಂಬುದರ ಜತೆಗೆ ದಿವ್ಯವಾದ, ಮಂಗಳಕರವಾದ ಮುಂತಾದ ಇತರ ಅರ್ಥಗಳೂ ಉಂಟು.

"ದಿಬ್ಬ–Tbh ದಿವ್ಯ, Divine etc.

ದಿಬ್ಯ–Tbh ದಿವ್ಯ, an ordeal (ಏನ ಬೇಡಿದುದ ನೀವನಾಗಿ ನಮ್ಬಿಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ ಕೂಡಲ ಸಂಗಮದೇವಾ. BV 236) ದಿಬ್ಬದ ತೊಲೆ the balance used at ordeals (ಘಟ Nr) [ದಿಬ್ಯವಿಬ್ಬಿಡಿಪಿಡಿ to hold something (like a ball of iron) red but in order to prove one's

11. *Webster New Twentieth Century Dictionary*, 2nd Ed., p. 1259.
12. ಪಿ.ವಿ. ಕಾಣೆಯವರ *History of Dharmashastra, III* ಎಂಬ ಗ್ರಂಥರಚನೆಯ ಪುಟದಲ್ಲಿ ಉದ್ಧೃತವಾಗಿದೆ. ಡಾ|| ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'. ಪು. 195-6, 346-8 ನೋಡಿ.

13

sincerety or veracity. ಸಲ್ಲಿಗೆ ದಿಬ್ಯವಿಬ್ಬಿಡಿವನ್ತೆ ಪೋಲ್ ಪಿಡಿದು ನೀಂ ಬಾ pb 1 70 . of ದಿಬ್ಯವಿಬ್ಬಿಡಿ)[13]

ಮೇಲಿನದು ಕಿಟ್ಟೆಲ್ ಕೋಶದ ಅರ್ಥ. ಬಹುಶಃ ಡಾ॥ ಎಂ. ಚಿದಾನಂದಮೂರ್ತಿಯವರು ಏರಡನೇ ಅರ್ಥವನ್ನೇ ಪೂರ್ಣವಾಗಿ ನಂಬಿಕೊಂಡು ಹೊರಟು ಕಾವ್ಯಗಳಲ್ಲಿ ಬಂದ ಎಲ್ಲ ದಿಬ್ಯ ಪದಗಳಿಗೂ 'ordeal' ಎಂಬ ಅರ್ಥದಲ್ಲಿಯೇ ವ್ಯಾಖ್ಯಾನ ಮಾಡಿ ಪ್ರಾಚೀನ ಕರ್ಣಾಟಕದಲ್ಲಿದ್ದ ಒಂದು ಸಂಪ್ರದಾಯವನ್ನು ವಿವರಿಸಲು ಸಮರ್ಥರಾದರೇ ವಿನಾ ಆ ಪದದ ಮೂಲ ಚೂಲಗಳನ್ನು ಕೆದಕಿ ಬೆದಕಿ ಸಂದರ್ಭಕ್ಕೆ ಸರಿಹೊಂದುವ ಅರ್ಥಗಳನ್ನು ಕೊಟ್ಟು ವ್ಯಾಖ್ಯಾನಿಸುವ ಕಡೆ ಅಷ್ಟು ಗಮನವಿತ್ತಿಲ್ಲ.

'ಏನ ಬೇಡಿದುದ ನೀವನಾಗಿ ನಮ್ಬುಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ ಕೂಡಲ ಸಂಗಮದೇವಾ' ಎಂಬ ಭಸವಣ್ಣನವರ ವಚನದ ದಿಬ್ಯಕ್ಕೆ ordeal ಅರ್ಥ ಬರುವುದೇ ಇಲ್ಲ. 'ಪ್ರಮಾಣ' ಎಂಬರ್ಥ ಬರುತ್ತದೆ.

"ಎನ್ನಿಂದ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ
ನಿಮ್ಮ ಪಾದಸಾಕ್ಷಿ ಎನ್ನ ಮನಸ್ಸಾಕ್ಷಿ!
ಕೂಡಲ ಸಂಗಮದೇವಾ ಎನಗಿದೇ ದಿಬ್ಯ"

ಎಂಬ ಬಸವಣ್ಣನವರ ಇನ್ನೊಂದು ವಚನದ ಈ ದಿಬ್ಯಕ್ಕೂ ಅಷ್ಟೇ. ಪ್ರಮಾಣ ಎಂಬರ್ಥವೇ ವಿನಾ ಬೇರೆಯಲ್ಲ. ಹೀಗಿದ್ದರೂ ಎಲ್ಲದಕ್ಕೂ ordeal ಅರ್ಥ ಹಚ್ಚಿದರೆ ಹೇಗೆ? ಬೇರೆ ಅರ್ಥ ಇರುವಾಗ ಸಂದರ್ಭಕ್ಕೆ ತಕ್ಕ ಹಾಗೆ ಅರ್ಥ ಕೊಡುವುದು ವಿವೇಚನೆಗೆ ಸಂಬಂಧಪಟ್ಟ ವಿಷಯ. ವಿದ್ವತ್ತಿಗೆ ಸಾರಸ್ವತ ಪ್ರಪಂಚಕ್ಕೆ ಹಿತವಾದ ವಿಷಯ.

ಪಂಪನ "ಮೃಗಯಾ ವ್ಯಾಜದಿನೊರ್ಮೆ" ಎಂಬ ಪದ್ಯ ತುಂಬ ಸುಂದರವಾದ ಸಾರ ಸಂಗ್ರಹವಾದ ಒಂದು ಕ್ರಿಯೆಯನ್ನು ಅಭಿವ್ಯಕ್ತಗೊಳಿಸುವ, ಮನಸ್ಸನ್ನು ಥಟ್ಟನೆ ಸೆರೆಹಿಡಿಯುವ ಪದ್ಯ. ಪಂಪನ ಸಂಗ್ರಹ ಶಕ್ತಿಗೆ, ಕಿರಿದರಲ್ಲಿ ಪಿರಿದರ್ಥವನ್ನಿಟ್ಟು ಮನ ಮುಟ್ಟುವಂತೆ ಹೇಳುವ ಕಥನ ಶೈಲಿಗೆ ಇದೊಂದು ಸೊಗಸಾದ ಪದ್ಯ. ಈ ಪದ್ಯವನ್ನು ಷ್ಟನ್ನೇ ಎತ್ತಿಕೊಂಡು ಒಳ್ಳೆ ಸೊಗಸಾದ ವ್ಯಾಖ್ಯೆಯನ್ನು ಶ್ರೀ ಪೂರ್ಣಚಂದ್ರ ತೇಜಸ್ವಿಯವರು 'ಲಹರಿ'ಯಲ್ಲಿ ಕೊಟ್ಟಿದ್ದಾರೆ.

ಪಂಪ ತನ್ನ ಭಾರತವನ್ನು ಕುರಿತು—

ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ।
ವ್ಯಾಸನೆನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಕನೋ॥
ವಾಸಮನೆಯ್ದೆ ಪೇಳ್ದೆ ಪೆಸರಲ್ಲದೆ ಗರ್ವಮ ದೋಷಮುಟ್ಟಿ ಗಂ।
ದೋಷಮ ಕಾಣೆನೆನಜೀವ ಮಾಟ್ಕಿಯೆ ಪೇಟ್ಬಿನಿದಾವ ದೋಷಮೋ ||[14]

13. ಕಿಟ್ಟೆಲ್ ಕೋಶ, ಸಂಪುಟ 11, ಪು. 835.

14. ಪಂಪಭಾರತ, ಭಾಗ ೧, ಆ. ೧, ಪು. ೩, ಪ. ೧೩.

ಎಂದು ಹೇಳಿಕೊಂಡಿದ್ದಾನೆ. ವ್ಯಾಸಭಾರತವನ್ನೆ ಬರೆಯುತ್ತಿದ್ದರೂ ಯಥಾವತ್ ಅನುವಾದ ಮಾಡುತ್ತಿಲ್ಲ. ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಹೃದ್ಯವಾಗಿ ಕಾವ್ಯದಲ್ಲಿ ಹೇಳುತ್ತಿದ್ದಾನೆ. ಹಾಗೆಂದು ಸಂಸ್ಕೃತದ ವ್ಯಾಸಭಾರತವನ್ನು ಪೂರ್ಣವಾಗಿ ಬದಿಗಣಿಸಿ ಬರೆದಿದ್ದಾನೆಂದೂ ಹೇಳಲು ಬರುವಂತಿಲ್ಲ.

ತನಗೆ ಪ್ರಿಯವೆನಿಸಿದ. ಹಿಡಿಸಿದ, ಕನ್ನಡಕ್ಕೆ ಒಗ್ಗಿದ ನುಡಿಮುತ್ತುಗಳನ್ನೂ ಪಂಪ ಸ್ವೀಕರಿಸಿದ್ದಾನೆ. ಕಥೆ ಹೇಳುವಾಗ ವ್ಯಾಸರನ್ನು ಪೂರ್ಣ ಕೈಬಿಟ್ಟಿಲ್ಲ.

ಪರಾಶರ ಮುನಿ ಯಮುನಾ ನದಿಯನ್ನು ದಾಟುವಾಗ ಮತ್ಸ್ಯಗಂಧಿಗೆ ಸೋತು ನೌಕೆಯನ್ನು ಕೂಡಿದ ಪ್ರಸಂಗವನ್ನು ನೋಡಿ—

"ಮನದೊಳ್ ಸೋಲ್ತು ಮುನೀಂದ್ರನಾಕೆಯೊಡಲೀ ದುರ್ಗಂಧ ಪೋಪಂತೆಯೋ।
ಜನಗಂಧಿತ್ವಮನಿತ್ತು ಕಾಂಡಪಟದಂತಿರ್ಪನ್ನೆಗಂ ಮಾಡಿ ಮಂ॥
ಜನಲಂಪಟ್ಕಿಟಿನೀಯೆ ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾ।
ಮುನಿಪಂ ಪುಟ್ಟಿದನಂತು ದಿವ್ಯ ಮುನಿಗಳ್ಗೀ ಗೆಯ್ದೊಡಂ ತೀರದೇ॥[15]

ಇದು ಪಂಪ ಹೇಳುವ ರೀತಿ! 'ದಿವ್ಯ ಮುನಿಗಳ್ಗೀಗೆಯ್ದೊಡಂ ತೀರದೇ' ಎಂಬ ಉದ್ಗಾರ ಎಷ್ಟು ಸಹಜವೊ ಅದು ವ್ಯಾಸರಿಗೆ ಋಣಿಯಾಗಿದೆ. "ಸಂಸರ್ಗ ಭೂಷಿತಾದ್ಭುತ ಕರ್ಮಣಾ"[16] ಎಂಬ ಶ್ಲೋಕವನ್ನು ನೋಡಬಹುದು. ಇಲ್ಲೂ 'ದಿವ್ಯ' ಎಂಬ ಪದವಿದೆ. ಪಂಪ ಎಷ್ಟೋಸಾರಿ ವ್ಯಾಸರ ನುಡಿಗಟ್ಟುಗಳನ್ನು ಸ್ವೀಕರಿಸಿದ್ದಾನೆ. ಕನ್ನಡಕ್ಕೆ ಒಗ್ಗುವಂತೆ ಬಳಸಿಕೊಂಡಿದ್ದಾನೆ. ದಿಬ್ಯವನ್ನು ವ್ಯಾಸ ಬಳಸಿದ್ದಾನೋ ಇಲ್ಲವೊ ಎಂಬುದನ್ನೂ ಕೂಲಂಕಷವಾಗಿ ನೋಡಬೇಕು.

'ದಿವ್ಯ ಮುನಿಗಳ್ಗೀಗೆಯ್ದೊಡಂ ತೀರದೇ' ಎಂಬಲ್ಲಿ ಬರುವ ದಿವ್ಯ ಪದಕ್ಕೆ ಕಿಟ್ಟೆಲ್ ಕೋಶದ 'Divine' ಎಂಬ ಅರ್ಥವೇ ಸರಿ ಎಂಬುದು ಸ್ಪಷ್ಟ. ಎರಡನೇ ಅರ್ಥವಂತು ಬರುವುದಿಲ್ಲ.

'ಪಂಪನ ಪದ್ಯದ ಓದು' ಎಂಬುದು ಶ್ರೀ ಪೋಲಂಕಿ ರಾಮಮೂರ್ತಿಯವರ ಲೇಖನ. 'ಪುಸ್ತಕ ಪುರವಣಿ'ಯ ಜೂನ್-ಜುಲೈ ೮೨ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಇದರಲ್ಲಿಯೂ 'ದಿವ್ಯ'ದ ಬಗ್ಗೆ ವಿವರಣೆ ಇದೆ. 'ದಿಬ್ಯಂಬಿಡಿ' ಎಂಬುದನ್ನು 'ದೆವ್ವಂಬಿಡಿ' ಎಂದು ಅರ್ಥ ಮಾಡಿದ್ದಾರೆ. ಪದಶಃ ಅರ್ಥ ಮಾಡಿದರೆ ಅಷ್ಟು ಸೂಕ್ತವಾಗಿದೆ ಎನಿಸದಿದ್ದರೂ ಭಾವಾರ್ಥದಲ್ಲಿ ಸ್ವಲ್ಪ ಸ್ವಲ್ಪ ಜ್ಯೋತಿಷ್ಯರತ್ನಕ್ಕೆ ಹತ್ತಿರವೇನೋ ಅನಿಸುವಂತಿದೆ. 'ದಿಬ್ಯ' ಎಂಬುದಕ್ಕೆ 'ಪ್ರಮಾಣಮಾಡಿ' ಎಂದೂ ಹೇಳಿದ್ದಾರೆ. ವ್ಯಾಖ್ಯಾನ ಚೆನ್ನಾಗಿದೆ. ಆದರೆ ಇಲ್ಲೂ ಕೂಡ ಪೂರ್ಣವಾಗಿ ಅದರ ಮೂಲ ಅರ್ಥಕ್ಕೆ ಸಂದರ್ಭಕ್ಕೆ ಸರಿಯಾಗಿ ಅರ್ಥಮಾಡಲಾಗಿಲ್ಲ. ಭಾವಾರ್ಥದಲ್ಲಿ ವ್ಯಾಖ್ಯಾನಿಸಲಾಗಿದೆ.

---

15. ಅದೇ, ಪು. ೧೫, ಪ. ೬೯.

16. ಶ್ರೀಮನ್ ಮಹಾಭಾರತಂ, ಪ್ರಥಮ ಕಾಂಡ, ಪು. 79, ಶ್ಲೋಕ 72-73, 81.

ಒಟ್ಟಿನಲ್ಲಿ ಹೇಳುವುದಾದರೆ "ನಕ್ಷತ್ರಗಳ ಮಧ್ಯದಲ್ಲಿ ಅಗ್ನಿಸ್ವರೂಪವಾಗಿ ಕಾಣಿಸು ಕೇತುಗಳೇ ದಿವ್ಯಗಳು."[17] ಇದೇ ಸರಿಯಾದ ಅರ್ಥವೆಂದು ಕಾಣುತ್ತದೆ. ಇವು ಕೇತು ಗಳು. ಇವುಗಳನ್ನು ಕುರಿತು "ಭೂಮಿಯಲ್ಲಿ ನಿರ್ಮಲವಾದ ನೀರು ಕಲಕಿ ಹೋಗು ವುದು, ಆಕಾಶವನ್ನೆಲ್ಲ ಕೆಂಧೂಳಿ ಮುಚ್ಚುವುದು, ಅಕಾಲದ ಫಲಪುಷ್ಪ, ಭೂಕಂಪ ಇತ್ಯಾದಿಗಳು ಯಾವಾಗ ಉಂಟಾಗುವುವೋ ಆವಾಗ ಮೇಲ್ಕಂಡ ತಾಮಸ ಕೀಲಕಗಳೆಂ ಕೇತುಗಳ ಸೂರ್ಯಚಂದ್ರರ ಬಿಂಬಗಳಲ್ಲಿ ಮೂಡಿರುವುದೆಂದು ತಿಳಿಯತಕ್ಕದ್ದು. ಈ ಪ್ರಕಾರವಾಗಿ ರಕ್ತಕೇತು, ಶ್ವೇತಕೇತು- ಇವೇ ಮೊದಲಾದ ಅನೇಕ ಕೇತುಗಳು ಮೂಡು ತ್ತಿರುವುವು. ಈ ಕೇತುಗಳು ನೂರಾರು ವರ್ಷಗಳಿಗೊ ಅಥವಾ ಸಾವಿರಾರು ವರ್ಷ ಗಳಿಗೊ ಒಂದೊಂದು ಮೂಡುತ್ತಿರುವುವು. ಇವಲ್ಲದೆ ೧೫೦ ವರ್ಷಗಳಿಗೊಂದು ಸಾ ಶುಕ್ರಗ್ರಸ್ತ ಕಂಕಣ ಗ್ರಹಣವಾಗುವುದು. ಇದು ಕೂಡ ದೇಶಾರಿಷ್ಟ ಯೋಗವನ್ನು ಸೂಚಿಸುತ್ತದೆ."[18]

ಆದ್ದರಿಂದ ಶಂತನು ಧೂಮಕೇತು ಹಿಡಿಯುವಂತೆ ಯೋಜನಗಂಧಿಯ ಕೈ ಹಿಡಿ ದಾಗ ಆಕೆಯ ಮನ ಕಲಕಿತು-ನಿರ್ಮಲವಾದ ನೀರು ಕಲಕಿದಂತೆ! ಕೆಂಧೂಳು ಮೇಲೆದ್ದು ವಿವೇಚನೆಯನ್ನು ಮಸುಕು ಮಾಡಿತು. ಅಕಾಲದಲ್ಲಿ ಪುಷ್ಪಗಳು ಅರಳುವ ಹಾಗೆ ಆಕೆಯ ಮನಸ್ಸು ಅರಳಿತು. ಭೂಮಿಯಲ್ಲಿ ಭೂಕಂಪವಾಗಬಹುದು. ಹಾಗೆಯೇ ಆಕೆಯ ಮನಸ್ಸಿನಲ್ಲೂ ಭೂಕಂಪವಾಗಿದೆ. ಸದ್ಯಕ್ಕೆ ತತ್ತರಿಸಿ ಬಿದ್ದಿಲ್ಲ. ಎಚ್ಚತ್ತಿದ್ದಾಳೆ. ಆದ್ದರಿಂದಲೆ ಆಕೆ ಜಾಣೆಯಾಗಿ 'ನೀವು ಕೇಳುವುದಾದರೆ ನಮ್ಮ ಅಯ್ಯನನ್ನು ಕೇಳಿರಿ' ಎಂದು ಹೇಳುತ್ತಾಳೆ. ಆಕೆ ಬೆಸ್ತರವಳು. ಶಂತನು ಕ್ಷತ್ರಿಯ. ಕೀಳು ಕುಲದವಳೊ ಬ್ಬಳನ್ನು ಉತ್ತಮ ಕುಲದ ಆ ನಾಡಿನ ಸಾರ್ವಭೌಮ, ಆ ನೆಲದೊಡೆಯನೊಬ್ಬ ಪ್ರೀತಿಸಿ ಮದುವೆಗೆ ಒಡಂಬಡಿಸುವುದು ಎಲ್ಲ ಧರ್ಮಬಾಹಿರವೆ. ಧರ್ಮಬಾಹಿರ ವಾದರೂ ಪ್ರೀತಿಯ ಒತ್ತಡ, ಕಾಲದ ಮಹತ್ವ ಶಂತನುವನ್ನು ಕಾಡಿದೆ. ಆ ಸನ್ನಿವೇಶ ದಲ್ಲಿ 'ತನ್ಮೃಗಶಾವಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು ಕೆಂಡೊಲ್ದು ನಲ್ಮೆಗೆ' ಕೈ ಹಿಡಿಯುವ ಶಂತನು ಜನ್ನನ ಯಶೋಧರ ಚರಿತೆಯ ಅಮೃತಮತಿಯಂತಾ ಗಿದ್ದಾನೆ. ಅಲ್ಲಿ ಆಕೆ ಹೆಣ್ಣು. ಇಲ್ಲಿ ಇವನು ಗಂಡು, ಅಷ್ಟೆ ವ್ಯತ್ಯಾಸ!

ಹಿಂದೊಮ್ಮೆ ಇದೇ ಯೋಜನಗಂಧಿ ಮತ್ಸ್ಯಗಂಧಿಯಾಗಿದ್ದಾಗ ಕುಲ ಕಸುಬಿಗೆ ಹೊಂದಿಕೊಂಡು ದೋಣಿಯನ್ನು ನಡೆಸುತ್ತಿದ್ದಳು. ಆಗ ಸಾಕ್ಷಾತ್ ವೇದಪಾರಂಗತ, ಋಷಿವರೇಣ್ಯ ಪರಾಶರ ಈಕೆಯ ಮೇಲೆ ಹೀಗೆ ಅಪಚಾರವೆಸಗಿದ್ದಾರೆ. ಈ ಸನ್ನಿವೇಶ ವನ್ನು ವರ್ಣಿಸುವಾಗ ಪಂಪ 'ಮನದೊಳ್ ಸೋಲ್ತು' ಋಷಿ ಆಕೆಗೆ ದುರ್ಗಂಧ ಹೋಗು ವಂತೆ ಮಾಡಿ ಯೋಜನಗಂಧಿತ್ವವನ್ನಿತ್ತು ಆಕೆಯನ್ನು ರಮಿಸಿದನಂತೆ! ಅಲ್ಲಿ ಕವಿ ನೇರ ವಾಗಿ ಪ್ರವೇಶಿಸಿ 'ದಿವ್ಯ ಮುನಿಗಳ್ಗೆಗೆಯ್ದೊಡಂ ತೀರದೇ' ಎಂದು ಉದ್ಗರಿಸುತ್ತಾನೆ.

---

17. ಸರ್ವಜ್ಯೋತಿಷರತ್ನ–ಪಂಡಿತ ರೇವಣ ಶಾಸ್ತ್ರಿ, ಪು. ೧೯.

18. ಅದೇ, ಪು. ೨೦.

ಅದು ದಿವ್ಯ ಮುನಿಗಳ ಕಾರ್ಯ. ಅವರು ಏನು ಬೇಕಾದರೂ ಮಾಡಬಲ್ಲರು. ಮತ್ಸ್ಯಗಂಧಿಯನ್ನು ಸುಗಂಧಿಯನ್ನಾಗಿ ಮಾಡಿದರು. ವ್ಯಾಸರ ಜನನವಾದ ಮೇಲೆ ಆಕೆ ಪುನಃ ಕನ್ಯತ್ವ ಪಡೆಯಲಿ ಎಂದು ಹರಸಿದರು, ಆಶೀರ್ವದಿಸಿದರು. ಅಲ್ಲಿ ಪರಾಶರ 'ದಿವ್ಯ'ವಾದರೆ ಇಲ್ಲಿ ಶಂತನು 'ದಿವ್ಯ' ! ಅಲ್ಲಿಯ ಅರ್ಥ ಇಲ್ಲಿಗೆ ಹೊಂದದು. ಇವನು ಮರ್ತ್ಯ. ರಾಜನಾದರೂ ಸಾಮಾನ್ಯ ಮಾನವ. ಅವನಂತೆ ಇವನು ಮುಂಬರುವ ಕೇಡನ್ನೂ ಕೆಡುಕನ್ನೂ ಹೋಗಲಾಡಿಸಲಾರ, ದೂರ ಮಾಡಲಾರ. ಅಂದಿನ ಸಮಾಜಕ್ಕೆ ವಿರುದ್ಧವಾದ ರೀತಿಯಲ್ಲಿ ವರ್ತಿಸಿದ ಈತ ಯೋಜನಗಂಧಿಯ ದೃಷ್ಟಿಯಲ್ಲಿ, ಭಾರತ ಯುದ್ಧಕ್ಕೂ ನಡೆವ ಅನಾಹುತಗಳನ್ನು ಗಮನಿಸಿದಾಗ ಆ ದೃಷ್ಟಿಯಲ್ಲಿಯೂ ಧೂಮ ಕೇತುವೇ ವಿನಾ ಬೇರೆಯಲ್ಲ. ಇಂಥ ಧೂಮಕೇತುಗಳು ಗಗನದಲ್ಲಿ ಮೂಡುವುದು ನೂರು ನೂರೈವತ್ತು ವರ್ಷಗಳಿಗೊಮ್ಮೆ. ಶಂತನು ಯೋಜನಗಂಧಿಯರಂತೆ ವಿವಾಹವಾಗು ವುದೂ ಅಪರೂಪ. ಅಷ್ಟೇ ವರ್ಷಗಳಿಗೊಮ್ಮೆ ನಡೆಯುವಂಥ ಘಟನೆಯೂ ಹೌದು.

ಪರಾಶರ, ಶಂತನು ನಡತೆ ಹೆಣ್ಣಿನ ಮೇಲೆ ಬಲಾಢ್ಯ ಪುರುಷರ ದುರಾಕ್ರಮಣ ಎನಿಸಿದರೂ ಕಾಮಕ್ಕೆ ಕಣ್ಣಿಲ್ಲವಷ್ಟೆ ಎನ್ನಬೇಕಾಗುತ್ತದೆ. ಆ ವಿಚಾರದ ಬಗ್ಗೆ ಇಲ್ಲಿ ಅಪ್ರಸ್ತುತವಾದರೂ ಎರಡು ಕಡೆಯ ಘಟನೆಗಳೂ ಒಂದೆ. ಬಳಸಿದ ಪದಗಳೂ ಒಂದೆ. ಅದೇ ದಿವ್ಯ. ಆದರೆ ಅರ್ಥ ಬೇರೆ ಬೇರೆ, ವ್ಯಕ್ತಿಗಳೂ ಬೇರೆ ಬೇರೆ ! ಪರಾ ಶರ ದಿವ್ಯಮುನಿ. ಶಂತನು ದಿಬ್ಯರಾಜ. ಅಷ್ಟೆ ವ್ಯತ್ಯಾಸ. ಆದ್ದರಿಂದ ಈ ಪದ ಸಂದರ್ಭಗಳಿಗೆ ಸರಿಯಾಗಿ ಬೇರೆ ಬೇರೆ ಅರ್ಥಗಳನ್ನು ಪೊಂದಿದ ಪದವೇ ವಿನಾ ಖಚಿತ ವಾದ 'ಒಂದು ಆರ್ಡಿಯಲ್' ಎಂಬ ಕಿಟ್ಟೆಲ್ ಕೋಶದ ಎರಡನೇ ಅರ್ಥವನ್ನು ವ್ಯಕ್ತ ಪಡಿಸುವ ಪದವಲ್ಲ. ಅದೂ ಪಂಪಭಾರತದ ಈ ಪದ್ಯದ 'ದಿಬ್ಯ'ಕ್ಕೆ ಆ ಅರ್ಥ ಖಂಡಿತ ಬರುವುದಿಲ್ಲ.

ಸರ್ವಜ್ಯೋತಿಷ್ಯರತ್ನದಲ್ಲಿ ವಿವರಣೆ ಇದೆ. ಆದ್ದರಿಂದ ಇವು ದುಷ್ಟಗ್ರಹಗಳು. ರಾಹು ಕೇತುಗಳೆಂಬ ರಾಕ್ಷಸನ ಕುಲದವರು ಸೂರ್ಯ ಚಂದ್ರರನ್ನು ಹಿಡಿದು ಬಾಧೆ ಪಡಿ ಸುವವು ಎಂಬುದು ಚಿನ್ಮಯದಾಸನ ಶನಿ ಪುರಾಣದಲ್ಲೂ ಬರುತ್ತದೆ. ಅಂದರೆ ಒಟ್ಟಿ ನಲ್ಲಿ ಇವು ಕೇಡನ್ನು ತರುವ ಗ್ರಹಗಳು. ಅಶುಭಸೂಚಕವಾದವುಗಳು. ಶಂತನು ಮತ್ಸ್ಯಗಂಧಿಯನ್ನು ಮುಟ್ಟಿದ್ದು ಗರಬಡಿದಂತೆ ! ಒಳ್ಳೆಯದಕ್ಕಂತು ಅಲ್ಲವೆ ಅಲ್ಲ. ಸ್ವಲ್ಪ ದಿನಗಳಲ್ಲೆ ಅವನೂ ಅವಸಾನ ಹೊಂದಿದ. ಅವನ ಹಿರಿಯ ಮಗ ಗಾಂಗೇಯ ನಿದ್ದರೂ ಪಟ್ಟ ಅವನಿಗಾಗದೆ ಮತ್ಸ್ಯಗಂಧಿಯ ಮಕ್ಕಳಿಗಾಯಿತು.

ಚಿತ್ರಾಂಗದ ವಿಚಿತ್ರವೀರ್ಯರಲ್ಲಿ ಚಿತ್ರಾಂಗದ ಗಂಧರ್ವನೊಡನೆ ದ್ವಂದ್ವಯುದ್ಧ ದಲ್ಲಿ ಹೋರಾಡಿ ಮಡಿದ. ವಿಚಿತ್ರವೀರ್ಯನಿಗೆ ಮಕ್ಕಳಿಲ್ಲದೆ ಪರಲೋಕ ಪ್ರಾಪ್ತಿಯಾ ಯಿತು. ಮಾಡುವುದೇನು ? ಅವಿಚ್ಛಿನ್ನವಾಗಿ ಬಂದ ಸೋಮ ವಂಶಕ್ಕೆ ವಂಶೋದ್ಧಾರ ಮಾರ್ಗವೇ ಕಾಣದಾಯಿತು. ಭೀಷ್ಮ ಪ್ರತಿಜ್ಞಾರೂಢ. ಆತ ಮದುವೆಯಾಗುವಂತಿಲ್ಲ ; ರಾಜ್ಯಭಾರವನ್ನೂ ಮಾಡುವಂತಿಲ್ಲ. ಮತ್ಸ್ಯಗಂಧಿಯ ಮಕ್ಕಳು ಪುತ್ರ ಪ್ರಾಪ್ತಿಯಿಲ್ಲದೆ

ಪರಲೋಕ ಯಾತ್ರೆಗೈದರು. ಆದ್ದರಿಂದ ನಿಯೋಗ ಅನಿವಾರ್ಯವಾಯಿತು ! ವ್ಯಾಸರನ್ನು ಬರಿಸಿ ಅಂಬೆ, ಅಂಬಾಲಿಕೆ ಮತ್ತು ಅಂಬಿಕೆಯರಲ್ಲಿ ಕ್ರಮವಾಗಿ ಧೃತರಾಷ್ಟ್ರ, ಪಾಂಡು ಮತ್ತು ವಿದುರರನ್ನು ಪಡೆಯಬೇಕಾಯಿತು. ಇಷ್ಟೆಲ್ಲ ಅವಘಡಕ್ಕೆ ಶಂತನು ಮುದುಕಿ ಮತ್ಸ್ಯಗಂಧಿಯನ್ನು ಮದುವೆಯಾದದ್ದೇ ಕಾರಣ.

ಧೂಮಕೇತು ದರ್ಶನ ಮಹಾಕೆಡುಕುಂಟುಮಾಡುತ್ತದೆ. ಅದು ಹಿಡಿಯುವುದು ಎಂದರೆ ಅನಿಷ್ಟ ಪರಂಪರೆಯನ್ನು ಮೈಮೇಲೆ ತಂದುಕೊಂಡಂತೆ ! ಬೃಹತ್ ಸಂಹಿತೆ ಧೂಮಕೇತು ದರ್ಶನವನ್ನು ನಿಷೇಧಿಸುತ್ತದೆ.

ರಾತ್ರೌ ಧನುರ್ದಿನೇ ಚೋಲ್ಕ ! ಪಾರಾ ಚೈವ ದಿನೇ ತಥಾ !
ರಾತ್ರೌ ತು ಧೂಮಕೇತುಶ್ಚ ! ಭೂಕಂಪಶ್ಚ ತಥಾಪಿ !
ಏತಾನಿ ದುಷ್ಟ ಚಿಹ್ನಾನಿ ! ದೇಶಕ್ಷಯ ಕರಾಣಿ ಚ !"[19]

"ರಾತ್ರಿಯಲ್ಲಿ ಇಂದ್ರಧನುಸ್ಸು, ಹಗಲ ಉಲ್ಕಾಪಾತವು, ಹಗಲು ನಕ್ಷತ್ರ ಬೀಳುವುದೂ, ರಾತ್ರಿಯಲ್ಲಿ ಧೂಮಕೇತು ಮೂಡುವುದೂ, ನೆಲ ಗುಡುಗುವುದೂ ಇವೆಲ್ಲ ದುಷ್ಟ ನಿಮಿತ್ತಗಳು. 'ಇವರಿಂದಲೇ ದೇಶಕ್ಕೆ ಕೆಡುಕುಂಟಾಗುವುದು"[20] ಎಂದು ಹೇಳಿದೆ. ಆದ್ದರಿಂದ ಧೂಮಕೇತು ದರ್ಶನ ಒಳಿತಂತು ಅಲ್ಲವೆ ಅಲ್ಲ. ಇನ್ನು ಅವು ಬಡಿಯುವುದು, ಹಿಡಿಯುವುದು ಎಂದರೆ ಇನ್ನು ಮುಗಿದೇ ಹೋಯಿತು. ಆದ್ದರಿಂದ ಪಂಪಭಾರತದ ಈ ಪದ್ಯದ 'ದಿಬ್ಯ' ಒಂದು ಸಂಪ್ರದಾಯದ ಪದ್ಧತಿಯನ್ನು ಸೂಚಿಸುವುದಲ್ಲ. ಅದೊಂದು ದುಷ್ಟಗ್ರಹಸೂಚಕವಾದದ್ದು.

ಸಾಮಾನ್ಯವಾಗಿ ಹೇಳುವುದಾದರೆ ಈ ಪದಕ್ಕೆ ಮಂಗಳಕರವಾದ, ಪ್ರಮಾಣವಾದ, ಸಾಕ್ಷಿಯಾದ ಇತ್ಯಾದಿ ಅರ್ಥಗಳೂ ಉಂಟು. ಇದು ಬರುವ ಕಡೆಯಲ್ಲೆಲ್ಲ ಇದೊಂದು ಪದ್ಧತಿಸೂಚಕ ಪಾರಿಭಾಷಿಕ ಪದವೆಂದು ಸ್ವೀಕರಿಸುವುದು, ಹಾಗೆ ಅರ್ಥಮಾಡುವುದಂ ಅಪಾಯಕರ. ಅಸ್ಪಷ್ಟ ಅರ್ಥಕ್ಕೆ ದಾರಿಯಾಗುವುದು. ಆದ್ದರಿಂದ ವಿದ್ವಾಂಸರಾದ ಡಾ॥ ಎಂ. ಚಿದಾನಂದಮೂರ್ತಿಯವರ 'ಪ್ರಾಚೀನ ಕರ್ನಾಟಕದಲ್ಲಿ ದಿವ್ಯ ಮತ್ತು ಮುಂಡಿಗೆ' (ಸಂಶೋಧನ ತರಂಗ ಮತ್ತು ಪ್ರಬುದ್ಧ ಕರ್ನಾಟಕ) ಎಂಬ ಲೇಖನದ ವಿವರಣೆ, ವ್ಯಾಖ್ಯಾನ ಪಂಪನ ಪದ್ಯವನ್ನು ಸ್ಪಷ್ಟವಾಗಿ, ಖಚಿತವಾಗಿ ಅರ್ಥಪಡಿಸುವಲ್ಲಿ ನೆರವಾಗದೆ ಜಟಿಲಪಡಿಸಿದೆ ಎಂದು ಮಾತ್ರ ಹೇಳಬಹುದು ಅಷ್ಟೆ. ಒಂದು ಪದಕ್ಕೆ ಹಲವು ಮುಖಗಳಿವೆ ಎಂಬುದನ್ನು ಕನ್ನಡ ಸಾರಸ್ವತ ಪ್ರಪಂಚ ಅರಿತರೆ ಸಾಕು ಅಷ್ಟೆ.

---

19. ಸರ್ವಜ್ಯೋತಿಷ್ಯರತ್ನ-ಪಂಡಿತ ರೇವಾಶಾಸ್ತ್ರಿ ಪು. ೨೨.

20. ಅದೇ, ಪು. ೨೨.

ಕ. ಪು. ಸೀತಾರಾಮ ಕೆದಿಲಾಯ

ಅಕ್ಷರ ಗಣಗಳು

ಛಂದಶ್ಶಾಸ್ತ್ರಗಳಲ್ಲಿ ವೃತ್ತಗಳ ಲಕ್ಷಣವನ್ನು ನಿರೂಪಿಸಲು ಅಕ್ಷರ ಗಣಗಳನ್ನು ಕಲ್ಪಿಸಲಾಗಿದೆ. ಇವುಗಳು ಗುರು ಲಘು ಸಂಜ್ಞೆಯ ಮೂರು ಅಕ್ಷರಗಳ ಸಂಯೋಜನೆಯಿಂದ ಆವಿರ್ಭವಿಸುವುವು. ಗುರುವನ್ನು "ಗ" ವೆಂದೂ ಲಘುವನ್ನು "ಲ" ವೆಂದೂ ಸಂಕೇತಗಳಿಂದ ಸೂಚಿಸುವ ಸಂಪ್ರದಾಯವು ಕಂಡುಬರುವುದು. ಮಗಣ (ಗ ಗ ಗ) ಯಗಣ (ಲ ಗ ಗ) ರಗಣ (ಗ ಲ ಗ) ಸಗಣ (ಲ ಲ ಗ) ತಗಣ (ಗ ಗ ಲ) ಜಗಣ (ಲ ಗ ಲ) ಭಗಣ (ಗ ಲ ಲ) ನಗಣ (ಲ ಲ ಲ) ಎಂದು ಅಕ್ಷರ ಗಣಗಳಲ್ಲಿ ಎಂಟು ಪ್ರಭೇದಗಳಾಗುವುವು. ಇವುಗಳ ಆವಿಷ್ಕಾರದ ಕುರಿತು ಅನೇಕ ವಿದ್ವಾಂಸರು ವಿಮರ್ಶಿಸಿರುವರಾದರೂ ಈ ಗಣಗಳ ಸೃಷ್ಟಿಯ ಔಚಿತ್ಯವನ್ನು ಯಾರೂ ಸರಿಯಾಗಿ ವಿವರಿಸಿರುವುದಿಲ್ಲ.

ವೇದಗಳಲ್ಲಿ ನಾಲ್ಕು ಅಕ್ಷರಗಳ ಗಣದ ಕಲ್ಪನೆ ಕಂಡುಬರುವುದೆಂದು ಕೆಲವು ವಿಮರ್ಶಕರು ಬರೆದಿರುವರು. ಕನ್ನಡ ಕೈಪಿಡಿ-ಕನ್ನಡ ಛಂದಸ್ಸಿನ ಚರಿತ್ರೆಗಳಲ್ಲಿ ಈ ವಿದ್ವಾಂಸರ ಅಭಿಪ್ರಾಯಗಳನ್ನು ವಿವರಿಸಲಾಗಿದೆ. ಆದರೆ ಪ್ರಾಚೀನ ಛಂದಶ್ಶಾಸ್ತ್ರಕಾರರು ವೇದಗಳಲ್ಲಿ ಚತುರಕ್ಷರ ಗಣಗಳು ಬರುವ ವಿಚಾರವನ್ನು ನಿರೂಪಿಸಿರುವುದಿಲ್ಲ. ಕೆಲವು ಋಕ್ಕುಗಳಲ್ಲಿ ಸಮಪಾದಾಂತ್ಯಕ್ಕೆ ಲಗಲಗ ವಿನ್ಯಾಸವೂ ಗಲಗಲ (ಗ) ವಿನ್ಯಾಸವೂ ಗೋಚರಿಸುವುದಾದರೂ ಎಲ್ಲಾ ಋಕ್ಕುಗಳಲ್ಲಿಯೂ ಈ ನಿಯಮವು ಕಂಡುಬರುವುದಿಲ್ಲ. ಚೆನ್ನಾಗಿ ಪರಿಶೀಲಿಸಿದರೆ ವೇದದ ಋಕ್ಕುಗಳಲ್ಲಿ ಶ್ರುತಿರಮಣೀಯವಾಗುವಂತೆ ಪೋಣಿಸಿದ ಅಕ್ಷರ ವಿನ್ಯಾಸ ಮಾತ್ರವೇ ಕಂಡುಬರುತ್ತದೆ. ಆದುದರಿಂದ ವೇದಗಳಲ್ಲಿ ಅಕ್ಷರ ಗಣಗಳನ್ನು ಗುರುತಿಸುವುದು ಸಮಂಜಸವೆನಿಸಲಾರದು. (ಶ್ರೀ ಸೇಡಿಯಾಪು ಕೃಷ್ಣಭಟ್ಟರು ಛಂದೋಗತಿನಿಬಂಧದಲ್ಲಿ ಈ ಕುರಿತು ಸರಿಯಾಗಿ ವಿಮರ್ಶಿಸಿರುವರು.) ಲೌಕಿಕ ಛಂದಸ್ಸಿನ ವಿಚಾರವನ್ನು ವಿವರಿಸುವ ಸಂದರ್ಭದಲ್ಲಿ ಹೆಚ್ಚಾಗಿ ಈಗ ಪ್ರಚಾರದಲ್ಲಿರುವ ತ್ರಿಕ ಪದ್ಧತಿಯ ಅಕ್ಷರ ಗಣಗಳನ್ನು ಅನೇಕ ಛಂದಶ್ಶಾಸ್ತ್ರಗಳಲ್ಲಿ

ಉಲ್ಲೇಖಿಸಲಾಗಿದೆ. ವೃತ್ತಗಳ ಛಂದೋಲಕ್ಷಣವನ್ನು ಸಂಕ್ಷೇಪವಾಗಿ ಸೂಚಿಸಲು ಈ ಗಣಗಳನ್ನು ನಿರ್ಮಿಸಿದಂತೆ ತೋರುವುದು.

ಆದರೆ ವೃತ್ತಗಳ ಛಂದೋಗತಿ ಅಕ್ಷರ ಗಣಗಳ ಆವರ್ತವನ್ನು ಅನುಸರಿಸದೆ ನಿಶ್ಚಿತ ಅಕ್ಷರಗಳ ಸಂಯೋಜನೆಯನ್ನೇ ಅವಲಂಬಿಸಿದೆ ಎಂದು ಹೇಳಬಹುದು.

ಕೆಲವು ಪ್ರಾಚೀನ ಛಂದೋಗ್ರಂಥಗಳಲ್ಲಿ ವೃತ್ತಗಳ ಲಕ್ಷಣವನ್ನು ನಿರೂಪಿಸುವ ಸಂದರ್ಭದಲ್ಲಿ ಅಕ್ಷರ ಗಣಗಳನ್ನು ಸೂಚಿಸದೆ ಗುರು ಲಘುಗಳು ಬರಬೇಕಾದ ಸ್ಥಾನಗಳನ್ನು ಮಾತ್ರವೇ ನಿರ್ದೇಶಿಸಲಾಗಿದೆ. ಭರತನ ನಾಟ್ಯಶಾಸ್ತ್ರ, ವೃತ್ತಜಾತಿ ಸಮುಚ್ಚಯ, ಶ್ರುತಬೋಧ ಇತ್ಯಾದಿ ಗ್ರಂಥಗಳಲ್ಲಿ ಈ ರೀತಿಯ ನಿರೂಪಣೆ ಕಂಡುಬರುವುದು. ವಿರಹಾಂಕನು ವೃತ್ತಜಾತಿ ಸಮುಚ್ಚಯದಲ್ಲಿ ಗುರು ಲಘುಗಳಿಗೆ ಬೇರೆ ಬೇರೆ ಸಂಜ್ಞಾನಾಮಗಳನ್ನಿಟ್ಟು ಲಕ್ಷಣ, ಲಕ್ಷ್ಯ ಸಮವಾಯ ಪದ್ಧತಿಯಲ್ಲಿ ಪದ್ಯಗಳನ್ನು ಬರೆದಿರುವನು :

ಮಾಣವಕ ಕ್ರೀಡಿತಕ ವೃತ್ತ

ಚಾಮರ ಭಾವೌ ಕಟಕೌ ।
ಪಶ್ಯಸಿ ಹಸ್ತಂದಯಿತೇ ।
ಯಸ್ಯ ಚ ನಿತ್ಯಂ ಲಲಿತಂ ।
ಮಾಣವಕ ಕ್ರೀಡಿತಕಂ ॥

೧ ಗುರು (ಚಾಮರ) ೨ ಲಘು (ಭಾವಗಳು) ೨ ಗುರು (ಕಟಕಗಳು) ಲಘು ಲಘು ಗುರು (ಹಸ್ತ)ಗಳು ಪ್ರತಿ ಪಾದದಲ್ಲಿದ್ದರೆ ಮಾಣವಕ ಕ್ರೀಡಿತಕ ವೃತ್ತ.

ಶ್ರುತಬೋಧದಲ್ಲಿ ಇದರ ಲಕ್ಷಣ ಹೀಗಿದೆ :

ಆದಿಗತಂ ತುರ್ಯಗತಂ ।
ಪಂಚಮಕಂ ಚಾಂತ್ಯಗತಂ ।
ಸ್ಯಾದ್ಗುರುಚೇತ್ತತ್ಕಥಿತಂ ।
ಮಾಣವಕ ಕ್ರೀಡಿತಕಂ ॥

ಪ್ರತಿ ಪಾದದ ೧-೪-೫-೮ನೆಯ ಸ್ಥಾನಗಳಲ್ಲಿ ಗುರುಗಳೂ ಇತರ ಸ್ಥಾನಗಳಲ್ಲಿ ಲಘುಗಳೂ ಪ್ರತಿ ಪಾದದಲ್ಲಿ ಬಂದರೆ ಮಾಣವಕ ಕ್ರೀಡಿತಕ ವೃತ್ತ.

ಹೀಗೆ ಒಂದು ವೃತ್ತದಲ್ಲಿ ಬರುವ ಗುರು ಲಘುಗಳನ್ನು ಬೇರೆ ಬೇರೆಯಾಗಿ ಸೂಚಿಸಿದರೆ ನೆನಪಿನಲ್ಲಿಡಲು ಕಷ್ಟವಾಗುವುದು. ಆದುದರಿಂದ ಛಂದಶ್ಶಾಸ್ತ್ರಕಾರರು ಸೂತ್ರ ರೂಪದಲ್ಲಿ ಲಕ್ಷಣವನ್ನು ಸೂಚಿಸಲು ಗಣ ಸಂಜ್ಞೆಗಳನ್ನು ನಿರ್ಮಿಸಬೇಕಾಯಿತು. ಪಿಂಗಳನ ಛಂದಶ್ಶಾಸ್ತ್ರದಲ್ಲಿ ತ್ರಿಕ ಪದ್ಧತಿಯ ಅಕ್ಷರ ಗಣಗಳ ಉಲ್ಲೇಖವು ಮೊದಲಾಗಿ ಕಂಡುಬರುವುದು. ಆದುದರಿಂದ ಪಿಂಗಳನೇ ಅಕ್ಷರ ಗಣಗಳ ಕರ್ತೃವೆಂದು ಸದ್ಯಕ್ಕೆ ಭಾವಿಸಬಹುದು. ಅವನು ರಚಿಸಿದ ಎಂಟು ವಿಧದ ಗಣಗಳನ್ನಲ್ಲದೆ ಬೇರೆ ಗಣಗಳನ್ನೂ ಕೆಲವರು ಸೃಷ್ಟಿಸಿರುವರು. ರತ್ನಮಂಜೂಷಾಕಾರನು ಎರಡು ಅಕ್ಷರಗಳ ನಾಲ್ಕು ಗಣ

ಗಳನ್ನೂ ಮೂರು ಅಕ್ಷರಗಳ ಎಂಟು ಗಣಗಳನ್ನೂ ನಿರೂಪಿಸಿರುವನು. ಜಾನಾಶ್ರಯಕಾರನು ಎರಡು-ಮೂರು-ನಾಲ್ಕು-ಐದು-ಆರು ಅಕ್ಷರಗಳ ಗಣಗಳನ್ನು ನಿರ್ಮಿಸಿರುವನು. ಆದರೆ ನಾಲ್ಕು ಅಕ್ಷರಗಳ ಮೂರು ಗಣಗಳನ್ನೂ ಐದು ಅಕ್ಷರಗಳ ಎರಡು ಗಣಗಳನ್ನೂ ಆರು ಅಕ್ಷರಗಳ ಒಂದು ಗಣವನ್ನೂ ಮಾತ್ರವೇ ಉಲ್ಲೇಖಿಸಿ ಅವುಗಳಲ್ಲಿ ಹುಟ್ಟಬಹುದಾದ ಇತರ ಗಣಗಳನ್ನು ಕೈಬಿಟ್ಟಿರುವನು. ಪ್ರಾಯಶಃ ಗಣ ಸಂಜ್ಞೆಗಳು ಹೆಚ್ಚಾಗುವುವೆಂದು ಅವುಗಳನ್ನು ಬಿಟ್ಟಿರಬಹುದು. ಹೆಚ್ಚಿನ ಛಂದಶ್ಶಾಸ್ತ್ರಕಾರರು ಪಿಂಗಳನ ಕ್ರಮವನ್ನು ಅನುಸರಿಸಿ ತ್ರಿಕ ಪದ್ಧತಿಯ ಗಣಗಳನ್ನೇ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವರು. ಈಗ ಪ್ರಚಾರದಲ್ಲಿರುವ ಈ ಗಣಗಳ ಕುರಿತು ವಿದ್ವಾಂಸರು ವಿಭಿನ್ನ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು.

ದಿ। ಹರಿದಾಮೋದರ ವೇಲಣಕರರು ಮೂರು ಎಂಬ ಸಂಖ್ಯೆಯ ಮಹತ್ವವೇ ತ್ರ್ಯಕ್ಷರ ಗಣದ ಉತ್ಪತ್ತಿಗೆ ಕಾರಣವೆಂದು ಭಾವಿಸಿರುವರು. ಅವರು ಗುಣತ್ರಯ-ಅಣು-ತ್ರಯ-ಅವಸ್ಥಾತ್ರಯ-ಕಾಲತ್ರಯ-ಲೋಕತ್ರಯ ಇತ್ಯಾದಿ ವಿಷಯಗಳನ್ನು ವಿಸ್ತಾರವಾಗಿ ವಿವರಿಸಿ ಮೂರರ ಪ್ರಾಧಾನ್ಯವನ್ನು ಎತ್ತಿಹಿಡಿದಿರುವರು. ಆದರೆ ಇತರ ಸಂಖ್ಯೆಗಳಲ್ಲಿಯೂ ಈ ರೀತಿಯ ವೈಶಿಷ್ಟ್ಯವನ್ನು ಗುರುತಿಸಬಹುದು. ಆದುದರಿಂದ ಈ ಊಹೆ ಸಮಂಜಸವಲ್ಲ. ಕೆಲವು ವಿದ್ವಾಂಸರು ಮೂರು ಅಕ್ಷರಗಳ ಸಂಯೋಜನೆಯಾಗದೆ ಛಂದೋಲಯವು ಉಂಟಾಗದೆಂದು ಸೂಚಿಸಿ ತ್ರ್ಯಕ್ಷರ ಗಣಗಳ ನಿರ್ಮಾಣಕ್ಕೆ ಸಮರ್ಥನೆ ನೀಡಿರುವರು. ಆದರೆ ಮೂರು ಅಕ್ಷರಗಳ ಗಣದಿಂದ ಮಾತ್ರವೇ ಲಯಸಿದ್ಧಿಯಾಗುವುದೆಂದು ಭಾವಿಸುವುದು ಸರಿಯಲ್ಲ. ಒಂದು ಗುರುವಾಗಲೀ ಎರಡು ಲಘುಗಳಾಗಲೀ ನಿಂತರೆ ಲಯಪ್ರತೀತಿ ಗೋಚರಿಸದಿರಬಹುದು. ಎರಡು ಗುರುಗಳ ಸಂಯೋಗದಿಂದಾಗಲೀ ಗುರು ಲಘುಗಳ ಸಮ್ಮಿಶ್ರದಿಂದಾಗಲೀ ಆಗುವ ಗಣಗಳನ್ನು ಲಯಹೀನವೆನ್ನುವಂತಿಲ್ಲ. ಛಂದೋಲಯವೇ ಅಕ್ಷರ ಗಣಕ್ಕೆ ಆಧಾರವೆಂದು ಎಣಿಸುವುದಾದರೆ ದ್ವಿ ಗುರುಗಳ ಗಣಕ್ಕೂ ಗುರುಲಘುಮಿಶ್ರಿತ ಗಣಕ್ಕೂ ಮತ್ತೊಂದು ಅಕ್ಷರವನ್ನು ಸೇರಿಸಿ ತ್ರ್ಯಕ್ಷರ ಗಣಗಳನ್ನು ಸೃಷ್ಟಿಸುವ ಅವಶ್ಯವಿರಲಿಲ್ಲ.

ಶ್ರೀ ಸೇಡಿಯಾಪು ಕೃಷ್ಣ ಭಟ್ಟರು 'ಛಂದೋಗತಿ' ನಿಬಂಧದಲ್ಲಿ ಈ ಕುರಿತು ವಿವೇಚನೆ ಮಾಡಿರುವರು. "ಒಂದಕ್ಕಿಂತ ಹೆಚ್ಚು ಅಕ್ಷರಗಳಿರುವ ಅಕ್ಷರ ಪುಂಜದಲ್ಲಿ ಛಂದೋವಿನ್ಯಾಸವು ರೂಪುಗೊಳ್ಳುತ್ತದೆ. ಅಕ್ಷರ ಪುಂಜಗಳು ಮೂಲತಃ ಎರಡು ವಿಧ. ಎರಡಕ್ಷರಗಳ ಪುಂಜ ಮತ್ತು ಮೂರಕ್ಷರಗಳ ಪುಂಜ. ಆದುದರಿಂದ ಈ ಎರಡು ಮೂಲ ವಿನ್ಯಾಸಗಳೊಳಗೆ ಯಾವುದೊಂದನ್ನು ಅಕ್ಷರಚ್ಛಂದದ ಗಣವಾಗಿ ಸ್ವೀಕರಿಸುವುದೇ ನ್ಯಾಯವಾಗಿದೆ........ಹೀಗೆ ಸೂಕ್ಷ್ಮವಾದೊಂದು ಶಾಸ್ತ್ರೀಯವಾದ ತಳಹದಿಯಲ್ಲಿ ತ್ರಿಕಗಳನ್ನು ಬಳಸಿದ ಪಿಂಗಲಾಚಾರ್ಯನು ದ್ವಿಕಗಳನ್ನು ಬಳಸುತ್ತಿದ್ದರೆ ತ್ರಿಕಶೇಷವಾಗಿ ಲಗ ಸಂಜ್ಞೆಗಳನ್ನು ಬಳಸುವ ಆವಶ್ಯಕತೆ ಬರುತ್ತಿರಲಿಲ್ಲವಾದರೂ ಹನ್ನೆರಡು ಸಂಕೇತಾಕ್ಷರಗಳನ್ನು ಅವನು ಬಳಸಬೇಕಾಗುತ್ತಿತ್ತು. ಆದುದರಿಂದ ಹಾಗೆ ಮಾಡದೆ

'ಮಯರಸತಜಭನಲಗ' ಎಂಬ ಹತ್ತೇ ಸಂಕೇತಾಕ್ಷರಗಳ ಬಳಕೆಯಿಂದ ಕಾರ್ಯವನ್ನು ಸಾಧಿಸಿದ್ದಾನೆ" ಎಂದು ಬರೆದಿರುವರು. ಚೆನ್ನಾಗಿ ಪರಿಭಾವಿಸಿದರೆ ಪಿಂಗಳನು ದ್ವಿಕಗಳನ್ನು ಲೌ-ಗೌ ಲ್ಗೌ-ಗ್ಲೌ ಎಂಬ ಸಂಕೇತಗಳಿಂದಲೇ ನಿರೂಪಿಸಿರುವನೆಂದು ತೋರುವುದು.

ಸಂಸ್ಕೃತ ವ್ಯಾಕರಣ ನಿಯಮವನ್ನು ಪರಿಶೀಲಿಸಿದರೆ ಈ ವಿಷಯವು ಮನವರಿಕೆಯಾಗುವುದು. ಸಂಸ್ಕೃತ ಭಾಷೆಯಲ್ಲಿ ಏಕವಚನ-ದ್ವಿವಚನ-ಬಹುವಚನಗಳ ಪ್ರಯೋಗವಿದೆ. ಎರಡು ಗುರುಗಳನ್ನು "ಗ್ಲೌ" ಎಂದೂ ಎರಡು ಲಘುಗಳನ್ನು "ಲೌ" ಎಂದೂ ಒಂದೊಂದೇ ಸಂಕೇತಾಕ್ಷರಗಳಿಂದ ಬರೆಯಬಹುದು. ಗುರು ಲಘುಗಳನ್ನು "ಗ್ಲೌ" ಎಂದೂ ಲಘು ಗುರುಗಳನ್ನು "ಲ್ಗೌ" ಎಂದೂ ಒಂದೊಂದೇ ಸಂಯುಕ್ತಾಕ್ಷರ ಸಂಜ್ಞೆಗಳಿಂದ ಸೂಚಿಸಬಹುದು. ಹೀಗಾಗಿ ಎರಡು ಅಕ್ಷರಗಳ ಗಣಗಳನ್ನು ಸೃಷ್ಟಿಸುವ ಅವಶ್ಯಕತೆ ಬರಲಿಲ್ಲ. ಆದರೆ ಬಹುವಚನ ಪ್ರಯೋಗವು ಅನಿರ್ದಿಷ್ಟ ಸಂಖ್ಯೆಯನ್ನು ಸೂಚಿಸುವುದರಿಂದ ಮೂರು ಅಕ್ಷರಗಳ ಗಣಕ್ಕೆ ಬೇರೆ ಸಂಕೇತವನ್ನು ಕೊಡುವ ಅಗತ್ಯ ಉಂಟಾಯಿತು. ಹೀಗಾಗಿ ಪಿಂಗಳಾದಿ ಶಾಸ್ತ್ರಕಾರರು ಮೂರು ಅಕ್ಷರಗಳ ಗಣವನ್ನು ಮೂಲಮಾನವಾಗಿ ಪರಿಗಣಿಸಿ, ಮ-ಯ-ರ-ಸ-ತ-ಜ-ಭ-ನ ಎಂಬ ಎಂಟು ವಿಧದ ಗಣಗಳನ್ನು ನಿರ್ಮಿಸಿದರೆಂದು ಹೇಳಬೇಕಾಗುವುದು. ಛಂದಶ್ಶಾಸ್ತ್ರದಲ್ಲಿ ಗ-ಲ-ಗೌ-ಲೌ-ಗ್ಲೌ-ಲ್ಗೌ-ಮ-ಯ-ರ-ಸ-ತ-ಜ-ಭ-ನ ಎಂಬ ಹದಿನಾಲ್ಕು ಸಂಜ್ಞಾಕ್ಷರಗಳನ್ನು ಬಳಸಿ ಎಲ್ಲಾ ಛಂದೋಬಂಧಗಳ ಲಕ್ಷಣವನ್ನು ಸೂಚಿಸಲು ಸಾಧ್ಯವಾಗುವುದು. ತ್ರ್ಯಕ್ಷರ ಗಣಗಳಿಗೆ ಗಲ ಸಂಜ್ಞೆಗಳನ್ನು ಕ್ರಮವಾಗಿ ಬೇಕಾದಂತೆ ಸೇರಿಸಿ ನಾಲ್ಕು-ಐದು-ಆರು ಅಕ್ಷರಗಳ ಘಟಕಗಳನ್ನು ಸುಲಭವಾಗಿ ಸೃಷ್ಟಿಸಿಕೊಳ್ಳಬಹುದು.

ನಾಲ್ಕು ಅಕ್ಷರಗಳ **ಘಟಕ**–ಮ್ಗೌ–ಮ್ಲೌ–ಇತ್ಯಾದಿ
ಐದು ಅಕ್ಷರಗಳ **ಘಟಕ**–ಮ್ಗೌಗೌ–ಮ್ಲೌಗೌ–ಇತ್ಯಾದಿ.
ಆರು ಅಕ್ಷರಗಳ **ಘಟಕ**–ಮೌ–ಮ್ರೌ–ಇತ್ಯಾದಿ.

ಇದಕ್ಕೆ ಪಿಂಗಳನ ಛಂದಶ್ಶಾಸ್ತ್ರದಿಂದ ಕೆಲವು ದೃಷ್ಟಾಂತಗಳನ್ನು ಪರಿಶೀಲಿಸಬಹುದು :

ಗಾಯತ್ರೀ ಛಂದಸ್ಸು:–ತನುಮಧ್ಯಾ **ತ್ಯೌ** ॥
ಉಷ್ಣಿಕ್ ಛಂದಸ್ಸು:–ಕುಮಾರಲಲಿತಾ **ಜ್ಸೌ ಗೌ** ॥
ಅನುಷ್ಟುಪ್ ಛಂದಸ್ಸು:–ಚಿತ್ರಪದಾ **ಭೌಗೌ** ॥
ಬೃಹತೀ ಛಂದಸ್ಸು:–ಭುಜಗಶಿಶುಸೃತಾ **ನೌಮೌ** ॥

ಜಯದೇವಾದಿ ಛಂದಶ್ಶಾಸ್ತ್ರಕಾರರು ವೃತ್ತದ ಪಾದ ಲಕ್ಷಣವನ್ನು ಲಕ್ಷಣ ಲಕ್ಷ್ಯ ಸಮುದಾಯ ಪದ್ಧತಿಯಲ್ಲಿ ನಿರೂಪಿಸಿರುವುದರಿಂದ ಕೆಲವು ಸೂತ್ರಗಳಲ್ಲಿ ಅಧಿಕಾಕ್ಷರಗಳನ್ನು ಸೇರಿಸಿರುವರು.

ತೌ **ಚೇತ್ತು** ನುಮಧ್ಯಾ ॥
ಕುಮಾರಲಲಿತಾ**ಜ್ಸೌಗೌ** ॥
ಚಿತ್ರಪದಾಪಿಚ**ಭೌಗೌ** ॥
ಭುಜಗಶಿಶುಸೃತಾ **ನೌಮಃ** ॥

ಹೀಗೆ ವೃತ್ತಗಳ ಲಕ್ಷಣ ನಿರೂಪಣೆಯನ್ನು ತ್ರಿಕಗಳಿಂದಲೇ ಸಾಧಿಸಲಾಗಿದೆ.

ಅನುಷ್ಟುಬ್ವಕ್ತ್ರಾದಿ ಛಂದೋಬಂಧಗಳ ಪ್ರತಿ ಪಾದದಲ್ಲಿ ಎಂಟು ಅಕ್ಷರಗಳಿದ್ದರೂ ಅವುಗಳ ಛಂದೋಲಕ್ಷಣವನ್ನು ಸೂಚಿಸಲು ಈ ತ್ರ್ಯಕ್ಷರ ಗಣಗಳೇ ಸಾಕಾಗುವುವು.

ಶ್ಲೋಕಗಳ ಆದಿಗೂ ಅಂತ್ಯಕ್ಕೂ ನಿರ್ದಿಷ್ಟ ಅಕ್ಷರವೇ ಬರಬೇಕಾಗಿಲ್ಲ. ಗುರುವಾಗಲೀ ಲಘುವಾಗಲೀ ಬರಬಹುದು. (ಆದರೆ ಸಮಪಾದಾಂತ್ಯದಲ್ಲಿ ಲಘುವಿದ್ದರೆ ದೀರ್ಘತ್ವವನ್ನು ಪಡೆದು ಗುರುವಿನಂತೆ ಉಚ್ಚರಿಸಲ್ಪಡುವುದು.) ಹೀಗಾಗಿ ಇವುಗಳ ನಡುವಿನಲ್ಲಿ ಬರುವ ಆರು ಅಕ್ಷರಗಳ ನಿಯಮವನ್ನು ತ್ರ್ಯಕ್ಷರ ಗಣಗಳಿಂದಲೇ ಸೂಚಿಸಲು ಸಾಧ್ಯವಿದೆ. ಇದಕ್ಕಾಗಿ ಪಿಂಗಳನ ಸೂತ್ರಗಳನ್ನು ನೋಡಬಹುದು.

ಪಾದಸ್ಯಾನುಷ್ಟುಬ್ವಕ್ತ್ರಂ ॥ ನಪ್ರಥಮಾತ್ಸ್ನೌ ॥
ದ್ವಿತೀಯ ಚತುರ್ಥಯೋ**ರಶ್ಚ** ॥ ವಾನ್ಯತ್ ॥
ಯ ಚತುರ್ಥಾತ್ ॥ ಪಥ್ಯಾಯುಜೋ **ಜ** ॥

ಜಯಕೀರ್ತಿಯ ಛಂದೋನುಶಾಸನದಲ್ಲಿ ಲಕ್ಷಣವನ್ನು ಸೂಚಿಸುವ ಲಕ್ಷ್ಯ ಪದ್ಯವು ಹೀಗಿದೆ :

ಚತುರಕ್ಷರ ತೋ**ಯಶ್ಚೋ** ।
ನ್ನೋ ಚೇದಾದ್ಯಕ್ಷರಾ ತ್ಸ್ನೌತು ।
ವಕ್ತ್ರವದ್ವಿಷಮಾಣಾಂ ತ ।
ದ್ವಕ್ತ್ರಮಾನುಷ್ಟ ಭಂಭಾತಿ ॥

* * *

ಓಜಯೋ**ರ್ಯು**ಗಣೋ ನಾಬ್ಧೋ ।
ಯುರ್ಗ್ಮ ಯೋ**ರ್ಜ**ಗಣೋನ ಚ ।
ಶ್ಲೋಕೇಷು ಕಥ್ಯತೇ ಪಥ್ಯಾ ।
ಶ್ರೋತ್ರ ಪಥ್ಯಾಯ ತಸ್ತತಃ ॥

ಇವುಗಳನ್ನು ಪರಿಶೀಲಿಸಿದರೆ ತ್ರ್ಯಕ್ಷರ ಗಣ ಸಂಜ್ಞೆಯೇ ಇವುಗಳ ಛಂದೋನಿಯಮವನ್ನು ಸೂಚಿಸಲು ಸಾಕೆಂದು ಸ್ಪಷ್ಟವಾಗುವುದು,

ಮಾತ್ರಾಗಣಬದ್ಧವಾದ ಆರ್ಯಾದಿ ಜಾತಿಗಳ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿಯೂ ಈ ತ್ರ್ಯಕ್ಷರ ಗಣಗಳ ಉಪಯೋಗವಿದೆ.

ಪಿಂಗಳನ ಛಂದಶ್ಶಾಸ್ತ್ರದಲ್ಲಿ ಆರ್ಯೆಯ ಲಕ್ಷಣವನ್ನು ಸೂಚಿಸುವ ಸೂತ್ರವು ಹೀಗಿದೆ :

ಸ್ವರಾ ಅರ್ಧಂ ಚಾರ್ಯಾರ್ಧಂ ॥ ಅತ್ರಾಯುಜಿ **ಜ್** ॥
ಷಷ್ಠೋ **ಜ್** ॥ **ನ್ಲೌ** ವಾ ॥ **ನ್ಲೌ** ಚೇತ್ಪದಂ ದ್ವಿತೀಯಾದಿ ॥
ಸಪ್ತಮಃ ಪ್ರಥಮಾದಿ ॥ ಅಂತ್ಯೇ ಪಂಚಮಃ ॥
ಷಷ್ಠಶ್ಚ **ಲೌ** ॥

ಜಯಕೀರ್ತಿಯ ಛಂದೋನುಶಾಸನದಲ್ಲಿ ಆರ್ಯೆಯ ಲಕ್ಷಣವನ್ನು ನಿರೂಪಿಸುವ ಲಕ್ಷ್ಯ ಪದ್ಯವು ಹೀಗಿದೆ :

ಸಪ್ತ ಚತುರ್ಮಾತ್ರ ಗಣಾ ।
ಗುರ್ವಂತಾರ್ಯಾರ್ಧದ್ವಯೇನ ಚಾಯುಜಿ **ಜಃ** ॥
ಜಃ ಷಷ್ಠೋ**ನ್ಲ** ಗಣೋವಾ ।
ಲಘುರಪರೇ ತ್ರಿಗಣ ವಿಷಮಾಂಘ್ರಿಃ ॥

ಇತರ ಜಾತಿಬಂಧಗಳ ಲಕ್ಷಣನಿರೂಪಣೆಯ ಸಂದರ್ಭದಲ್ಲಿಯೂ ಕೆಲವೆಡೆಗಳಲ್ಲಿ ಅಕ್ಷರ ಗಣಗಳ ಉಲ್ಲೇಖವನ್ನು ಅವಶ್ಯವಿದ್ದಲ್ಲಿ ಮಾಡಲಾಗಿದೆ.

ಈ ವಿಷಯವನ್ನು ಪರಿಶೀಲಿಸಿದರೆ ಸಂಕ್ಷೇಪವಾಗಿ ಸೂತ್ರರೂಪದಲ್ಲಿ ಛಂದೋನಿಯಮವನ್ನು ಸೂಚಿಸಲು ತ್ರಿಕ ಪದ್ಧತಿಯ ಎಂಟು ಅಕ್ಷರ ಗಣಗಳು ಅವಶ್ಯವೆಂದೂ ಇತರ ಅಕ್ಷರ ಗಣಗಳು ಅಗತ್ಯವಿಲ್ಲವೆಂದೂ ವ್ಯಕ್ತವಾಗುವುದು.

ಪ್ರೊ॥ ಎಸ್. ಅನಂತನಾರಾಯಣ

ಪೂರ್ಣಾಹುತಿ

ಬಾನುಲಿ ರೂಪಕ

ಪಾತ್ರಗಳು

ವಿಶ್ವಾಮಿತ್ರ
ವಸಿಷ್ಠ
ಅರುಂಧತಿ
೧ನೆ ಶಿಷ್ಯ–ಪುಲಿಂದ,
೨ನೆ ಶಿಷ್ಯ–ರುಚಿರ ವಿಶ್ವಾಮಿತ್ರನ ಶಿಷ್ಯರು
ಹೋತೃ-ಋಕ್ಕುಗಳನ್ನು ಯಾಗದಲ್ಲಿ ಹೇಳುವವರು
[ಜನರು–ಕೆಲವು ಕಂಠಗಳು–ಯಾಗ ಕಾಲಕ್ಕೆ]
ಇಂದ್ರ
ಅಗ್ನಿದೇವ
ವಾಯುದೇವ
ವರುಣದೇವ
ಅಶ್ವಿನೀ

ವೇದ ಮಂತ್ರದ ರೆಕಾರ್ಡಿಂಗ್–ಯಾಗಕ್ಕೆ ಹಿನ್ನೆಲೆಯಲ್ಲಿ ಮೃದುವಾಗಿ. ವಸಿಷ್ಠರ ಆಶ್ರಮದಲ್ಲಿ ಹಕ್ಕಿಗಳ ಮೃದುಕೂಜನ.

ಮೋಹನ, ರೇವತಿ ಮತ್ತು ಹಿಂದೋಳ ರಾಗಗಳಲ್ಲಿ ಹಿನ್ನೆಲೆಗೆ ಮೃದುವಾಗಿ ಕೊಳಲು ಅಥವಾ ವೀಣೆಯ ನಾದ ಬಳಸಿಕೊಳ್ಳುವುದು.

ಮೊದಲನೆಯ ಅಂಕ

ವಿಶ್ವಾಮಿತ್ರಋಷಿಯ ಆಶ್ರಮ

೧ನೆ ಶಿಷ್ಯ : ನೋಡುತ್ತಿರು, ಈ ಬಾರಿ ನಮ್ಮ ಗುರುದೇವ ವಿಶ್ವಾಮಿತ್ರರು ಗೆದ್ದೇ ಗೆಲ್ಲುವರು.

೨ನೆ ಶಿಷ್ಯ : ನನ್ನ ಮನಸ್ಸಿಗೇಕೋ ಆತಂಕ. ಇಲ್ಲಿ ಇದು ಅವರಿಗೆ ಪರೀಕ್ಷೆಯೇ ; ಏನೋ–

೧ನೆ ಶಿಷ್ಯ : ಪರೀಕ್ಷೆಯೇ ಇರಬಹುದು. ವಸಿಷ್ಠರು ನಮ್ಮ ಗುರುದೇವರನ್ನು ಪರೀಕ್ಷೆ ಮಾಡಲೆಂದೇ–

೨ನೆ ಶಿಷ್ಯ : ಹಾಗಲ್ಲ, ಮೊದಲಿಂದ-ಸ್ವಲ್ಪ ಯೋಚನೆ ಮಾಡು. ತ್ರಿಶಂಕು ಮಹಾರಾಜ ಅಯೋಧ್ಯೆಯ ಅಧಿಪತಿ,

೧ನೆ : ಹೌದು-ಆದರೇನು-

೨ನೆ : ತ್ರಿಶಂಕು ಮಹಾರಾಜನಿಗೆ ಪರಂಪರಾಗತವಾಗಿ ವಸಿಷ್ಠರೇ ಗುರುಗಳು ತಾನೇ ?

೧ನೆ : ಆಂ-ಅಂತಹ ಗುರುಗಳು ತಾವು ಈ ಯಾಗ ಮಾಡಿಸದೆ, ವಿಶ್ವಾಮಿತ್ರರಿಗೇಕೆ ಇದನ್ನೊಪ್ಪಿಸಿದರೆಂದು ತಾನೇ ನಿನ್ನ ಪ್ರಶ್ನೆ !

೨ನೆ : ಅದು ಪ್ರಶ್ನೆಯಲ್ಲ. ಮೊದಲಿಂದ-ಅದರ ಸಮಸ್ಯೆ. •

೧ನೆ : ನಿನ್ನದು ಯಾವಾಗಲೂ ವಿಚಿಕಿತ್ಸಕ ಬುದ್ಧಿಯೇ ಆಯಿತು, ರುಚಿರ ! ಹೆಸರು ರುಚಿರ ಆದರೆ–

೨ನೆ : (ನಗುತ್ತಾ) ಬುದ್ಧಿ ವಿಚಿಕಿತ್ಸಕ-ನಿಜ ! ಆದರೂ ಕೊಂಚ ಗಂಭೀರವಾಗಿ ಯೋಚಿಸಿ ನೋಡು. ತ್ರಿಶಂಕು ಮಹಾರಾಜ ತನ್ನ ಗುರುಗಳಾದ ವಸಿಷ್ಠರನ್ನು ಬಿಟ್ಟು ವಿಶ್ವಾಮಿತ್ರರ ಬಳಿಗೇ ಏಕೆ ಬರಬೇಕು ?

೧ನೆ : ವಸಿಷ್ಠರೇ ತ್ರಿಶಂಕು ಮಹಾರಾಜನನ್ನು ನಮ್ಮ ಗುರುಗಳ ಬಳಿಗೆ ಕಳಿಸಿದ್ದು ತಾನೇ ! ನಮ್ಮ ಗುರುಗಳು ಒಪ್ಪಿಕೊಳ್ಳುವುದೋ ಬೇಡವೋ ಅಂತ ತುಂಬಾ ಯೋಚನೆ ಮಾಡಿ ಕೊನೆಗೆ ಇದೊಂದು ಆಹ್ವಾನವೆಂದು ಒಪ್ಪಿಕೊಂಡರಲ್ಲವೇ ! ನಿನಗೂ ಅದು ಗೊತ್ತು.

೨ನೆ : ಅದೇ ನನಗೆ ತಲೆ ಬಿಸಿ ಮಾಡುತ್ತಿರುವುದು. ತಮ್ಮಿಂದ ಮಾಡಿಸಲು ಸಾಧ್ಯ ವಿಲ್ಲ. ಅದ್ದರಿಂದ ರಾಜರ್ಷಿ ವಿಶ್ವಾಮಿತ್ರರನ್ನು ಹಿಡಿದು ಈ ಕೆಲಸ ಮಾಡಿಸಿಕೊ ಎಂದು ವಸಿಷ್ಠರು ಯಾಕೆ ಹೇಳಬೇಕಾಗಿತ್ತು. ನನ್ನಿಂದಾಗುವುದಿಲ್ಲ ಎಂದಷ್ಟೆ ಹೇಳಿದ್ದರಾಗುತ್ತಿರಲಿಲ್ಲವೇ ?

೧ನೆ : ಅದೇನೋ ನಿಜ-ಆದರೆ ಯಾರಾದರೂ ಮಾಡಿಸುವವರಿದ್ದಾರೆಯೇ ಎಂದು ತ್ರಿಶಂಕು ಮಹಾರಾಜ ಕೇಳಿದಾಗ ಸಹಜವಾಗಿಯೇ ನಮ್ಮ ಗುರುದೇವರ ಹೆಸರು ಹೇಳಿರಬಹುದು.

೨ನೆ : ನೀನು ಅಲ್ಲೇ ವಿಚಾರದಲ್ಲಿ ಎಡವುತ್ತೀಯೆ, ಪುಲಿಂದ. ಇದು ಸಹಜವಲ್ಲವೇ ಅಲ್ಲ. ವಸಿಷ್ಠರಿಗೆ ನಮ್ಮ ಗುರುದೇವನ ಮೇಲಿನ ಸಿಟ್ಟು ಅಡಗಿದೆಯೇ? ನಮ್ಮ ಗುರುದೇವನನ್ನು ಮಹರ್ಷಿಯೆಂದೂ ಕರೆದಿಲ್ಲ-ಕೇವಲ ರಾಜರ್ಷಿ ಎಂದು ಮಾತ್ರ ಕರೆದಿರುವುದು ಅವಮಾನವಲ್ಲವೇ ?

೧ನೆ : ರುಚಿರ-ನಿನ್ನ ಮಾತು ಒಂದು ವಿಧದಲ್ಲಿ ಸರಿ-ಆದರೆ, ಅವರು ಕರೆಯದಿದ್ದರೇನು ಕೊಳ್ಳೆ ಹೋದುದು–

೨ನೆ : ಹಾಗಲ್ಲ, ಪುಲಿಂದ. ವಸಿಷ್ಠರಿಗೆ ಸಮಾನರಾದ ಬ್ರಹ್ಮರ್ಷಿಯಾಗಬೇಕೆಂಬುದೇ ನಮ್ಮ ಗುರುದೇವನ ಆಕಾಂಕ್ಷೆ. ಅಂತಹುದಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದರು. ರಾಜ್ಯಕೋಶ ಬಿಟ್ಟು, ಸುಖಸಾಮ್ರಾಜ್ಯವನ್ನು ಅತ್ತ ನೂಕಿದರು. ಮತ್ತೆ ಯಾರೂ ಹಿಂದೆ ಮಾಡಿಲ್ಲದಷ್ಟು ತಪಸ್ಸು ಮಾಡಿದರು.

೧ನೆ : ಅದಂತೂ ನಿಜ-ನಮ್ಮ ಗುರುದೇವನಂತೆ ತಪಸ್ಸು ಮಾಡಿದವರು, ಸಿದ್ಧಿ ಪಡೆದವರು ಮತ್ತೊಬ್ಬರಿಲ್ಲ.

೨ನೆ : ನೋಡಿದೆಯಾ-ಇಷ್ಟಾದರೂ ವಸಿಷ್ಠರು ಇವರನ್ನು ಮಹರ್ಷಿಯೆಂದೂ ಒಪ್ಪಿಲ್ಲ-ಕೇವಲ ರಾಜರ್ಷಿಯೆಂದು ಕರೆದರು.

೧ನೆ : ಹೋಗಲಿ-ಈಗಲಾದರೂ ಈ ಯಾಗದಲ್ಲಿ ಗೆದ್ದು ಎಲ್ಲರಿಂದಲೂ ಸೈ ಎನಿಸಿಕೊಂಡಾಗ-ವಸಿಷ್ಠರು ತಾವಾಗಿಯೇ ಬಂದು ನಮ್ಮ ಗುರುದೇವನನ್ನು ಬ್ರಹ್ಮರ್ಷಿಯೆನ್ನಲೇಬೇಕಲ್ಲ-ಆದೀಗ ವಿಜಯ !

೨ನೆ : ಹೂಂ! ಅದು ಸರಿ. ಆದರೆ-(ಅನುಮಾನದ ಸ್ವರದಲ್ಲಿ)-ಆದರೆ–

೧ನೆ : ಏನಾದರೆ ? ಯಾಗದಲ್ಲಿ ನಮ್ಮ ಗುರುದೇವನ ವಿಜಯ ಖಂಡಿತ !

೨ನೆ : ನಿಜ ! ಆದರೆ ನನಗೆ ಇನ್ನೂ ಒಂದು ಸಂಶಯ-ತ್ರಿಶಂಕು ಮಹಾರಾಜ ಗುರುದೇವನಿಗೆ ದಕ್ಷಿಣೆಯನ್ನೊಪ್ಪಿಸಿದುದು ನೋಡಲಿಲ್ಲವೇ ನೀನು ?

೧ನೆ : ದತ್ತು ಸಹಸ್ರ ಗೋವುಗಳು, ಚಿನ್ನದ ನಾಣ್ಯಗಳನ್ನು ಕೊಂಬಿಗೆ ಕಟ್ಟಿದ್ದು ಸಾಲಂಕೃತವಾಗಿದ್ದು, ಅವುಗಳಿಗೆ ಅಗತ್ಯವಾದ ಆಳು ಕಾಳುಗಳ ಸಮೇತ ಕೊಟ್ಟುದು-ಅದೇನು ನಮ್ಮ ಗುರುದೇವನಿಗೆ ಮೆಚ್ಚಿನ ಕಾಣಿಕೆಯಲ್ಲವಲ್ಲ !

೨ನೆ : ಗುರುದೇವರು ಆಗ ನಕ್ಕು ಹೇಳಿದ್ದು ನೆನಪಿದೆಯೇ–'ತ್ರಿಶಂಕು ಮಹಾರಾಜ. ನನ್ನ ರಾಜ್ಯಕೋಶ, ಧನ ಕನಕ, ವಸ್ತು ವಾಹನಗಳನ್ನೆಲ್ಲ ಬಿಟ್ಟು ಕೊಟ್ಟ ನನ

ಗೇಕೆ ಇದೆಲ್ಲ ! ಇದು ನನಗೆ ಬೇಕಿಲ್ಲ.' [ಸಾಧ್ಯವಾದರೆ ಇಲ್ಲಿ ವಿಶ್ವಾಮಿತ್ರನ ಧ್ವನಿಯೇ ಬರಲಿ]

೧ನೆ : ಅದೂ ನಿಜ ಅನ್ನು-ಎಲ್ಲವನ್ನೂ ಬಿಟ್ಟು ಕೊಟ್ಟ ಮೇಲೆ ಈ ಸಣ್ಣ ಪುಟ್ಟ ಆಸೆಗೆ ಬಲಿ ಬೀಳುತ್ತಾರೆಯೇ-ಕೊನೆಗೂ ಒಪ್ಪಿಕೊಳ್ಳಲಿಲ್ಲ ಗುರುದೇವ.

೨ನೆ : ಯಾಗ ಪೂರ್ತಿಯಾದ ಮೇಲೆ ದಕ್ಷಿಣೆ. ಕಾಣಿಕೆ ನೀಡುವುದು ಸರಿ. ಇಲ್ಲಿ ಮೊದಲೇ ಕೊಟ್ಟು ಬಿಟ್ಟಿದ್ದಾನಲ್ಲ- ಅದರರ್ಥವೇನು ಗೊತ್ತೇ ?

೧ನೆ : ಗೊತ್ತು. ಗುರುದೇವನಲ್ಲಿ, ಅವರ ಶಕ್ತಿಯಲ್ಲಿ ಅಷ್ಟು ನಂಬಿಕೆ. ಈ ಯಾಗ ವನ್ನು ಪೂರ್ಣಗೊಳಿಸಿ ತನಗೆ ಫಲ ದೊರಕಿಸಿ ಕೊಡುತ್ತಾರೆಂಬ ಸಂಪೂರ್ಣ ಭರವಸೆ.

೨ನೆ : ಇರಬಹುದು.ಆಂ (ಆಶ್ಚರ್ಯದಿಂದ)-ಅಲ್ಲಿ ನೋಡು-ಅಲ್ಲಿ ಆಕಾಶದ ಕಡೆ-ತ್ರಿಶಂಕು ಮಹಾರಾಜ ಸದೇಹಿಯಾಗಿ ಮೇಲೆ ಮೇಲೇರುತ್ತಿದ್ದಾನೆ-ನಮಸ್ಕರಿಸುತ್ತಿದ್ದಾನೆ- ಮೇಲೆ-ಮೇಲೆ-ಸಣ್ಣ ಸಣ್ಣಗಾಗಿ–

೧ನೆ : ಈಗ ಚುಕ್ಕಿಯಂತಾಗುತ್ತಿದಾನೆ-ಈಗ- ಕಾಣಿಸುವುದೇ ಇಲ್ಲ-ಸ್ವರ್ಗವನ್ನು ಸದೇಹಿ ಯಾಗಿಯೇ ಸೇರುವ ಆತನ ಯಾಗವನ್ನು ನಮ್ಮ ಗುರುದೇವರು ಪೂರ್ಣಗೊಳಿಸಿ ದರು. ಇದು ವಿಜಯವಲ್ಲವೇ !

೨ನೆ : ನಿಜ-ಆಂ! ಅಲ್ಲಿ ನೋಡು-ಆಕಾಶದಿಂದ ತ್ರಿಶಂಕು ಮಹಾರಾಜ ತಲೆಕೆಳಗಾಗಿ ಉರುಳುತ್ತಿದಾನೆ-ಏನೋ ಕೂಗುತ್ತಿದಾನೆ-

(ತ್ರಿಶಂಕುವಿನ ಧ್ವನಿ : **ವಿಶ್ವಾಮಿತ್ರ ಮಹರ್ಷಿ-ಸ್ವರ್ಗದಿಂದ ನನ್ನನ್ನು ನೂಕಿಬಿಟ್ಟರು- ಕಾಪಾಡಿ ! ಕಾಪಾಡಿ !**)

[ವಿಶ್ವಾಮಿತ್ರರ ಧ್ವನಿ : (ಗಡುಸಾಗಿ) ಅಲ್ಲೇ ನಿಲ್ಲು. ನಿನಗೆ ಸ್ವರ್ಗದಲ್ಲಿ ಸ್ಥಾನವಿಲ್ಲವೆಂದು ನೂಕಿದರೋ ! ಆ ಸ್ವರ್ಗಕ್ಕೆ ಕಿಚ್ಚು ಹಚ್ಚಿ ನಿನಗಾಗಿ ಬೇರೊಂದು ಸ್ವರ್ಗವನ್ನೇ ಮಾಡುತ್ತೇನೆ. ಅನ್ಯಮಿಂದ್ರಂ ಕರಿಷ್ಯಾಮಿ. ಆ ಇಂದ್ರನನ್ನು ನಾಶಗೊಳಿಸಿ ಬೇರೊಬ್ಬ ಇಂದ್ರನನ್ನೆ ಸೃಷ್ಟಿಸುತ್ತೇನೆ. ತಾಳು-ಇಗೋ-ನೀನಿರುವೆಡೆಯಲ್ಲೇ ಒಂದು ಹೊಸ ಜಗತ್ತು]

೧ನೆ : ನೋಡು, ನೋಡು, ಆಕಾಶದಲ್ಲಿ ತ್ರಿಶಂಕು ಮಹಾರಾಜ ನಿಂತುದು-ಅಲ್ಲೇ ಆತನ ಸುತ್ತ ಹೊಸದೊಂದು ಪ್ರಪಂಚವೇ ಸೃಷ್ಟಿಯಾಗಿದೆ- ವಿಸ್ತಾರವಾದ ಆ- ಜಗತ್ತು ಸೂರ್ಯನ ಬೆಳಕನ್ನೇ ತಡೆದು ಹಿಡಿದಿದೆ–

೨ನೆ : ನಮ್ಮ ಗುರುದೇವನ ಶಕ್ತಿ ಅಪಾರ ! ತ್ರಿಶಂಕು ಮಹಾರಾಜನ ಆಸೆ, ಪೂರೈ ಸಲು ತಮ್ಮ ಮಹತ್ತರ ತಪೋಧನವೆಲ್ಲವನ್ನೂ ಸೂರೆಗೊಟ್ಟರು, ಅನ್ಯಾಯ ವಾಗಿ ತಪಶ್ಶಕ್ತಿಯನ್ನು ವ್ಯಯ ಮಾಡಿದರು, ಇಕೋ-ಸಿಟ್ಟಿನಿಂದ ಅವರೇ ಈ ಕಡೆ ಬರುತ್ತಿದಾರೆ.

ವಿಶ್ವಾಮಿತ್ರ : (ಸಿಟ್ಟಿನಿಂದ) ರುಚಿರ, ಪುಲಿಂದ-ಎಲ್ಲಿದೀರಿ-ಎಂತಹ ವಿಪರ್ಯಾಸ-ಎಂತಹ ಸೋಲು-ಎಂತಹ ವಿಕಟ ಹಾಸ್ಯ ಇದು ! ನಾನು ಮತ್ತೆ ತಲೆಯೆತ್ತದಿರಲೆಂದೇ ಈ ಸಂಚು ! ರುಚಿರ !

೨ನೆ :
೧ನೆ : } ಗುರುದೇವರಿಗೆ ನಮಸ್ಕಾರ.

ವಿಶ್ವಾ : ಶುಭಮಸ್ತು-ಆದರೆ-ನೋಡಿದಿರಾ ಎಂತಹ ಸವಾಲನ್ನು ಒಡ್ಡಿದರು. ಎಂತಹ ವಿಪರ್ಯಾಸವಾಯಿತು.

ರುಚಿರ : ಈ ಯಾಗವಲ್ಲಿ-ಮೋಸ-ವಸಿಷ್ಠರು ನಿಮ್ಮಿಂದಲೇ ತ್ರಿಶಂಕು ಮಹಾರಾಜ ಈ ಯಾಗ ಮಾಡಿಸಬೇಕೆಂದು ಹೊರಟಾಗಲೇ ಇದು ಏನೋ ಎಂದು ಸಂಶಯವಿತ್ತು ಗುರುದೇವ-

ವಿಶ್ವಾ : ಮೋಸ ! ವಂಚನೆ ! ಬೇಕೆಂದೇ, ನನಗೆ ಅಪಮಾನ ಮಾಡಬೇಕೆಂದೇ ವಸಿಷ್ಠ ಈ ಸಂಚು ಹೂಡಿರಬೇಕು-ತನ್ನ ಶಿಷ್ಯನನ್ನು ನನ್ನ ಬಳಿಗೆ ಕಳಿಸಿದ್ದು ಇದಕ್ಕೇ ! ನಾನು ಇದಕ್ಕೊಪ್ಪಿ, ಪ್ರಯತ್ನಿಸಿ ಸೋಲಲಿ ಎಂದು-ಈಗ ವಸಿಷ್ಠರಿಗೆ ಸಂತೋಷ ವಾಗಿರಬೇಕು !

೧ನೆ : ಏನಾಯಿತು ಗುರುದೇವ ?

ವಿಶ್ವಾ : ಏನಾಯಿತೇ ? ಸರ್ವನಾಶವಾಯಿತು ! ಯಾಗದಲ್ಲಿ ದೇವತೆಗಳನ್ನು ಕರೆದಾಗ –ಆ ಇಂದ್ರನನ್ನು ಬಿಟ್ಟು ಬೇರೆಲ್ಲರೂ ಬಂದು ಆಹುತಿಗಳನ್ನೊಪ್ಪಿಸಿಕೊಂಡರು- ಅದೂ ಅರೆಮನಸ್ಸಿನಲ್ಲಿ !

೨ನೆ : ಇಂದ್ರ ಮಾತ್ರ ಬರಲಿಲ್ಲವೇ ?

ವಿಶ್ವಾ : ಉಳಿದ ದೇವತೆಗಳೂ ನನ್ನ ಕೋಪಕ್ಕೆ ಹೆದರಿ ಬಂದರಂತೆ ! ವಸಿಷ್ಠರಿಲ್ಲದಕಡೆ ತಾನು ಬರುವುದಿಲ್ಲವೆಂದು ಇಂದ್ರ ಬರಲಿಲ್ಲ !

೧ನೆ : ಆದರೆ ವಸಿಷ್ಠರೇ ತಮಗೆ ಈ ಯಾಗ ನಡೆಸಲು ಒಪ್ಪಿಸಲಿಲ್ಲವೇ. ಗುರುದೇವ ?

ವಿಶ್ವಾ : ಅದೇ ವಂಚನೆ ! ನಾನು ಆಗ ಕೌಶಿಕ ಮಹಾರಾಜನಾಗಿ ವಸಿಷ್ಠನ ಆಶ್ರಮದ ಮೇಲೆ ದಾಳಿನಡೆಸಿದಾಗಿನಿಂದಲೂ ನನ್ನನ್ನು ಒಂದಲ್ಲ ಒಂದು ರೀತಿಯಲ್ಲಿ ಅಪ ಮಾನಕ್ಕೆ ಗುರಿಮಾಡುತ್ತಿದ್ದಾನೆ ಈ ವಸಿಷ್ಠ. ಈಗ ಇದು–ಯಾಗ ಮಾಡಿಸಲು ತಾನೊಪ್ಪಲಿಲ್ಲ- ನನ್ನ ಹೆಸರು ಹೇಳಿ ಕಳಿಸಿದ್ದು ಏಕೆ ಗೊತ್ತೇ ?

೨ನೆ : ತಮ್ಮ ಶಕ್ತಿಯನ್ನು ಪರಿಕ್ಷಿಸಲೆಂದೇ ನಾನು ಊಹಿಸಿದೆ. ಗುರುದೇವ.

ವಿಶ್ವಾ : ನಾನು ಕೂಡ ಹಾಗೆಯೇ ಅಂದುಕೊಂಡೆ ರುಚಿರ. ಮೊದಲು ನಾನೂ ಹಾಗೆಯೇ ಅಂದುಕೊಂಡೆ. ಇಷ್ಟು ವರ್ಷಗಳ ದೀರ್ಘ ತಪಸ್ಸನ್ನು ಮಾಡಿದನಂತರ ನನ್ನ ತಪಶ್ಶಕ್ತಿಯ ಪರೀಕ್ಷೆಗೆಂದೇ ವಸಿಷ್ಠ ಈ ಸವಾಲು ಒಡ್ಡಿದ್ದು ಎಂದುಕೊಂಡೆ.

ಈ ಪರೀಕ್ಷೆಯಲ್ಲಿ ಗೆಲ್ಲುತ್ತೇನೆಂಬ ನಂಬಿಕೆ ನನಗಿತ್ತು-ಆಗ ವಸಿಷ್ಠ ನನ್ನನ್ನು ಬ್ರಹ್ಮರ್ಷಿಯೆಂದು ಒಪ್ಪಿಕೊಳ್ಳಬಹುದೆಂದುಕೊಂಡೆ-

೨ನೆ : ನನಗೆ ಸಂಶಯವೇ ಇತ್ತು ಗುರುದೇವ-ಯಾಗಕ್ಕೆ ಮೊದಲೇ ಕಾಣಿಕೆ-

ವಿಶ್ವಾ : ಹೌದು. ರುಚಿರ. ನೀನು ಆಗಲೇ ನನಗಿದನ್ನು ಹೇಳಿದೆ-ಆದರೆ ನಾನದಕ್ಕೆ ಬೆಲೆ ಕೊಡಲಿಲ್ಲ-ನಾನದನ್ನು ಒಪ್ಪಿಕೊಳ್ಳಲಿಲ್ಲವಾದರೂ-ಆ ದಕ್ಷಿಣೆ-ಯಾಗ ಪೂರೈಕೆಗೆ ಮೊದಲೇ ನೀಡುವುದೆಂದರೆ-

೧ನೇ : ಯಾಗ ಪೂರೈಸಿದ ನಂತರ ತಾನು ಸ್ವರ್ಗಕ್ಕೆ ಹೊರಟು ಹೋದರೆ ಇಲ್ಲಿ ನಮಗೆ ದಕ್ಷಿಣೆ ಕೊಡುವುದಿಲ್ಲವೋ ಏನೋ-

ವಿಶ್ವಾ : ನಿನ್ನಂತೆಯೇ ನಾನು ನಂಬಿದೆ ಪ್ರಿಯಂವದ. ಆದರೆ ಈಗ ಅರ್ಥವಾಗುತ್ತಿದೆ ಈ ಕುತಂತ್ರ ! ತ್ರಿಶಂಕು ಮಹಾರಾಜ ತನ್ನ ಶಿಷ್ಯನಾದರೂ ಯಾಗದ ನೆಪಮಾಡಿ ನನ್ನ ಹತ್ತಿರ ಕಳುಹಿಸಿದ್ದೇಕೆ ? ಇದೊಂದು ನಯವಂಚನೆ. ನನ್ನ ಅಭಿಮಾನ ಭಂಗ ಮಾಡಿ. ಎಲ್ಲರೆದುರಿಗೂ ನನ್ನನ್ನು ಅಪಮಾನಕ್ಕೆ ಗುರಿಮಾಡುವುದೇ ಇದರ ಉದ್ದೇಶ.

೨ನೆ : ಆದರೆ ನೀವು ಅಸಾಮಾನ್ಯರೆಂದೂ ತೋರಿದ್ದೀರಿ. ಗುರುದೇವ. ಅನ್ಯಮಿಂದ್ರಂ ಕರಿಷ್ಯಾಮಿ ಎಂದು ಘೋಷಿಸುವ ಕೆಚ್ಚೆದೆ ಮತ್ತೆ ಯಾರಿಗುಂಟು ?

೧ನೆ : ತ್ರಿಶಂಕುವಿಗಾಗಿಯೇ ಬೇರೊಂದು ಸ್ವರ್ಗ ಸೃಷ್ಟಿಸಿದಿರಲ್ಲ-ಯಾರು ತಾನೇ- ಇಂತಹ ಪವಾಡ-

ವಿಶ್ವಾ : ಅದೆಲ್ಲ ಸಾಮಾನ್ಯ ವಿಷಯ ಪ್ರಿಯಂವದ. ಸಾಮಾನ್ಯ! ನಾಲ್ಕಾರು ವರ್ಷ ತಪಸ್ಸು ಮಾಡಿದ ಸಾಧಾರಣ ವ್ಯಕ್ತಿ ಕೂಡ ಇಂತಹ ಪವಾಡ ಮಾಡಬಲ್ಲ-ಮಾಡಿದ ಪವಾಡಕ್ಕೆ ತೆರುವ ಬೆಲೆ ಏನು ಗೊತ್ತೇ-ಈ ವರೆಗಿನ ನನ್ನ ತಪೋಬಲದಿಂದ ಪಡೆದ ಸಿದ್ಧಿಯೆಲ್ಲ ಈ ಒಂದು ಸೃಷ್ಟಿಗೆ ಕೊಟ್ಟ ಬೆಲೆ-ಇಂದು ವಿಶ್ವಾಮಿತ್ರ ಪೂರ್ಣ ಬಡವ-ಭಿಕಾರಿ-

೨ನೆ : ತಪೋಧನ-ಮತ್ತೊಬ್ಬರಿಗೆ ಕೊಟ್ಟಷ್ಟು ಹೆಚ್ಚುತ್ತದಲ್ಲ-ಗುರುದೇವ-

ವಿಶ್ವಾ : ಎಲ್ಲ ವರವೂ ಹೀಗೆಯೇ ರುಚಿರ-ಪ್ರತಿಯೊಂದು ವರವೂ ಒಂದು ರೀತಿಯ ಶಾಪ-ಇವತ್ತು ನನ್ನನ್ನು ರಾಜರ್ಷಿಯೆಂದಾಗ ನನ್ನ ಎಲ್ಲ ಸಿರಿ ಸಾಧನೆಗಳ ಶಾಪ ವನ್ನನುಭವಿಸಿದೆ-ಆದರೆ-ವಸಿಷ್ಠ-ಇಂತಹ ಮೋಸ. ವಂಚನೆ ಮಾಡಬಾರದಾಗಿತ್ತು!

೨ನೆ : ನಿಜ. ಗುರುದೇವ-ತ್ರಿಶಂಕುವನ್ನು ನಿಮಿತ್ತ ಮಾಡಿಕೊಂಡು. ಯಾಗವನ್ನೇ ನೆಪ ವಾಗಿಟ್ಟುಕೊಂಡು ನಿಮ್ಮ ತಪಸ್ಸನ್ನೆಲ್ಲಾ ಸೂರೆ ಮಾಡುವ ರೀತಿ-

ಶ್ವಾ : ಇವನ್ನು ನಾನು ಕ್ಷಮಿಸಲಾರೆ-ನಾನಿದಕ್ಕೆ ಸೇಡು, ಪ್ರತೀಕಾರ ಮಾಡಲೇಬೇಕು. ಆತ ಮಾಡಿದ ಈ ಮೋಸಕ್ಕೆ ಪ್ರತಿಯಾಗಿ ಮೋಸ-ವಂಚನೆಗೆ–ಪ್ರತಿ ವಂಚನೆ-ಆಗ ಮಾತ್ರ ನನ್ನ ಹೃದಯದ ಬೇಗೆ ಆರುತ್ತದೆ-ಆಗಲಿ, ಈ ರಾತ್ರಿ ವಿಚಾರ ಮಾಡುತ್ತೇನೆ-ನಡೆಯಿರಿ-

ಎರಡನೆಯ ಅಂಕ

ವಸಿಷ್ಠರ ಆಶ್ರಮ

ಅರುಂಧತಿ : ದೇವ, ನಿಮಗೆ ಈ ವಿಶ್ವಾಮಿತ್ರನಿಂದ ಬಿಡುಗಡೆಯೇ ಇಲ್ಲವೇ ?

ವಸಿಷ್ಠ : ದೇವಿ, ಅರುಂಧತಿ. ನಾವು ಈ ಬಿಡುಗಡೆಯನ್ನು ಬಯಸುವುದೂ ಇಲ್ಲ.

ಅರುಂಧತಿ : ನಿಮ್ಮ ಸ್ವಭಾವವೇ ಹೀಗೆ-ವಸಿಷ್ಠರು ಎಲ್ಲಕ್ಕೂ ತಲೆಯೊಡ್ಡುತ್ತಾರೆಂದು ಎಲ್ಲರೂ ನಿಮ್ಮನ್ನು ಕುರಿತು ಹೇಳುವುದು ಸಹಜ.

ವಸಿಷ್ಠ : ನಾವಿರುವುದೇ ಎಲ್ಲಕ್ಕೂ ತಲೆಯೊಡ್ಡುವುದಕ್ಕೇ ಅಲ್ಲವೇ, ದೇವಿ ?

ಅರುಂಧತಿ : ಅದರೆ ಈ ವಿಶ್ವಾಮಿತ್ರ-ಈಗ ರಾಜರ್ಷಿಯಾಗಿದ್ದರೂ, ಕೌಶಿಕ ಮಹಾರಾಜನಾಗಿ ನಮ್ಮಲ್ಲಿಗೆ ಬಂದಾಗ ಮಾಡಿದ ಅನಾಹುತಗಳೆಷ್ಟು. ಆತನ ಆಸೆ, ಸಿಟ್ಟು ಇವುಗಳಿಂದ ನಮ್ಮನ್ನೆಲ್ಲ ಹೆದರಿಸಿ, ಬೆದರಿಸಿ, ಆಶ್ರಮವನ್ನೇ ಧೂಳೀಪಟ ಮಾಡಿ ಮಣ್ಣಿನಲ್ಲಿ ಮಣ್ಣಾಗಿಸುತ್ತೇನೆಂದು ಬಂದುದನ್ನು ನೆನೆದರೆ ಈಗಲೂ ಎದೆ ಝಲ್ಲೆನ್ನುತ್ತದೆ-

ವಸಿಷ್ಠ : ದೇವಿ, ನೆನಪು ಕಹಿಯಾಗಬಾರದು-ಆಗಿನ ಆತನ ಆಸೆ ಏನು ? ಸ್ವರ್ಗದ ಧೇನುವನ್ನು ಬಯಸಿದ-ರಾಜಾಧಿರಾಜನ ಅಧಿಕಾರವನ್ನು ತೋರಿಸಲು ಯತ್ನಿಸಿದ. ಪಾಪ ! ಅದರ ಫಲವಾದರೂ ಏನು-ತಾನಾಗಿಯೇ ಯಾವ ಅಧಿಕಾರ ಮಹೋನ್ನತವೆಂದು ತಿಳಿದಿದ್ದನೋ ಅದನ್ನು ತ್ಯಾಗ ಮಾಡಿದ-ಎಲ್ಲ ವರವೂ ಒಂದು ರೀತಿಯ ಶಾಪವೇ ಎಂದು ಅರಿತ. ಎಲ್ಲ ಅಧಿಕಾರವೂ ಒಂದು ಬಗೆಯ ಸಂಕೋಲೆ-ಸ್ವಾತಂತ್ರ್ಯವನ್ನು ಹತ್ತಿಕ್ಕುವ ಹಿತ ಶತ್ರುವೆಂದು ಅರಿತ.

ಅರುಂಧತಿ : ನಿಜಕ್ಕೂ ಎಂತಹ ಕ್ಷಾತ್ರ ತೇಜಸ್ಸಿತ್ತು-ಎಲ್ಲ ಸುಖ ಸಾಮ್ರಾಜ್ಯ ಕಳೆದುಕೊಂಡು ವನವಾಸಿಯಾಗಿ–ಅಯ್ಯೋ ಪಾಪ ಎನಿಸುತ್ತದೆ ನೆನೆದರೆ !

ವಸಿಷ್ಠ : ನೋಡು ದೇವಿ, ಸುಖ ಸಾಮ್ರಾಜ್ಯವನ್ನು ಹೆಚ್ಚಿಸಿಕೊಳ್ಳಲೆಂದೇ ನಂದಿನಿ ಧೇನುವನ್ನು ಬಯಸಿದ್ದು-ಈಗ ಆ ಸಲುವಾಗಿಯೇ ಎಲ್ಲವನ್ನೂ ತ್ಯಾಗ ಮಾಡಿ

ತಪೋಬಲವನ್ನು ಪಡೆಯುವುದೊಂದೇ ಗುರಿ ಮಾಡಿಕೊಂಡ. ರಾಜರ್ಷಿಯಾದ ಈಗ ಬ್ರಹ್ಮರ್ಷಿಯಾಗುವ ಕಾಲ ಸನ್ನಿಹಿತವಾಗಿದೆ-ಇದು-

ಅರುಂಧತಿ : ಮತ್ತೆ ನಿಮಗೆ-ನಮಗೆ ಯಾವ ಪೀಡನವಾಗುತ್ತದೋ-

ವಸಿಷ್ಠ : ಅರುಂಧತಿ-ನಿನಗೆ ಗೊತ್ತಿದೆ. ತೇಯ ಹೊರತು ಗಂಧ ಬಾರದು-

ಅರುಂಧತಿ : ಗಂಧದ ಚಕ್ಕೆಯೇನೋ ಸರಿ-ಆದರೆ........

ವಸಿಷ್ಠ : ಅದನ್ನು ತೇಯುವ ಕಲ್ಲು-ಅಲ್ಲಿ ಭಾರವನ್ನೂ ಹೊರಬೇಕು ಅಲ್ಲವೇ ? ಕಲ್ಲಿ ಮೇಲಿನ ಒತ್ತಡದಲ್ಲಿ ಗಂಧದ ಚಕ್ಕೆ ಗಂಧ ಬೀರುತ್ತದೆ-ಆದರೆ ಕಲ್ಲು ಸವ ಗೊಳ್ಳುತ್ತದೆ.

ಅರುಂಧತಿ : ಹಾಗಾದರೆ ನಮಗೂ ಅದರಿಂದ ಉಪಯೋಗ-

ವಸಿಷ್ಠ : ಆಗಲಿಲ್ಲವೇ ? ನಮ್ಮ ಆಶ್ರಮದ ಬಲದ ಪರೀಕ್ಷೆ ನಡೆಯಲಿಲ್ಲವೇ ? ನಮ್ಮ ತಪಸ್ಸಿನ ಶಕ್ತಿಯ ಅರಿವಾಗಲಿಲ್ಲವೇ ? ನಾವು ಕಾಮ ಕ್ರೋಧಗಳಿಗೆ ಬಲಿ ಬೀಳದೆ ಲೋಕ ಕಲ್ಯಾಣಕ್ಕಾಗಿಯೇ ಬದುಕಿದ್ದೇವೆಂಬುದು ನಮಗೇ ಗೋಚರ ವಾಗಲಿಲ್ಲವೇ ? ಈಗಲೂ-

ಅರುಂಧತಿ : ವಿಶ್ವಾಮಿತ್ರನ-

[ವಿಶ್ವಾಮಿತ್ರ-'ವಸಿಷ್ಠ-ವಸಿಷ್ಠರೇ-ಬ್ರಹ್ಮರ್ಷಿ ವಸಿಷ್ಠರೇ'-ಎಂದು ಕೂಗು ವುದು ಹೊರಗಿನಿಂದ ಕೇಳುತ್ತದೆ]

ವಸಿಷ್ಠ : ನೆನೆದಲ್ಲಿಯೇ. ನೆನೆದ ಹೊತ್ತಿಗೇ ಮಹಾನುಭಾವರು ಆಗಮಿಸಿದರು.

ಅರುಂಧತಿ : (ಕಳವಳದಿಂದ) ಇನ್ನೇನು ಭೀಕರ ಕಾದಿದೆಯೋ-

ವಸಿಷ್ಠ : ದೇವಿ ಕಳವಳ ಪಡುವುದು ನಿನಗೆ ತಕ್ಕುದಲ್ಲ. ಅಂದು ಕೌಶಿಕ ಮಹಾರಾಜ ಭೀಕರತೆ ನಡೆಸಿದ-ರಾಜರ್ಷಿಯಾದ. ಇಂದು ರಾಜರ್ಷಿ ಇನ್ನೊಂದು ಭೀಕರ ಕೃತ್ಯ ನಡೆಸುತ್ತಾನೆ-ಬ್ರಹ್ಮರ್ಷಿಯಾಗುತ್ತಾನೆ-ಅಷ್ಟೇ.

ಅರುಂಧತಿ : ನನಗಂತೂ ಭಯ-[ಮತ್ತೆ ವಿಶ್ವಾಮಿತ್ರನ ಕೂಗು-ವಸಿಷ್ಠರೇ, ಬ್ರಹ್ಮರ್ಷಿ ವಸಿಷ್ಠರೇ-]
ವಿಶ್ವಾಮಿತ್ರನೆಂದು ಹೆಸರು-ಆದರೆ ದ್ವೇಷವೇ ಆತನ ಮೂಲಮಂತ್ರ.

ವಸಿಷ್ಠ : ದ್ವೇಷ ಪ್ರೇಮದ ಇನ್ನೊಂದು ಮುಖ ದೇವಿ-ಅಲ್ಲದೇ ನಾವಿರುವುದೇ ಅದನ್ನು ಸವಿಗೊಳಿಸಿ-ಪ್ರೇಮವಾಗಿ ಮಾರ್ಪಡಿಸಲು. ಇಲ್ಲವಾದರೆ ನಮ್ಮ ಬದುಕಿ ಗಾದರೂ ಏನು ಅರ್ಥ ? ಆತನನ್ನು ಸಕಲ ಮರ್ಯಾದೆಯ ಸಮೇತ ಒಳಕ್ಕೆ ಕರೆದು ತಾ-ಹೆದರಿಕೆ ಬೇಕಿಲ್ಲ.

ಅರುಂಧತಿ : ತಮ್ಮ ಧೈರ್ಯವೇ ನನ್ನ ಬಲ–[ವಿಶ್ವಾಮಿತ್ರ ಕೊಂಚ ಗಡುಸಾಗಿ-ವಸಿಷ್ಠರೇ–ಎನ್ನುತ್ತಿದ್ದಾಗಲೇ]

ಅರುಂಧತಿ : ನಮಸ್ಕಾರ ದಯಮಾಡಿಸಿ-ರಾಜರ್ಷಿಗಳು ದಯಮಾಡಿಸಿ–

ವಿಶ್ವಾಮಿತ್ರ : ಹೂಂ ! ನಮಸ್ಕಾರ-ಬ್ರಹ್ಮರ್ಷಿ ವಸಿಷ್ಠರಿಗೆ, ದೇವಿ ಅರುಂಧತಿಯವರಿಗೆ ವಿಶ್ವಾಮಿತ್ರನ ನಮಸ್ಕಾರ.

ವಸಿಷ್ಠ : ನಮಸ್ಕಾರ. ಬನ್ನಿ. ದಯಮಾಡಿ-ಈ ಕಡೆ ಈ ವೇತ್ರಾಸನವಲ್ಲಿ ಕುಳಿತುಕೊಳ್ಳಿ. ಬಾಗಿಲು ತೆರೆಯುವುದು ಸ್ವಲ್ಪ ತಡವಾಯಿತು. ಕ್ಷಮಿಸಿ. ದೇವಿ, ರಾಜರ್ಷಿಯವರಿಗೆ ಸತ್ಕಾರಕ್ಕೆ ಒಂದಿಷ್ಟು ಹಾಲು, ಹಣ್ಣು........

ವಿಶ್ವಾ : ನನಗೆ ಹಾಲು ಹಣ್ಣು ಒಂದೂ ಬೇಕಿಲ್ಲ. ನಾನು ಕಾರ್ಯಾರ್ಥಿಯಾಗಿ ಬಂದಿದ್ದೇನೆ. ಅತಿಥಿಯಾಗಲ್ಲ–ನಿಮ್ಮ ಅತಿಥಿ ಸತ್ಕಾರ–

ವಸಿಷ್ಠ : ಬಂದವರೆಲ್ಲ ದೇವಸ್ವರೂಪರು-ಅತಿಥಿಗಳು-ಅಲ್ಪವಾದರೂ ಉಪಹಾರವಾಗಿ ಹಾಲು ಹಣ್ಣು ಸ್ವೀಕರಿಸಲೇ ಬೇಕು.

ವಿಶ್ವಾ : (ತನ್ನಲ್ಲೇ) ಹಾಲು-ಹಣ್ಣು ತೆಗೆದುಕೊಂಡು ಹಾಲಾಹಲ ಊಡಿಸಲು ಬಂದೆ ನಲ್ಲ! (ಜೋರಾಗಿ) ತಮ್ಮ ಆತಿಥ್ಯದ ಅಗತ್ಯ ನನಗಿಲ್ಲ. ನಾನು ತಮ್ಮಲ್ಲಿ ಒಂದು ಕಾರ್ಯದ ನಿಮಿತ್ತ ಬಂದಿದ್ದೇನೆ. ಅದಷ್ಟು ಮಾಡಿ ನಾನು ಹೊರಡುವವನು.

ವಸಿಷ್ಠ ; ಆಯಿತು-ತಮ್ಮ ಕಾರ್ಯ ನಿಮಿತ್ತವೇನೋ ಅಪ್ಪಣೆಯಾಗಲಿ.

ವಿಶ್ವಾ ; ನಾನೊಂದು ಯಾಗ ಮಾಡಬೇಕೆಂದಿದ್ದೇನೆ-ಅದಕ್ಕೆ ತಾವು ಬ್ರಹ್ಮ ಪಟ್ಟವನ್ನಂಗೀಕರಿಸಬೇಕು. ಅದು ನನ್ನ ಬೇಡಿಕೆ.

ವಸಿಷ್ಠ : ತುಂಬಾ ಸಂತೋಷ. ಖಂಡಿತವಾಗಿ ತಮ್ಮ ಇಚ್ಛೆಯಂತೆ ನಾನು ಬ್ರಹ್ಮ ನಾಗುತ್ತೇನೆ.

ವಿಶ್ವಾ : ಆದರೆ-ಆದರೆ-ತಾವು ನಾನು ಯಾವ ಯಾಗ ಮಾಡುತ್ತೇನೆಂದು ಕೇಳಲೇ ಇಲ್ಲವಲ್ಲ–

ಅರುಂಧತಿ ; ಇಗೋ-ಪೂಜ್ಯ ಅತಿಥಿಗಳಿಗೆ ಅಲ್ಪ ಉಪಹಾರ-ಹಾಲು, ಹಣ್ಣು.

ವಿಶ್ವಾ : ಬೇಡ. ಬೇಡ-ನನಗೆ ಅದೊಂದೂ ಬೇಡ-

ವಸಿಷ್ಠ : ಹಾಗೆನ್ನಬಾರದು-ದಯವಿಟ್ಟು ಸ್ವೀಕರಿಸಲೇ ಬೇಕು.

ವಿಶ್ವಾ : ನನ್ನ ಕಾರ್ಯ–

ವಸಿಷ್ಠ : ನಾನು ಒಪ್ಪಿಗೆ ಕೊಟ್ಟಾಯಿತಲ್ಲ-ತಾವು ಯಾವ ಯಾಗವನ್ನೇ ಮಾಡಲಿ ಅದು ನಮಗೆ ಗೌಣ. ನಮ್ಮನ್ನು ತಾವು ಬ್ರಹ್ಮನಾಗಿರಲು ಕರೆದಿದ್ದೀರಿ. ಅದಕ್ಕೆ ನಮ್ಮ ಒಪ್ಪಿಗೆ ಕೊಟ್ಟಾಯಿತು. ಮತ್ತೇನು ? ತಾವು ಈ ಆತಿಥ್ಯ–

ವಿಶ್ವಾ : (ವ್ಯಂಗ್ಯವಾಗಿ) ಹಾಲು-ಹಣ್ಣು! ನನ್ನ ಸರ್ವಸ್ವವನ್ನೂ ನನ್ನಿಂದ ಕಸಿದುಕೊಂಡು ಈಗ ಹಾಲು ಹಣ್ಣು ಕೊಡುತ್ತೀರಲ್ಲವೇ? ಕೌಶಿಕ ಮಹಾರಾಜನಾಗಿದ್ದು ಎಲ್ಲ ರಾಜ ವೈಭವವನ್ನೂ, ಸುಖಸಾಮ್ರಾಜ್ಯವನ್ನೂ ಅನುಭವಿಸುತ್ತಿದ್ದ ನನಗೆ ಕೇವಲ ಒಂದು ಹಸು–

ವಸಿಷ್ಠ : ದೇವಧೇನು ಅದು–

ವಿಶ್ವಾ : ಎಂತಹುದಾದರೇನು? ಒಂದು ಹಸುವನ್ನು ನಿಮಿತ್ತ ಮಾಡಿಕೊಂಡು ನನ್ನ ರಾಜತ್ವವನ್ನೇ ಬಲಿ ತೆಗೆದುಕೊಂಡಿರಿ. ರಾಜ್ಯಕೋಶ, ಅರಮನೆ, ಪ್ರಜೆಗಳು ಎಲ್ಲವನ್ನೂ ತೊರೆದು ಕೇವಲ ನಿಮ್ಮ ಮೇಲಿನ ದ್ವೇಷ ಒಂದರಿಂದಲೇ ಪ್ರೇರಿತನಾಗಿ ರುದ್ರನಿಂದ ಅಸ್ತ್ರಾಸ್ತ್ರಗಳನ್ನು ಪಡೆದುಕೊಂಡು ಬಂದೆ–

ಅರುಂಧತಿ : ನಮ್ಮ ಆಶ್ರಮವನ್ನು ನಮ್ಮನ್ನು ನಾಶಪಡಿಸಲು ಯತ್ನಿಸಿದಿರಿ-

ವಿಶ್ವಾ : ನಿಜ-ಆದರೆ-ನಿಮ್ಮನ್ನು ಯಾವುದೋ ಶಕ್ತಿ ಕಾಪಾಡಿತು–

ವಸಿಷ್ಠ : ನಮ್ಮನ್ನು ಕಾಪಾಡಿದ ಶಕ್ತಿಯೇ ನಿಮ್ಮನ್ನೂ ಕಾಪಾಡಿತು-ರಾಜರ್ಷಿ!

ವಿಶ್ವಾ : ರಾಜರ್ಷಿ! ಹೋ! ಕಾಪಾಡಿದ್ದಲ್ಲ-ನನ್ನನ್ನು ಕಾಡಿತು. ಈಗಲೂ ನನ್ನ ಉದ್ದೇಶವೇನೆಂದುಕೊಂಡಿದ್ದೀರಿ. ನಿಮ್ಮ ಮೇಲಿನ ದ್ವೇಷ ನನಗಿನ್ನೂ ಆರಿಲ್ಲ. ಅದು ಭುಗಿಲ್ಲನೆದ್ದು ನನ್ನ ಅಂತರಂಗವನ್ನೆಲ್ಲ ಸುಡುತ್ತಿದೆ-ಅದು ಹೇಗಾದರೂ ಶಾಂತವಾಗಲೊಲ್ಲದು-

ವಸಿಷ್ಠ : ಆಗಲಿ-ಶಾಂತವಾಗುವ ಕಾಲವೂ ಸನ್ನಿಹಿತವಾಗಿದೆ.

ವಿಶ್ವಾ : ಶಾಂತವಾಗಲು ನಿಮ್ಮನ್ನು ಆಹುತಿ ತೆಗೆದುಕೊಳ್ಳಬೇಕು.

ಅರುಂಧತಿ : ಈಗ ಈ ಹಾಲು-ಹಣ್ಣು ಸ್ವೀಕರಿಸಿ-

ವಿಶ್ವಾ : ಹಾಲು-ಹಣ್ಣು! ಮತ್ತೆ ಅದೇ! ಆಗ ನನ್ನ ಎಲ್ಲವನ್ನೂ ಬಿಟ್ಟು ಓಡಿಹೋಗುವಂತೆ ಮಾಡಿದಿರಿ. ಈಗ ಮತ್ತೊಮ್ಮೆ ನನ್ನ ಅಭಿಮಾನ, ನನ್ನ ಸತ್ವವನ್ನೆಲ್ಲ ನಾಶಪಡಿಸಲು ಯತ್ನಿಸಿದಿರಿ.

ವಸಿಷ್ಠ : ಶಾಂತಂ ಮನಃ ಶಾಂತಂ ಮನಃ! ನಾವೆಂದೂ ಅಂತಹ ಪ್ರಯತ್ನ–

ವಿಶ್ವಾ : (ಕಟುವಾದ ವ್ಯಂಗ್ಯ) ಶಾಂತಂ-ಶಾಂತಂ-ಶಾಂತಂ-ಪ್ರಯತ್ನ ಮಾಡಲಿಲ್ಲ ಅಲ್ಲವೇ? ನಿಮ್ಮವನೇ ತ್ರಿಶಂಕು-ನಿಮ್ಮ ಶಿಷ್ಯ-ನಿಮ್ಮ ಪರಂಪರಾಗತವಾದ ಅಯೋಧ್ಯೆಯ ರಾಜಾಧಿರಾಜ-ಅವನಿಗೆ ನೀವೇ ಗುರುಗಳು-

ವಸಿಷ್ಠ : ನಿಜ-ಆದರೆ-

ವಿಶ್ವಾ : ಆದರೆ ಅವನ ಯಾಗಮಾಡಲು ನನ್ನನ್ನು ಕರೆಯುವಂತೆ ಅವನಿಗೆ ಸೂಚಿಸಿದಿರಿ. ನೀವು ಮಾಡಿಸಬೇಕಾದ ಯಾಗಕ್ಕೆ ನನ್ನನ್ನು ನಿಯೋಜಿಸಿದಿರಿ-ನಿಜವಾಗಿ ನನ್ನನ್ನು ಬಲಿಪಶುವನ್ನಾಗಿ ಮಾಡುವುದೇ ನಿಮ್ಮ ಉದ್ದೇಶ-

ಅರುಂಧತಿ : ಹಾಗೆಂದೂ ನಮಗೆ ಅನ್ನಿಸಲಿಲ್ಲ-

ವಿಶ್ವಾ : ಅನ್ನಿಸದಿದ್ದರೇನು ? ಅವನ ಯಾಗದ ನೆಪಮಾಡಿಕೊಂಡು, ಜಗತ್ತೇ ನನ್ನನ್ನು ನೋಡಿ ನಗುವಂತೆ ಮಾಡಿದಿರಿ. ವಿಶ್ವಾಮಿತ್ರ-ಈ ರಾಜರ್ಷಿ ಎಂತಹ ಅಪ್ರಯೋಜಕ ಎಂದು ನಗೆಪಾಟಲಿಗೆ ಗುರಿಮಾಡಿದಿರಿ.

ವಸಿಷ್ಠ : ಹಾಗಲ್ಲ-ತಾವು ಎಂತಹ ತೇಜೋವಂತರೆಂಬುದೂ ತಿಳಿಯಲಿಲ್ಲವೇ ? ಅನ್ಯಮಿಂದ್ರಂ ಕರಿಷ್ಯಾಮಿ ಎಂದು ತಾವು ಘೋಷಿಸಿದಿರಿ.ತ್ರಿಶಂಕುವಿಗಾಗಿ ಮತ್ತೊಂದು ಸ್ವರ್ಗವನ್ನೇ ಸೃಷ್ಟಿಸಿದಿರಿ. ಆ ಕೆಚ್ಚು. ಅಂತಹ ಅದ್ಭುತ ಪವಾಡವನ್ನು ಮತ್ತೆ ಯಾರು ಸಾಧಿಸಿದ್ದಾರೆ-ಜಗತ್ತು ತಮ್ಮನ್ನು ಪವಾಡ ಸದೃಶವೆಂದೇ ಭಾವಿಸುತ್ತದೆ-

ವಿಶ್ವಾ : ಪವಾಡ! ಈ ಪವಾಡವೂ ನಿಮ್ಮ ಯೋಜನೆಯ ಫಲ! ಅದರ ಫಲವೇನಾಯಿತು-ನಾನಿಂತನಕ ಗಳಿಸಿದ್ದ ತಪೋಫಲವೆಲ್ಲ ನಾಶವಾಯಿತು. ಅಷ್ಟೇ ಅಲ್ಲವೇ ನಿಮ್ಮ ಉದ್ದೇಶ–

ಅರುಂಧತಿ : ಹಾಗೆಂದಿಗೂ ಇಲ್ಲ–

ವಸಿಷ್ಠ : ತಮ್ಮ ಸಾಧನೆಯ ಬಗ್ಗೆ ನಮಗೆ ಗೌರವವಿದೆ–

ವಿಶ್ವಾ : (ಸಿಡಿದೆದ್ದು) ಗೌರವವಲ್ಲ! ದ್ವೇಷ! ಈ ವಿಶ್ವಾಮಿತ್ರನನ್ನು ನಿರ್ನಾಮವಾಗಿಸಬೇಕೆಂದೇ ನಿಮ್ಮ ಉದ್ದೇಶ–ಕೌಶಿಕ ಮಹಾರಾಜನಾಗಿ ನಿಮ್ಮಲ್ಲಿಗೆ ಬಂದ ಕಾಲದಿಂದಲೂ ಅದೊಂದೇ ನೀವು ಮಾಡುತ್ತಿರುವುದು. ಆದರೆ ನಾನು ನಾಶವಾಗಲಾರೆ!

ವಸಿಷ್ಠ : ತಾವು ಖಂಡಿತವಾಗಿಯೂ ನಾಶವಾಗುವುದಿಲ್ಲ-ಕೌಶಿಕ ಮಹಾರಾಜ ಇಂದು ಇಲ್ಲವಲ್ಲ–

ವಿಶ್ವಾ : ಹೌದು ಅಂದಿನ ಕೌಶಿಕ ಇಂದು ರಾಜರ್ಷಿ ವಿಶ್ವಾಮಿತ್ರ! ಆದರೆ ಆ ದ್ವೇಷ-ಆಗಿನದು-ಇನ್ನೂ ಬೆಳೆದೇ ಇದೆ-ಇಂದು ಅದು ದೊಡ್ಡದಾಗಿ ಭುಗಿಲ್ಲೆದ್ದಿದೆ. ಅಂದಿನ ಸಣ್ಣ ಕಿಡಿ ಇಂದು ಹೋಮಾಗ್ನಿಯಂತೆ ಪ್ರಜ್ವಲಿಸುತ್ತಿದೆ. ಅದಕ್ಕೆ ಇಂದು ಪೂರ್ಣಾಹುತಿ ನೀಡಬೇಕು. ವಸಿಷ್ಠರನ್ನು !

ಅರುಂಧತಿ : ಹಾಂ! ಏನು !

ವಸಿಷ್ಠ : ದೇವಿ-ಗಾಬರಿಯಾಗಬೇಡ-

ವಿಶ್ವಾ : ನಾನು ಬಂದುದೇಕೆ ಗೊತ್ತೇ-ವಸಿಷ್ಠರನ್ನು ನನ್ನ ದ್ವೇಷಕ್ಕೆ ಆಹುತಿಯಾಗಿ ತೆಗೆದುಕೊಳ್ಳಲು-ವಸಿಷ್ಠರ ಹೆಸರೇ ಇಲ್ಲದಂತೆ ಮಾಡಿಬಿಡಲು–

ವಸಿಷ್ಠ : ಆಯಿತು–ಹಾಗೆಯೇ ಮಾಡುವಿರಂತೆ–

ವಿಶ್ವಾ : ಅದೇ–ಈ ಯಾಗ–ವಸಿಷ್ಠ ಮಾರಣ ಯಾಗ–

ಅರುಂಧತಿ : ಏನು ! ಏನು ! ವಸಿಷ್ಠ-ಮಾರಣ-(ನಿಧಾನವಾಗಿ ಭಯಾನಕಕ್ಕೆ ಹೆದರಿ)

ವಿಶ್ವಾ : ಹಾಂ! ವಸಿಷ್ಠ ಮಾರಣ ಯಾಗ (ಒತ್ತಿ ಒತ್ತಿ ಹೇಳುತ್ತಾನೆ)·ವಸಿಷ್ಠರನ್ನು ಕೊಲ್ಲಲು ಈ ಯಾಗ–ಇದಕ್ಕೆ ವಸಿಷ್ಠರೇ ಬ್ರಹ್ಮರಾಗಿ ಕುಳಿತು ನಡೆಸಬೇಕು-ಎಂತಹ ತಮಾಷೆ! (ಗಂಭೀರವಾಗಿ)–ತಮಾಷೆ!

ಅರುಂಧತಿ : ದೇವ. ತಾವು ಈ ಬ್ರಹ್ಮತ್ವವನ್ನು ಒಪ್ಪಬೇಡಿ. ತಮ್ಮನ್ನು ಕೊಲ್ಲುವ ಈ ಯಾಗಕ್ಕೆ–

ವಸಿಷ್ಠ : ದೇವಿ,ಯಾವುದೊಂದೂ ನಮ್ಮ ಕೈಯಲ್ಲಿಲ್ಲ. ನಾವೀಗಾಗಲೇ ಒಪ್ಪಿಗೆ ಕೊಟ್ಟಾಗಿದೆ. ಯಾಗ ಎಂತಹುದೇ ಆಗಲಿ ನಾವು ಒಮ್ಮೆ ಬ್ರಹ್ಮತ್ವಕ್ಕೆ ಒಪ್ಪಿಗೆ ಕೊಟ್ಟ ನಂತರ–

ವಿಶ್ವಾ : ಹಿಂತೆಗೆದುಕೊಳ್ಳಿ–ಅದೂ ನನಗೆ ಸಂತೋಷ–

ಅರುಂಧತಿ : ವಿಶ್ವಾಮಿತ್ರನೇ ಕೇಳುತ್ತಿರುವಾಗ, ನಿಮ್ಮ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳಬಹುದಲ್ಲ-

ವಿಶ್ವಾ : ಆಗ–ಇನ್ನೂ ಒಳ್ಳೆಯದು–ವಸಿಷ್ಠರು ಯಾಗಕ್ಕೆ ಬ್ರಹ್ಮತ್ವವನ್ನು ಅಂಗೀಕರಿಸಿ ಹಿಮ್ಮೆಟ್ಟಿದರು – ಹೆದರಿಕೆಯಿಂದ ಎಂದು ಜಗತ್ತಿಗೇ ಸಾರುತ್ತೇನೆ. ಅಲ್ಲದೆ–ಎಂತಹ ತಮಾಷೆಯಾಗುತ್ತದೆ. ಜಗತ್ತಿನ ಅತಿ ಶ್ರೇಷ್ಠ ಬ್ರಹ್ಮರ್ಷಿ–ಬ್ರಹ್ಮರ್ಷಿಯಾಗಿ ಉಳಿಯುವುದೇ ಇಲ್ಲ! ಅದೂ ಆಗಲಿ–ಹಿಂತೆಗೆದುಕೊಳ್ಳಿ!

ವಸಿಷ್ಠ : ನಮ್ಮ ಒಪ್ಪಿಗೆಯನ್ನು ನಾವು ಕೊಟ್ಟ ಮೇಲೆ ಆಯಿತು–

ವಿಶ್ವಾ : ಹಿಂತೆಗೆದುಕೊಳ್ಳಿ-ನನಗೆ ಚಿಂತೆಯಿಲ್ಲ-ಯಾಗವನ್ನು ಮಾಡದಿದ್ದರೂ ಅದರ ಫಲ ಇಲ್ಲೇ ಸಿಗುತ್ತದೆ-ಬ್ರಹ್ಮರ್ಷಿ ವಸಿಷ್ಠ ನಾಶವಾದಂತೆಯೇ!

ಅರುಂಧತಿ : ಹಾಗೆಂದರೆ ?

ವಸಿಷ್ಠ : ಬಹಳ ಸರಳವಾದ ವಿಷಯ. ದೇವಿ. ಬ್ರಹ್ಮರ್ಷಿಯಾಗಿ ನಾವು ಯಾವ ಯಾಗಕ್ಕೆ ಕರೆದರೂ ಬ್ರಹ್ಮ ಪಟ್ಟವನ್ನು ಒಪ್ಪಿಕೊಳ್ಳಲೇಬೇಕು-ಅದು ನಮ್ಮ ಧರ್ಮ-ಕರ್ತವ್ಯ. ಹಾಗೆ ನಾವು ಒಪ್ಪದಿದ್ದರೆ ನಮ್ಮ ಬ್ರಹ್ಮರ್ಷಿತ್ವಕ್ಕೆ ಕಳಂಕ. ಯಾವುದೇ ಲೋಪವಾದರೂ ಬ್ರಹ್ಮರ್ಷಿತ್ವವೇ ಹೋಗಿ ಬಿಡುತ್ತದೆ, ಅದನ್ನೇ ರಾಜರ್ಷಿ ವಿಶ್ವಾಮಿತ್ರ ಹೇಳುತ್ತಿರುವುದು.

ಅರುಂಧತಿ ; ಹಾಗಾದರೆ-ನಿಮಗೆ ಇದರಿಂದ ಬಿಡುಗಡೆಯೇ ಇಲ್ಲವೇ ?

ವಿಶ್ವಾ : ಬಿಡುಗಡೆಯೆಲ್ಲಿ ? ಒಪ್ಪದಿದ್ದರೆ ಬ್ರಹ್ಮರ್ಷಿತ್ವ ಹೋಗುತ್ತದೆ. ಒಪ್ಪಿದರೆ ಬ್ರಹ್ಮತ್ವದ ಮೂಲಕ ಜೀವವೇ ಹೋಗುತ್ತದೆ-ಅದೇ ಬಿಡುಗಡೆ!

ಅರುಂಧತಿ : ಎಂತಹ ನೀಚ ಬುದ್ಧಿ ನಿನ್ನದು-ಕೌಶಿಕ! ನೀನು ಇನ್ನೂ ಕೌಶಿಕನೇ ಆಗಿದ್ದೀ!- ಹೇಗಾದರೂ ಸರಿ-ಇವರನ್ನು ನಾಶಪಡಿಸುವುದಷ್ಟೇ ನಿನ್ನ ಗುರಿ–

ಶ್ವಾ : ಹೂಂ ! ಹೇಗಾದರೂ ಸರಿ–ಅತೋಭ್ರಷ್ಟ : ಇತೋಭ್ರಷ್ಟ : ಹೇಗೆ ನಡೆದರೂ ವಸಿಷ್ಠರ ವಿನಾಶ-ಆಗಲೀಗ ತಣಿಯುತ್ತದೆ ನನ್ನ ದ್ವೇಷ-

ಸಿಷ್ಠ : ಆಗಲಿ. ಬಿಡಿ,ದೇವಿ ಗಾಬರಿ ಬೇಡ. ಇಲ್ಲೆಲ್ಲ ನಾವು ದೈವದ ಕೈಯ ದರ್ಪಣಗಳು. ಆಯಿತು-ರಾಜರ್ಷಿ, ನನಗೆ ಬ್ರಹ್ಮತ್ವವನ್ನುವಹಿಸಿಕೊಳ್ಳುವ ಒಪ್ಪಿಗೆ ಕೊಟ್ಟುದನ್ನು ಹಿಂತೆಗೆಯುವ ಪ್ರಶ್ನೆಯೇ ಇಲ್ಲ. ತಾವು ಯಾಗಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳಿ.

ಶ್ವಾ : ಯೋಚಿಸಿ ವಸಿಷ್ಠರೇ-ಬ್ರಹ್ಮರ್ಷಿ ವಸಿಷ್ಠರೇ-ಯೋಚಿಸಿ, ಬ್ರಹ್ಮರ್ಷಿ ಪದವಿ ಹೋದರೂ ಜೀವವಾದರೂ ಉಳಿಯುತ್ತದೆ. ಮತ್ತೆ ಯೋಚಿಸಿ-ಬ್ರಹ್ಮರ್ಷಿ ಪದವಿ ಕಳೆದರೂ ಬದುಕುಳಿಯುತ್ತದೆ-ಇಲ್ಲವೇ ಸಾವು!

ಸಿಷ್ಠ : ಇದರಲ್ಲಿ ಯೋಚಿಸಬೇಕಾದುದೇನೂ ಇಲ್ಲ - ಸಾವು ಬದುಕು ಎಲ್ಲ ದೈವ ನಿಯಾಮಕವಾಗಿರುವಾಗ ನಮಗೆಲ್ಲಿಯ ಆತಂಕ. ತಾವು ಯಾಗಕ್ಕೆ ಸಿದ್ಧತೆ ನಡೆಸಿ-ಸಾವು-ಜೀವ-ಅದನ್ನೇ ನಾವು ಪದೇಪದೇ ಹೇಳುತ್ತಿರುವುದು-ಪ್ರತಿಯೊಂದು ವರವೂ ಒಂದು ಶಾಪವೇ ಎಂದು !

ಶ್ವಾ : ನಿಮ್ಮ ಪಾಲಿಗಂತೂ ಅದು ನಿಜ ? ಬ್ರಹ್ಮರ್ಷಿ ಪದವಿಯೂ ಈಗ ನಿಮಗೆ ಶಾಪವಾಗಿ ಪರಿಣಮಿಸಿದೆ-ನಿಮ್ಮ ಸಾವು ಸನ್ನಿಹಿತವಾಯ್ತು ಅದರಿಂದ–

ವಸಿಷ್ಠ : ನಿಮ್ಮ ದ್ವೇಷ ಇಳಿದರೆ-ಅದೇ ಹೊಸ ಜೀವನದ ಸೃಷ್ಟಿ.

ವಿಶ್ವಾ : ಹಾಗಾದರೆ ನೀವು–

ವಸಿಷ್ಠ : ನಿಮ್ಮ ಯಾಗದಲ್ಲಿ ಬ್ರಹ್ಮನಾಗಿರಲು ಒಪ್ಪಿದ್ದೇನೆ-ಬರುತ್ತೇನೆ-ಯಾಗಕ್ಕೆ ಸಿದ್ಧತೆ ನಡೆಸಿ–

ವಿಶ್ವಾ : ಇದಕ್ಕೆ ಲಗ್ನ-

ವಸಿಷ್ಠ : ತಾವು ಇಲ್ಲಿಗೆ ಬಂದು ಇದರ ಬಗ್ಗೆ ಪ್ರಸ್ತಾಪ ಮಾಡಿದ ಲಗ್ನವೇ ಲೆಕ್ಕ. ತ್ರಿಶಂಕುವಿನ ಯಾಗಕ್ಕೆ ವಿರುದ್ಧವಾದ ರೀತಿ ಇದು–

ವಿಶ್ವಾ : ಎಂದರೆ–

ವಸಿಷ್ಠ : ಆ ಯಾಗ ಅಪೂರ್ಣವಾಯಿತು-ಆದರೆ ತಾವು ಅದು ಪೂರ್ಣವಾಯಿತೆಂದು ಸಾಧಿಸಿದಿರಿ. ಫಲ ಮಾತ್ರ ಅಪೂರ್ಣವಾಯಿತು ! ತ್ರಿಶಂಕುವಿಗೆ ಸ್ವರ್ಗ ದಕ್ಕಲಿಲ್ಲ–ಆದರೆ ಬೇರೆ ಸ್ವರ್ಗವೇ ಸಿಕ್ಕಿತು. ನೇರವಾಗಲ್ಲದಿದ್ದರೂ........

ವಿಶ್ವಾ : ಮತ್ತೆ ನನಗೆ ಅಪಮಾನ ಮಾಡಲು ಹಂಗಿಸುತ್ತಿದೀರಾ ?

ವಸಿಷ್ಠ : ಹಾಗಲ್ಲ, ರಾಜರ್ಷಿ-ಲಗ್ನದ ಬಗ್ಗೆ ಕೇಳಿದಿರಲ್ಲ - ಈಗ ನಿಮ್ಮ ಈ ಯಾ ಪೂರ್ಣವಾಗುತ್ತದೆ-ಆದರೆ ಫಲ ಮಾತ್ರ ನೀವು ನಿರೀಕ್ಷಿಸಿದಂತೆ ಇಲ್ಲದಿದ್ದರ ಪೂರ್ಣಫಲ ದೊರಕುತ್ತದೆ.

ವಿಶ್ವಾ : ಪೂರ್ಣ ಫಲ ದೊರಕುತ್ತದೆಯೇ ? ಯಾಗ ಪೂರ್ಣವಾಗುತ್ತದೆಯೇ ಹಾಗಾದರೆ–

ವಸಿಷ್ಠ : ನಿಮ್ಮ ಇಚ್ಛೆ ಫಲಿಸುತ್ತದೆ-ಒಂದು ಹಳೆಯದು ನಾಶವಾಗಿ ಹೊಸದೊಂದ ಹುಟ್ಟುತ್ತದೆ-ಲೋಕಕಲ್ಯಾಣಕ್ಕಾಗಿ ಈ ಯಾಗ ಅಪೂರ್ಣತೆಯಲ್ಲೇ ಪೂರ್ಣ ಯನ್ನು ಪಡೆಯುತ್ತದೆ-ಈಗ ಅಷ್ಟು ಸಾಕು. ತಾವು ಯಾಗಕ್ಕೆ ಸಿದ್ಧಪಡಿಸಿಕೊಳ್ಳಿ

ವಿಶ್ವಾ : ಹಾಗಾದರೆ-ನೀವು ಹಿಂದೆಗೆಯುವುದಿಲ್ಲ-ಮತ್ತೆ ಯೋಚಿಸಿ - ನಿಮ್ಮ ಸಾವಿ ನೀವೇ ಮುಖ್ಯ ಕಾರಣರಾಗಿ ನಿಲ್ಲಬೇಡಿ–

ವಸಿಷ್ಠ : ದ್ವೇಷ ಸಾಧಿಸಲೆಂದೇ ಬಂದ ತಮಗೇಕೆ ಆತಂಕ, ರಾಜರ್ಷಿ ? ನಮ್ಮ ಜೀ ವನ್ನು ತೆಗೆಯಲೆಂದೇ ಈ ಯಾಗವೆಂದು ಹೇಳುತ್ತೀರಿ. ನಮಗಿಲ್ಲದ ಆತಂ ತಮ್ಮನ್ನೇಕೆ ಕಾಡಬೇಕು. ತಾವು ಯಾಗಕ್ಕೆ ಸಿದ್ಧತೆಮಾಡಿ–

ಅರುಂಧತಿ : ಆಗಲಿ, ದೈವ ಹೇಗೆ ನಡೆಸುತ್ತದೋ–ಅದಿರಲಿ ತಾವು ಅತಿಥಿಗಳಾ ಹಾಲು-ಹಣ್ಣು ಸ್ವೀಕರಿಸಲಿಲ್ಲ–

ವಸಿಷ್ಠ : ದಯೆಯಿಟ್ಟು ಸ್ವೀಕರಿಸಬೇಕು–

ವಿಶ್ವಾ : ನಿಮ್ಮ ರೀತಿಯೇ ನನಗೆ ಅರ್ಥವಾಗುವುದಿಲ್ಲ ! ಸಾಯುತ್ತೀರೆಂದು ತಿಳಿದೂ ಶಾಂತರಾಗಿದ್ದೀರಿ-ಸಾಯಿಸಲೆಂದು ಬಂದವನನ್ನು ಸತ್ಕರಿಸುತ್ತಿದೀರಿ - ನನಗ ಅರ್ಥವೇ ಆಗುತ್ತಿಲ್ಲ-

ವಸಿಷ್ಠ : ಅರ್ಥವಾಗುವ ಕಾಲವೂ ಸನ್ನಿಹಿತವಾಯಿತು ರಾಜರ್ಷಿ-ಈಗ ಹೋಗಿಬನ್ನಿ ಯಾಗಕ್ಕೆ ಸಿದ್ಧತೆ ನಡೆಸಿ ; ಶುಭಮಸ್ತು !

ವಿಶ್ವಾ : ನೋಡಿ, ಇಲ್ಲೂ ಏನೂ ವಂಚನೆ ಮಾಡಲು ಪ್ರಯತ್ನಿಸಬೇಡಿ-ತ್ರಿಶಂಕುವಿನ ಯಾಗದಲ್ಲಿ ನಾನು ಮೋಸ ಹೋಗಿ, ನಿಮ್ಮ ಕೈಯಲ್ಲಿ ಅಪಮಾನ ಅನುಭವಿಸಿದೆ ಆದರೆ ಈಗ ನಾನು ಹಿಂದೆಗೆಯುವುದಿಲ್ಲ-

ವಸಿಷ್ಠ : ನಾವೂ ಹಿಂದೆಗೆಯುವುದಿಲ್ಲ, ರಾಜರ್ಷಿ.

ವಿಶ್ವಾ : ನಾನೂ ಈಗ ಸಂಪೂರ್ಣವಾಗಿ ಎಚ್ಚರಿಕೆಯಿಂದಿರುತ್ತೇನೆ. ಹೇಗೂ ಇದರಿಂದ ನೀವು ಭೂತಕಾಲಕ್ಕೆ ಸೇರಿಹೋಗುತ್ತೀರಿ. ನಮ್ಮ ನಿಮ್ಮ ದ್ವೇಷವೂ ಮುಗಿಯುತ್ತದೆ.

ಸಿಷ್ಠ : ಅದು ಸತ್ಯದ ಮಾತು, ರಾಜರ್ಷಿ, ಇದರಿಂದ ನಮ್ಮ ನಿಮ್ಮ ದ್ವೇಷ ಖಂಡಿತ ಮುಗಿಯುತ್ತದೆ. ಈ ಯಾಗ ಅಪೂರ್ಣವಾದರೂ ಪೂರ್ಣತೆಯನ್ನು ಪಡೆಯುತ್ತದೆ. ತಾವಿನ್ನು ಹೋಗಿಬನ್ನಿ-ಆಹ್ನಿಕದ ವೇಳೆಯಾಗುತ್ತಿದೆ. ಮುಂದಿನ ಬೃಹಸ್ಪತಿವಾರ ಅಲ್ಲಿರುತ್ತೇವೆ. ಎಲ್ಲವೂ ನಿಮ್ಮ ಇಷ್ಟದಂತೆಯೇ ಸಿದ್ಧವಾಗಿರಲಿ.

ಶ್ವಾ : ಹಾಗೆಯೇ ಆಗಲಿ-ತಮ್ಮನ್ನು ಸ್ವಾಗತಿಸಲು, ಮುಗಿಸಲು ಎಲ್ಲವೂ ಸಿದ್ಧವಾಗಿರುತ್ತದೆ, ನಾನಿನ್ನು ಬರುತ್ತೇನೆ-ನಮಸ್ಕಾರ

ರುಂಧತಿ : ಇದೆಂತಹ ಸಂದಿಗ್ಧ, ದೇವ. ನೀವಂತೂ ಶಾಂತವಾಗಿದ್ದೀರಿ. ಆದರೆ ನನಗೇಕೋ ಭಯವಾಗುತ್ತಿದೆ-

ಸಿಷ್ಠ : ದೇವಿ ಅರುಂಧತಿ. ದೇವತೆಗಳು ಲೋಕಕಲ್ಯಾಣಕ್ಕಾಗಿ ನಡೆಸುವ ಮಹಾಯಾಗದಲ್ಲಿ ನಾವೆಲ್ಲ ಆಹುತಿ ನೀಡುವ ದರ್ವಿಗಳು. ಈ ಸೌಟುಗಳು ಆಹುತಿ ನೀಡುತ್ತವೆ-ಕೊಡುವವರೂ ಕೊಡಿಸುವವರೂ ತೆಗೆದುಕೊಳ್ಳುವವರೂ ಆ ದೇವತೆಗಳೇ. ಆದ್ದರಿಂದ ಇಲ್ಲಿ ಯಾವುದೇ ಭಯಕ್ಕೂ ಕಾರಣವಿಲ್ಲ.

ಅರುಂಧತಿ : ಎಂತಹ ಧೂರ್ತಬುದ್ಧಿ-ನೀವು ಬ್ರಹ್ಮತ್ವವನ್ನು ಒಪ್ಪಿಕೊಳ್ಳದಿದ್ದರೆ ಬ್ರಹ್ಮರ್ಷಿ ಪದವಿ ಹೋಗುತ್ತದೆ, ಆಗ ನಿಮ್ಮನ್ನು ಕೆಳಗಿಳಿದಂತಾಗುತ್ತದೆ. ಕರ್ತವ್ಯ, ಧರ್ಮ ಎರಡನ್ನೂ ಬಿಟ್ಟ ನೀವು ಧರ್ಮಬಾಹಿರರಾಗುವಿರಿ-

ವಸಿಷ್ಠ ; ಬ್ರಹ್ಮತ್ವವನ್ನೊಪ್ಪಿಕೊಂಡರೆ-ಆಗ ನಮ್ಮ ಮಾರಣಯಾಗಕ್ಕೆ ನಾವೇ ಎಲ್ಲ ಮೇಲ್ವಿಚಾರಣೆಯನ್ನು ನಡೆಸಿ ನೋಡಿಕೊಂಡಂತಾಗುತ್ತದೆ. ಯಾಗದಲ್ಲಿ ಪೂರ್ಣಾಹುತಿ ನೀಡಿದೊಡನೆ ನಮ್ಮ ಪ್ರಾಣವೂ ಆಹುತಿಯಾಗುತ್ತದೆ.

ಅರುಂಧತಿ : ನನ್ನ ಪಾತಿವ್ರತ್ಯದ ಶಕ್ತಿ ನಿಮ್ಮನ್ನು ಕಾಪಾಡಲಾರದೇ ?

ವಸಿಷ್ಠ : ದೇವಿ,ಅದು ನನ್ನನ್ನು ಕಾಪಾಡುವುದಿರಲಿ-ಈ ರಾಜರ್ಷಿಯಲ್ಲಿರುವ ಕಸುರು, ಕಿಲ್ಮಿಶ, ದ್ವೇಷ, ಸೇಡು ಇವೆಲ್ಲ ನಾಶವಾಗಿ-ಈತ ಪರಿಶುದ್ಧನಾಗುವಂತೆ ನಿಮ್ಮ ಪಾತಿವ್ರತ್ಯದ ಶಕ್ತಿಯನ್ನು ವಿನಿಯೋಗಿಸಿದರೆ-ಲೋಕ ಕಲ್ಯಾಣವಾಗುತ್ತದೆ. ಆತನ ಶುದ್ಧೀಕರಣಕ್ಕಾಗಿ ಅದನ್ನು ಬಳಸಿದರೆ ಅದು ನಮ್ಮೆಲ್ಲರಿಗೂ ಕಾಪಾಡುವ ಶಕ್ತಿಯಾಗುತ್ತದೆ. ಆಗ ಎಲ್ಲವೂ ಸಿರಿ-ಶಿವಸಾನ್ನಿಧ್ಯ !

ಅರುಂಧತಿ : ನೀವು ಇಷ್ಟು ಶಾಂತವಾಗಿರುವುದು-ಹೀಗೆ ಹೇಳುವುದು ಕೇಳಿದ ಮೇಲೆ ನನಗೆ ಯಾವುದೇ ಭಯವೂ ಇಲ್ಲ. ನೀವಂದಂತೆಯೇ ಆಗಲಿ. ಆತನ ಹೃದಯ ಶುದ್ಧಿಗೇ ನನ್ನ ಶಕ್ತಿಯೆಲ್ಲಾ ವಿನಿಯೋಗವಾಗಲಿ-ಅದರಿಂದ ಲೋಕಕ್ಕೆ ಒಳಿತಾಗಲಿ. ಶಂಕರನು ಎಲ್ಲರಿಗೂ ಕ್ಷಮೆ ದಯೆಯನ್ನು ನೀಡಲಿ. ವಿಶ್ವಾಮಿತ್ರನು ನಿಜಕ್ಕೂ ವಿಶ್ವಕ್ಕೆ ಮಿತ್ರನಾಗಲಿ. ಈ ಯಾಗದ ಫಲವಾಗಿ ಜಗತ್ತಿಗೆ ಕಲ್ಯಾಣವಾಗಲಿ.

ವಸಿಷ್ಠ : ನೀನು ಹೇಳಿದುದೆಲ್ಲಕ್ಕೂ ತಥಾಸ್ತು-ತಥಾಸ್ತು.

ಮೂರನೆಯ ಅಂಕ

[ಜನರ ಗಿಜಿಗಿಜಿ ಶಬ್ದ. ವಿಶ್ವಾಮಿತ್ರರ ಆಶ್ರಮದ ಶಿಷ್ಯರು ಪುಲಿಂದ ಮತ್ತು ರುಚಿರ, ಮತ್ತಿತರ ಮಾತನಾಡುತ್ತಿದ್ದಾರೆ.]

ಪುಲಿಂದ : ಅಂತೂ ನಮ್ಮ ಗುರುದೇವ ವಿಶ್ವಾಮಿತ್ರರು ಈಗಂತೂ ವಿಜಯ ಪಡೆ ಪಡೆಯುತ್ತಾರೆ. ನೀನೇನು ಹೇಳುತ್ತೀ, ರುಚಿರ ?

ರುಚಿರ : ವಿಜಯ ಪಡೆಯುತ್ತಾರೆಂಬುದು ಸರಿ-ಆದರೆ ಅದೆಂತಹ ವಿಜಯವಾದೀತೋ ಎಂದೇ ನನಗೆ ಸಂದೇಹ. ಪುಲಿಂದ. ನನಗಂತೂ ಸಂದೇಹ !

ಪುಲಿಂದ : ಸರಿ. ಬಿಡು. ರುಚಿರ. ನೀನು ಸದಾ ಹೀಗೆ ವಿಚಿಕಿತ್ಸಕ ಬುದ್ಧಿಯನ್ ಆಶ್ರಯಿಸುತ್ತೀಯೆ-ಸಂದೇಹ, ಸಂಶಯಗಳೇ ನಿನ್ನ ಜೀವಾಧಾರಗಳು.

ರುಚಿರ : ಹಾಗಲ್ಲ. ಪುಲಿಂದ-ವಸಿಷ್ಠರ ಮಾರಣಯಾಗಕ್ಕೆ ವಸಿಷ್ಠರನ್ನೇ ನಮ್ಮ ಗುರುದೇವ ಕರೆದರಲ್ಲ. ಸ್ವಲ್ಪವೂ ವಿಚಲಿತರಾಗದೆ ವಸಿಷ್ಠರು ಒಪ್ಪಿಕೊಂಡು ಬ್ರಹ್ಮತ್ವ ವಹಿಸಿ. ಯಾಗವನ್ನು ಸಕ್ರಮವಾಗಿ ನಡೆಸಿಕೊಡಲು ಈಗ ಇಲ್ಲಿ ಬರುತ್ತಾರೆ. ಇದರಲ್ಲಿ ಏನೂ ಕೃತ್ರಿಮವಿಲ್ಲವೇ ?

ಪುಲಿಂದ : ಕೃತ್ರಿಮವೇತರಬೇಕು, ರುಚಿರ-ಇವರು ಕೇಳಿದರು, ಅವರು ಒಪ್ಪಿದರು ಅಷ್ಟೇ,

ರುಚಿರ : ಅಷ್ಟೇ ಆಗಿದ್ದರೆ ಸರಿ-ಆದರೆ ತನ್ನ ಸಾವಿಗಾಗಿ ಮಾಡುವ ಯಾಗದಲ್ಲಿ ತಾನೆ ಬಂದು ನಿಂತು ನಡೆಸುವಂತಹುದು ಯಾರಿಗೆ ತಾನೇ ಸಾಧ್ಯ ? ಅದನ್ನು ವಸಿಷ್ಠರ ಮಾಡುತ್ತೇನೆಂದ ಮೇಲೆ-ಅದರಲ್ಲಿ ಏನೋ ಮೋಸವಿರಲೇಬೇಕು-ಅಥವಾ....

ಪುಲಿಂದ : ಅಥವಾ ಏನು ? ಮತ್ತೇನು ಸಾಧ್ಯ ?

ರುಚಿರ : ವಸಿಷ್ಠರು ತತ್ತ್ವ ನಿಷ್ಠರು. ಸತ್ಯನಿಷ್ಠೆಯೂ ಅವರದೇ ಜೀವಸತ್ತ್ವ-ಅದ್ದರಿಂ ಇಲ್ಲಿ ಮೋಸ. ಕೃತ್ರಿಮ ಇಲ್ಲದಿದ್ದರೂ-ಏನೋ ಅಂತರಂಗವಿದೆ-ಅಂತರ್ಯದಲ್ಲಿ-

ಪುಲಿಂದ : ಇಗೋ-ಗುರುದೇವರು ವಸಿಷ್ಠರನ್ನು ಕರೆತರುತ್ತಿದಾರೆ. ಇನ್ನು ಯಾ ಪ್ರಾರಂಭವಾಗುತ್ತದೆ.

ವಿಶ್ವಾ : ದಯಮಾಡಿಸಬೇಕು. ಬ್ರಹ್ಮರ್ಷಿಗಳು ದಯ ಮಾಡಿಸಬೇಕು. ಇವರ ನಮ್ಮ ಶಿಷ್ಯರಲ್ಲಿ ಮುಖ್ಯರಾದವರು-ಪುಲಿಂದ, ರುಚಿರ–

ಪುಲಿಂದ :
ರುಚಿರ : } ಅಭಿವಂದಿಸುತ್ತೇವೆ

ವಸಿಷ್ಠ : ಶ್ರೇಯೋಸ್ತು - ಶುಭಮಸ್ತು - ನಡೆಯಿರಿ, ರಾಜರ್ಷಿ, ಯಾಗಕ್ಕೆ ಎ ಸಿದ್ಧತೆಯೂ ಆಗಿರಬೇಕಲ್ಲವೇ ?

ವಿಶ್ವಾ : ಎಲ್ಲವೂ ಸಿದ್ಧವಾಗಿದೆ. ನೀವು ಬರುವುದಷ್ಟೇ—ಪ್ರಾರಂಭಿಸಲು ಎಲ್ಲರೂ ಕಾಯುತ್ತಿದಾರೆ. ಆದರೆ—

ವಸಿಷ್ಠ : ಆದರೇನು ? ಸಿದ್ಧವಾಗಿದ್ದಾರೆ. ನಾವೂ ಸಿದ್ಧರೇ !

ವಿಶ್ವಾ : ಹಾಗಲ್ಲ-ಈಗಲೂ ಹೇಳಿಬಿಡಿ-ಬ್ರಹ್ಮತ್ವವನ್ನು ನೀವು ಅಂಗೀಕರಿಸಿದ್ದುದನ್ನು ಹಿಂತೆಗೆದುಕೊಳ್ಳಿ-ಯಾಗವನ್ನು ನಿಲ್ಲಿಸಿಬಿಡೋಣ.

ವಸಿಷ್ಠ : ವೃಥಾ ಕಾಲವ್ಯಯ ಮಾಡಬಾರದು, ರಾಜರ್ಷಿ-ಒಮ್ಮೆ ಆಡಿದ ಮಾತು ಉಳಿಯಬೇಕು. ಮುಹೂರ್ತ ಕಳೆಯಬಾರದು-ಆಗ ಫಲ ಕುಂಠಿತವಾದೀತು. ನಾವು ನಿರೀಕ್ಷಿಸಿದ ಫಲ ದೊರಕಲು ನಾವು ಗೊತ್ತುಪಡಿಸಿದ ಮುಹೂರ್ತದಲ್ಲಿ ಪ್ರಾರಂಭಿಸಲೇಬೇಕು.ಸರಿ-ಎಲ್ಲವೂ ಸಿದ್ಧವಾಗಿದೆಯಲ್ಲ-ಇನ್ನೇನು....

ರುಚಿರ : ನೋಡು ಪುಲಿಂದ-ವಸಿಷ್ಠರು ಸ್ವಲ್ಪವಾದರೂ ವಿಚಲಿತರಾಗಿಲ್ಲ. ಹಿಮಾಲಯದ ಮಂಜುಗಡ್ಡೆಯಂತೆ ಗಟ್ಟಿಯಾಗಿದ್ದಾರೆ. ಶಂಕರನಂತೆ ಶಾಂತವಾಗಿದ್ದಾರೆ.

ಪುಲಿಂದ : ಆ ಓಜಸ್ಸು, ಮುಖದಲ್ಲಿ ತುಂಬಿ ತುಳುಕುತ್ತಿರುವ ತೇಜಸ್ಸು-ವಸಿಷ್ಠರು ಎಂತಹ ಮಹಾಪುರುಷರೆಂದು ಸಾರುತ್ತಿದೆ. ಆದರೆ ಈ ಯಾಗ—

ವಸಿಷ್ಠ : ಲೋಕ ಕಲ್ಯಾಣಕ್ಕಾಗಿಯೇ ಎಲ್ಲವನ್ನೂ ಮಾಡುತ್ತೇನೆಂದು ಸಂಕಲ್ಪಿಸಿ, ರಾಜರ್ಷಿ. ಎಲ್ಲವೂ ಆಗ ಶಂಕರನ ಆಶೀರ್ವಾದಕ್ಕೆ ಸಲ್ಲುವಂತಾಗುತ್ತದೆ. ನಮ್ಮ ಸಂಕಲ್ಪ ಶುದ್ಧವಾಗಬೇಕು-ಮೊದಲಿಗೆ ಭೂ ಪ್ರಾರ್ಥನೆ ನಡೆಯಲಿ-ಈಗ ಇಲ್ಲಿ ನಡೆಯುವ ಯಾಗಕ್ಕೆ ಯಾವ ಅಡಚಣೆಯೂ ಬಾರದಂತೆ ವಿಘ್ನನಾಶಕನಾದ ವಿಘ್ನೇಶ್ವರನ ಪ್ರಾರ್ಥನೆಯನ್ನು ನಾನೀಗ ಮಾಡುತ್ತೇನೆ. ತಾವು ಭೂ ಪ್ರಾರ್ಥನೆ ಮಾಡೋಣವಾಗಲಿ.

ವಿಶ್ವಾ :

ಸ್ಯೋನಾ ಪೃಥಿವಿ ಭವಾನೃಕ್ಷರಾ ನಿವೇಶಿನೀ
ಯಚ್ಛಾನಶ್ಶರ್ಮ ಸಪ್ರಥಾ !
ಅಪಸರ್ಪಂತು ಏ ಭೂತಾಃ, ಏ ಭೂತಾಃ ಭೂಮಿಸಂಸ್ಥಿತಾಃ
ಏ ಭೂತಾಃ ವಿಘ್ನಕರ್ತಾರಃ ತೇ ನಶ್ಯಂತು ಶಿವಾಜ್ಞಯಾ
ಅಪಕ್ರಾಮತ ಭೂತಾದ್ಯಾಃ ಸರ್ವೇ ತೇ ಭೂಮಿಭಾರಕಾಃ
ಸರ್ವೇಷಾಮವಿರೋಧೇನ ಯಜ್ಞ ಕರ್ಮ ಸಮಾರಭೇ—

ವಸಿಷ್ಠ : ಇನ್ನು ಯಜ್ಞೇಶ್ವರನ ಬಳಿಯಲ್ಲಿ ಕುಳಿತು ದೇವತೆಗಳನ್ನು ಕರೆದು-ಅಗ್ನಿಯ ಮೂಲಕ ನಾವು ನೀಡುವ ಎಲ್ಲ ಆಹುತಿಗಳನ್ನು ಸ್ವೀಕರಿಸುವಂತೆ ಕೇಳಿಕೊಳ್ಳೋಣ. ಹೋತೃ, ಉದ್ಗಾತೃಗಳು ಇಲ್ಲೇ ಇದ್ದಾರೆ. ಹೋತೃಗಳು ಆಯಾ ದೇವತೆಗಳ ಸಂಬಂಧದ ಋಕ್ಕನ್ನು ಹೇಳಲಿ. ಯಜಮಾನರಾದ ತಾವು ಆಹುತಿಯನ್ನು ಕೊಡಲು ಸಿದ್ಧರಾಗಿ-ಪರಿಕರಗಳೆಲ್ಲ ಇಲ್ಲಿವೆಯಲ್ಲವೇ ? ಯಜ್ಞಪತಿಯಾದ ಶ್ರೀ

ಮಹಾವಿಷ್ಣುವು ಈ ಯಜ್ಞವು ಲೋಕ ಕಲ್ಯಾಣವನ್ನುಂಟು ಮಾಡಲೆಂದು ಇಲ್ಲಿಯ ಯಾಗಶಾಲೆಯಲ್ಲಿರುವವರು ಹರಸಬೇಕು.

ಹಲವು ಕಂಠಗಳು : ತಥಾಸ್ತು-ತಥಾಸ್ತು

ವಿಶ್ವಾ : [ತನ್ನಲ್ಲೇ] ಇದೇನಿದು ? ಒಂದು ಸ್ವಲ್ಪವಾದರೂ ಅಳುಕಿಲ್ಲದೆ ಯಾಗಕಾರ್ಯ ದಲ್ಲಿ ತೊಡಗಿಬಿಟ್ಟರಲ್ಲ-ಇದರ ಹಿಂದೆ ಏನಡಗಿದೆ ? ಮಾತೆತ್ತಿದರೆ ಲೋಕ ಕಲ್ಯಾಣಕ್ಕಾಗಿ ಎನ್ನುತ್ತಾರಲ್ಲ-ತಾವು ಸಾಯುತ್ತೇವೆಂಬುವುದರ ಪರಿವೆಯೂ ಇಲ್ಲವೇ!

ವಸಿಷ್ಠ : ರಾಜರ್ಷಿ-ಹೀಗೆ ಮೈ ಮರೆತು ಕುಳಿತರೆ ಹೇಗೆ ? ಲೋಕಕಲ್ಯಾಣಾರ್ಥವಾಗಿ ಈ ವಸಿಷ್ಠಮಾರಣ ಯಾಗವನ್ನು ನಾನು ಮಾಡುತ್ತಿದ್ದೇನೆಂದು ಸಂಕಲ್ಪ ಮಾಡಿ ಸಿದ್ಧರಾಗಿ-

ಹಲವು ಕಂಠಗಳು : ಏನು–ವಸಿಷ್ಠರ ಮರಣವೇ ? ಅದಕ್ಕೇ ಈ ಯಾಗವೇ ? ಇದ ರಲ್ಲಿ ಲೋಕ ಕಲ್ಯಾಣವೆಲ್ಲಿ ಬಂತು ? ಸರ್ವನಾಶವಾಗುವುದು ! ಬೇಡ. ಬೇಡ!

ವಿಶ್ವಾ : ಭಗವಾನ್ ವಸಿಷ್ಠರೇ-ಜನರಿಗೆ ನೀವು ಬದುಕಿರುವುದು ಬೇಕು-ಈ ಯಾಗ ಬೇಡವೆನ್ನುತ್ತಿದ್ದಾರೆ-ಆದ್ದರಿಂದ-

ವಸಿಷ್ಠ : ಅವರ ಮಾತಿರಲಿ. ನೀವು ಸಂಕಲ್ಪ ಮಾಡಿ-ಲೋಕಕಲ್ಯಾಣಾರ್ಥವಾಗಿ ಈ ಯಾಗ ಮಾಡುತ್ತಿದ್ದೇನೆಂದು ಹೇಳಿ ಸಿದ್ಧರಾಗಿ.

ವಿಶ್ವಾ : ನಿಮ್ಮ ಅಪ್ಪಣೆಯಂತೆಯೇ ಆಗಲಿ-ಲೋಕಕಲ್ಯಾಣಾರ್ಥವಾಗಿ ನಾನು ಈ ಯಾಗದಲ್ಲಿ ತೊಡಗಿದ್ದೇನೆ-

ವಸಿಷ್ಠ : ಈ ಯಾಗ ಮಾಡುವ ಯಜಮಾನನಿಗೂ ಯಾಗದಲ್ಲಿ ಭಾಗವಹಿಸುವವ ರಿಗೂ ಒಳಿತಾಗಲಿ ಎಂದು ಹೇಳಿ

ವಿಶ್ವಾ : ಈ ಯಾಗ ಮಾಡುವ ಯಜಮಾನನಿಗೂ ಯಾಗದಲ್ಲಿ ಭಾಗವಹಿಸುವ ಎಲ್ಲ ರಿಗೂ ಒಳಿತಾಗಲಿ-ಆದರೆ-ಭಗವಾನ್-ಇದು ತಮ್ಮ ಮರಣ–

ವಸಿಷ್ಠ : ಅದರ ಚಿಂತೆ ನಿಮಗೇಕೆ ? ಯಾಗದಲ್ಲಿ ತೊಡಗಿದ್ದಾಗಿದೆ. ಅದರ ಫಲವನ್ನು ಅನುಭವಿಸಲು ಸಿದ್ಧರಾಗಿರಬೇಕು. ಇನ್ನು ಆಹುತಿಗಳನ್ನು ನೀಡಲು ಸಿದ್ಧ ರಾಗಿ. ಅಗ್ನಿದೇವನೇ, ಈ ಯಜ್ಞವು ಪೂರ್ಣವಾಗುವಂತೆ ಆಯಾ ದೇವತೆಗಳನ್ನು ಕರೆದಾಗ ಅವರು ಬರುವಂತೆ ಕರುಣಿಸು. ಈಗ ನಾವು ಎಲ್ಲವನ್ನೂ ಅಗ್ನಿಯ ಮೂಲಕವೇ ಹವಿಸ್ಸನ್ನು ದೇವತೆಗಳಿಗೆ ಸಮರ್ಪಿಸುವುದು-'ವನ್ಹಿನಾ ಯೋಜಿತಂ' ಎಲ್ಲವೂ ಅಗ್ನಿಮುಖವಾಗಿ. ಆದ್ದರಿಂದ ಮೊದಲು ಅಗ್ನಿಗೆ ಆಹುತಿಯನ್ನು ನೀಡ ಬೇಕು.

ಹೋತೃ ; ಅಗ್ನಿ ಮೀಳೇ ಪುರೋಹಿತಂ ಯಜ್ಞಸ್ಯದೇವ ಮೃತ್ವಿಜಂ
ಹೋತಾರಂ ರತ್ನಧಾತಾರಂ–

ವಸಿಷ್ಠ : ಅಗ್ನಯೇ ಸ್ವಾಹಾ–

ವಿಶ್ವಾ : ಅಗ್ನಯೇ ಸ್ವಾಹಾ–

೧ನೆ : ನೋಡು. ನೋಡು. ಜ್ವಾಲೆಗಳಿಂದ ಮಾಲೆಯನ್ನು ತೊಟ್ಟು ವಿರಾಜಮಾನನಾಗಿ ಹೊಗೆಯ ಕಿರೀಟವನ್ನು ತೊಟ್ಟು ರಕ್ತಾಂಬರವನ್ನು ಉಟ್ಟ ಅಗ್ನಿದೇವನೇ ನಿಂತು ಕೈಚಾಚಿದ್ದಾನೆ–

೨ನೆ : ಸ್ವತಃ ದೇವತೆಗಳೇ ಬಂದು ಹವಿಸ್ಸನ್ನು ಸ್ವೀಕರಿಸುವರೆಂದು ಕೇಳಿದ್ದೆವು–ಅದು ಇಲ್ಲಿ ಸತ್ಯವಾಗಿ ನಮ್ಮ ಕಣ್ಣಿಗೇ ಕಾಣುತ್ತಿದೆ. ನಾವೇ ಧನ್ಯರು !

ಅಗ್ನಿದೇವ : ಭಗವಾನ್ ವಸಿಷ್ಠರೇ, ಇದೇನಿದು ?

ವಸಿಷ್ಠ : ಜಾತವೇದನಾದ ನಿನಗೆ ತಿಳಿಯದುದು ಏನಿದೆ ಅಗ್ನಿದೇವ !

ಅಗ್ನಿದೇವ : ನಾನು ಈ ಆಹುತಿಯ ಹವಿಸ್ಸನ್ನು ಹೇಗೆ ತಾನೇ ಸ್ವೀಕರಿಸಲಿ ? ನಿಮ್ಮ ಮಾರಣ ಯಾಗದಲ್ಲಿ–

ವಸಿಷ್ಠ : ಜ್ವಾಲಾಮಾಲಾ ವಿಭೂಷಣನಾಗಿ ಸರ್ವದೇವರಿಗೂ ಹವಿಸ್ಸನ್ನು ಒಪ್ಪಿಸುವ ಹೊಣೆ ಹೊತ್ತ ನೀನೇ ಹೀಗೆಂದರೆ ಹೇಗೆ ಅಗ್ನಿದೇವ ?

ವಿಶ್ವಾ : ಈಗಲಾದರೂ ಈ ಯಾಗ ನಿಲ್ಲಿಸೋಣವೇ–ವಸಿಷ್ಠರೇ–ಬೇಡ – ಇಲ್ಲಿಗೆ ಬಿಟ್ಟು ಬಿಡಿ–ಬ್ರಹ್ಮತ್ವವನ್ನು ನೀವು ಬಿಟ್ಟುಬಿಡಿ.

ವಸಿಷ್ಠ : ಅದು ಸಾಧ್ಯವಿಲ್ಲದ ಮಾತು, ರಾಜರ್ಷಿ. ಅಗ್ನಿದೇವ, ನಿನಗೆ ಸಲ್ಲಿಸಿರುವ ಆಹುತಿಯ ಹವಿಸ್ಸನ್ನು ಸ್ವೀಕರಿಸು–ಈ ಯಾಗ ಲೋಕಕಲ್ಯಾಣಕ್ಕಾಗಿ ಫಲಿಸಲಿ ಎಂದು ಹರಸು–

ಅಗ್ನಿ : ನಿಮ್ಮ ಮಾರಣಯಾಗ ಲೋಕಕಲ್ಯಾಣಕ್ಕಾಗಿ ಹೇಗೆ ತಾನೇ ಆದೀತು ? ನಮ್ಮೆಲ್ಲ ರನ್ನೂ ಬಂಧನದಿಂದ ಬಿಡುಗಡೆ ಮಾಡಿದ ತಮಗೆ ಈ ಇಕ್ಕಟ್ಟೇ ? ಇದು–

ವಿಶ್ವಾ : ಅಗ್ನಿದೇವನ ಮಾತು ಕೇಳಿ, ವಸಿಷ್ಠರೇ–

ವಸಿಷ್ಠ : ಈ ಯಾಗ ಮುಂದುವರಿಯಲೇಬೇಕು. ಅಗ್ನಿದೇವ–ಹವಿಸ್ಸನ್ನು ಸ್ವೀಕರಿಸು ಹರಸು–ಉಳಿದ ದೇವತೆಗಳನ್ನು ನಾವು ಕರೆದೊಡನೆ ಬರುವಂತೆ ಪ್ರೇರಿಸು. ಎಲ್ಲವೂ ನಿನ್ನದಯೆಯಿಂದ ಒಳಿತಾಗುತ್ತದೆ.

ಅಗ್ನಿ : ತಥಾಸ್ತು–ಹಾಗೆಯೇ ಆಗಲಿ ಲೋಕಕಲ್ಯಾಣವಾಗಲಿ ಎಂದು ನಾನೀ ಹವಿ ರ್ಭಾಗವನ್ನು ಈ ಆಹುತಿಯ ರೂಪದಲ್ಲಿ ಸ್ವೀಕರಿಸಿದೇನೆ.

ಪುಲಿಂದ : ನಮ್ಮ ಭಾಗ್ಯವೇ ಭಾಗ್ಯ–

ವಿಶ್ವಾ : ಇದೇನಿದು–ವಸಿಷ್ಠರು ಸ್ವಲ್ಪವೂ ಹೆದರಿಲ್ಲ–ಕಂಗೆಟ್ಟಿಲ್ಲ ! ಇದೆಂತಹ ವ್ಯಕ್ತಿ– ಈಗ ನಾನೇನು ಮಾಡಲಿ............

ಶ್ವಾ : ಇದೇನಿದು-ಭಗವಾನ್ ಈಗಲಾದರೂ ಇದನ್ನು ನಿಲ್ಲಿಸಬೇಕು. ಬೇಡ! ನನ್ನ ಮನಸ್ಸು ಕಂಪಿಸುತ್ತಿದೆ.

ಸಿಷ್ಠ : ಶಾಂತರಾಗಿ, ರಾಜರ್ಷಿ, ಹಿಡಿದ ಕೆಲಸವನ್ನು ಸಾಧಿಸುವ ತಮ್ಮ ಛಲ ಏನಾಯಿತು ? ಬೇರೊಂದು ಸ್ವರ್ಗವನ್ನೇ ಸೃಷ್ಟಿಸುವ ಹಠದ ವ್ಯಕ್ತಿತ್ವ ಎಲ್ಲಿ ಹೋಯಿತು. ಪ್ರಾರಂಭಿಸಿದ ಒಂದು ಯಾಗವನ್ನು ಅರ್ಧಕ್ಕೆ ನಿಲ್ಲಿಸುವಷ್ಟು ದೌರ್ಬಲ್ಯ ನಿಮ್ಮದಾಯಿತೇನು ? ಊಹುಂ ! ನಡೆಯಲಿ, ಇಗೋ ಅಶ್ವಿನೀ ದೇವತೆಗಳು.

ಪುಲಿಂದ : ನವ ಯೌವನಸಂಪನ್ನರೂ ಕಮಲ ಹಾರಗಳನ್ನು ಧರಿಸಿ ಸುಂದರ ರೂಪಿಗಳಾದ ಈ ಅಶ್ವಿನೀ ದೇವತೆಗಳು ಶಂಶುಮಾರ ರಥದಲ್ಲಿ ಬಂದಿಳಿದಿದ್ದಾರೆ–ಇವರು ಅವಳಿ ಜವಳಿ, ಯಮಳರು. ಅಗೋ ವಸಿಷ್ಠರನ್ನು ಕುರಿತು ಏನೋ ಹೇಳುತ್ತಿದ್ದಾರೆ.

ರುಚಿರ : ಕೇಳು–ನಮ್ಮ ಪುಣ್ಯಕ್ಕೆಣೆಯೇ ಇಲ್ಲ–

ಅಶ್ವಿನೀ ; ಭಗವಾನರೇ, ಬದುಕನ್ನು ಸುಂದರಗೊಳಿಸುವ ದೇವವೈದ್ಯರಾದ ನಾವು ಬದುಕನ್ನು ಬಯಲು ಮಾಡಿ ನಾಶ ಮಾಡುವ ಈ ಯಾಗದಲ್ಲಿ ಹೇಗೆ ತಾನೇ ಹವಿಸ್ಸನ್ನು ಸ್ವೀಕರಿಸುವುದು ? ರಾಜರ್ಷಿ ವಿಶ್ವಾಮಿತ್ರ, ಹಿಂದೆ ನಾವಿಬ್ಬರೂ ಅಹಂಕಾರದ ಜಾಡ್ಯಕ್ಕೆ ತುತ್ತಾಗಿ ಮೃತ್ಯುಮುಖರಾಗಿದ್ದಾಗ ನಮ್ಮನ್ನು ಕಾಪಾಡಿದ ಮಹಾವೈದ್ಯರು ಈ ಭಗವಾನ್ ವಸಿಷ್ಠರು. ಅವರ ಜೀವವನ್ನು ತೆಗೆಯಲು ನೀನೊಂದು ಯಾಗ ಮಾಡಬೇಕೇ ? ಇದೆಂತಹ ಹೇಯಕೃತ್ಯ ! ಅವರ ಕಾಲಿಗೆ ಬಿದ್ದು ಕ್ಷಮೆ ಬೇಡಿಕೊಂಡರೇ ನಿನ್ನ ಈ ಜನ್ಮದ ಕಶ್ಮಲವೆಲ್ಲ ಕಳೆಯುತ್ತದೆ.

ವಿಶ್ವಾ : ಭಗವಾನರೇ, ಅಶ್ವಿನೀ ದೇವತೆಗಳೂ ಹೇಳುತ್ತಿದ್ದಾರೆ. ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಯಾಗ ನಿಲ್ಲಿಸಿ ಬಿಡೋಣ, ಇದು ಮುಂದುವರಿಸುವುದು ನನಗೆ ಬೇಡ, ನಾನು ಏನು ಹೇಳಲೂ ತೋಚುತ್ತಿಲ್ಲ, ದಿಗ್ಭ್ರಮೆಯಾಗುತ್ತಿದೆ !

ವಸಿಷ್ಠ : ರಾಜರ್ಷಿ, ನಿನ್ನ ಈ ಯಾಗ ...

ವಿಶ್ವಾ : ನಿಂತು ಹೋಗಲಿ ಚಿಂತೆಯಿಲ್ಲ !

ವಸಿಷ್ಠ : ಆದಾಗದು-ಅದು ಪೂರ್ಣವಾಗಲೇಬೇಕು,-ಲೋಕಕಲ್ಯಾಣ–

ವಿಶ್ವಾ : ಯಾವ ಲೋಕಕಲ್ಯಾಣ ! ನನ್ನ ಸ್ವಾರ್ಥಕ್ಕಾಗಿ ನನ್ನ ಸೇಡಿಗಾಗಿ ಮಾಡುವ ಈ ಯಾಗ ಲೋಕಕಲ್ಯಾಣಕ್ಕಾಗಿಯೇ ! ಖಂಡಿತ ಅಲ್ಲ–

ವಸಿಷ್ಠ : ಎಲ್ಲವೂ ಲೋಕಕಲ್ಯಾಣಕ್ಕಾಗಿಯೇ ರಾಜರ್ಷಿ-ಒಂದು ಸತ್ತು ಹತ್ತು ಬದುಕಿದರೆ ಅದೂ ಲೋಕಕಲ್ಯಾಣವೇ-ಅಶ್ವಿನೀ ದೇವತೆಗಳೇ-ದೇವವೈದ್ಯರೇ, ಈ ಯಾಗ ಲೋಕಕಲ್ಯಾಣಕ್ಕಾಗಿ ಆಗಲೆಂದು ಹರಸಿ ಈ ಹವಿಸ್ಸನ್ನು ಸ್ವೀಕರಿಸಿ.

ಅಶ್ವಿನೀ : ತಥಾಸ್ತು-ನಾನು ಸ್ವೀಕರಿಸಿರುವ ಈ ಹವಿಸ್ಸು ಲೋಕಕಲ್ಯಾಣಕ್ಕೆ ಕಾರಣ ವಾಗಲಿ !

ವಸಿಷ್ಠ : ಸಕಲ ಜೀವಗಳನ್ನು ತನ್ನ ಪಾಶದಲ್ಲಿ ಸೆಳೆದಿಟ್ಟುಕೊಂಡಿರುವ 'ಪ್ರಾಣದಾತ, ಜಲವನ್ನೆಲ್ಲ ತನ್ನ ಅಧಿಕಾರದಲ್ಲಿ ಮೆರೆಸುವ ವರುಣದೇವನನ್ನು ಕರೆಯೋಣ ವಾಗಲಿ–

ವಿಶ್ವಾ : ಬೇಡ ! ಯಾಗ ಇಲ್ಲಿಗೆ ನಿಲ್ಲಲಿ–

ಹೋತೃ : ಕಿತವಾಸೋ ಯದ್ರಿರಿಪುರ್ನದೀವಿ ಯದ್ವಾಘಾಸತ್ಯಮುತ
ಯನ್ನವಿದ್ಮ ಸರ್ವಾತಾವಿಷ್ಯ ಶಿಥಿರೇವ ದೇವಾಥಾತೇಸ್ಯಾಮ
ವರುಣ ಪ್ರಿಯಾ ಸಃ

ರುಚಿರ : ನೋಡಲ್ಲಿ. ವರುಣದೇವ ಬಂದೊಡನೆ ಜ್ವಾಲೆಗಳೆಲ್ಲ ನೀಲಿಯಾಗಿ ಆಕಾಶವೇ ಉರಿಯಾಗಿ, ಉರಿಯೇ ಆಕಾಶವಾಗಿ ಮೇಲಿಂದ ಕೆಳಗೆಲ್ಲ ಒಂದೇ ಆಗುತ್ತಿದೆ– ಅಗೋ-ಅತನೇ ಏನೋ ಹೇಳುತ್ತಿದಾನೆ–

ವರುಣದೇವ : ಜೀವಜೀವಗಳಿಗೆ ಪಾಶ ಹಾಕಿದವನು ನಾನು-ನನ್ನನ್ನು ಹಿಂದೆ ಪಾಶ ಗಳ ಬಂಧದಿಂದ ಬಿಡಿಸಿದ ಭಗವಾನ್ ವಸಿಷ್ಠರಿಗೆ ವರುಣ ಪಾಶಗಳನ್ನು ನಾನು ಹಾಕಲೊಪ್ಪಲಾರೆ-ಈ ಹವಿರ್ಭಾಗವನ್ನು-

ವಸಿಷ್ಠ : ಸ್ವೀಕರಿಸಲೇಬೇಕು, ವರುಣದೇವ–

ವಿಶ್ವಾ : ಬೇಡ.ವರುಣದೇವ! ಸ್ವೀಕರಿಸಬೇಡ-ಈ ಯಾಗ ಇಲ್ಲಿಗೇ ಮುಕ್ತಾಯವಾಗಲಿ-

ವಸಿಷ್ಠ : ಏನಿದು. ರಾಜರ್ಷಿ ವಿಶ್ವಾಮಿತ್ರರಿಗೆ ಛಲ–

ವಿಶ್ವಾ : ನಾಶವಾಗಲಿ ! ನನ್ನ ಹಟ ಹಾಳಾಗಲಿ. ಇಂತಹ ದೇವ ದೇವತೆಗಳನ್ನೇ ಕಾಪಾಡಬಲ್ಲ ಸತ್ವಶಾಲಿಯನ್ನು ನಾನು ಬಲಿಕೊಡಲು ಸಿದ್ಧನಾಗಿಲ್ಲ !

ವರುಣ : ಭಲೆ. ಭಲೆ. ವಿಶ್ವಾಮಿತ್ರ. ನೀನೀಗ ಮಹರ್ಷಿಯೇ ಸರಿ–

ವಸಿಷ್ಠ : ಮಹರ್ಷಿ ವಿಶ್ವಾಮಿತ್ರ. ಈ ಯಾಗ ಪೂರೈಸಲೇ ಬೇಕು. ಇದು ವಾರುಣ ಯಾಗವೆಂಬುದು ನೆನಪಿರಲಿ–ಇದು ನನ್ನ ವಾರುಣಯಾಗ-ಇಲ್ಲವೇ ನಿಮ್ಮ ವಾರುಣ ಯಾಗ ! ನಾನು ಸಾಯದಿದ್ದರೆ ಸಾವು ನಿಮಗೇ ಖಂಡಿತ–

ವಿಶ್ವಾ : (ಗಾಬರಿಯಿಂದ) ಏನು ನನಗೇ ಸಾವೇ ! ನನ್ನ ಸಾಧನೆ–

ವಸಿಷ್ಠ : ತಲೆಯ ಮೇಲೆ ಕೈಹೊತ್ತು ದಿಗ್ಭ್ರಮೆಯಿಂದ ಕುಳಿತರೆ ಆಗಲಿಲ್ಲ–ಮಹರ್ಷಿ ಗಳೇ. ಮುಂದಿನ ಕಾರ್ಯದಲ್ಲಿ ತತ್ಪರರಾಗಿ. ವರುಣದೇವ, ಅಹಂ ಎಂಬ ಪಾಶ ಗಳಿಂದ ಈತನನ್ನು ವಿಮುಕ್ತನನ್ನಾಗಿಸಲು ಈ ಹವಿರ್ಭಾಗವನ್ನು ಸ್ವೀಕರಿಸು–

ವರುಣ : ಭಗವಾನರ ಆಜ್ಞೆಯನ್ನು ನಾವು ಮೀರುವುದುಂಟೇ. ಹಾಗೆಯೇ ಆಗಲಿ ! ತಾನು ದೊಡ್ಡವನೆಂಬುದೂ, ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಂಡರೇ ತೃಪ್ತಿ

ಯೆನ್ನುವುದೂ ಎರಡೂ ದೊಡ್ಡ ಪಾಶಗಳು.ಈ ವರುಣ ಪಾಶಗಳೇ ಭ್ರಮೆಯಾಗಿ ಬಂದು ಆಸೆಯ ರೂಪದಲ್ಲಿ ಅಹಂಕಾರದ ರೂಪದಲ್ಲಿ ಕಾಡುತ್ತವೆ.ಮನುಷ್ಯನನ್ನು ಬಂಧಿಸಿ ಕೆಳಕ್ಕೆಳೆಯುತ್ತವೆ. ಆ ಪಾಶಗಳನ್ನು ಈ ಮಹರ್ಷಿ ವಿಶ್ವಾಮಿತ್ರರಿಂದ ಸೆಳೆದುಕೊಂಡು ಅವರಿಗೆ ಈ ಭ್ರಮೆಯಿಂದ ಬಿಡುಗಡೆ ನೀಡುವುದಕ್ಕಾಗಿ ಈ ಹವಿಸ್ಸನ್ನು ಸ್ವೀಕರಿಸುತ್ತೇನೆ. ಇದರಿಂದ ಲೋಕಕಲ್ಯಾಣವಾಗಲಿ.

ವಸಿಷ್ಠ : ಶುಭಮಸ್ತು, ವರುಣದೇವ. ನೀನು ಇದರಿಂದ ಆತನ ಬಂಧಮುಕ್ತಮಾಡುವುದೇ ನಮಗೆ ಬೇಕಾದುದೂ. ಇನ್ನು ಮುಂದಿನ ಕಾರ್ಯ ಸುಗಮವಾಯಿತು. ನೋಡು, ಆತ ದಿಗ್ಭ್ರಮೆಯಿಂದ ಈಗ ಎಚ್ಚೆತ್ತುಕೊಳ್ಳುತ್ತಿದ್ದಾನೆ. ನೀನಿನ್ನು ಹೊರಡು. ಮತ್ತೆ ಕೊನೆಯಲ್ಲಿ ನೀವೆಲ್ಲರೂ ಬಂದು ಹರಸುವಿರಂತೆ–

ವರುಣ : ಹಾಗೆಯೇ ಆಗಲಿ.

ವಿಶ್ವಾ : ವರುಣದೇವ ! ವರುಣದೇವ ಹೊರಟೇ ಹೋದನೇ ? ಹವಿಸ್ಸನ್ನು ತೆಗೆದುಕೊಂಡೇ ಹೋದನೇ ! ಅಯ್ಯೋ ಎಂತಹ ಅನ್ಯಾಯ !

ವಸಿಷ್ಠ : ಮಹರ್ಷಿ ವಿಶ್ವಾಮಿತ್ರರೇ, ಇದೇನಿದು ಮಕ್ಕಳಂತೆ ದುಃಖಪಡುತ್ತಿದೀರಿ. ಯಾಗವನ್ನು ಪೂರ್ಣಗೊಳಿಸಬೇಕಾಗಿದೆ. ಇಂದ್ರನನ್ನು ಕರೆದು ನಂತರ ಪೂರ್ಣಾಹುತಿ....

ವಿಶ್ವಾ : ಇಂದ್ರ ! ಆತನದೇ ಇದೆಲ್ಲ ತಂತ್ರ ! ತ್ರಿಶಂಕು ಮಹಾರಾಜನನ್ನು ಸ್ವರ್ಗಕ್ಕೆ ಸೇರಿಸಿದ್ದರೆ ಆತನ ಗಂಟೇನು ಹೋಗುತ್ತಿತ್ತು ? ಈ ಅನ್ಯಾಯ–

ವಸಿಷ್ಠ : ಆತನನ್ನು ಕರೆಯೋಣ. ಆವನನ್ನೇ ಕೇಳಿ.

ವಿಶ್ವಾ : ಬರಲಿ ಇಂದ್ರ–

ಹೋತೃ : ಇಂದ್ರಂ ವೋ ವಿಶ್ವತಸ್ಪರೀ ಹವಾಮಹೇ ಜನೇಭ್ಯಃ
ಅಸ್ಮಾಕಮಸ್ತು ಕೇವಲಃ

ವಸಿಷ್ಠ : ಇಗೋ ಹಸಿರು ಕುದುರೆಗಳನ್ನು ಕಟ್ಟಿದ ಬಂಗಾರದ ತೇರಿನಲ್ಲಿ ಸಂಗೀತನಾದದೊಂದಿಗೆ ಇಂದ್ರನೇ ಸ್ವಯಂ ತಮ್ಮ ಮುಂದಿದ್ದಾನೆ–

ವಿಶ್ವಾ : ಇಂದ್ರ-ನೀನು ದೇವತೆಗಳ ರಾಜ-ಈಗ ಬಂದಿದ್ದೀ-ನಾನು ತ್ರಿಶಂಕುವಿನ ಯಾಗದಲ್ಲಿ ಕರೆದಾಗ ಬರಲಿಲ್ಲ-ಅದರಿಂದ ಎಂತಹ ಅನಾಹುತವಾಯಿತು-ಬಲ್ಲೆಯಾ–

ಇಂದ್ರ : ಮಹರ್ಷಿ ವಿಶ್ವಾಮಿತ್ರರಿಗೆ ನನ್ನ ಮೇಲೆ ಸಿಟ್ಟು-ನನಗೆ ಗೊತ್ತು. ಆದರೆ ವಸಿಷ್ಠರು ನನ್ನನ್ನು ಕಾಪಾಡಿದ ಮಹಾನುಭಾವ. ಆತನಾಗಲಿ ವಾಸಿಷ್ಠರಾಗಲಿ ಇಲ್ಲದ ಯಜ್ಞಮಂಟಪಕ್ಕೆ ನಾನು ಕಾಲಿಡುವುದಿಲ್ಲ. ಹಾಗೆ ಕಾಲಿಟ್ಟರೆ ನನ್ನ ಅಹಂಭಾವ ಕೆರಳಿ ನಾನು ಸ್ವರ್ಗಾಧಿಪತಿಯಾಗಲು ಅಯೋಗ್ಯನಾಗಿಬಿಡುತ್ತೇನೆ. ಎಲ್ಲಿ ವಸಿಷ್ಠರಿರುವರೋ ಅಲ್ಲಿಯೇ ಪರಿಶುದ್ಧತೆ. ಅಲ್ಲಿಗೆ ಮಾತ್ರವೇ ನನಗೆ ಪ್ರವೇಶ.

ವಿಶ್ವಾ : (ತೊದಲುತ್ತಾ) ಹಾಂ-ಈ....ಗ... ಆ....ಗ-

ಇಂದ್ರ : ಇದೇನಿದು ಮಹರ್ಷಿ ವಿಶ್ವಾಮಿತ್ರರು ತೊದಲುತ್ತಿದ್ದಾರೆ-

ವಿಶ್ವಾ : ಆಂ! ಆಂ! ಈ ಸಮಯದಲ್ಲಿ. ನಿನ್ನ ವಸಿಷ್ಠ ಭಗವಾನರನ್ನು ಆಹುತಿ ತೆಗೆದು ಕೊಳ್ಳಲು ಬಂದೆಯಾ? ನಿನಗೆ ಇದು ನ್ಯಾಯವೇ? ನಿಮ್ಮೆಲ್ಲರ ಜೀವವನ್ನು ಮಾನವನ್ನು ಕಾಪಾಡಿದ ಈ ಮಹಾನುಭಾವನನ್ನು ಕೊಲ್ಲುವ ಯಾಗದಲ್ಲಿ ಆಹುತಿಯನ್ನು ಸ್ವೀಕರಿಸಲು ಬಂದೆಯಲ್ಲವೇ? ಇದೆಂತಹ ಕೃತಜ್ಞತೆ! ಪ್ರಾಣ ಉಳಿಸಿದವನ ಪ್ರಾಣ ತೆಗೆಯಲು ಬಂದೆಯಾ?

ವಸಿಷ್ಠ : ಮಹರ್ಷಿ ವಿಶ್ವಾಮಿತ್ರರೇ-ಇದೇನು ನಿಮ್ಮ ಮಾತು! ನಾವು ಹವಿರ್ಭಾಗವನ್ನು ಆಹುತಿಯಾಗಿ ಕೊಡುವುದಾಗಿ ಕರೆಸಿದೆವು-ದೇವಾಧಿಪತಿ ಇಂದ್ರ ಬಂದಿದ್ದಾನೆ.

ವಿಶ್ವಾ : ವಸಿಷ್ಠ ಭಗವಾನರು ಸತ್ತರೆ ಇವರೆಲ್ಲರೂ ಸಾಯುತ್ತಾರೆ. ಜಗತ್ತೇ ನಿರ್ನಾಮವಾಗುತ್ತದೆ. ಅಗ್ನಿ, ವರುಣ, ವಾಯು, ಅಶ್ವಿನಿದೇವತೆಗಳು, ಕೊನೆಗೆ ಇಂದ್ರ-ಎಲ್ಲರೂ ಕಂಗಾಲಾಗುತ್ತಾರೆ. ವಿಶ್ವಕ್ಕೆ ವಿಶ್ವವೇ ಕೊರಗು ಹಿಡಿದು ನಶಿಸುತ್ತದೆ. ಎಲ್ಲೆಲ್ಲೂ ಅನಾಥ ಪ್ರೇತಗಳಂತೆ ದೇವತೆಗಳು ದಿಕ್ಕೆಟ್ಟು ಅಲೆಯುತ್ತಾರೆ ! ಅದಾಗದು....ಅದಾಗದು! ಈ ಯಾಗ ಇಲ್ಲಿಗೇ ನಿಲ್ಲಬೇಕು !

ವಸಿಷ್ಠ : ಮಹರ್ಷಿ ವಿಶ್ವಾಮಿತ್ರರೇ. ಯಾಗದ ಒಂದು ಅಂಶ ಮಾತ್ರ ಉಳಿದಿದೆ. ಇಂದ್ರನನ್ನು ಕರೆಸಿಯಾಗಿದೆ. ಆತನಿಗೆ ಯಜಮಾನನೇ ತನ್ನ ಕೈಯಿಂದ ಹವಿಸ್ಸನ್ನು ನೀಡಬೇಕು.

ವಿಶ್ವಾ : ಇಲ್ಲ. ನಾನು ಹವಿಸ್ಸನ್ನು ಕೊಡುವುದಿಲ್ಲ. ಈ ಯಾಗ ಮುಂದಕ್ಕೆ ಸಾಗಕೂಡದು. ನೀವು ಸಾಯಬಾರದು!

ವಸಿಷ್ಠ : ಮಹರ್ಷಿ 'ಲೋಕಕಲ್ಯಾಣಕ್ಕಾಗಿ ವಸಿಷ್ಠಮಾರಣ ಯಾಗವನ್ನು ಸಂಕಲ್ಪಿಸಿದಿರಿ.

ವಿಶ್ವಾ : ಅದು ನನ್ನ ಸ್ವಾರ್ಥ ನೀಚತನವೆಂಬುದು ಈಗ ಅರಿವಾಗುತ್ತಿದೆ. ಇನ್ನು ಸಾಕು.

ವಸಿಷ್ಠ : ನಾನಾಗಲೇ ತಿಳಿಸಿದ್ದೇನೆ. ತಾವು ಈ ಯಾಗವನ್ನು ಪೂರೈಸಲೇಬೇಕು!

ವಿಶ್ವಾ : ಇಲ್ಲ! ಇದನ್ನು ಪೂರೈಸುವುದಿಲ್ಲ ! ಎಂದಿಗೂ ಪೂರ್ಣಗೊಳಿಸುವುದಿಲ್ಲ!

ವಸಿಷ್ಠ : ಈ ಯಾಗ ಪೂರ್ಣಗೊಳಿಸದಿದ್ದರೆ ಅದು ವಿಫಲವಾಗುತ್ತದೆ.

ವಿಶ್ವಾ : ವಿಫಲವಾಗಲಿ, ಚಿಂತೆಯಿಲ್ಲ.

ವಸಿಷ್ಠ : ಈ ಯಾಗದಲ್ಲಿ ಎರಡೇ ರೀತಿ ಸಾಧ್ಯ. ಯಾಗ ಪೂರೈಸಿ ಪೂರ್ಣಾಹುತಿ ನೀಡಿದಾಗ ನಾನು ನಿಮ್ಮ ಉದ್ದೇಶದಂತೆ ಸಾಯುವುದು........

ವಿಶ್ವಾ : ಅದಾಗದು ! ನೀವು ಸಾಯಬಾರದು!

ವಸಿಷ್ಠ : ಇಲ್ಲದಿದ್ದರೆ ಇದನ್ನು ಸಂಕಲ್ಪಿಸಿದ ಯಜಮಾನನಾದ ತಾವು ಸಾಯಬೇಕಾಗುವುದು.

ವಿಶ್ವಾ : ಆಗಲಿ, ಆಗಲಿ, ನಾನೇ ಸಾಯುತ್ತೇನೆ! ನಾನು ಸತ್ತು ನೀವು ಉಳಿದುಕೊಳ್ಳಿ!

ವಸಿಷ್ಠ : ಯೋಚಿಸಿ, ಇಗೋ ಪೂರ್ಣಾಹುತಿ ಸಿದ್ಧವಾಗಿದೆ.ಇಂದ್ರನ ಜೊತೆಗೆ ವರುಣ, ವಾಯು, ಅಶ್ವಿನೀದೇವತೆಗಳು, ಅಗ್ನಿದೇವ ಎಲ್ಲರೂ ಇಲ್ಲಿ ಕಾಯುತ್ತಿದ್ದಾರೆ. ಪೂರ್ಣಾಹುತಿಯ ವೇಳೆಯಾಯಿತು.ಪೂರ್ಣಾಹುತಿಕೊಟ್ಟರೆ ನೀವು ಬದುಕುತ್ತೀರಿ.

ವಿಶ್ವಾ : ಆಗ ತಾವು ಸಾಯುತ್ತೀರಲ್ಲ ? ಬೇಡ, ಬೇಡ !

ವಸಿಷ್ಠ : ಇಗೋ ಪೂರ್ಣಾಹುತಿ, ಲೋಕಕಲ್ಯಾಣಕ್ಕಾಗಿ, ನಾನು, ವಸಿಷ್ಠ ಪೂರ್ಣಾಹುತಿ ನೀಡುತ್ತೇನೆ, ದೇವತೆಗಳೇ—

ವಿಶ್ವಾ : ಬೇಡ, ಬೇಡ, ವಸಿಷ್ಠರೇ, ನಿಮ್ಮ ಕೈ ಹಿಡಿಯುತ್ತೇನೆ. ನಿಮ್ಮ.... ನಿಮ್ಮ.... ಇದೇನಿದು, ತಲೆಸುತ್ತುತ್ತಿದೆ. ಅಯ್ಯೋ-ಬೇಡಿ–ನಾನು ಸಾಯುತ್ತೇನೆ ! ಸಾಯುತ್ತೇನೆ–

ವಸಿಷ್ಠ : ಇಂದ್ರಾದಿ ದೇವತೆಗಳಿರಾ, ಈಗ ನಿಜವಾಗಿ ಈತ ಬ್ರಹ್ಮರ್ಷಿಯಾಗಲು ಯೋಗ್ಯತೆ ಪಡೆದುಕೊಂಡರು. ಕ್ರೋಧ, ದ್ವೇಷ, ಸ್ವಾರ್ಥಗಳ ಛಲವನ್ನೆಲ್ಲ ಬಿಟ್ಟು ವಿಶ್ವಾಮಿತ್ರರು ಮನಸ್ಸಿನಲ್ಲಿ ಪರಿಶುದ್ಧರಾಗಲಿ. ಅವರನ್ನು ಕಾಡುತ್ತಿದ್ದ ಸಣ್ಣತನವೆಲ್ಲ ಈ ಪೂರ್ಣಾಹುತಿಯೊಂದಿಗೆ ಅಗ್ನಿಯಲ್ಲಿ ಜೀರ್ಣವಾಗಲಿ. ತನ್ನ ಬದುಕನ್ನು ತ್ಯಾಗ ಮಾಡಿದರೂ, ತಾನು ದ್ವೇಷಿಸುತ್ತಿದ್ದ ವ್ಯಕ್ತಿಯ ಜೀವವುಳಿಯುವಂತೆ ಮನಸ್ಸಿಟ್ಟ ವಿಶ್ವಾಮಿತ್ರರು ಈಗಿನಿಂದ ಬ್ರಹ್ಮರ್ಷಿಯಾಗಲೆಂದು ತಮ್ಮೆಲ್ಲರ ಅನುಜ್ಞೆಬೇಡಿ ಈ ಪೂರ್ಣಾಹುತಿಯನ್ನು ನೀಡುತ್ತಿದ್ದೇನೆ. ಸ್ವೀಕರಿಸಿ—ಹರಸಿ—

ಪೂರ್ಣಾಹುತಿಮುತ್ತಮಾಂ ಜುಹೋತಿ ಸರ್ವಂ ವೈ
ಪೂರ್ಣಾಹುತಿಃ ಸರ್ವಮೇವಾಪ್ನೋತಿ.

ಇಂದ್ರಾದಿದೇವತೆಗಳು : ತಥಾಸ್ತು- ಬ್ರಹ್ಮರ್ಷಿಯಾಗಲಿ ವಿಶ್ವಾಮಿತ್ರಮಹರ್ಷಿ!

ವಸಿಷ್ಠ : ಇಗೋ ಇಲ್ಲಿ ಹಳೆಯ ವಿಶ್ವಾಮಿತ್ರ ಸತ್ತಂತೆ ಉರುಳಿದ್ದಾರೆ–

ಪುಲಿಂದ, ರುಚಿರ } ಗುರುದೇವ–ಗುರುದೇವ (ಗಾಬರಿಯಿಂದ)

ವಸಿಷ್ಠ : ಯೋವಶ್ಶಿವತಮೋರಸಸ್ತಸ್ಯ ಭಾಜಯತೇ ಹನಃ
ಉಷತೀರಿವ ಮಾತರಃ·····

ಇಕೋ ಅಶ್ವಿನೀ ದೇವತೆಗಳು ಜಲ ಪ್ರೋಕ್ಷಣೆಮಾಡುತ್ತಿದ್ದಾರೆ–

ವಿಶ್ವಾಮಿತ್ರ : ಇದೇನು ? ಆಂ ! ನನಗೇನಾಗಿತ್ತು ? ಭಗವಾನ್ ವಸಿಷ್ಠರೇ, ತಾವು ನನ್ನನ್ನು ಕ್ಷಮಿಸಬೇಕು. ನಾನು ಚಿಕ್ಕವನು–

ವಸಿಷ್ಠ : ಲೋಕಕಲ್ಯಾಣದಲ್ಲಿ ಚಿಕ್ಕವರು ದೊಡ್ಡವರೆಂಬ ತಾರತಮ್ಯಗಳೇ ಇಲ್ಲ ಬ್ರಹ್ಮರ್ಷಿಗಳೇ.

ವಿಶ್ವಾಮಿತ್ರ : ನಾನೆಂತಹ ಬ್ರಹ್ಮರ್ಷಿ ? ತಮ್ಮ ಮುಂದೆ........

ವಸಿಷ್ಠ : ತಮ್ಮಿಂದ ಲೋಕಕಲ್ಯಾಣವಾಗಬೇಕಾದುದು ತುಂಬಾ ಇದೆ. ಕೌಶಿಕ ಮಹಾರಾಜ ನಮ್ಮ ಆಶ್ರಮಕ್ಕೆ ಬಂದು ಒಂದು ಹಸುವಿಗಾಗಿ ಹಂಬಲಿಸಿದಾಗಲೇ ಈ ನಾಟಕ ಪ್ರಾರಂಭವಾಯಿತು. ಹಂತ ಹಂತದಲ್ಲಿ ಅಂಕ ಅಂಕದಲ್ಲಿ ಇದು ನಡೆದು ಇಂದು ಈ ಪೂರ್ಣಾಹುತಿಯೊಂದಿಗೆ ಪೂರ್ಣವಾಯಿತು. ಬ್ರಹ್ಮರ್ಷಿಯೊಬ್ಬರಿಗಾಗಿ ಲೋಕ ಕಾಯುತ್ತಿತ್ತು. ತಾವು ಬಂದಿರಿ. ಅದಕ್ಕೆ ನಾನೊಂದು ನಿಮಿತ್ತವಾದೆ, ಈ ದೇವತೆಗಳು ಆಡಿಸಿದ ಈ ನಾಟಕದಲ್ಲಿ.

ಇಂದ್ರ : ಎಂತಹ ಆನಂದದ ದೃಶ್ಯ. ಇಬ್ಬರು ಬ್ರಹ್ಮರ್ಷಿಗಳು ಜತೆ ಜತೆಯಲ್ಲಿ ಎರಡು ಗೆಳವಕ್ಕಿಗಳಂತೆ, ಎರಡು ಪ್ರಜ್ವಲಿಸುವ ಬೆಂಕಿಗಳಂತೆ ! ಧನ್ಯ. ವಸಿಷ್ಠ ಭಗವಾನ್ ಧನ್ಯ. ಭಗವಾನ್ ವಿಶ್ವಾಮಿತ್ರ. ಇವರಿಂದ ಲೋಕಕಲ್ಯಾಣವಾಗಲಿ, ಪೂರ್ಣಾಹುತಿ ಸಾರ್ಥಕವಾಗಲಿ.

ಎಲ್ಲರೂ : ತಥಾಸ್ತು–

ಯಾರಾದರೊಬ್ಬರು

ಯದ್ವಾಕ್ಯಾಮೃತಪಾಯಿನಾಂ ಪ್ರತಿಪದಂ ಸತ್ಯಂ ಸುಧಾ ನೀರಸಾ
ಯದ್ವಾಕ್ಯಾರ್ಥ ವಿಚಾರಣಾಭಿಮತಃ ಸ್ವರ್ಗೋಽಪಿ ಕಾರಾಗೃಹಂ
ಯದ್ಧ್ಯಾನೇ ಪರಮಾತ್ಮಪೂರ್ಣ ಮನಸಾಂ ತುಚ್ಛಂ ಜಗತ್ತೂಲವತ್
ತಸ್ಮೈ ಶ್ರೀಗುರವೇ ವಸಿಷ್ಠಮುನಯೇ ನಿತ್ಯಂ ನಮಸ್ಕುರ್ಮಹೇ।

ಯಸ್ಯಾರ್ಷಂ ಪ್ರತಿಭಾ ಜಗತ್ತ್ರಯಹಿತಾ ಸಾ ವೇದಮಾತಾ ಪುರಾ।
ಯಚ್ಛಕ್ತೇಃ ತಪಸಾಮಹೇ ಸುರಗಣಾನನ್ಯತ್ ಸಿಸೃಕ್ಷುರ್ಜಗತ್
ತಂ ವೇದಾಂಬುನಿಧಿಂ ತಪಸ್ವಿಮಕುಟಾಲಂಕಾರ ಚಿಂತಾಮಣಿಂ
ವಿಶ್ವಾಮಿತ್ರಮುನಿಂ ಶರಣ್ಯಮನಘಂ ಭೂಯೋ ನಮಸ್ಯಾಮ್ಯಹಂ॥

ಕೆ. ಕುಶಾಲಪ್ಪಗೌಡ

ಪ್ರವಾಸೋಪಾಖ್ಯಾನ

ಕೆಲವರಿಗೆ ಹೊಸ ಹೊಸ ಊರುಗಳನ್ನು ನೋಡುವ ಚಟವಿರುತ್ತದೆ. ರೈಲು, ಬಸ್ಸುಗಳ ಅವ್ಯವಸ್ಥೆ, ನೂಕು ನುಗ್ಗಲು, ಇವುಗಳನ್ನೆಲ್ಲ ಸಹಿಸಿಕೊಂಡು, ವಸತಿ ಸೌಕರ್ಯಗಳ ತಾಪತ್ರಯ ಇದ್ದರೂ ಇವುಗಳನ್ನು ಲೆಕ್ಕಿಸದೆ, ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ಮುದುಕಿಯರು, ಪ್ರವಾಸ ಹೊರಡುತ್ತಲೇ ಇರುತ್ತಾರೆ. ಉಳಿದ ಪ್ರಯಾಣಿಕರಿಗೆ ಜಾಗವಿಲ್ಲದ ಸ್ಥಿತಿಯಲ್ಲಿ ತಮ್ಮ ಗಂಟು ಮೂಟೆಗಳನ್ನು ಪೇರಿಸಿ, ಇನ್ನೊಬ್ಬರಿಗೆ ಎಷ್ಟೇ ತೊಂದರೆಯಾದರೂ ಲೆಕ್ಕಿಸದೆ ಪ್ರಯಾಣ ಮಾಡುತ್ತಾರೆ. ಅವರು ತಂದ ತಿಂಡಿಯ ಗಂಟುಗಳನ್ನು ಬಿಚ್ಚಿ, ಬಕಾಸುರರಂತೆ ತಿನ್ನುತ್ತಲೇ ಇರುತ್ತಾರೆ. ಚಿಕ್ಕ ಮಕ್ಕಳು 'ಕಿಚಪಚ' ಮಾಡುತ್ತ ಇದ್ದರೆ, ದೊಡ್ಡವರು 'ವಟವಟ' ಮಾತಾಡುತ್ತಲೇ ಇದ್ದು ಸೌಮ್ಯವಾದಿಗಳಾದ ನನ್ನಂಥವರ ಸಹನೆಗೆ ಸವಾಲಾಗುತ್ತಾರೆ. ದುರ್ದೈವದಿಂದಲೋ, ಸುದೈವದಿಂದಲೋ ಈಗ ನನಗೆ ಹೆಚ್ಚು ಪ್ರಯಾಣ ಮಾಡಬೇಕಾದ ಆವಶ್ಯಕತೆಯೊದಗಿದೆ. ಅನಿವಾರ್ಯವಾಗಿ, ಮೇಲೆ ಹೇಳಿದಂತಹ ಪರಿಸ್ಥಿತಿಯನ್ನೆದುರಿಸಬೇಕಾಗುತ್ತದೆ.

ಹಿಂದಿನ ಕಾಲದಲ್ಲಿ ಪ್ರಯಾಣಕ್ಕಾಗಿ ಇಂದಿನಷ್ಟು ಮುಂದಾಲೋಚನೆ ಮಾಡಬೇಕಾಗಿರಲಿಲ್ಲ. ಈಗ ಪ್ರಯಾಣ ಹೊರಡುವ ಮೊದಲೇ ರಿಸರ್ವೇಶನ್‌ಗೆ ಪೇಚಾಡಬೇಕು, ಕನಿಷ್ಠ ಪಕ್ಷ 10 ದಿನಗಳಿಗಿಂತ ಮೊದಲೆ ಹೋಗಿ ಕ್ಯೂ ನಿಂತು, ರಿಸರ್ವ್ ಮಾಡಿಸಬೇಕು. ಕನಿಷ್ಠ ಪಕ್ಷ 2, 3 ಗಂಟೆಯ ಸಮಯ ಇದಕ್ಕೆ ಹಾಳು ಮಾಡಲೇಬೇಕು. ಆಯ್ತು. ಇಂತಹ ದಿನ, ಇಂತಹ ಸಮಯ ಪ್ರಯಾಣವೆಂದು ನಿಶ್ಚಯ ಮಾಡಿದ ಮೇಲೆ ಆಗ ಹೊರಡಲೇಬೇಕು. ಊರಿಗೆ ಹೋಗಿ, ಕೆಲವು ದಿನ ಬಂಧು, ಮಿತ್ರರೊಡಗೂಡಿ ಇದ್ದು ಮತ್ತೆ ಹಿಂದೆ ಹೊರಟು ಬರುವುದೆಂದರೆ ಎಷ್ಟಾದರೂ ಕಿರಿಕಿರಿಯಾಗುತ್ತದೆ.ಮೊದಲಾದರೆ ಇಂತಹ ಸಂದರ್ಭದಲ್ಲಿ, ಇಂದಲ್ಲ ನಾಳೆ ಹೊರಡೋಣ ಎಂದು ಉದಾಸೀನ ಮಾಡಿ ಪ್ರಯಾಣವನ್ನು ಮುಂದೆ ಮಾಡಬಹುದಿತ್ತು. ಈಗ ಹಾಗಲ್ಲ; ಹೊರಡುವುದೆಂದರೆ ಹೊರಡಲೇಬೇಕು. ನಮ್ಮ ಭಾವನೆಗೆ ಮತ್ತು ನಮ್ಮ ಇಚ್ಛೆಗೆ ಸ್ವಾತಂತ್ರ್ಯವಿಲ್ಲ. ನಿಂತ ಕಾಲಮೇಲೆ ಎಲ್ಲಿಗೂ ಹೊರಡಲು ಸಾಧ್ಯವಿಲ್ಲ. ನಾವೇನೋ ಸಮತಾವಾದಿಗಳೆಂದು ಹೇಳಿಕೊಂಡರೂ ಪ್ರಯಾಣ ಕಾಲದಲ್ಲಿ ನಮಗೆ ಸಮತಾವಾದವಿಲ್ಲ; ಹವಾನಿಯಂತ್ರಿತ ಹಾಗೂ

ಮೊದಲ ತರಗತಿಯ ಪ್ರಯಾಣದಲ್ಲಿ ಸಮತಾವಾದವನ್ನು ಪ್ರಚಾರ ಮಾಡುವವರಿಗೆ ಸರ್ಕಾರಿ ಹಣದಿಂದ ಪ್ರಯಾಣ ಮಾಡುವವರಿಗೆ ಮೀಸಲು. ಇನ್ನುಳಿದ ಎರಡನೇ ದರ್ಜೆಯವರು, ನಮ್ಮಂಥವರು, ವರ್ಗಭೇದವನ್ನಳಿಸಲು ರೈಲಿನಲ್ಲಿ ಮೂರನೆ ದರ್ಜೆ ಬೇಡ ಬೇಡವೆಂದು ಎರಡನೇ ದರ್ಜೆ ಸಾಕೆಂದವರು, ಸಮತಾವಾದಕ್ಕೆ ಬಲವಾಗಿ ಗಂಟುಬಿದ್ದವರು, ನಮ್ಮ ಎರಡನೇ ದರ್ಜೆಯಲ್ಲಿ ಮಲಗಿಕೊಂಡು ಪ್ರಯಾಣ ಮಾಡಲು ಸ್ಥಳ ಕಲ್ಪಿಸಿಕೊಂಡು ಪ್ರಯಾಣ ಮಾಡುವ ಸ್ವಾರ್ಥಿಗಳು. ನಮ್ಮಷ್ಟೇ ದುಡ್ಡು ಕೊಟ್ಟು ಇತರರು ಕೂರಲು, ನಿಲ್ಲಲು ಸ್ಥಳವಿಲ್ಲದೆ ಇದ್ದರೂ ರಿಸರ್ವ್ ಮಾಡಿದವರೆಂಬ ಗರ್ವದಿಂದ ಹೀಗೆ ಪ್ರಯಾಣ ಸೌಖ್ಯವನ್ನನುಭವಿಸುತ್ತೇವೆ. ಮೊದಲ ತರಗತಿಯ ಭತ್ಯೆ ಮಾತ್ರ ನಮಗೆ ಬೇಕು. ಆದರೆ ಎರಡನೆ ತರಗತಿಯ ಸೌಲಭ್ಯದಿಂದ ಪ್ರಯಾಣ ಮಾಡುವ ಸುಖ ನಮಗೆ ಸಾಕು. ಇದು ಸಮತಾವಾದದ ತಂತ್ರ. ಆಧುನಿಕರಾದ ನಮಗೆ, 'ಬೇಕು' 'ಸಾಕು' ಎಂಬ ಪದಗಳನ್ನು ಪ್ರಯೋಗಿಸುವಲ್ಲಿಯೂ ಸ್ವಾತಂತ್ರ್ಯವಿಲ್ಲದಾಗಿದೆ. 'ಒಂದು ಬೇಕು' 'ಎರಡು ಸಾಕು' ಎಂದು ಎಲ್ಲರೂ ಹೇಳಬೇಕೆಂಬ ತತ್ವಕ್ಕೆ ನಮ್ಮನ್ನು ನಾವೇ ಕಟ್ಟಿ ಹಾಕಿಕೊಂಡಿದ್ದೇವೆ.

ಈ ಪರಿಸ್ಥಿತಿಯಲ್ಲಿ ದೇಶ ವಿದೇಶಗಳಲ್ಲಿ ಪ್ರವಾಸ ಮಾಡಿ (ಯಾರ ದುಡ್ಡಿನಿಂದಲೋ) ಲೋಕಾನುಭವವನ್ನು ಹೆಚ್ಚಿಸಿಕೊಂಡ ದೊಡ್ಡ ಮನುಷ್ಯರು. ಅಷ್ಟು ಅದೃಷ್ಟವಿಲ್ಲದ, ಪಾಮರರಾದ ನಮ್ಮಂಥವರ ಲೋಕಾನುಭವವನ್ನು ಹೆಚ್ಚಿಸಲು, ತಮ್ಮ ಪ್ರವಾಸ ಕಥನಗಳನ್ನು ಬರೆದು ಅಚ್ಚು ಹಾಕಿಸುತ್ತಾರೆ. 'ಕಾವ್ಯಂ ಯಶಸೇ, ಅರ್ಥಕೃತೇ, ಕಾಂತಾ ಸಮ್ಮಿತತಯೇ ಉಪದೇಶೇ........' ಎಂದೆಲ್ಲ ಹಿಂದಿನ ಲಾಕ್ಷಣಿಕರು ಹೇಳಿದಂತೆ, ಯಶಸ್ಸುಗಳಿಸಿದ ಈ ಮಹಾನುಭಾವರು ಇಂತಹ ಕೃತಿಗಳನ್ನು ರಚಿಸಿ ನಮ್ಮನ್ನು ಕೃತಾರ್ಥರನ್ನಾಗಿಸುತ್ತಾರೆ. ಯಶಸ್ಸು ಅವರಿಗೆ ದೊರೆಯುತ್ತದೆ. ಪ್ರಕಾಶಕರಿಂದ ಅರ್ಥಕೃತವೂ ಆಗುತ್ತದೆ. ಆ ಪುಸ್ತಕಗಳನ್ನೋದಿದ ಕಾಂತೆಯರಿಂದ ನಿಜವಾಗಿ ನಮಗೆ ಉಪದೇಶ ಸಲ್ಲುತ್ತದೆ. ನಮ್ಮ ಮಿತ್ರರೊಬ್ಬರು ಇಂತಹ ಪುಸ್ತಕವನ್ನು ಬೇಡ ಬೇಡವೆಂದರೂ ಪುಕ್ಕಟ್ಟೆಯಾಗಿ ಕೊಟ್ಟರು. ಅದನ್ನು ನನ್ನ ಕಾಂತಾಮಣಿಯೂ ಓದಿಬಿಟ್ಟಳು, ಅದರ ಪ್ರಭಾವ ಅವಳ ಮೇಲೆ ಗಾಢವಾಗಿ, 'ವಿದೇಶ ಪ್ರವಾಸವಿರಲಿ. ನಮ್ಮ ದೇಶದಲ್ಲಿ, ದೂರ ಬೇಡ, ಕೇವಲ ಸಮೀಪದ ಊರುಗಳಿಗೆ ಒಮ್ಮೆಯಾದರೂ ಕರೆದುಕೊಂಡು ಹೋಗಲಂ ಸಾಧ್ಯವಿಲ್ಲದವರು; ನಿಮ್ಮನ್ನು ಕಟ್ಟಿಕೊಂಡುದಕ್ಕೆ, ಅಡುಗೆ ಮನೆಯ ಜೀತದಾಳಿನಂತೆ, ಯಂತ್ರದಂತೆ, ಬೇಯಿಸಿಹಾಕುವುದು ಮಾತ್ರ ಪುರುಷಾರ್ಥ' (ಈ ಪದ ಸರಿಯಾಗದು; ಅಡಿಗೆ ಕಾರ್ಯಕ್ಕೂ ಪುರುಷನಿಗೂ ಸಂಬಂಧವಿಲ್ಲದ ಕಾರಣ ಇದು ಸ್ತ್ರೀ ಸಂಬಂಧಿ ಕಾರ್ಯವಾದುದರಿಂದ 'ಸ್ತ್ರ್ಯರ್ಥ' ಎಂದಾಗಬೇಕೆಂದು ನನ್ನ ಭಾಷಾ ಪಾಂಡಿತ್ಯ!)— ಎಂಬ ಹಂಗಿನ ಗರಗಸ ತಲೆಯಿಂದ ಕೆಳಗಿನ ತನಕ ಸೀಳುತ್ತಲೇ ಇತ್ತು.

ಯಾವಾಗಲೂ ಕೊರೆಯುವುದೇ ಉದ್ಯೋಗವಾಗಿ, ನಾಲಗೆ ಎಂಬ ಬೈರಿಗೆಯ ತುದಿ ಚೂಪುತನವನ್ನು ಕಳೆಕೊಂಡಿದ್ದರೂ 'ಮರಳಿ ಯತ್ನವಮಾಡು' 'ಮರಳಿ ಯತ್ನವ

ನಾಡು' ಎಂಬ ತತ್ವದಲ್ಲಿ ನಂಬಿಕೆಯುಳ್ಳ ನನ್ನಂಥವನಿಗೆ ಈ ಗರಗಸದ ಸೀಳುವಿಕೆಯನ್ನು ತಡೆದುಕೊಳ್ಳುವ ತ್ರಾಣವಿಲ್ಲದೆ ತತ್ತರಿಸುತ್ತಿದ್ದೆ. ಇಂತಹ ಪ್ರವಾಸ ಕಥನಗಳೇ ನಮ್ಮ ಅಶಾಂತಿಗೆ ಕಾರಣವಾಗಿ, ಅವುಗಳನ್ನು ಪ್ರಕಟಿಸುವುದನ್ನು ಸರಕಾರ ಬಹಿಷ್ಕರಿಸಬೇಕೆಂದು ಸಭೆ, ಚಳುವಳಿ ನಡೆಸಿದರೇನು — ಎಂಬ ಯೋಚನೆ ಬಂದಿತ್ತು. ಆದರೆ ಅಂತಹ ಸಂದರ್ಭದಲ್ಲಿ ಆಕಸ್ಮಾತ್ ನಡೆಯಬಹುದಾದ ಲಾಠಿಛಾರ್ಜು, ಟಿಯರ್‌ಗ್ಯಾಸ್, ಇತ್ಯಾದಿ, ಇತ್ಯಾದಿಗಳ ಹೆದರಿಕೆಗಿಂತಲೂ, ಒಂದುವೇಳೆ ನನಗೇ ಇಂತಹ ಪ್ರವಾಸಾವಕಾಶ, ಮತ್ತೆ ಅದನ್ನು ಬರೆಯುವ ಸಂದರ್ಭ ಒದಗಿದರೆ—ಎಂಬ ಆಸೆಯು ಕಡಿವಾಣ ಜಗ್ಗಿತು. ನನ್ನದೊಂದು ಪ್ರಕಟಣೆ ಆದಮೇಲೆ ಆ ಚಳುವಳಿಯನ್ನಿಟ್ಟುಕೊಳ್ಳೋಣ ಎಂದು ಅದನ್ನು ತತ್ಕಾಲ ಮುಂದುವರಿಸಿದೆ.

ಈಗ ಆ ಪ್ರವಾಸ ಕಥನ ಬರೆಯುವ ಅವಕಾಶವೂ ಬಂದಿದೆ. ಅದನ್ನು ಪ್ರಕಟಿಸುವ ಅಭಯಹಸ್ತವೂ ದೊರಕಿದೆ. ಆದುದರಿಂದ ಇದನ್ನು ಓದಿಯಾದ ಮೇಲೆ ಪ್ರವಾಸ ಕಥನಗಳಿಗೆ ಬಹಿಷ್ಕಾರವನ್ನು ಹಾಕುವ ಸಂಘ ಸ್ಥಾಪಿಸಲಿದ್ದೇವೆ. ಅದಕ್ಕೆ ನೀವೂ ಸದಸ್ಯರಾಗಿ ಎಂದು ಈಗಲೇ ಆಹ್ವಾನಿಸಿ ಚಂದಾ ಕಟ್ಟಬೇಕೆಂದು ಕೋರುತ್ತೇವೆ. ಚಂದಾ ಇಲ್ಲದೆ ಸಂಘವಿಲ್ಲ. ಸಂಘವಿಲ್ಲದೆ ಚಂದವಿಲ್ಲ.

ತಾ॥ 10–1–86: ನನ್ನ ಮಿತ್ರರು ದೂರದ ಊರಿನಿಂದ ಪತ್ನೀಸಮೇತ ಭೇಟಿ ಕೊಟ್ಟರು. ಅವರಿಗೆ ಈ ಊರು ಪರಿಚಿತವಾಗಿದ್ದರೂ ಅವರು ಪತ್ನಿಯನ್ನು ಕರಕೊಂಡು ಬಂದದು (ಕಾಂತೋಪದೇಶ ಕಾರಣ! — ಮೇಲೆ ನೋಡಿ) ಮೊದಲ ಸಲ. ಅವರಿಬ್ಬರನ್ನೂ ಸಮೀಪದ ಊರಿಗೆ ಇತಿಹಾಸ ಪ್ರಸಿದ್ಧವಾದ ಪ್ರವಾಸ ಕ್ಷೇತ್ರಕ್ಕೆ ಕರೆದುಕೊಂಡು ಹೋಗಲು ನಿರ್ಧರಿಸಿದೆ. ಜತೆಯಲ್ಲಿ ನನ್ನ ಪೂರ್ಣಾಂಗಿ (ಅರ್ಧಾಂಗಿ ಎಂಬುದು ಅಗೌರವ:'ಅರ್ಧನಾರಿಯೆನಿಸಿದ ಈಶ್ವರಂಗಮಿರ್ಮಡಿಯೆನಿಸಿದಂ ಕವಿ ಕಮಲಾನಂದಂ!') ಬರಬೇಕೆಂದು ಕೇಳಿಕೊಂಡೆ. ರೈಲು, ಬಸ್ಸುಗಳ ಸಮಿತಾವಾದವನ್ನು ಒಮ್ಮೆಯಾದರೂ ಮೀರಬೇಕೆಂದು ಹವಣಿಸಿದೆ. ನನಗೊಬ್ಬರು ಪರಿಚಿತ ಮಿತ್ರರಂತಿದ್ದವರು ಕಾರು ಬಾಡಿಗೆಗೀಯುವ ಕಾರುಭಾರಿನಲ್ಲಿದ್ದವರೆಂದು ಗೊತ್ತಿದ್ದುದರಿಂದ ಅವರಿಗೆ ಫೋನು ಮಾಡಿದೆ. ಅಪರೂಪವಾಗಿ ಅರ್ಧ ಸರಿಯಾಗಿದ್ದ ಅವರ ಫೋನಿನಲ್ಲಿ ಮಾತಾಡುವ, ಅವರ ಮಾತನ್ನು ತಿಳಿದುಕೊಳ್ಳುವ ಸಾಹಸ ಮಾಡಿದೆ. ಅವರ ನನ್ನ ಸಂಭಾಷಣೆ ಇಲ್ಲಿ ಧ್ವನಿ ಮುದ್ರಿಸಲು ಸಾಧ್ಯವಿಲ್ಲ. ಮಾಡು ಹರಿಯುವಂತೆ ಗರ್ಜಿಸುತ್ತಿದ್ದ ನನ್ನ ಧ್ವನಿಯನ್ನು ಕೇಳಿ ಸ್ವಲ್ಪ ಹೊತ್ತಿನಲ್ಲಿ ನಮ್ಮ ಆಕ್ಕ ಪಕ್ಕದವರೆಲ್ಲ ಗುಂಪು ಕೂಡಿದ್ದರು. ಅಷ್ಟರಲ್ಲಿ ನನ್ನ ಮಾತು ಮುಗಿಸಿ ರಿಸೀವರನ್ನು ಕೆಳಗೆ ಲೊಟಕ್ಕನೆ ಕುಕ್ಕಿ. ಮೇಲೆ ತಲೆಯೆತ್ತಿ ನೋಡಿದಾಗ, ಅವರ ಕನಿಕರ ಬೀರುವ ದೃಷ್ಟಿಪಾತಕ್ಕೆ ನನ್ನ ಎದೆ ಅಳುಕಿತು. ಹಲ್ಲು ಕಿರಿದೆ, ಸಂಶಯದಿಂದ ನೋಡುತ್ತಾ ಹೊರಟು ಹೋದರು.

11–1–86; ಬೆಳಿಗ್ಗೆ 7 ಗಂಟೆಗೆ ಕಾರು ಬರುತ್ತದೆ. ಮಿತ್ರರು 7 ಗಂಟೆಯೊಳಗೆ ತಮ್ಮ ಹೋಟಲಿನಿಂದ ನಮ್ಮ ಮನೆಗೆ ಬರಬೇಕೆಂದಿದ್ದೆ. ನಾವು ಕಾರಲ್ಲಿ ಹೀಗೆ ಪ್ರವಾಸ

ಹೋಗುವ ಲಗ್ಗಾರಿ–ಇದೇ ಮೊದಲ ಅನುಭವ. ಬಸ್ಸಲ್ಲೋ, ರೈಲಲ್ಲೋ ಹೋದರೆ. ಅವು ನಿಂತಲ್ಲಿ ನಾವು ನಿಲ್ಲಬೇಕು. ನಮಗೆ ಬೇಕಾದಂತೆ ಅವು ನಿಲ್ಲವು. ಅಹಾ! ಟೂರಿಸ್ಟ್ ಬಸ್ಸಿನವರು ನೋಡಬೇಕಾದ ಸ್ಥಳದಲ್ಲಿ ಇಷ್ಟು ಹೊತ್ತು ಮಾತ್ರ ಎಂದು ನಿಯಂತ್ರಿಸುತ್ತಾರೆ. ಇಲ್ಲಿ ಹಾಗಲ್ಲ.

ಇದು ಮೊದಲ ಸ್ವಾತಂತ್ರ್ಯದ ಅನುಭವ. ಅನುಭವದ ನಿರೀಕ್ಷೆಯಲ್ಲಿ ಎಷ್ಟು ಸುಖವಿದೆ ಎಂದು ಅನೇಕ ದಿನಗಳ ಮೇಲೆ ಮತ್ತೆ ಅನುಭವಕ್ಕೆ ಬಂತು. ನನ್ನಾಕೆಗಂತೂ ತುಂಬ ಸಂಭ್ರಮ. ಎಷ್ಟೆಂದರೆ ಇಷ್ಟು! ಅಂದರೆ ಅಪರೂಪಕ್ಕೆ ಅವಳು ನಗುವುದನ್ನು ಕೂಡ ಕಲಿತಂತೆ ಕಾಣುತ್ತಿತ್ತು!

ಗಂಟೆ ಆರೂವರೆ. ಕಾರು ಬಂದಿಲ್ಲ. ಮಿತ್ರರೂ ಇನ್ನೂ ಬಂದಿಲ್ಲ, ಆದರೆ ಎಂದಿಲ್ಲದ ಮಳೆ ಆಗ ಬರಲಾರಂಭಿಸಿತು. ಜಿನಭಕ್ತೆ ಅತ್ತಿಮಬ್ಬೆ ಒಂದು ಸಾವಿರ ವರ್ಷಗಳ ಹಿಂದೆ 3 ದಿನ ಉಪವಾಸ ವ್ರತಮಾಡಿ, ಶ್ರವಣ ಬೆಳ್ಗೊಳದ ಗೊಮ್ಮಟಗಿರಿಯನ್ನೇರಿದಳಂತೆ. ಆಗ ಅಕಾಲ ವರ್ಷ ಬಂದು ತಂಪು ಮಾಡಿತು ಎಂದು ಕವಿಚಕ್ರವರ್ತಿ ರನ್ನ ಬರೆದಿದ್ದಾನೆ. ಕವಿಗಳ ಮಾತಿನಲ್ಲಿ ಪೂರ್ಣ ನಂಬಿಕೆಯಿಡುವ ಮುಗ್ಧ ಬುದ್ಧಿ ನನಗಿರಲಿಲ್ಲ. ಆದರೆ ಅದನ್ನು ಓದಿ 30 ವರ್ಷಗಳಾದಮೇಲೆ ಅದು ನಿಜವಿರಬಹುದೆಂದು ನಂಬಿಕೆ ಬರಲಾರಂಭಿಸಿತು! ಮರೆತ ಆ ವಿಷಯ ಜ್ಞಾಪಕಕ್ಕೆ ಬಂದುದೇ ಈ ಮಳೆಯ ಪಂಚಮೀ ವಿಭಕ್ತಿಯಿಂದ, –ಅಂದರೆ ಮಳೆಯ ದೆಸೆಯಿಂದ! ಆ ಸಂದರ್ಭಕ್ಕೂ ಈ ಸಂದರ್ಭಕ್ಕೂ ಸಾಮ್ಯ ತಂದು ಗಂಟು ಹಾಕಿದೆ. ಮಳೆಯ ಕಿರಿಕಿರಿಯಿಂದ ಬಿಗಿದ ನನ್ನವಳ ಗಂಟುಮೋರೆ ಸಡಿಲಾಗಲಿ–ಎಂದು.

ಹೆಚ್ಚು ಮಾತು ಬೆಳೆಯುವ ಮೊದಲು (ಬೆಳೆದರೆ ಅದು ಎಲ್ಲಿ ಹಳಿ ತಪ್ಪುತ್ತದೆಯೋ ಎಂಬ ಭಯದಿಂದ ತತ್ತರಿಸುತ್ತಾ ಇದ್ದಾಗ) ಮಿತ್ರ ದಂಪತಿಗಳು ಹಾಜರಾದರು- ಮಳೆಯಲ್ಲಿ ಅರ್ಧ ಒದ್ದೆಯಾಗಿ. ಅಷ್ಟರಲ್ಲಿ ಕಾರೂ ಬಂತು. ಮಳೆ ಕಡಿಮೆಯಾಗಿತ್ತು. ಬೇಗ ಬೇಗ ತಿಂಡಿ, ಕಾಫಿ ಗುಟುಕರಿಸಿ, ದಡದಡನೆ ಮೆಟ್ಟಿಲಿಳಿದು, ಕಾರಿನ ಹತ್ತಿರ ನಡಿಗೆಯಲ್ಲಿ. ಟಿಟಿವಲ್ಲ ಎಂಬಂತೆ ಕೆಸರು ನೀರನ್ನು ದಾಟಿಕೊಂಡು ಭರತನಾಟ್ಯದ ಮುದ್ರೆಗಳನ್ನು ತೋರಿಸುತ್ತಾ ಬಂದೆವು. ಕಾರಿನ ಡ್ರೈವರ್, ದಿವ್ಯ ನಿರ್ಲಕ್ಷ್ಯದಿಂದಿದ್ದವನು. 'ಬಾಗಿಲನು ತೆರೆದು ಸೇವೆಯನು ಕೊಟ್ಟ'. ಆದರೆ ಯಾರು ಯಾರು ಎಲ್ಲೆಲ್ಲಿ ಕುಳಿತುಕೊಳ್ಳುವುದೆಂಬ ಬಗ್ಗೆ ಮಿತ್ರರಿಗೂ ನನಗೂ ಒಂದು ಕದನವೇ ಜರುಗುತ್ತಿದ್ದ ಮಳೆಯಲ್ಲಿ ನಡೆಯಿತು. ಅತಿಥಿಗಳಾದ ಅವರು ಆರಾಮವಾಗಿ ಹಿಂದೆ ಕುಳಿತುಕೊಳ್ಳಲೆಂದು ನಾನು: ವಯಸ್ಸಿನಲ್ಲಿ ಹಿರಿಯವನಾದ ನಾನು ಹಿಂದೆ ಕುಳಿತುಕೊಳ್ಳಬೇಕೆಂದು ಅವರು–ಹೀಗೆ ನಮ್ಮ ವಿನಯೋಪಚಾರ ವಿವಾದ ಪ್ರಕರಣ ಪ್ರಹಸನ ಹಗರಣವಾಗಿ, ಮಹಾಭಾರತದ ಯುದ್ಧಾನಂತರ ಮೊದಲು ರಥದಿಂದ ಇಳಿಯುವುದು ಯಾರು ಎಂದು ಕೃಷ್ಣಾರ್ಜುನರಲ್ಲಿ ಚರ್ಚೆಯಾದಂತೆ ಆಯ್ತು ಎನ್ನಬಹುದು.

ಮಹಾಜ್ಞಾನಿಗಳಾದ ವಾಚಕ ಮಹಾಶಯರೇ, ನೀವು ಅನಾವಶ್ಯಕವಾಗಿ ಚಿಂತಿಸುವ ಾರಣವಿಲ್ಲವು! ಶ್ರೀ ಕೃಷ್ಣನು ಮೊದಲು ಅರ್ಜುನನನ್ನು ಇಳಿಸಿ.ತಾನು ಇಳಿದ ಒಡನೆಯೇ ೀ ರಥ ಸುಟ್ಟು ಹೋಯ್ತಂತೆ. ಮಹಿಮಾಪುರುಷನಾದ ಶ್ರೀಕೃಷ್ಣ ಮೊದಲು ಇಳಿದಿ ದ್ದರೆ, ರಥದೊಡನೆ ಅರ್ಜುನನೂ ಸುಟ್ಟು ಹೋಗುತ್ತಿದ್ದನಂತೆ. ಹಾಗಿದ್ದರೆ ನೀವು ೀಳಬಹುದು. ಮಹಾಭಾರತ ಯುದ್ಧ ಕಾಲದಲ್ಲಿ ಪ್ರತಿದಿನವೂ, ಯುದ್ಧ ನಿಂತು, ಅರ್ಜುನನೂ ಶ್ರೀಕೃಷ್ಣನೂ ರಥದಿಂದ ಇಳಿದು ಬರುತ್ತಿರಲಿಲ್ಲವೇ? ಇಂತಹ ಸಮಯ ಸಲ್ಲಿ ರಥವೇಕೆ ಉರಿದು ಹೋಗಲಿಲ್ಲ? ಪ್ರತಿದಿನವೂ ಪ್ರತಿ ರಥವೂ ಹಾಗೆ ಉರಿಯುತ್ತಿ ದ್ದರೆ ಅದನ್ನೇಕೆ ಹೇಳಲಿಲ್ಲ? –ಎಂದು, ಇಂತಹ ಕುಹಕ ಪ್ರಶ್ನೆಗಳನ್ನು ಕುತ್ಸಿತ ಮನಸ್ಸಿ ಂದ, ಪುರಾಣಗಳ ವಿಷಯದಲ್ಲಿ ಕೇಳಬಾರದು. ಕೇಳಿದರೆ ಕಣ್ಣಿಗೆ ಕಾಲಿಗೆ ಕೇಡು. ಏನಿ ದ್ದರೂ ಇಲ್ಲಿ ಹೇಳಿದುದು ಹತ್ತುವ ಪ್ರಸಂಗ. ಆದುದರಿಂದ ಇಲ್ಲಿ ಉರಿಯುವುದು. ಪೆಟ್ರೋಲ್ ಮತ್ತು ನಮ್ಮ ಜೇಬಿನ ದುಡ್ಡು. ಕಾರಿನ ಒಡೆಯರಾದ ನಮ್ಮ ಪರಿಚಿತ ಮಿತ್ರರೂ ಆಗ ನಮ್ಮನ್ನು ಸುರಕ್ಷಿತವಾಗಿ ಕಳುಹಿಸಿಕೊಡುವ ಸದುದ್ದೇಶದಿಂದ ಬಂದು ನಮ್ಮನ್ನು ,ಕಾರಿನಲ್ಲಿ ತುಂಬಿ, ಸಾರಥಿಗೆ ನಾವು ಹೋಗಬೇಕಾದ ಸ್ಥಳ ಯಾವುದೆಂದು ನಿರ್ದೇಶಿಸಿದರು. ಅವನೂ ತಲೆಯಾಡಿಸಿದ. ತನ್ನ ಸ್ಥಾನದಲ್ಲಿ ಕುಳಿತ. ಕಾರನ್ನು 'ಇಸ್ಟಾರ್ಟ್' ಮಾಡಿದ. ಹತ್ತು ಮಾರು ದೂರ ಹೋಗುವಷ್ಟರಲ್ಲಿ ನನ್ನ ಮಿತ್ರರು ಕಾರಿನ ಬಾಗಿಲಿನ ಗಾಜನ್ನು ಕೆಳಗಿಳಿಸಲು ಅದರ ಹ್ಯಾಂಡಲ್ ಹಿಡಿದು ತಿರುಗಿಸಿದರು. ಅವರ ಕೈ ಚಳಕಕ್ಕೆ ಅದು ಬಾಗಲಿಲ್ಲ. ಡ್ರೈವರ್‌ನಲ್ಲಿ ಹೇಳಿದೊಡನೆಯೇ ಅವನು ಕಾರನ್ನು ನಿಲ್ಲಿಸಿ ಬಾಗಿಲನ್ನು ತೆಗೆದು ಹೇಗೋ ಗಾಜನ್ನು ಕೆಳಗಿಳಿಸಿದ. ಮತ್ತೆ ಹೊರಟೆವು. ಡ್ರೈವರ್‌ಗೆ ನಮ್ಮ ಭಾಷೆ ಗೊತ್ತಿಲ್ಲ. ನಮಗೆ ಪ್ರಪಂಚದಲ್ಲೆಲ್ಲ ಗೊತ್ತಿರುವ ಪ್ರಸಿದ್ಧ ಭಾಷೆಯೆಂದು ಆ ಭಾಷೆಯ ಮೊಂಡು ಪ್ರೇಮಿಗಳು ನಂಬಿಕೊಂಡಿರುವ ಆ ಭಾಷಾ ಪರಿಚಯವಿದೆಯೆಂಬ ಹೆಮ್ಮೆ! ನಮ್ಮ ಮಿತ್ರರೂ ಈ ಭಾಷೆಯ ಮಿತ ಸಂಪಾದಿಸಲು ಅಲ್ಪ ಸ್ವಲ್ಪ ಸಾಮು ಹಿಡಿದಿದ್ದವರು. ಸಂದರ್ಭ ಸಿಕ್ಕಿದಾಗಲೆಲ್ಲ ಆ ಭಾಷೆಯನ್ನು ವಿಚಿತ್ರವಾಗಿ ಪ್ರಯೋಗಿಸಿ, ಅರ್ಥಪೂರ್ಣ ನೋಟದಿಂದ ತಮ್ಮ ಮಡದಿಯೆಡೆಗೆ ನೋಡು ತ್ತಿದ್ದರು. ತಮ್ಮ ಪರಭಾಷಾ ಪ್ರಭುತ್ವಕ್ಕೆ ಮಡದಿಯ ಮೆಚ್ಚಿಕೆ ದೊರೆತಾಗೆಲ್ಲ. ಹೊಸ ದಾಗಿ ಪದವಿಪಡೆದ ಅನುಭವ ಅವರಿಗಾದಂತೆ ನಮಗೆ ಕಾಣುತ್ತಿತ್ತು. ಮಡದಿಯನ್ನು ಮೆಚ್ಚಿಸುವುದು ಗಂಡಂದಿರಿಗೆ ಎಷ್ಟು ಕಷ್ಟವೆಂದು ಯಾರಿಗೆ ಗೊತ್ತಿಲ್ಲ? ಸ್ವಲ್ಪ ಹೊಟ್ಟೆಗೆ ಯಶಸ್ವಿಯಾದ ಅವರಿಗೆ ಗುಟ್ಟಿನಲ್ಲಿ ಅಭಿನಂದನೆಯನ್ನು ಹೇಳುತ್ತಾ। ಒಂದು ಸಿಗರೇಟು ಕೊಟ್ಟೆ. ಅದನ್ನು ತೆಗೆದುಕೊಂಡಾಗ, ಅವರಲ್ಲಾದ ಆತಂಕದ ಕಾರಣದ ಅರಿವಾಗಿ, ಮನಸ್ಸಿನಲ್ಲೇ ನಕ್ಕುಬಿಟ್ಟೆ. ನನ್ನ ಮರೆಯಲ್ಲಿ ಸಿಗರೇಟು ಹಚ್ಚಿ ಹೊಗೆಯ ಸುರುಳಿಯನ್ನು ಬಿಟ್ಟರು.

ಇಷ್ಟರಲ್ಲಿ ಡ್ರೈವರ್ ನಮ್ಮ ಪರಿಚಿತ ನಗರ ಪ್ರದೇಶವನ್ನು ಹಾದು ಹೋಗುತ್ತಿದ್ದು ಈಗ ನಮಗೆ ಗೊತ್ತಿಲ್ಲದೆಡೆಗೆ ಪ್ರವೇಶಿಸಿದ. ನಾವು ಇಂಫಲ್ಲಿಗೆ ಹೋಗುತ್ತೇವೆ;

ಸಾಯಂಕಾಲ ಇಷ್ಟು ಗಂಟೆಗೆ ಹಿಂತಿರುಗಿ ಬರಬೇಕೆಂದು ಹೇಳಿದ್ದಾಗ ತಲೆಯಾಡಿಸಿದ್ದ ಆತನು ಪ್ರಯತ್ನಪಟ್ಟು ಕಾರನ್ನು ತಿರುಗಿಸಿದ್ದ. ಕಾರೂ ರಗಳೆಮಾಡದೆ ಸುತ್ತುತ್ತಿತ್ತು. ಹೀಗೆ ಎಷ್ಟು ಸುತ್ತಿದರೂ, ನಾವು ಹೋಗುವ ಊರಿನ ಹೆದ್ದಾರಿಯ ಮುಖದರ್ಶನವಾಗಲಿಲ್ಲ. ಕೇವಲ 40 ಕಿ.ಮಿ. ದೂರವನ್ನು ಒಂದೂವರೆ ಗಂಟೆಕಾಲದಲ್ಲಿ ಹೋಗಬಹುದೆಂದು ತಿಳಿದಿದ್ದೆ. ಆದರೆ ಮುಕ್ಕಾಲು ಗಂಟೆಯಾದರೂ ನಗರವನ್ನು ಬಿಟ್ಟು ಹೊರಬೀಳಲು ಆಗಲಿಲ್ಲ. ಈಗ ನಮ್ಮಂತೆ ಡ್ರೈವರಿಗೂ ದಾರಿ ಕಾಣಲಿಲ್ಲವೆಂಬ ಆತಂಕ ಶುರುವಾಯಿತು. ಅನಿವಾರ್ಯವಾಗಿ ಅಲ್ಲಲ್ಲಿ ನಿಂತು ಬೇರೆ ಬೇರೆಯವರಲ್ಲಿ ವಿಚಾರಿಸಿದೆವು. ವಿಚಿತ್ರ ಭಾಷೆಯಲ್ಲಿ ನಮ್ಮ ಮಿತ್ರರು ಮಾತಾಡುತ್ತಿದ್ದರೆಂದು ಮೊದಲು ಹೇಳಿದ ಸಂದರ್ಭ ಇದೇ! ನಾವು ದಾರಿ ಕೇಳಿದವರೆಲ್ಲ ಸರಿಯಾಗಿಯೇ ವಿವರಿಸುತ್ತಿದ್ದರು. ಡ್ರೈವರ್ ಸಹ ಗಿಳಿಯಂತೆ ಆಲಿಸುತ್ತಿದ್ದ. ಗೊತ್ತಾಯಿತು ಎಂದಾಗ ಅವರಂತೆ ತಲೆಯಾಡಿಸುತ್ತಿದ್ದ. ಮತ್ತೆ ಹೊರಡುವುದು ; ಸುತ್ತುವುದು ; ಸುಸ್ತಾಗಿ ನಿಲ್ಲಿಸಿ ಬೇರೆಯವರಲ್ಲಿ ಕೇಳುವುದು ! ಹೀಗೆ ಹತ್ತಾರುಸಲ ಮಾಡಿದ ಮೇಲೆ ಕೊನೆಗೊಮ್ಮೆ ನಮ್ಮ ಊರಿನ ದಾರಿ ಸಿಕ್ಕಿತು. ಚಂದ್ರಯಾನಕ್ಕೆ ಹೋದ ಗಗನಿಗರಿಗೆ ತಾವು ಚಂದ್ರನ ಕಕ್ಷೆಯಲ್ಲಿ ಬಂದಾಗ ಆದಷ್ಟು ಆನಂದ ನಮಗೂ ಆಯಿತು. ಸ್ವಲ್ಪ ಹೊತ್ತಿನಲ್ಲಿ ನಾವು ಸೇರಬೇಕಾದ ಸ್ಥಳವನ್ನೂ ತಲುಪಿದೆವು. ಅಲ್ಲಿ ಕಾರು ನಿಲ್ಲಿಸಿ, ಹೋಟೇಲಿಗೆ ನುಗ್ಗಿ ಕಾಫಿಯೆಂಬ ಕಂದು ದ್ರವವನ್ನು ಹೀರಿ, ಮುಂದೆ ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ನೋಡಲು,ಅಲ್ಲಿಯ ಸೌಂದರ್ಯವನ್ನು ಸವಿಯಲು ಹೊರಟೆವು. ಮಳೆಯೂ ಜತೆಗೆ ಬಂತು. ಇದರಿಂದ, ಹೊಸತಾಗಿ ಕೆಮರಾ ಕೊಂಡುಕೊಂಡಿದ್ದ ನನ್ನ ಮಿತ್ರರಿಗೆ ನಿರಾಶೆ. ಆದರೂ ಅಲ್ಲಲ್ಲಿ ಕಲ್ಲಿನ ವಿಗ್ರಹಗಳೆದುರು ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದರು. ಇಲ್ಲೆಲ್ಲ ಸುತ್ತಿ, ಇನ್ನೊಂದು ಪ್ರೇಕ್ಷಣೀಯ ಸ್ಥಳಕ್ಕೆ ಹೋಗಲು ಸ್ವಲ್ಪ ದೂರ ನಡೆದಾಗ ಕಾಲು ನೋಯಲು ಆರಂಭವಾಯಿತು.ಕಾರಲ್ಲಿ ಹೋಗಬಹುದೆಂದು, ನಮ್ಮ ಹುಡುಗನನ್ನು ಕಳುಹಿಸಿದೆವು. ಎಷ್ಟೋ ಹೊತ್ತಾದರೂ ಕಾರು ಬರಲೇ ಇಲ್ಲ. ಮತ್ತೆ ಬಂತು. ಆದರೆ ಮೊದಲ ಸೀಟಿನ, ನಾವು ಕುಳಿತುಕೊಳ್ಳುವುದಕ್ಕೆ ಹತ್ತಿರ, ಕಾರಿನ ಬಾಗಿಲು ತೆಗೆಯಲು ಬರುತ್ತಿರಲಿಲ್ಲ. ಎಲ್ಲರಿಗೂ ಹಿಂದಿನ ಸೀಟಿನಲ್ಲಿ ಜಾಗವಿರಲಿಲ್ಲ! ಮತ್ತೆ ಡ್ರೈವರನನ್ನು ಇಳಿಸಿ, ನನ್ನ ಮಿತ್ರರೂ, ನಮ್ಮ ಹುಡುಗನೂ ಡ್ರೈವರ್ ಸೀಟಿನ ಮೂಲಕ ನುಸುಳಿಕೊಂಡರು. ಆ ಸ್ಥಳದಲ್ಲಿ ನಾವು ಈ ರೀತಿ ಇಳಿಯುವುದು ಹತ್ತುವುದನ್ನು ನಮ್ಮಂತೆಯೇ ಬಂದಿದ್ದ ಇತರ ಪ್ರವಾಸಿಕರೂ ನೋಡಿ ನೋಡಿ ನಗುತ್ತಿದ್ದಂತೆ ನಮಗೆ ಭಾಸವಾಯಿತು. ಅಲ್ಲಿಂದ ಸಮುದ್ರ ತೀರದಲ್ಲಿದ್ದ ಗತಕಾಲದ ಅವಶೇಷವನ್ನು ನೋಡಲು ಹೋದೆವು.

ನಮ್ಮ ಕಾರಿಗೆ ಇರುವ ಒಂದು ಒಳ್ಳೆಯ ಗುಣವೆಂದರೆ ಅದಕ್ಕಿರುವ ಏಕಾಗ್ರದೃಷ್ಟಿ! 'ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ' ಎಂಬ ಕನ್ನಡ ಪಾಠವನ್ನು ಆ ಯಂತ್ರವೂ ಕಲಿತು, ಅದನ್ನು ಸರಿಯಾಗಿ ಪಾಲಿಸುತ್ತಿತ್ತು—ಎಂದಾಗ, ನಿಜವಾಗಿ ಕನ್ನಡ ಭಾಷೆಯ ಬಗ್ಗೆ, ಯಾರೂ ಏನೇ ಹೇಳಲಿ, ಹೆಮ್ಮೆ. ನಮ್ಮೆದುರಿಗಿದ್ದ ಸಮುದ್ರದ ತೀರ

ಗಳಂತೆ ಉಕ್ಕೇರಿ ಬರುತ್ತಿತ್ತು. ಅಂದರೆ ಕಾರಿನ ವಿಷಯ ಇಷ್ಟೆ : ಅದು ನಡೆದು ಬಂದ ದಾರಿಯಲ್ಲಿ ಹಿಂದು ಹಿಂದಾಗಿ ಬರುವ ಅಭ್ಯಾಸ ಇಟ್ಟುಕೊಂಡಿರಲಿಲ್ಲ. 'ಪಿಂದು ಪೆರಗಾಗಿ ಕೊಳನಂ ಪೊಕ್ಕೊಡೆ ಪೇಸಿ ಬಿಸುಟ್ಟಳ್ ಲಕ್ಷ್ಮಿ'-ಎಂದು ದುರ್ಯೋಧನ ಜಲಸ್ತಂಭ ಮಂತ್ರ ಜಪಕ್ಕೆ ಕೊಳವನ್ನು ಪ್ರವೇಶಿಸಿದಾಗಣ ಸಂದರ್ಭವನ್ನು ಕವಿ ರನ್ನ ಹೇಳಿದ ಮಾತೂ ನಮ್ಮ ಕಾರಿಗೆ ಸರಿಯಾಗಿ ತಿಳಿದಿತ್ತು. ಇದರಿಂದಂತೂ ನಮ್ಮ ಕನ್ನಡದ ಹೆಮ್ಮೆ ಮಾರ್ಮಲೆತು ನೋಡುವಂತಾಯ್ತು. ಕನ್ನಡ ಎಂಮ್ಮೇಗಳಾದ ನಮಗೆ ಕನ್ನಡದ ಹೆಮ್ಮೆಯನ್ನು ಯಾರೂ ಕಲಿಸಿಕೊಡಬೇಕಾಗಿಲ್ಲ. ಅದಿರಲಿ, 'ಕೆಮ್ಮನೆ ಬಂದ ಬಟ್ಟೆಯಿಂನೆ ಬಿಜಯಂಗೆಯ್ಯ' ಬೇಕಾದಾಗ, ಅಲ್ಲಿಯೇ ಒಂದು ಸುತ್ತು ಹೊಡೆದು, ಬೇರೆ ವಾಹನಗಳು ನಿಂತ ದಿಕ್ಕಿಗೆ ವಿರುದ್ಧವಾಗಿ ಮುಖ ಮಾಡಿ ಕಾರನ್ನು ನಿಲ್ಲಿಸಬೇಕಾಗುತ್ತಿತ್ತು. ಹಾಗೆ ಮೇನೇಜ್ ಮಾಡಿ ಸಮುದ್ರ ತೀರದಿಂದ ಹೊರಟು ಬಂದೆವು. ಈಗ ಮಧ್ಯಾಹ್ನದ ಊಟದ ಹೊತ್ತು. ಎಲ್ಲಾದರೂ ಊಟಮಾಡೋಣವೆಂದು ಚರ್ಚಿಸುತ್ತಾ ಬಂದಾಗ ಆ ಹೋಟೆಲನ್ನು ದಾಟಿ ಬಂದಿದ್ದೆವು. ಈಗ ಯಾವ ಮಾಯೆಯೋ ಎದುರಿನ ಬಾಗಿಲು ಸರಿಯಾಗಿ ಕೆಲಸ ಮಾಡುತ್ತಿತ್ತು. ಆದರೆ ಹಿಂದೆ ತಿರುಗಿ ಹೋಗಲು ಮಾತ್ರ ಯೋಜನೆ. ದೀರ್ಘ ವರ್ತುಲಕ್ಕೆ ಜಾಗವಿರಲಿಲ್ಲ. ಇರುವ ಕಿರಿದಾದ ಮಾರ್ಗದಲ್ಲಿ ತಿರುಗಲು ಪ್ರಯತ್ನಿಸಿ ಡ್ರೈವರ್ ತಿರುಗಿಸಿದ! ಆದರೆ ಜಾಗ ಸಾಲದಾಯ್ತು. ಕಾರು ಮಾರ್ಗಕ್ಕೆ ಅಡ್ಡ ನಿಂತಿತು. ಎಡಗಡೆಯಿಂದ ಬಸ್ಸೊಂದು ಬಂದು ನಮ್ಮ ಆತಂಕವನ್ನು ಹೆಚ್ಚಿಸಿತು. ಇಂತಹ ಸಮಯದಲ್ಲಿ ಬಸ್ಸಿನ ಚಾಲಕರಿಗೆ ಸಹನೆಯಿರುವುದಿಲ್ಲ. ಶಬ್ದಭೇದೀ ವಿದ್ಯೆ ಅವರಿಗೆ ಹುಟ್ಟಿನಿಂದಲೇ ಕರಗತವಾಗಿ ಬಂದಿದೆ–ಕರ್ಣನಿಗೆ ಸಹಜ ಕವಚ ಕುಂಡಲಗಳಿದ್ದಂತೆ. ಚಾಲಕ, ಸರ್ವ ಬಲ ಪ್ರಯೋಗ ಮಾಡಿ ಹಾರ್ನ್ ಮಾಡಲು ಆರಂಭಿಸಿದ. ಇದಕ್ಕೆ ಹಾರ್ನ್ ಎಂಬ ಶಬ್ದವನ್ನು ಮೊದಲು ಪ್ರಯೋಗಿಸಿದವನನ್ನು ತುಂಬ ಮೆಚ್ಚಬೇಕು. ಹಾರ್ನ್ ಎಂದರೆ ಕೊಂಬು ; ಕೊಂಬು ಇರಿಯುವಂಥ ಸಾಧನ–ಪ್ರಾಣಿಗಳಿಗೆ. ಹಾಗೆ ಇದು, ಈ ಹಾರ್ನ್ ನಮ್ಮ ಕಿವಿಯನ್ನು ಇರಿಯುತ್ತದೆ. ಮತ್ತೆ ನಾವೆಲ್ಲ ಇಳಿದು, ಆಚೀಚೆಯವರೂ ಕರುಣಗೊಂಡು ಸಹಕರಿಸಿ, ಕಾರನ್ನು ನೂಕಿ ಬಲಾತ್ಕಾರವಾಗಿ ಹಿಂದೆ ಮುಖಮಾಡಿಸಿದೆವು. ಹಾಗೆ ತಿರುಗಿನಿಂತಾಗ ಬಲಾತ್ಕಾರಕ್ಕೊಳಗಾದ ಅಬಲೆಯಂತೆ ಕಾರು ನನಗೆ ಕಂಡು ಬಂದು ಕರುಳು ಮಿಡಿಯಿತು! ಮತ್ತೆ ಊಟದ ಹೋಟೆಲಿಗೆ ಸಾಗಿ, ಹೊಟ್ಟೆ ತುಂಬಿಸಿ, ಕಾರಿನ ಹೊಟ್ಟೆ ತಣಿಸಲು ಅದಕ್ಕೆ ಪೆಟ್ರೋಲ್ ಸೇವೆ ಸಲ್ಲಿಸಿ ಹೊರಟೆವು. ಕಾರು ದುಃಖ ಮತ್ತು ಅವಮಾನಗಳ ಅಸಮಾಧಾನದಿಂದ ಸರಿಯುತ್ತಿತ್ತು. ಕೋಪದ ಆವೇಗದಿಂದ ಅದರ ವೇಗ ಹೆಚ್ಚಿತು. ಆದರೆ ಅದು ನಮ್ಮ ದುಷ್ಟತನಕ್ಕೆ ಮನಸ್ಸಿನಲ್ಲಿ ರೇಗಿಕೊಂಡಿತ್ತೆಂಬುದು ಖಾತ್ರಿ. ನಗರ ಪ್ರವೇಶವಾಗುತ್ತಿದ್ದಂತೆ ವೇಗವನ್ನು ಕಡಿಮೆ 3ನೇ ಗಿಯರ್‌ನಲ್ಲಿಟ್ಟರೆ 1ಕ್ಕೆ ಜಿಗಿಯ ತೊಡಗಿತು. 2ಕ್ಕೆ ತಂದರೆ 1ಕ್ಕೆ, ಒಂದಕ್ಕೆ ನಿಲ್ಲಿಸಿದರೆ, ಒಂದು ಎರಡು, ಮೂರು ಯಾವುದೂ ಅಲ್ಲದ ಇನ್ನೊಂದಕ್ಕೆ. ಡ್ರೈವರನೂ ಸುಸ್ತಾದ. ನಾವೆಲ್ಲ ಸಹನೆ ಕಳಕೊಂಡವರಂತಾದೆವು. ಕಾರು ಮಾತ್ರ ನಮ್ಮ ಅವಸ್ಥೆಗೆ ಒಳಗಿಂದೊಳಗೆ ನಗುತ್ತಿತ್ತೆಂದು ಭಾಸವಾಗುತ್ತಿತ್ತು.

ಮತ್ತೊಂದು ಅನುಕೂಲವಾದ ಚಿಕಿತ್ಸಾ ಕ್ಷೇತ್ರದಲ್ಲಿ ನಿಲ್ಲಿಸಿ. ಅವರ ಅಪ್ಪರೊಡನೆ ಸಮಾಲೋಚನೆ ಮಾಡಿ ಅದಕ್ಕೆ ಸಮಾಧಾನ ಹೇಳಿಸಲು ಪ್ರಯತ್ನಿಸಿದೆವು. ತವರಿನ ಅಣ್ಣ ತಮ್ಮಂದಿರನ್ನು ನೋಡಿದೊಡನೆ ಗಂಡನ ಮೇಲಿದ್ದ ಕೋಪ ದುಗುಡವೆಲ್ಲ ಬದಿಗೆ ಸರಿದು, ಅಗಲ ಬಾಯಿ ತೆರೆದು ನಗುವ ದಟ್ಟನಂತೆ ಬಾಯಿ ಬಿಟ್ಟಿತು. ಅವನೇ ಅವರ ಅಣ್ಣನೆಂದು ತೋರುತ್ತದೆ. ಅವರ ಚಿಕ್ಕ ತಟ್ಟೆ, ಬಿಸ್ಕ್ರಿಸಿ, ಪೈಸರನ್ನು ಅಲ್ಲಿಯೇ ಇಳಿಸಿ, ಅವರ ಜತೆಯಲ್ಲಿಯೇ ಒಂದು ಸುತ್ತು ಬಂದು ಸಮಾಧಾನಪಡಿಸಿ ಡ್ರೈವರನ ಕೈಗೊಪ್ಪಿಸಿ ಕೊಟ್ಟ. ಕಾರು ಒಂದು ನಿಟ್ಟುಸಿರು ಬಿಟ್ಟು, ತವರವರನ್ನು ಇನ್ನೆಂದು ನೋಡುವುದೋ ಎಂದು ಬಿಸುಸುಯ್ದು ಮುನ್ನಡೆಯಿತು. ನಮ್ಮ ಮನೆಗೆ ತಲುಪಿ, ಕಾರನ್ನು ಕಳುಹಿಸಿ ಕೊಡುವ ಸಮಯ—ಆತ್ಮೀಯ ಅಗಲಿಕೆಯ ನೋವಿನ ಅನುಭವವಾಯ್ತು.

ಇಲ್ಲಿಗೆ ನಮ್ಮ ಅಂದಿನ ಪ್ರವಾಸಕಥನ ಮುಗಿಯಿತು. ನಾವೆಣಿಸಿದಷ್ಟು ಅದು ಸಂತೋಷದಾಯಕವಾಗಿರಲಿಲ್ಲ. ನಮ್ಮ ಮಿತ್ರ ದಂಪತಿಗಳಿಗೆ ಒಂದು ರೀತಿಯ ಶಿಕ್ಷೆ ಕೊಟ್ಟಂತಾಯ್ತು ; ಇನ್ನೊಮ್ಮೆ ಅವರು ಇತ್ತ ಬರುವ ಸಾಹಸ ಮಾಡುತ್ತಾರೆಯೇ ಎಂಬ ಸಂದೇಹ ಕಾಡುತ್ತಿದೆ. ಆದರೆ ನನಗೊಂದು ಲಾಭವಾಗಿದೆ. ನನ್ನವಳಿಗೆ ಈಗ ಪ್ರವಾಸ ಹೊರಡುವ ಉತ್ಸಾಹ ಕಡಿಮೆಯಾಗಿದೆ! ಅಡಿಗೆಮನೆಯ ಪುರುಷಾರ್ಥ ಮಹಿಮಾಮಯವಾಗಿ ಕಾಣುತ್ತಿದೆ. ತನ್ನ ಪುರುಷನಿಗೋಸ್ಕರ ಅಡುಗೆ ಮಾಡುವುದರಿಂದ 'ಪುರುಷಾರ್ಥ' ಎಂಬ ಪದ ಪ್ರಯೋಗವೇ ಸರಿ : ನಾನು 'ಸ್ವಾರ್ಥ' ಹೇಳಿರಬೇಕೆಂದು ತಪ್ಪೆಂದು ವಾದಿಸಿದ್ದಾಳೆ. ಆ ವಾದದ ಹಿನ್ನೆಲೆಯಲ್ಲಿ ನನ್ನನ್ನು ಉಂಡಾಡಿ ಗುಂಡನೆಂದು ಹಂಗಿಸುವ ಧ್ವನಿಯಿದ್ದರೂ ನಾನದನ್ನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ.

ಈ ಪ್ರವಾಸ ಕಥನದ ಒಂದಕ್ಷರವನ್ನಾದರೂ ಓದಿದವರಿಗೆ, ಓದಿದ್ದನ್ನು ಕೇಳಿದವರಿಗೆ ಶತಕೋಟಿ ರೂಪಾಯಿ ಖರ್ಚುಮಾಡಿ ಪ್ರೊಲ್ಲ್ಯೂಷನ್ ಕಳೆದ ಗಂಗಾಸ್ನಾನದ ಫಲ; ಇದನ್ನು ಹೀಗಳೆದವರಿಗೆ, ಕುತ್ಸಿತ ಮಾತಾಡಿದವರಿಗೆ, ನಮ್ಮ ನಗರದ ಕೂವಂ ನದಿಯಲ್ಲಿ ಮಿಂದು ಬಿರಿಯಾನಿ ತಿಂದ ಫಲ !—ಎಂದು ಸೂತ ಪುರಾಣಿಕರು, ಕಾಫಿಕ್ಲಬ್ಬಿನ ಸ್ಪೆಷಲ್ ರೂಮಿನಲ್ಲಿ ನೆರೆದ ಭಕ್ತ ವೃಂದಕ್ಕೆ ಬಿತ್ತರಿಸಿದ ಭರತ ಖಂಡದ, ದಕ್ಷಿಣ ಭಾಗದ 600 005ನೇ ಪರ್ವದ ಪ್ರವಾಸೋಪಾಖ್ಯಾನಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ.

ಮನಜ

ಸಾಮಾಜಿಕ ಸಂದರ್ಭ ಮತ್ತು ಬಂಡಾಯ*

ಬಂಡಾಯ ಸಾಹಿತ್ಯಕ್ಕೆ ಒಂದು ನಿರ್ದಿಷ್ಟ ಸಾಮಾಜಿಕ ಧೋರಣೆ ಸೈದ್ಧಾಂತಿಕ ಹಿನ್ನೆಲೆಯಾಗಿ ಬೆಳೆಯುತ್ತಾ ನಡೆದಿರುವುದು ಒಂದು ಅನಿವಾರ್ಯವಾದ ಬೆಳವಣಿಗೆ

---

* ತಾ. 24-11-1985 ರಂದು, ಕೆ.ಆರ್. ನಗರದಲ್ಲಿ ನಡೆದ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ, ಈ ಪ್ರಬಂಧವನ್ನು ಮಂಡಿಸಿದಾಗ ವಿಶೇಷವಾಗಿ ದೇವನೂರ ಮಹಾದೇವರವರ ಕಥೆಗಳ ಬಗ್ಗೆ ತೀವ್ರ ಆಕ್ರೋಶ ಅಥವಾ ಪ್ರತಿಭಟನೆ ಎನಿಸುವ ಪ್ರತಿಕ್ರಿಯೆಗಳು ವ್ಯಕ್ತವಾದವು. ಈ ಸ್ಥಿತಿಗೆ ಬಹುಶಃ ಎರಡು ಕಾರಣಗಳು ಮುಖ್ಯವೆಂದು ತೋರುತ್ತದೆ: (1) ಇವರ ಕಥೆಗಳನ್ನು ಕುರಿತ ವಿಮರ್ಶೆಗಳನ್ನೆಲ್ಲಾ ನೋಡಿದ ಬಳಿಕ ಅಪಾರವಾಗಿ ಹೊಗಳಿರುವುದು ಮಾತ್ರ ಕಂಡುಬರುತ್ತದೆಯೇ ಹೊರತು, ಇವರ ಕಥೆಗಳಿಗಿರುವ ಮಿತಿಗಳನ್ನು ತೋರಿಸಿಕೊಡುವ ನಿಷ್ಠುರ ಅಧ್ಯಯನವಾಗಲೀ ಅಥವಾ ನಿಷ್ಪಕ್ಷಪಾತ ಪ್ರಯತ್ನವಾಗಲೀ ನಡೆದಿರುವಂತೆ ತೋರುವುದಿಲ್ಲ. ಜೊತೆಗೆ 1974ರ ''ಬರಹಗಾರರ ಒಕ್ಕೂಟ'' ದಿಂದ ಉಂಟಾದ ಶೂದ್ರ-ಬ್ರಾಹ್ಮಣ ಭಿನ್ನಾಭಿಪ್ರಾಯದ ಬೆಳವಣಿಗೆ ಕೂಡ, ಇವರ ಕಥೆಗಳನ್ನು ಕುರಿತ ವಿಮರ್ಶೆಯ ಸಂದರ್ಭದಲ್ಲಿ ಬ್ರಾಹ್ಮಣ-ಶೂದ್ರವೆಂಬ ಎರಡು ಅತಿಗಳಾಗಿ ಪರಿಣಮಿಸಿ, ಇವರ ಕಥೆಗಳಿಗಿರುವ ಮಿತಿಗಳನ್ನು ಗುರುತಿಸುವ, ಬಹುತೇಕ ಎಲ್ಲ ಪ್ರಯತ್ನಗಳೂ, ಕೇವಲ ಹೊಗಳಿಕೆಯಲ್ಲೇ ಕೊನೆಗೊಂಡಿರುವಂತೆ ತೋರುತ್ತದೆ. ತತ್ಪರಿಣಾಮವಾಗಿ, ದಲಿತರಾದ ಇವರ ಕಥೆಗಳನ್ನು ಕೇವಲ ಹೊಗಳುವುದು ಮಾತ್ರ ಪ್ರಗತಿಪರ ಧೋರಣೆಯಂತೆಯೂ, ಅದೊಂದು ಅನೂಚಾನ ಪದ್ಧತಿಯಂತೆಯೂ ನಡೆದುಬಂದಿರುವಂತಿದೆ. (2) ಎರಡನೆಯದಾಗಿ, ಬಹುಶಃ ವಿಮರ್ಶೆಗೆ ತಕ್ಕುದಲ್ಲದ ಈ ಸ್ಥಿತಿಯಿಂದಾಗಿಯೇ ಮಹಾದೇವರವರ ಕಥೆಗಳಿಗಿರುವ ಇತಿಮಿತಿಗಳನ್ನು ಗುರುತಿಸುವ ಪ್ರಾಮಾಣಿಕ ಯತ್ನ ಕೂಡ, ಸಿಟ್ಟು ಮತ್ತು ಆಕ್ರೋಶಗಳಿಗೆ ತುತ್ತಾಗುವುದನ್ನು ಯಾವ ಕಾರಣಕ್ಕೂ ವಿಮರ್ಶೆ ಎನ್ನಲು ಸಾಧ್ಯವಿಲ್ಲ ಎನಿಸುವಂತಾಗಿದೆ. (ಈ ಸಂಬಂಧವಾಗಿ ನಡೆದ ಗೋಷ್ಠಿಯಲ್ಲಿ ನಡೆದ ಪ್ರಶ್ನೋತ್ತರ ಚರ್ಚೆಯನ್ನು ಈ ಲೇಖನದ ಕೊನೆಯಲ್ಲಿ ಕೊಟ್ಟಿರುವೆನಾದರೂ, ಆ ಚರ್ಚೆ ಇಲ್ಲಿ ನಾನು ಕೊಟ್ಟಿರುವಷ್ಟು ಸರಳವಾಗಿರಲಿಲ್ಲ; ಆವೇಶ ಮತ್ತು ಉದ್ವಿಗ್ನ ಸ್ಥಿತಿಯಲ್ಲಿತ್ತು.)

ಎಂಬುದು ಸತ್ಯವಾದರೂ, ಸಮಕಾಲೀನವಾಗಿ ಇಡೀ ಕನ್ನಡ ಸಾಹಿತ್ಯ ಸಮಗ್ರವನ್ನೂ ಸಾಮಾಜಿಕ ಸಂದರ್ಭದಲ್ಲಿ ಇಟ್ಟು ವಿಶ್ಲೇಷಿಸಬೇಕಾಗಿರುವುದು ತುಂಬಾ ಅನಿವಾರ್ಯವೆನಿಸುವ ಜವಾಬ್ದಾರಿ ಇಂದಿನ ನಮ್ಮ ವಿಮರ್ಶಕರು ಹಾಗೂ ಸಂಶೋಧಕರ ಮುಂದಿದೆ ಎಂದೆನಿಸುತ್ತದೆ. ಅವರಲ್ಲೂ ವಿಶೇಷವಾಗಿ ಸಮಕಾಲೀನ ಸಾಹಿತ್ಯದಲ್ಲಿ ಚಾರಿತ್ರಿಕವೂ ಅನಿವಾರ್ಯವೂ ಆದ ಸಾಮಾಜಿಕ ಸಂಘರ್ಷದ ಪರಿಸ್ಥಿತಿಯಲ್ಲಿ ಹುಟ್ಟಿಕೊಂಡ ಬಂಡಾಯ ಸಾಹಿತ್ಯದ ವಸ್ತುವನ್ನು ಸಾಮಾಜಿಕ ದೃಷ್ಟಿಕೋನದಿಂದ ಬೇರ್ಪಡಿಸಿ ವಿವೇಚಿಸುವುದು ಬಹುಶಃ ಸಾಧ್ಯವೇ ಇಲ್ಲವೆಂದು ತೋರುತ್ತದೆ.

ಅದಾಗಿ, ವೈದಿಕ ವ್ಯವಸ್ಥೆಯ ಸಾಮಾಜಿಕ ಶ್ರೇಣೀಕರಣದ ಯಥಾರ್ಥತೆಯನ್ನೇ ಪ್ರಶ್ನಿಸುವ ಅಥವಾ ಜನಜಾಗೃತಿಯ ಒಂದು ಆಂದೋಲನವಾಗಿ ರೂಪುಗೊಂಡ ಬಂಡಾಯ ಸಾಹಿತ್ಯದ ಸಾಮಗ್ರಿಗಳನ್ನು ಪರಿಶೀಲಿಸುವ ಮೊದಲು ಇದಕ್ಕೆ ಪೂರ್ವಭಾವಿಯಾಗಿ ಒಂದೆರಡು ಮುಖ್ಯಾಂಶಗಳನ್ನು ನೆನಪಿಟ್ಟುಕೊಳ್ಳುವುದು ವಿಷಯದ ಸ್ಪಷ್ಟೀಕರಣಕ್ಕೆ ಮಾತ್ರವಲ್ಲದೆ, ಪ್ರಸ್ತುತ ಪ್ರಬಂಧಕ್ಕೆ ಒಂದು ಮಿತಿ ಅಥವಾ ಚೌಕಟ್ಟನ್ನು ನಿರ್ಮಿಸಿಕೊಳ್ಳುವ ದೃಷ್ಟಿಯಲ್ಲೂ ಸೂಕ್ತವೆಂದು ತೋರುತ್ತದೆ. (1) ಬಂಡಾಯ ಸಾಹಿತ್ಯ ಚಳುವಳಿಯ ಮುಂಚೂಣಿಯಲ್ಲಿ ಪ್ರಮುಖವೆನಿಸುವ ಹಲವಾರು ಲೇಖಕರನ್ನು ಹೆಸರಿಸಬಹುದಾಗಿದೆ. ಉದಾ : ಚಂದ್ರಶೇಖರ ಪಾಟೀಲ, ಕುಂ. ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ಚನ್ನಣ್ಣ ವಾಲೀಕಾರ, ಬಿ. ಟಿ. ಲಲಿತಾನಾಯಕ, ಕಾಳೇಗೌಡ ನಾಗವಾರ, ರಮಜಾನ ದರ್ಗಾ, ದೇವನೂರ ಮಹಾದೇವ ಮತ್ತು ಸಿದ್ಧಲಿಂಗಯ್ಯ ಇನ್ನೂ ಮುಂತಾದವರು ಸೃಜನಶೀಲ ಲೇಖಕರಾಗಿ ಒಂದು ಕಡೆಗಿದ್ದರೆ, ಶಿವರಾಮು ಕಾಡನಕುಪ್ಪೆ, ದೇವಯ್ಯ ಹರವೆ, ಡಾ. ಆರ್ಕೆ ಮಣಿಪಾಲ ಮತ್ತು ಡಿ. ಆರ್. ನಾಗರಾಜು ಮುಂತಾದವರು ಅದೇ ತಾತ್ವಿಕ ದೃಷ್ಟಿ-ಧೋರಣೆಯುಳ್ಳ ವಿಮರ್ಶಕರೆನಿಸುತ್ತಾರೆ. (2) ಬಂಡಾಯದ ಸಾಹಿತ್ಯ ಸಮಗ್ರವನ್ನೂ ಅಧ್ಯಯನ ಮಾಡಿದ ಬಳಿಕ ವಿಮರ್ಶಕನಿಗೆ ಬಹು ಸ್ಪಷ್ಟವಾಗಿ ಗೋಚರವಾಗುವ ಒಂದು ಮುಖ್ಯಾಂಶವೆಂದರೆ, ಬಂಡಾಯ ಸಾಹಿತ್ಯದ ವಸ್ತುವಿನ ಸಾಮಾಜಿಕ ಸ್ವರೂಪದ ದೃಷ್ಟಿಯಲ್ಲಿ ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಮುನಿವೆಂಕಟಪ್ಪ, ಹಂಪಣ್ಣ ಮತ್ತು ಇಂದೂಧರ ಹೊನ್ನಾಪುರ ಇವರನ್ನುಳಿದು, ಅನ್ಯ ಲೇಖಕರನ್ನು ಬಂಡಾಯದ ತಾತ್ವಿಕ ನೆಲೆಯಲ್ಲೇ ಒಂದು ವಿಭಿನ್ನವೆನಿಸುವ ದೃಷ್ಟಿಯಲ್ಲಿ ಯೋಚಿಸಬೇಕಾದ್ದು ಅನಿವಾರ್ಯವೆನಿಸುತ್ತದೆ. ಉದಾ: ಚಂಪಾ ಬಂಡಾಯದ ಮುಂಚೂಣಿಯಲ್ಲಿರುವ ಪ್ರಮುಖ ಲೇಖಕರು ಮಾತ್ರವಾಗಿರದೆ, ನವ್ಯ ಪರಂಪರೆಯ ನಡುವೆಯೇ ಅವರ ಸೃಜನಶೀಲ ಕ್ರಿಯೆ ಆರಂಭಗೊಂಡಿದ್ದರೂ, ಆ ಸಂಪ್ರದಾಯವನ್ನು ಜೀರ್ಣಿಸಿಕೊಂಡೂ, ಭಿನ್ನವಾಗಿಯೂ ಸ್ವತಂತ್ರವಾಗಿಯೂ ಬೆಳೆದಿದ್ದಾರೆ ಎಂಬುದನ್ನು ಪ್ರೊ. ಕುರ್ತಕೋಟಿ ಮುಂತಾದ ವಿಮರ್ಶಕರು ಸರಿಯಾಗಿಯೇ ಗುರುತಿಸಿದ್ದಾರೆ.[1]

---

1 ಚಂದ್ರಶೇಖರಪಾಟೀಲ, ಹತ್ತೊಂಬತ್ತು ಕವನಗಳು, (ಕುರ್ತಕೋಟಿಯವರ ಮುನ್ನುಡಿ) 'ನಾಲ್ಕು ಮಾತುಗಳು', ಪು. 61

ಹಾಗೆಯೇ ಅವರ ಕಾವ್ಯ ಹಾಗೂ ನಾಟಕ ಎರಡು ಪ್ರಕಾರಗಳೂ ಎರಡು ರೀತಿಯ ಭಾಷಾ ಶೈಲಿಯಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದಾಗಿದೆ. ಅವರಲ್ಲೂ ಅವರ "ಗೋಕರ್ಣದ ಗೌಡಶಾನಿ" ನಾಟಕವಂತೂ ಉತ್ತರ ಕರ್ನಾಟಕದ ಉಪಭಾಷೆಯನ್ನು ಅತ್ಯಂತ ಪರಿಣಾಮಕಾರಿಯಾಗಿಯೂ ಶಕ್ತಿಯುತವಾಗಿಯೂ ಬಳಸಿಕೊಂಡುದಾಗಿದೆ. ಜೊತೆಗೆ, ಅವರು ತಮ್ಮ ವಸ್ತುಗಳನ್ನು ತಮ್ಮದೇ ಆದ ವಿಡಂಬನ ಶೈಲಿಯಲ್ಲಿ ಮಂಡಿಸುವುದನ್ನೂ, ತನ್ಮೂಲಕ ತಮ್ಮತನವನ್ನೇ ಒಂದು ವಿಶಿಷ್ಟವಾದ ತಾತ್ವಿಕ ನೆಲೆಯಲ್ಲಿ ಸ್ಥಾಪಿಸಿಕೊಳ್ಳುವುದನ್ನೂ ಅವರ ಕಾವ್ಯ ಹಾಗೂ ನಾಟಕಗಳಲ್ಲಿ ಕಾಣಬಹುದಾಗಿದೆ.

ಇನ್ನು ಇದೇ ರೀತಿಯ ಇನ್ನೊಂದು ನಿದರ್ಶನವೆಂದರೆ, ಬರಗೂರು ರಾಮಚಂದ್ರಪ್ಪನವರ ಕಾದಂಬರಿಗಳಲ್ಲಿನ ಬಹುತೇಕ ಪಾತ್ರಗಳು, ಉದಾ : 'ಸೀಳುನೆಲ'ದ ಭರತ, ರಾಜು, ಸುಜಾತ ಮುಂತಾದ ಹಿಂದುಳಿದ ಕೋಮುಗಳ ಪಾತ್ರ ಸನ್ನಿವೇಶಗಳನ್ನು ನೋಡಿದಾಗ, ಕರಿಯ, ಕರಿಯನ ಹೆಂಡತಿ, ಕೊಳೆಗೇರಿ ಮತ್ತು ಅವರ ಕಾವ್ಯದ 'ಮಾದಿಗರ ಹುಡುಗಿ'[2] ಮುಂತಾದ ಸಾಮಾಜಿಕವಾಗಿ ಅತ್ಯಂತ ಕೆಳಸ್ತರದ ಅಥವಾ ದಲಿತರ ಪಾತ್ರಗಳು, ಹಿಂದುಳಿದ ಕೋಮುಗಳ, ಅದರಲ್ಲೂ ಮಧ್ಯಮ ವರ್ಗದ ಪಾತ್ರಗಳ, ಸಮಕಾಲೀನ ಪ್ರಗತಿಪರ ಧೋರಣೆಯ ಹಿನ್ನೆಲೆಯಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾರೆಯೇ ಹೊರತು, ಮಹಾದೇವ, ಸಿದ್ಧಲಿಂಗಯ್ಯನವರಲ್ಲಿಯಂತೆ ಸ್ವತಃ ದಲಿತ ವರ್ಗದ ಪಾತ್ರಗಳೇ ಆಗಿ, ಓದುಗನನ್ನು ನೇರವಾಗಿ ಎದುರುಗೊಳ್ಳುವುದು ಅಪರೂಪವೆನಿಸುತ್ತದೆ. ಆದಕಾರಣ ಬಂಡಾಯದ ಸಂಘಟನೆಯಲ್ಲಿ ಸಾಮಾಜಿಕವಾಗಿ ಮೇಲಿನ ಪದರದಿಂದ ಬಂದಂಥವರು ಮಾತ್ರವಲ್ಲದೆ, ಅತ್ಯಂತ ಕೆಳಗಿನ ಸ್ತರದಿಂದ ಬಂದಂಥವರೂ ಇಲ್ಲಿ ಸಂಘಟಿತರಾಗಿರುವುದನ್ನು ಮನಗಂಡ ಬಳಿಕ, ದಲಿತ ವರ್ಗದಿಂದ ಬಂದ ಲೇಖಕರ ಸೃಜನಶೀಲ ಸಾಹಿತ್ಯದ ವಸ್ತು, ಪ್ರಸ್ತುತ ಸಾಮಾಜಿಕ ಅಧ್ಯಯನದ ಸಂದರ್ಭದಲ್ಲಿ ಬಹುಶಃ ಮೊದಲ ಪರಿಗಣನೆ ಪಡೆಯುತ್ತದೆ ಎಂದೆನಿಸುತ್ತದೆ. ಅಂದರೆ, ಬಂಡಾಯದ ಅನ್ಯ ಲೇಖಕರು ನೇರವಾಗಿ ಎರಡನೆಯ ಪರಿಗಣನೆಯಲ್ಲಿ ನಿಲ್ಲುತ್ತಾರೆ ಎಂದೇನೂ ಇದರರ್ಥವಲ್ಲ; ಬದಲಾಗಿ ಈಗಾಗಲೇ ಹೇಳಿರುವಂತೆ, ಈ ಲೇಖಕರ ಸೃಜನಶೀಲ ಸಾಹಿತ್ಯದ ಸಾಮಗ್ರಿಗಳ ಸಾಮಾಜಿಕ ಸ್ವರೂಪ ಅಥವಾ ಸಾಮಾಜಿಕ ಧೋರಣೆಯನ್ನು ಒಂದು ವಿಭಿನ್ನವಾದ ದೃಷ್ಟಿಕೋನದಲ್ಲೇ ಅಧ್ಯಯನ ಮಾಡಬೇಕಾಗುತ್ತದೆ ಎಂದು ಮಾತ್ರ ಇದರರ್ಥ.

ಇನ್ನು ಇಷ್ಟು ಮಾತುಗಳ ಹಿನ್ನೆಲೆಯಲ್ಲಿ ಪ್ರಸ್ತುತ ವಿಷಯವನ್ನು ಪ್ರವೇಶಿಸಬಹುದೆನಿಸುತ್ತದೆ. ಬಂಡಾಯ ಸಾಹಿತ್ಯದ ಸಾಮಾಜಿಕ ಸಂದರ್ಭದಲ್ಲಿ ಒಂದು ಬಹು ಮುಖ್ಯವಾದ ದನಿಯೆನಿಸಿರುವ ದಲಿತ ಸಾಹಿತ್ಯದ ಸಾಮಗ್ರಿಗಳನ್ನೂ, ಅವುಗಳ ಅಭಿವ್ಯಕ್ತಿಯ ಸಾರ್ಥಕತೆಯನ್ನೂ ಪ್ರಸ್ತುತ ಪ್ರಬಂಧದ ಮಿತಿಯಲ್ಲಿ ವಿವರವಾಗಿ ಸಾಧ್ಯವಿಲ್ಲದಿದ್ದರೂ ಸ್ಥೂಲವಾಗಿಯಾದರೂ ಒಂದೆರಡು ಮಾತುಗಳಲ್ಲಿ ನೋಡಲೆತ್ನಿಸಬಹುದು.

---

2 ಬರಗೂರು ರಾಮಚಂದ್ರಪ್ಪ, 'ನೆತ್ತರಲ್ಲಿ ನೆಂದ ಹೂವು'

ದಲಿತ ಸಾಹಿತ್ಯವನ್ನು ಕುರಿತು ಬರೆಯುವ, ಅಥವಾ ಮಾತಾಡುವ ಯಾವುದೇ ಸಂದರ್ಭದಲ್ಲೂ, ಕೊನೆಯ ಪಕ್ಷ ಈಗ್ಗೆ ಅರ್ಧ ದಶಕದಷ್ಟು ಕಾಲದಿಂದಲಾದರೂ ಒಂದು ವಿಸ್ಮಿತ ಸತ್ಯದೋಪಾದಿಯಲ್ಲಿ ಬೆಳೆಯುತ್ತಾ ನಡೆದಿರುವ ಒಂದು ವೈಚಿತ್ರ್ಯ ಪ್ರಾಯಶಃ ಇದುವರೆಗೆ ಯಾವುದೇ ಸಭೆಯಲ್ಲಾಗಲೀ ಅಥವಾ ವಿಮರ್ಶಕರಲ್ಲಾಗಲಿ ಅಷ್ಟಾಗಿ ಕಲಕಿರುವಂತೆ ತೋರುವುದಿಲ್ಲ. ಅದೆಂದರೆ, 'ದಲಿತ ಸಾಹಿತ್ಯ' ಎಂದ ಕೂಡಲೇ ಕೇವಲ ಎರಡು ಹೆಸರುಗಳನ್ನು ಮಾತ್ರ ಪ್ರಸ್ತಾಪಿಸುತ್ತಾ ಬಂದಿರುವುದು : ಒಂದು ದೇವನೂರ ಮಹಾದೇವರವರದು : ಇನ್ನೊಂದು ಸಿದ್ಧಲಿಂಗಯ್ಯನವರ ಹೆಸರು. ಈ ಸ್ಥಿತಿಗೆ ಬಹುಶಃ ಎರಡು ಕಾರಣಗಳು ನಮಗೆ ತೋರುತ್ತವೆ. (1) ಈ ಇಬ್ಬರಲ್ಲದೆ ಇನ್ನುಳಿದ ಹಲವಾರು ಜನ ಹೆಚ್ಚು ಕಮ್ಮಿ ಇದೇ ವಯಸ್ಸಿನ ದಲಿತ ವರ್ಗದ ಕವಿಗಳು, ವಿಮರ್ಶಕರ ಗಮನಕ್ಕೆ ಬಂದಿಲ್ಲವೋ, ಅಥವಾ ವಿಮರ್ಶಕರ ಗಮನವನ್ನು ಈ ಕವಿಗಳು ಸೆಳೆಯಲಾಗಿಲ್ಲವೋ, ಅಥವಾ ವಿಮರ್ಶಕರು ಇವರ ಬರಹಗಳನ್ನು ನೋಡುವ ಗೋಜಿಗೆ ಹೋಗಿಲ್ಲವೋ ನಿರ್ಣಯಿಸುವುದು ಕಠಿಣವಾದರೂ, ಈ ಸ್ಥಿತಿ ಮಾತ್ರ ಚಿಕ್ಕದಿರಲಿ ದೊಡ್ಡದಿರಲಿ ಒಂದು ಕಾರಾಸ್ಕೃತೆಗೂ ಎಡೆ ಮಾಡಿಕೊಟ್ಟಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲವೆಂತಿಲ್ಲ. ತತ್ಪರಿಣಾಮವಾಗಿ, ಹಾಗೆ ವಿಮರ್ಶಕರ ಗಮನದ ಗಡಿಯಾಚೆಯೇ ಉಳಿದಿರುವ ಕೆಲವು ಹೆಸರುಗಳನ್ನಾದರೂ ಇಲ್ಲಿ ಸೂಚಿಸುವುದಾದರೆ 'ಬಂಡಾಯ' ಸಂಕಲನದ ಇಂದೂಧರ ಹೊನ್ನಾಪುರ, 'ದನಿಗಳು' ಸಂಕಲನದ ಹಂಪಣ್ಣ, ಚಿತ್ರದುರ್ಗ ಮತ್ತು 'ಕೆಂಡದ ನಡುವೆ' ಸಂಕಲನದ ಮುನಿವೆಂಕಟಪ್ಪ, ಕೋಲಾರ ಮುಂತಾದವರು. (2) ಇನ್ನು ಎರಡನೆಯ ಕಾರಣವೆಂದರೆ,ದಲಿತ ಸಾಹಿತ್ಯದ ಸಂದರ್ಭದಲ್ಲಿ ಮೇಲೆ ಸೂಚಿಸಿರುವ ಕೇವಲ ಎರಡು ಹೆಸರುಗಳು ಮಾತ್ರ ಕೇಳಿಬರುತ್ತಿರುವುದಕ್ಕೆ ನಮಗೆ ತೋರುವ ಇನ್ನೊಂದು ಅಂಶವೆಂದರೆ, ದಲಿತರ ಹಾಗೂ ಅವರನ್ನು ಕುರಿತ ಸಾಹಿತ್ಯದ ಹೆಸರಿನಲ್ಲಿ, ಈ ಇಬ್ಬರು ದಲಿತ ಲೇಖಕರು ಮಾತ್ರ ಸದಾ ಸುದ್ದಿ ವಲಯದಲ್ಲೇ ಸಂಗಾತಿಗಳಾಗಿರುವುದು ಕಾರಣವಿರಬೇಕು ಎನಿಸುತ್ತದೆ.

ಇದೇನೇ ಇದ್ದರೂ, ಹಂಪಣ್ಣ, ಮುನಿವೆಂಕಟಪ್ಪ ಮುಂತಾದವರ ಸಂಕಲನಗಳನ್ನು ಅಧ್ಯಯನ ಮಾಡಿದ ಬಳಿಕ, ಗಮನಾರ್ಹವೆನಿಸುವ ಕೆಲವು ವಿಷಯಗಳು ಗೊತ್ತಾಗುತ್ತವೆ. ಮೊದಲನೆಯದಾಗಿ, ಈ ಯುವ ಲೇಖಕರನ್ನು ಕವಿಗಳನ್ನಾಗಿ ವಿಚಾರ ಮಾಡುವ ಮೊದಲು, ಸಾಹಿತ್ಯದಲ್ಲಿ ಇವರು ತೀವ್ರ ಆಸಕ್ತಿ ತಾಳಿರುವುದು ಮಾತ್ರವಲ್ಲದೆ, ಸಮಕಾಲೀನ ಸಾಮಾಜಿಕ ವ್ಯವಸ್ಥೆ ಹಾಗೂ ಸಾಹಿತ್ಯದ ಸಂದರ್ಭದಲ್ಲಿ ತಮ್ಮನ್ನೂ ತಮ್ಮಲ್ಲಿ ವ್ಯಾಪಿಸುತ್ತಿರುವ ಘಟನೆಗಳನ್ನೂ! ಸ್ಪಷ್ಟವಾಗಿಯೂ ನಿರ್ದಿಷ್ಟವಾಗಿಯೂ ಗುರುತಿಸಿಕೊಳ್ಳುವ ಸಾಹಸವನ್ನೂ, ಅವರ ಹಿಂದಿರುವ ಆತ್ಮವಿಶ್ವಾಸವನ್ನೂ 'ದನಿಗಳು' ಹಾಗೂ 'ಸಾಗಿದರೋ ಸಾಗಿದರು' ಎಂಬ ಹಂಪಣ್ಣನವರ ಕವಿತೆಗಳಲ್ಲೂ, 'ಕೊರಗು' ಹಾಗೂ 'ದಲಿತನ ಕನಸು' ಎಂಬ ಮುನಿವೆಂಕಟಪ್ಪನವರ ಕತೆಗಳಲ್ಲೂ ಸಾಧಾರವಾಗಿ ಕಂಡುಕೊಳ್ಳಬಹುದಾಗಿದೆ. ಹಾಗೆಯೇ ಬೇರೆಲ್ಲಾ ಸಮಸ್ಯೆಗಳಿಗಿಂತಲೂ ಭೀಕರವ

ಸುವ ಅಸ್ಪೃಶ್ಯತೆಯಂಥ ಏಕೈಕ ಕಾರಣದಿಂದಾಗಿ, ಮಾತಿಲ್ಲದಿರುವ ಈ ಜನವರ್ಗ, ಎಂದಾದರೂ ಒಮ್ಮೆ ಮಾತಾಡುವಂತಾದಾಗ, ಇಡೀ ಈ ವ್ಯವಸ್ಥೆಯ ಸಂಸ್ಕೃತಿ. ಇತಿಹಾಸದ ಪುಟಗಳು, ವ್ಯಕ್ತಿಗಳು, ಸರಕಾರ, ಕಾನೂನು ಮುಂತಾದುವೆಲ್ಲ ಎಷ್ಟೊಂದು ಹಾಸ್ಯಾಸ್ಪದವಾಗಿ ಕಾಣುತ್ತವೆ ಎಂಬ ಕಟುವಿಡಂಬನೆಯನ್ನು, ಅತ್ಯಂತ ಸಂಯಮದಿಂದಲೂ ಲವಲವಿಕೆಯಿಂದಲೂ ಚಿತ್ರಿಸುತ್ತಾ ನಡೆಯುವ ಇಂಥದ್ದೊಂದು ಅವರ 'ಇಂಡಿಯಾ—1975–76–77–78' ಎಂಬ ಕವಿತೆಯ ಸಾರಗ್ರಾಹಿಯನ್ನು ಹೆಕ್ಕಿ ಪರಿಶೀಲಿಸಿದ ಬಳಿಕ, ದಲಿತರು ಕೇವಲ ಅನ್ಯರ ದುರುದ್ದೇಶದ ಅವಜ್ಞೆಗೆ ಗುರಿಯಾಗಿದ್ದಾರೆ ಎಂದು ಹೇಗೆ ಆರೋಪಿಸುವುದು ಎಂಬ ಪ್ರಶ್ನೆ ನಮ್ಮನ್ನು ಕಾಡತೊಡಗುತ್ತದೆ. ಇನ್ನು ಎರಡನೇ ಅಂಶವೆಂದರೆ, ಕಾವ್ಯಾಭಿವ್ಯಕ್ತಿಯ ಮೂಲಕ ತಮ್ಮ ಭಾವನೆಗಳಿಗೆ ಒಂದು ಸ್ಪಷ್ಟ ಸ್ವರೂಪವನ್ನು ಕಂಡುಕೊಳ್ಳುವ ತೀವ್ರ ಆಸಕ್ತಿಯ ಪ್ರಾಮಾಣಿಕ ಯತ್ನದ ಹಾಗೂ ದಿಟ್ಟ ವಿಶ್ವಾಸವುಳ್ಳ ಈ ಕವಿಗಳ ಕಾವ್ಯಧರ್ಮದ ಭವಿಷ್ಯವನ್ನು ಕೇವಲ ಒಂದೊಂದೇ ಸಂಕಲನವೆಂಬ ಕಾರಣದ ಮೇಲೆ ತೀರ್ಮಾನಿಸಹೊರಡುವುದು ನಮ್ಮ ಮಟ್ಟಿಗೆ ಸಹಾನುಭೂತಿಪರವಾದ ಅಧ್ಯಯನದ ಲಕ್ಷಣವೆಂದಾಗಲಿ, ಅಥವಾ ವಿಮರ್ಶೆಯಂಥ ವಿಷಯಕ್ಕೆ ಸಲ್ಲಬಹುದಾದ ನ್ಯಾಯವೆಂದಾಗಲೀ ತೋರುವುದಿಲ್ಲ. ಆದಾಗ್ಯೂ ಒಂದು ಪ್ರಶ್ನೆಯಂತೂ ಉಳಿದೇ ಉಳಿಯುತ್ತದೆ. ಅದೇನೆಂದರೆ ಅನ್ಯರಿಗೆ ಅಸಾಧ್ಯವೂ ಕನ್ನಡ ಕಾವ್ಯ ಸಂದರ್ಭದಲ್ಲಿ ಅಪೂರ್ವವೂ ಆದ ಅಸ್ಪೃಶ್ಯತೆಯಂಥ ತೀವ್ರ ಭಾವಗಳು ಅನಗತ್ಯವೂ ತೀರಾ ಸುಲಭವೂ ಆದ ಸಿಟ್ಟು ಆಕ್ರೋಶದ ಮಾತುಗಳಿಗೆ ತುತ್ತಾಗಿರುವುದರಿಂದ ಆ ಭಾವವನ್ನು ಕಲೆಯಾಗಿಸುವ ಕಲೆಗಾರಿಕೆ ಈ ಕವಿಗಳಿಗೆ ಇನ್ನೂ ಸಿದ್ಧಿಸಬೇಕಾದ್ದಿದೆ ಎನ್ನದಿರುವಂತಿಲ್ಲ.

ಇನ್ನು ಇಲ್ಲಿಂದ ಮುಂದಕ್ಕೆ ದೇವನೂರ ಮಹಾದೇವ ಹಾಗೂ ಸಿದ್ಧಲಿಂಗಯ್ಯನವರ ಸಾಹಿತ್ಯವನ್ನು ಪ್ರವೇಶಿಸಬಹುದು. ಮೊದಲಿಗೆ, ಮಹಾದೇವರವರ ಕಥೆಗಳ ಸೋಲುಗೆಲವನ್ನು ಕುರಿತು, ಕೆಲವು ವಿಮರ್ಶಕರು ಭಿನ್ನ ಭಿನ್ನ ರೀತಿಯಲ್ಲೂ, ಮತ್ತೆ ಕೆಲವು ವಿಮರ್ಶಕರು ಕೃತಿಯ ಸಂದರ್ಭದಲ್ಲಿ ಅಸಾಧ್ಯ ಅಥವ ಆಧಾರಶೂನ್ಯ ಎನಿಸುವ ರೀತಿಯಲ್ಲೂ ವ್ಯಾಖ್ಯಾನ ಮಾಡಿರುವುದನ್ನು ಕಾಣಬಹುದಾಗಿದೆ. ಆದರೆ ಪ್ರಸ್ತುತ ಇವರ ಕಥೆಗಳನ್ನು ಕುರಿತು ಅನ್ಯ ವಿಮರ್ಶಕರು ಏನು ಹೇಳುತ್ತಾರೆ ಎಂಬುದಕ್ಕಿಂತ, ಮಹಾದೇವರವರು ತಮ್ಮ ಕಥೆಗಳ ಬಗ್ಗೆ ತಾವೇ ಏನು ಹೇಳುತ್ತಾರೆ ಎಂಬುದನ್ನು ಸ್ವಲ್ಪ ಕೇಳಬೇಕು. "ನಾನು ಇದುವರೆಗೆ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು. ಹೆಚ್ಚೆಂದರೆ ಒಂದು ಹಸ್ತ ಇದ್ದೀತು. ಅದಷ್ಟೇ ಕನ್ನಡ ಸಾಹಿತ್ಯದ ಗತಿಯನ್ನು ಅಲ್ಲಾಡಿಸುವಲ್ಲಿ ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ"[3] ಎನ್ನುತ್ತಾರೆ ಶ್ರೀಮಾನ್ ದೇವನೂರ ಮಹಾದೇವರವರು. ಆದರೆ 10ನೆ ಶತಮಾನದ ಮಹಾರ

3 ದೇವನೂರ ಮಹಾದೇವ, 'ಸಂಕ್ರಮಣ'.87-88. ಬಂ. ಸಾ. ವಿಶೇಷಾಂಕ, ಪು. 14-15

ಚೆನ್ನಯ್ಯನಿಂದ ಹಿಡಿದು ಇಪ್ಪತ್ತನೇ ಶತಮಾನದ ಅಂಬೇಡ್ಕರ್‌ರವರೆಗೂ, ಅಲ್ಲಾಡದಿರುವ ಈ ವ್ಯವಸ್ಥೆಯ ಗತಿಯಾಗಲೀ, ಇವರ ಸಾಹಿತ್ಯದ ಗತಿಯಾಗಲೀ, ದುಡಿದೇ ಅಟ್ಟುಂಡು ಬದುಕುವ ದಲಿತರ ಕಿಂಚಿತ್ ಸ್ವಾಭಿಮಾನದ ಪ್ರಜ್ಞೆಯೂ ಇಲ್ಲದ, ನಿರ್ಜೀವ ಪಾತ್ರಗಳನ್ನು ಇವರು ಕೇವಲ ಕೆಲವು ಕತೆಗಳನ್ನು ಬರೆದ ಮಾತ್ರಕ್ಕೆ ಇಡೀ ಕನ್ನಡ ಸಾಹಿತ್ಯದ ಗತಿ ಯಾವ ಕಡೆಯಿಂದ ಅಲ್ಲಾಡುತ್ತಿದೆಯೋ, ಅದು ಹೇಗೆ ಅಲ್ಲಾಡುತ್ತಿದೆಯೋ ಗೊತ್ತಾಗುತ್ತಿಲ್ಲ. ಅಥವಾ, ತನ್ನ ಸಾಮಾಜಿಕ ಆಧ್ಯಾತ್ಮಿಕ ಜಾಗೃತಿಯ ವಿಚಾರಗಳನ್ನು ಮಾತ್ರವಲ್ಲದೆ, ಕೊಂಕುವತ್ತ ಕಾವ್ಯ ಸೌಂದರ್ಯವನ್ನೂ ತನ್ನ ನೂರಾರು ವಚನಗಳಲ್ಲಿ[4] ಅತ್ಯಂತ ಮೌನವಾಗಿ ಚಿತ್ರಿಸಿರುವ ಮಾದಾರ ದೂಳಯ್ಯನಿಂದ ಕನ್ನಡ ಸಾಹಿತ್ಯದ ಗತಿ ಅಲ್ಲಾಡಲಿಲ್ಲ : ಅಥವಾ ತಾನು ಅಲ್ಲಾಡಿಸುವುದಾಗಿ ದೂಳಯ್ಯ ಹೇಳಿಕೊಂಡವನೂ ಅಲ್ಲ. ಅದೇನೇ ಇದ್ದರೂ, ಮಹಾದೇವರವರು ಕೆಲವು ಸೋಗಲಾಡಿ ಪಾತ್ರಗಳನ್ನು ಬರೆದು, ಅದರಿಂದ ಇಡೀ ಕನ್ನಡ ಸಾಹಿತ್ಯದ ಗತಿಯೇ ಅಲ್ಲಾಡುತ್ತಿದೆ ಎಂದು ಭ್ರಮಿಸಿಕೊಂಡಿರುವ ಅವರ ಶೋಚನೀಯ ಸ್ಥಿತಿಗಾಗಿ ಕನಿಕರಪಡಬೇಕೆನಿಸುತ್ತದೆ. ಏಕೆಂದರೆ, ಇವರ ದುರಭಿಮಾನದ ವೈಯಕ್ತಿಕ ಪ್ರವರ ಪ್ರಚಾರದಿಂದಾಗಿ ಬಹುಶಃ ದಲಿತರ ನಿಜಾಭಿಮಾನ ಅಲ್ಲಾಡಬಹುದೇ ಹೊರತು, ಈ ವ್ಯವಸ್ಥೆಯಾಗಲೀ ಕನ್ನಡ ಸಾಹಿತ್ಯದ ಗತಿಯಾಗಲೀ ಅಲ್ಲವೆಂಬುದು ನಮ್ಮ ಪ್ರಾಮಾಣಿಕ ಹಾಗೂ ಮಿತಿಯುಕ್ತ ಅಭಿಪ್ರಾಯವಾಗಿದೆ. ಇದೇ ಹಂತದಲ್ಲಿ ಸೂಚಿಸಬಹುದಾದ ಇನ್ನೊಂದು ಮುಖ್ಯ ಸಂಗತಿ ಎಂದರೆ, ಮಹಾದೇವರವರು ಬಂಡಾಯದ ಮುಂಚೂಣಿಯಲ್ಲಿರುವವರು ಎಂಬ ಕಾರಣದಿಂದಾಗಿ, ಬಂಡಾಯದ ಸೈದ್ಧಾಂತಿಕ ಆಶಯಗಳನ್ನು ಇವರ ಕಥೆಗಳಲ್ಲಿ ಹುಡುಕುವುದರಿಂದ ಬಹುಶಃ ಲೇಖಕರಿಗೆ ನ್ಯಾಯ ದೊರೆತಂತಾಗಲಾರದು. ಏಕೆಂದರೆ, ಇವರ ಕಥೆಗಳು ತಾಳುವ ಧೋರಣೆಗೂ ಬಂಡಾಯದ ಧೋರಣೆಗೂ ಯಾವುದೇ ಸಂಬಂಧವಿದ್ದಂತೆ ನಮಗೆ ತೋರುವುದಿಲ್ಲ.

ನಾಕಪ್ಪನ ಮಕ್ಕಳು ಗೌಡರ ಹೊಲದಲ್ಲಿ ಕದ್ದು ತಂದ ಕಡಲೇಕಾಯಿಯನ್ನು - ಹಟ್ಟಿಯ ಮರಿಮಕ್ಕಳೆಲ್ಲಾ ಸುತ್ತುವರೆದು, ತಿಂದು ಸಿಪ್ಪೆಯನ್ನು ಬೆಂಕಿಗೆ ಎಸೆಯುವ 'ಒಡಗೂಳ'ದ ಚಿತ್ರವನ್ನು ಉಪನಿಷತ್ತುಗಳ ಯಜ್ಞಯಾಗಾದಿಗಳಿಗೆ ಹೋಲಿಸಿರುವ ಡಾ. ಅನಂತಮೂರ್ತಿಯವರ ಹೋಲಿಕೆ ತುಂಬಾ ಸೋಜಿಗವಾಗಿ ಕಾಣುತ್ತದೆ. ಕಡಲೇಕಾಯಿ ತಿನ್ನುವ ಆ ಚಿತ್ರವನ್ನು ಕುರಿತು ಅವರು ಹೀಗೆ ಹೇಳುತ್ತಾರೆ : "ಉಣ್ಣುವಂಥ ನಿತ್ಯದ ಒಂದು ಸಾಮಾನ್ಯ ಕ್ರಿಯೆಯೂ ಇಲ್ಲಿ ಯಜ್ಞಕ್ಕೆ ಸಮಾನವಾದ ರಿಚುಯಲ್.... ಈ ಹಟ್ಟಿಯಲ್ಲಿ ಹೀಗಾಗಿ ದೀಪ ಹಚ್ಚುವುದೂ, ಅದನ್ನು ಹಂಚಿಕೊಳ್ಳುವುದೂ, ಒಟ್ಟಾಗಿ ಉಣ್ಣುವುದೂ 'ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ' ಎಂಬಂಥ ಉಪ

---

4 ಸಕಲಪುರಾತನರ ವಚನಗಳು, ಸಂ. 1. ಪು. 449-480, 1972

ನಿಷ್ಪತ್ತಿನ ಆವರ್ತನವಾದ ಮಾನವ ಸಾಹಚರ್ಯದ ಕ್ರಿಯೆಗಳೇ."[5] ಅಂದರೆ ಈ ಬಗೆಯ ಹೋಲಿಕೆಯನ್ನು ಮಾಡಬಾರದು ಎಂಬುದೇನೂ ನಮ್ಮ ಆಗ್ರಹವಲ್ಲ. ಬದಲಾಗಿ, ಈ ಹೋಲಿಕೆಯನ್ನು ತಡೆದು ನಿಲ್ಲುವ ಆಧಾರಗಳು ಕೃತಿಯಲ್ಲಿ ಇವೆಯೇ ಎಂಬುದು ಮಾತ್ರ ನಮ್ಮ ಪ್ರಶ್ನೆಯಾಗುತ್ತದೆ. ಏಕೆಂದರೆ ಸಮಕಾಲೀನ ಅರ್ಥವ್ಯವಸ್ಥೆಯ ಈ ಕೂಲಿನಾಲಿಯ ಜನ, ಹೊಟ್ಟೆಗಾಗಿ ತಾವು ಕದ್ದು ತಂದ ಕಡಲೇಕಾಯಿಯನ್ನು ಮನೆಮಂದಿಯೆಲ್ಲಾ ಸುತ್ತುವರಿದು ತಿನ್ನುವ, ಮತ್ತು ಅದರ ಸಿಪ್ಪೆಯನ್ನು ಬೆಂಕಿಗೆಸೆಯುವ ಕ್ರಿಯೆಯ ಅರ್ಥವನ್ನೂ, ಅದರ ಧ್ವನಿಸಾಧ್ಯತೆಯನ್ನೂ ಕೃತಿಯ ಸಂದರ್ಭದಲ್ಲಿ ಎಷ್ಟರವರೆಗೆ ಮತ್ತು ಎಲ್ಲಿಯವರೆಗೆ ವಿಸ್ತರಿಸಬಹುದು ? ನಮ್ಮ ಮಟ್ಟಿಗೆ ಹೇಳುವುದಾದರೆ ಬಹುಶಃ ಎರಡು ಅಥವಾ ಮೂರು ಬಗೆಯ ಧ್ವನಿಸಾಧ್ಯತೆಗಳು ಈ ಚಿತ್ರದ ಸಂದರ್ಭದಲ್ಲಿ ಸಾಧ್ಯವೆಂದು ತೋರುತ್ತದೆ. (1) ಉಳ್ಳವರ ಸುಖ ಸಮೃದ್ಧಿಗಾಗಿ ದುಡಿದರೂ, ದುಡಿದವರ ಒಡಲಿಗೆ ಹಿಡಿಕೂಳೂ ಇಲ್ಲವೆಂಬ ಅವ್ಯಕ್ತ ಆಕ್ರೋಶ, ಒಡಲಾಳದ ಬಡಬಾಗ್ನಿಯಾಗಿ, ಆ ಬಡಬಾನಲದ ಒಡಲಲ್ಲಿ ಕಡಲೇಕಾಯಿ ನಾಮಾವಶೇಷವಾಗಿ ಹೋಯಿತು ಎಂಬರ್ಥವಿರಬಹುದು. (2) ಎರಡನೆಯದಾಗಿ, ಪೋಲೀಸರ ದಾಳಿಗೆ ಕಡಲೇಕಾಯಿಯ ಒಂದೇ ಒಂದು ಸಿಪ್ಪೆಯೂ ಸಿಗದೆ ಹೋಗುವುದು, ದುಡಿದ ಒಡಲಿಂದ ಎದ್ದ ಕಿಚ್ಚಿಗೆ ಉಳ್ಳವರ ಸಿರಿತನ ದರ್ಪ ಅನ್ಯಾಯಗಳೆಲ್ಲಾ ಕಡಲೇಕಾಯಿ ಸಿಪ್ಪೆಯಂತೆ ಸುಟ್ಟು ಬೂದಿಯಾದವು ಎಂಬ ಎಚ್ಚರಿಕೆಯ ಧ್ವನಿಯೂ ಅಲ್ಲಿಂದ ಹೊರಡಲು ಸಾಧ್ಯವಿರಬಹುದು. (3) ಮೂರನೆಯದಾಗಿ, ಹಾಗೇ ಕದ್ದು ತಂದ ಕಡಲೇಕಾಯಿಯನ್ನು ಹಸಿದ ಒಡಲುಗಳೆಲ್ಲಾ ಸುತ್ತುವರಿದು ತಿನ್ನುವ ಚಿತ್ರದಿಂದ, ಹಸಿವು ಮನೆಮಂದಿಯನ್ನೆಲ್ಲಾ ಕಿತ್ತು ತಿಂದಿತು ಎಂತಲೋ, ಅಥವಾ ಮನೆಮಂದಿಯೆಲ್ಲಾ ಸೇರಿ ಹಸಿವನ್ನೇ ಕಿತ್ತು ಕಿತ್ತು ತಿಂದರು ಎಂಬ ದ್ವಂದ್ವಾರ್ಥ ಕೂಡ ಸಾಧ್ಯವಿರಬಹುದೆಂದು ತೋರುತ್ತದೆ. ಹೀಗೆ ಈ ಮೂರು ಬಗೆಯ ಧ್ವನಿಸಾಧ್ಯತೆಯನ್ನು ಪಕ್ಕ ನೋಡಿದ ಬಳಿಕವೂ, ಗಂಭೀರವಾದ ಸಮಸ್ಯೆಯೊಂದು ತಲೆಯೆತ್ತುತ್ತದೆ. ಅದೆಂದರೆ, ಹಟ್ಟಿಯ ಹೆಣ್ಣು ಗಂಡುಗಳೆಲ್ಲಾ ಮನೆಯಂಗಳದಲ್ಲಿ ಗುಡ್ಡೆ ಹಾಕಿಕೊಂಡಿರುವುದರಿಂದ, ದುಡಿಮೆ ಎಂಬ ಕ್ರಿಯೆಯೇ ಇಲ್ಲಿ ಇಲ್ಲವಾಗುತ್ತದೆ. ತತ್ಪರಿಣಾಮವಾಗಿ, ಒಡಲಾಳದ ಸ್ಥಿತಿ ಬಡಬಾಗ್ನಿಯಾಗುವ ಬದಲು, ಅಪರಾಧಿ ಪ್ರಜ್ಞೆಯೆನಿಸಿ ಬಿಳಿಚಿಕೊಂಡು, ಈ ಕೃತಿಯ ಮೈಯಲ್ಲಿ ಸ್ಥಾಯೀಭಾವವಾಗಿ

---

5 'ರುಜುವಾತು', ಸಂ. 12. ಪು.110-14. ಇದೇ ಸಂದರ್ಭದಲ್ಲಿ ನೆನೆಯಬೇಕಾದ ಇನ್ನೊಂದು ಬಹು ಮುಖ್ಯವಾದ ಸಂಗತಿ ಎಂದರೆ, ದಲಿತರ ಹಾಗೂ ಶೂದ್ರ ಹೆಣ್ಣುಗಳನ್ನು ತಮ್ಮ ಕಥೆಗಳಲ್ಲಿ ಸೂಳೆಯರಾಗಿ ನಡೆಸಿಕೊಳ್ಳುವ ಡಾ. ಅನಂತಮೂರ್ತಿಯವರ ಧೋರಣೆಗೆ, ಮಹಾದೇವರವರ ಕಥೆಗಳಲ್ಲಿ ಬಹು ಸ್ಪಷ್ಟವಾದ ತಾತ್ವಿಕ ಸಮರ್ಥನೆಯಿರುವುದನ್ನು ಕಾಣಬಹುದಾಗಿದೆ. ಉದಾ : ಅನಂತಮೂರ್ತಿಯವರ 'ಸಂಸ್ಕಾರ'ದ ಚಂದ್ರಿ ಪಾತ್ರವನ್ನೂ ಮಹಾದೇವರವರ 'ಮಾರಿಕೊಂಡವರು' ಕಥೆಯಲ್ಲಿನ ಲಚುಮಿ ಪಾತ್ರವನ್ನೂ ಹೋಲಿಸಿ ನೋಡಬಹುದು.

ಅರಳಿರುವ ಹಸಿವು, ದುಡಿಮೆಯಿಂದ ಹೊರತಾದ ನೀತಿಬಾಹಿರ ಎಂಬ ಕಳಂಕಕ್ಕೆ ಗುರಿಯಾಗುತ್ತದೆ. ಏಕೆಂದರೆ, ಹಸಿವಿನಂಥ ಒಂದೇ ಒಂದು ಭಾವವನ್ನು ಕಥೆಯಾಗಿಸುವ ಇವರ ಕಥೆಗಳಲ್ಲಿ, ಈ ಭಾವವನ್ನು ಕಥೆಯಲ್ಲಿ ಮತ್ತಷ್ಟು ಜ್ವಲಂತಗೊಳಿಸಬಹುದಾಗಿದ್ದ ಮಾನವ ಪ್ರಯತ್ನ, ದುಡಿಮೆ, ಸ್ವಾಭಿಮಾನ ಮುಂತಾದ ಪ್ರೇರಕ ಭಾವಗಳ ವೈವಿಧ್ಯತೆಯಿಂದ ಹೊರತಾಗುವ, ಇವರ ಕಥೆಯ ಸ್ಥಾಯೀಭಾವವಾದ ಹಸಿವು, ಕೊನೆಯವರೆಗೂ ತನ್ನ ಏಕತಾನತೆಯಿಂದಾಗಿ, ಇವರ ಕಥೆಗಳು ಕಲಾತ್ಮಕ ಗೆಲುವಿನಿಂದ ವಂಚಿತವಾಗುತ್ತವೆ. ತತ್ಪರಿಣಾಮವಾಗಿ ಹಸಿವನ್ನಳಿದು ಬೇರೇನೂ ತನ್ನ ಬಳಿ ಇಲ್ಲದಿದ್ದರೂ, ಕೇವಲ ಇಷ್ಟಗಲ ಭೂಮಿ ಸಿಕ್ಕರೆ ಸಾಕು: ದುಡಿಮೆ ಬದುಕೇನು ಎಂಬ ಜೋತಮ್ಮನ ನಿರಂತರ ಹೋರಾಟದ ಬದುಕಿನಿಂದ ಹೊರಡುವ, ಅತ್ಯಂತ ಉಜ್ವಲವೂ ಕಲಂಕರಹಿತವೂ ಎನಿಸುವ ಹಲವಾರು ಭಾವಾರ್ಥಗಳು, ಗೌಡರ ಅಥವಾ ಲಿಂಗಾಯಿತರ ಕೇರಿಯಲ್ಲಿ ಒಂದು ಎಮ್ಮೆ ಸತ್ತರೆ ನಮ್ಮವರಿಗೆಲ್ಲಾ ಹಬ್ಬವಾಗುತ್ತದೆ ಎಂಬ ಧೋರಣೆಯ ನಾಕಪ್ಪನ ಮಕ್ಕಳ ಸಂದರ್ಭದಲ್ಲಿ ಅಸಾಧ್ಯವೆನಿಸುತ್ತವೆ.[6] ಹಾಗೆಯೇ ಜೋತಮ್ಮನ ಹಾಡಿನಿಂದ ಹೊರಡುವ ವೈವಿಧ್ಯವೆನಿಸುವ ಭಾವಾರ್ಥಗಳು ಹಾಗೂ ಸಮರ್ಥ ಧ್ವನಿ ಪರಂಪರೆ 'ಒಡಲಾಳ'ದ ಗುರುಸಿದ್ದನ ನಾಟಕಾಭಿನಯದ ಸಂದರ್ಭದಲ್ಲಿ ಅಸಾಧ್ಯವೆನಿಸುತ್ತದೆ. ಏಕೆಂದರೆ ನಾಟಕ, ತಮಟೆ, ವಾದ್ಯ, ಹಾಡು ಮುಂತಾಗಿರುವ ದಲಿತರ ಈ ಬಗೆಯ ಜಾನಪದ ರೂಢಿ, ಅವರ ಬದುಕಿನ ಕ್ರೌರ್ಯಗಳನ್ನೆಲ್ಲಾ ಕ್ಷಣ ಕಾಲವಾದರೂ ಮರೆಸುವ ಏಕೈಕ ಪ್ರವೃತ್ತಿಯ ವಾಸ್ತವತೆ ಮಹಾದೇವರವರ ಪಾತ್ರ ಸೃಷ್ಟಿಯಲ್ಲೂ ಜೀವ ಪಡೆದಿರುವಂತೆ ತೋರುವುದಿಲ್ಲ.[7]

---

6 ಮಹಾದೇವರವರ ದಲಿತ ಪಾತ್ರಗಳ ಮನೋಧರ್ಮದ ಈ ಅಸಮತೋಲ ಸ್ಥಿತಿಗೆ ಎರಡು ಕಾರಣಗಳು ಮುಖ್ಯವಾಗಿರುವಂತೆ ಕಾಣುತ್ತದೆ. ಮೊದಲನೆಯದಾಗಿ ಈ ಪಾತ್ರಗಳನ್ನು ಈ ಪರಿಯಲ್ಲೇ ನಡೆಸಿಕೊಳ್ಳುವ ಅನಂತಮೂರ್ತಿಯವರ (ಉದಾ: 'ಭಾರತೀಪುರ'ದ 'ಪಿಜನ್' ಪಿ.ಪಿ. ಸತ್ಯಪ್ರಕಾಶ್ ಮತ್ತು ಅವನ ಜೊತೆ ಪಾತ್ರಗಳನ್ನು ನೋಡಬಹುದು) ಪ್ರಭಾವದಿಂದ ಬಿಡಿಸಿಕೊಳ್ಳುವುದು ಇವರಿಂದ ಸಾಧ್ಯವಾಗಿಲ್ಲ. ಎರಡನೆಯದಾಗಿ ನೈಸರ್ಗಿಕ ಬೆಳವಣಿಗೆಯಾದ ಸಮಕಾಲೀನ ಮಾನವ ಜಾಗೃತಿಯ ಪ್ರಜ್ಞೆಯನ್ನು, ತಮ್ಮ ಪಾತ್ರಗಳ ಸಂದರ್ಭದಲ್ಲಿ ಧ್ವನಿಸಿ ಸಂಕೀರ್ಣಗೊಳಿಸುವ ಪ್ರತಿಭೆಯ ಅಭಾವದಿಂದ ಈ ಲೇಖಕರ ಕಥನಸೃಷ್ಟಿ ವಂಚಿತವಾಗುತ್ತದೆ.

7 ಇದೇ ಜೂಜುಕೋರ ಗುರುಸಿದ್ದನ ಪಾತ್ರದ ಸಂದರ್ಭದಲ್ಲಿ ನೆನೆಯಬೇಕಾದ ಇನ್ನೊಂದು ಅಂಶವೆಂದರೆ ಅವನ ಕೈಯಲ್ಲಿ ಮಿಂಚುವ ಗಡಿಯಾರವನ್ನು "ಗಂಡಸರ ಪೀಠಬಳಿ"ಯ ಪ್ರತೀಕ ಎಂದು ವ್ಯಾಖ್ಯಾನಿಸುತ್ತಾರೆ ಡಾ. ಪ್ರೋಲಂಕೆ ರಾಮಮೂರ್ತಿಯವರು. ಆದರೆ ಇದರರ್ಥವೇನೆಂಬುದು ಗೊತ್ತಾಗುವುದಿಲ್ಲ ('ಸಂಕ್ರಮಣ' 103-4 ಪು. 36.) ಆದರೆ ಒಂದಂತೂ ಸ್ಪಷ್ಟವಾಗುತ್ತದೆ : ಕಾರಣವಿರಲಿ ಇಲ್ಲದಿರಲಿ, ಅರ್ಥವಿರಲಿ ಅಥವಾ ನಿರರ್ಥಕವೇ ಎನ್ನಿಸಲಿ, ಮಹಾದೇವರವರನ್ನು ಹೊಗಳುವುದರಿಂದ ದಲಿತರ ಪರವಾದಿ ಮತ್ತು ಸಾಹಿತ್ಯ ಖ್ಯಾತಿ ಎರಡೂ ಸಾಧ್ಯವೆಂಬ ಹಟಯೋಗಿ ಸಂಕಲ್ಪದಿಂದ ಹೊರಟವರಲ್ಲಿ ಪ್ರೋಲಂಕೆಯವರೂ ಒಬ್ಬರು ಎಂಬುದಕ್ಕೆ ಮೇಲಿನಂಥ ನಿದರ್ಶನಗಳನ್ನು ಕಾಣಬಹುದಾಗಿದೆ.

ಇಷ್ಟೆಲ್ಲಾ ವಿಶ್ಲೇಷಣೆಯ ಮೂಲಾರ್ಥವೆಂದರೆ, ಮಹಾದೇವರವರ ಪಾತ್ರಗಳ ಸಂದರ್ಭದಲ್ಲಿ ಹಸಿವಿನಂಥ ಒಂದೇ ಒಂದು ಭಾವ ಸ್ಥಾಯೀಭಾವವೆನಿಸಿ ಇಲ್ಲಿನ ಕಲಾಭಿವ್ಯಕ್ತಿಗೆ ಪಕ್ಕಾಗಿರುವುದರಿಂದ ಇಲ್ಲಿನ ಜೀವನ ಚಿತ್ರಣ ಒಂದು ನಿರ್ದಿಷ್ಟ ಸ್ವರೂಪವುಳ್ಳದ್ದು ಎಂದಾಗಲಿ, ಇಲ್ಲಿನ ಪಾತ್ರಗಳು ಜೋಮನಂತೆ ಭಿನ್ನ ಭಿನ್ನ ಭಾವಗಳಿಂದ ತುಂಬಿಕೊಂಡು, ಓದುಗರ ಮುಂದೆ ಮೂರ್ತರೂಪವಾಗಿ ನಿಲ್ಲುವ ಚೇತನಗಳು ಎಂದಾಗಲೀ ಎನ್ನಿಸುವಂತಿಲ್ಲ. ಅಂದರೆ ಸಾಕವ್ವ ಮುಂತಾದ ಪಾತ್ರಗಳು ಜೋಮನಂತಿರಬೇಕಿತ್ತು ಎಂದು ಇದರ ಅರ್ಥವಲ್ಲ. ಬಹುಶಃ ಇನ್ನೆರಡು ವಾಕ್ಯಗಳಲ್ಲಿ ಇದನ್ನು ವಿಸ್ತರಿಸಿ ಹೇಳುವುದು ಸೂಕ್ತವೆಂದು ತೋರುತ್ತದೆ. ಹಸಿವು ಮತ್ತು ಕಳ್ಳತನಗಳಿಂದಾಗಿ ಇಲ್ಲಿನ ಪಾತ್ರಗಳಿಗೆ ಓದುಗನ ಸಹಾನುಭೂತಿ ಗೌಣಗೊಳ್ಳುವುದು ಮಾತ್ರವಲ್ಲದೆ, ಸಮೃದ್ಧ ಭಾವಗಳಿಂದ ತುಂಬಿಕೊಂಡ ಪಾತ್ರಗಳು ಎನಿಸಿಕೊಳ್ಳುವ ಕೊರತೆಯಿಂದ ಕೃತಿ ಹೊರತಾಗುವಂತಿಲ್ಲ. ಆದ್ದರಿಂದ, ಹಸಿವಿನಂಥ ಒಂದೇ ಒಂದು ಭಾವ ಮಹಾದೇವರವರ ಬಹುತೇಕ ಎಲ್ಲ ಕಥೆಗಳಲ್ಲೂ ಪ್ರಧಾನವಸ್ತುವೆನಿಸಿದ್ದು, ಆ ವಸ್ತುವನ್ನು ಒಂದು ಯಶಸ್ವಿಯಾದ ಕಲಾಕೃತಿಯನ್ನಾಗಿ ಮಾಡುವ ಲೇಖಕರ ಪ್ರಾಮಾಣಿಕ ಯತ್ನ ಕೂಡ ಕಥೆಗಳಿಂದ ಹೊರಹುವುದಾದರೂ, ಮೂಲತಃ ಅವರ ಕಥಾವಸ್ತುವೇ ಏಕಮುಖವಾದುದಾಗಿದ್ದು ತತ್ಪರಿಣಾಮವಾದ ಅವರ ಪಾತ್ರಗಳಲ್ಲಿ ಮಾನವಸಹಜವಾದ ಪ್ರಯತ್ನಶೀಲ ಪ್ರವೃತ್ತಿಯಾಗಲೀ, ಸಾಮಾಜಿಕವಾದ ಸಾಮಾನ್ಯ ಜೀವನದ ನೀತಿಸಂಹಿತೆಯ ಪ್ರಜ್ಞೆಯಾಗಲೀ, ವಿಷಮ ಸಂಘರ್ಷಗಳಲ್ಲಿ ದಟ್ಟದಾರಿದ್ರ್ಯದ ವ್ಯಕ್ತಿಯಲ್ಲೂ ಕಾಣಬಹುದಾದ ಸ್ವಾಭಿಮಾನದ ಜಾಗೃತಿಯಾಗಲೀ ಕಾಣಿಸಿಕೊಳ್ಳದೇ ಹೋಗುವುದರಿಂದ, ವೈವಿಧ್ಯತೆಯಿಂದ ಹೊರತಾದ ಅವರ ಕಥಾವಸ್ತುವಿನ ಮೂಳೆಚಕ್ಕಳ ಒಂದು ಕಲಾಕೃತಿಯ ಒಟ್ಟಂದದ ವಿಶ್ಲೇಷಣೆಯಲ್ಲಿ ಸೋಲುತ್ತದೆ. ಉದಾಹರಣೆಗಾಗಿ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕತೆಯಲ್ಲಿನ ರಂಗಪ್ಪನ ಪಾತ್ರ ಹಾಗೂ ಆ ಪ್ರಸಂಗ, ಮತ್ತು 'ಮಾರಿಕೊಂಡವರು' ಕಥೆಯಲ್ಲಿನ ಬೀರನ ಪಾತ್ರ ಹಾಗೂ ಆ ಪಾತ್ರದ ಸುತ್ತಲಿನ ಪ್ರಸಂಗವನ್ನು ಅವಲೋಕಿಸಬಹುದು.

ಸ್ವಲ್ಪ ವಾಚ್ಯವಾದರೂ ಬಹುಶಃ ಇನ್ನೊಂದು ಮಾತನ್ನಿಲ್ಲಿ ಸೇರಿಸುವುದು ಸೂಕ್ತವೆಂದು ತೋರುತ್ತದೆ. ಏಕೆಂದರೆ, ಮಹಾದೇವರವರ ಕತೆಗಳನ್ನು ಕುರಿತ ಈ ವಿಶ್ಲೇಷಣೆಯಲ್ಲಿ, ಅವರ ಕತೆಗಳಿಗಿರುವ ಮಿತಿಗಳನ್ನು ಮಾತ್ರ ಗುರುತಿಸುತ್ತಾ ಹೋಗಲಾಗಿದೆ ಎಂಬುದು ಸತ್ಯವಾದರೂ, ಆ ಕತೆಗಳಲ್ಲಿ ಮೆಚ್ಚಬೇಕಾಗಿರುವ ಅಸ್ವಾರ್ಥಗಳನ್ನು ಕಡೆಗಣಿಸಲಾಗಿದೆ ಎಂದೇನೂ ಭಾವಿಸಬೇಕಾದ್ದಿಲ್ಲ. ಉದಾಹರಣೆಗೆ 'ಒಡಲಾಳ' ನಮ್ಮ ದೃಷ್ಟಿಗೆ ಒಂದು ಸಾಧಾರಣ ಕೃತಿ ಎಂಬುದು ಸತ್ಯವಾದರೂ, ಕೃತಿ ತನ್ನ ಮಿತಿಯಲ್ಲೇ ದಲಿತ ಕುಟುಂಬವೊಂದರ ದಾರುಣ ಬಡತನದ ಒಂದು ಕಿರು ಅನುಭವವನ್ನಾದರೂ ಮೂಡಿಸುತ್ತದೆ ಎಂಬುದನ್ನು ಮೆಚ್ಚದಿರುವಂತಿಲ್ಲ. ಹಾಗೆಯೇ, ಸಾಕವ್ವ ಕಳೆದುಕೊಂಡಿರುವುದು ಕೇವಲ ಒಂದು ಹುಂಜವೆಂಬುದು ತೀರಾ ಸಾಮಾನ್ಯವಾದ ಘಟನೆ ಎನಿಸಿದರೂ ಆ ಕಳೆದು

ಹೋದ ಹುಂಜದ ಹುಡುಕಾಟದಲ್ಲಿ. ತನ್ನ ಇಡೀ ವಂಶದ ಊರ್ಜಿತ ಬದುಕನ್ನೇ ಹುಡುಕುತ್ತಿರುವ ಅದನ್ನು ದಾಖಿ ಹಾಗೂ ಸಿರಾಲಿಗಳು ಕೃತಿಯಲ್ಲಿ ಅವ್ಯಕ್ತವಾಗಿ ಸೂಚಿಸುವುದನ್ನು ಪರಿಭಾವಿಸಬಹುದು.

ಇನ್ನು ಕೊನೆಯದಾಗಿ ಸಿದ್ಧಲಿಂಗಯ್ಯನವರ ಕಾವ್ಯವನ್ನು ನೋಡಬಹುದು. ಸಿದ್ಧಲಿಂಗಯ್ಯನವರ ಕಾವ್ಯ ಸಮಸ್ತವನ್ನು. ಅಂದರೆ, ಇದುವರೆಗಿನ ಅವರ ಮೂರು ಸಂಕಲನಗಳ ಒಟ್ಟು ಐವತ್ತೆಂಟು ಪದ್ಯಗಳನ್ನು ಈ ಕವಿ ಪದ್ಯದಿಂದ ಪದ್ಯಕ್ಕೆ ಬೆಳೆದಿರಬಹುದೆ ಎಂಬ ಪ್ರಶ್ನಾರ್ಥಕ ಕುತೂಹಲದ ದೃಷ್ಟಿಯಲ್ಲಿ ವಿಶ್ಲೇಷಿಸುವುದರಿಂದ ಬಹುಶಃ ವೈವಿಧ್ಯವೆನಿಸುವ ಕೆಲವು ಮುಖ್ಯಾಂಶಗಳು ಕಂಡುಬರುವಂತೆ ತೋರುತ್ತದೆ. ಏಕೆಂದರೆ ಇವರ 'ಹೊಲೆಮಾದಿಗರ ಹಾಡು' ಎಂಬ ಮೊದಲ ಸಂಕಲನದ ರೊಚ್ಚುರಭಸಗಳು. ಸಿಡಿಲುಗುಡುಗುಗಳು 'ಕಪ್ಪುಕಾಡಿನ ಹಾಡು' ಎಂಬ ಅವರ ಮೂರನೆಯ ಸಂಕಲನದಲ್ಲಿ ಪ್ರೀತಿ, ಪ್ರೇಮ, ಒಲವು, ಗೆಳತಿ ಮುಂತಾದ ಮಾರ್ದವತೆಯಾಗಿ ರೂಪಾಂತರಗೊಂಡಿರುವುದನ್ನು ಕಾಣಬಹುದಾಗಿದೆ. ಅಂದರೆ, ಪ್ರೀತಿ, ಪ್ರೇಮ ಮುಂತಾದವು ಕಾವ್ಯದಲ್ಲಿರಬಾರದು ಎಂದೇನೂ ಇದರರ್ಥವಲ್ಲ, ಬದಲಾಗಿ ಅವರ ಹಿಂದಿನ ಕವಿತೆಗಳಿಗೆ ಹೋಲಿಸಿದಾಗ ಈ ಭಾವಗಳು ಕಾವ್ಯವಾಗಿದೆಯೇ ಎಂಬುದು ಪ್ರಶ್ನೆಯಾಗುತ್ತದೆ. ಉದಾ : ಇವರ ಆರಂಭದ ಕವಿತೆಗಳಾದ "ನನ್ನ ಜನಗಳು" ಮತ್ತು "ಕ್ರಾಂತಿಗೀತ"ಗಳಲ್ಲಿ, ಅನ್ಯಾಯದ ವಿರುದ್ಧ ಬಂಡಾಯವೇಳುವ ಆಕ್ರೋಶ ಅನಂತರದ ಮೂರನೆಯ ಸಂಕಲನದಲ್ಲಿನ "ಕೋರಿಕೆ" ಮತ್ತು "ನನ್ನ ಕಣ್ಣಿನ ಮಾತು" ಎಂಬ ಕವಿತೆಗಳಲ್ಲಿನ ಪ್ರೇಮ, ಪ್ರೀತಿ. ಒಲವುಗಳಾಗಿ ಪರಿವರ್ತನೆಗೊಂಡು, ತನ್ಮೂಲಕ ಒಂದು ಬಗೆಯ ರಾಜೀಧೋರಣೆ ಈ ಕವಿಯ ನಂತರದ ಕಾವ್ಯವಸ್ತುವಿನ ಅಂತರಾಳದಲ್ಲಿ ಉದ್ಯುಕ್ತವಾಗತೊಡಗಿರಬಹುದೆ ಎನಿಸುತ್ತದೆ. ಏಕೆಂದರೆ ಆರಂಭದ ಇವರ ಕ್ರಾಂತಿಕನ್ಯೆ ಈ ಕವಿಯನ್ನು ಬಹಳವಾಗಿ ಕಾಡಿಸಿದ್ದಾಳೆಂಬುದನ್ನು ನೋಡಬಹುದು. ಉದಾ : "ಕ್ರಾಂತಿಕನ್ಯೆ ಮೋಹಜನ್ಯೆ ನಿನ್ನ ಮದುವೆ ಆಗುವೆ–ಕ್ರಾಂತಿ ಕಿಡಿಯ ಸಿಡಿಸುವಾಗ ನಾನು ನಿನ್ನ ತಬ್ಬುವೆ–ಬಡಜನಗಳ ಬಂಡಾಯದಿ ನಿನಗೆ ಮುತ್ತನೊತ್ತುವೆ–ಕ್ರಾಂತಿ ಜಯದ ಪಡೆವವರೆಗು ನಿನ್ನ ಹಿಂದೆ ಸುತ್ತುವೆ" ಎಂಬುದಾಗಿ 1975ರಲ್ಲಿ ಶಂತನು ಸಂಕಲ್ಪ ಮಾಡಿರುವ ಈ ಕವಿಗೆ, 1983ನೇ ವರ್ಷದ ಇವರ ಮೂರನೆಯ ಸಂಕಲನದ ವೇಳೆಗೆ, ಅದೇ ಕ್ರಾಂತಿಕನ್ಯೆ ಎಂಬ ಒಂದು ಅಮೂರ್ತ ಹೆಣ್ಣು ಪಾತ್ರ ಕೇವಲ ಗೆಳತಿಯಾಗಿ ದಕ್ಕಿರುವುದನ್ನು ಕಾಣಬಹುದಾಗಿದೆ. ಅದೂ ಅಲ್ಲದೆ, ಪೂರ್ವವಿಶೇಷಣವುಳ್ಳ ಈ 'ಕ್ರಾಂತಿಕನ್ಯೆ' ಎಂಬ ನಾಮಪದ ಮೊದಲ ಸಂಕಲನದಲ್ಲಿ ಕೆಲವು ಬಾರಿ ಬಳಕೆಯಾಗಿದ್ದರೆ, ಮೂರನೆಯ ಸಂಕಲನದಲ್ಲಿ ಕೇವಲ 'ಗೆಳತಿ' ಎಂಬ ಸಾಧಾರಣ ನಾಮಪದ ಕೊನೆಯ ಪಕ್ಷ ಹದಿನಾರು ಬಾರಿಯಾದರೂ ಬಳಕೆಯಾಗಿರುವುದನ್ನೂ, 'ಪ್ರೀತಿ', 'ಪ್ರೇಮ' ಮತ್ತು 'ಒಲವು' ಎಂಬ ಒಂದೇ ಅರ್ಥವುಳ್ಳ ಮೂರು ನಾಮಪದಗಳು ಇಡೀ ಸಂಕಲನದಲ್ಲಿ ಕೊನೆಯ ಪಕ್ಷ ಇಪ್ಪತ್ತು ಬಾರಿಯಾದರೂ ಬಳಕೆಯಾಗಿರುವುದನ್ನೂ ಕಾಣಬಹುದಾಗಿದೆ. ಅರ್ಥಾತ್ ಈ ವಿಶ್ಲೇಷಣೆಯಿಂದ ಇಲ್ಲಿ

ಹೊರಡಿಸಲು ಯತ್ನಿಸುತ್ತಿರುವ ಭಾವಾರ್ಥವೆಂದರೆ, ಆರಂಭದ ಕವಿತೆಗಳಲ್ಲಿನ ಘೋಷಣೆಗಳಿಂದ ಏನೂ ಪ್ರಯೋಜನವಿಲ್ಲವೆಂದು ಮನಗಂಡಿರುವಂತೆ ಭಾಸವಾಗುವ ಈ ಕವಿಯ ವಸ್ತು ಹಿಂದಿನ ರಚ್ಚು ರಭಸಗಳಿಂದ ಹೊರತಾಗಿ, ಕೇವಲ ಮಾರ್ದವತೆಯ ಅಥವಾ ಪೇಲವವೆನಿಸುವ ಭಾವಗಳನ್ನು ಬಿಡಿಚಿತ್ರಗಳಲ್ಲಿ ಬಿಡಿಸುತ್ತಾ ಹೋಗುವುದನ್ನು ಇವರ ಅನಂತರದ ಕವಿತೆಗಳಾದ "ಕೋರಿಕೆ", "ಶ್ರೀಮಾನ್ ಪುಟ್ಟಪ್ಪನ ಹಾಡು" ಹಾಗೂ "ಗೌಳಗಿತ್ತಿಯ ಹಾಡು" ಮುಂತಾದ ಕವಿತೆಗಳಲ್ಲಿ ಕಾಣಬಹುದಾಗಿದೆ. ಆದರೆ, ಒಂದು ವಿಷಯ ಮಾತ್ರ ಸ್ಪಷ್ಟ : ಅದೆಂದರೆ, ಈ ಕವಿಯ ವಸ್ತು ಪಡೆದುಕೊಂಡಿರುವ ಈ ರೂಪಾಂತರವನ್ನು ಬೆಳವಣಿಗೆ ಎಂದು ಬಗೆಯಬೇಕೋ ಅಥವಾ ಈ ರೂಪಾಂತರ ಬಂಡಾಯದ ಈ ಕವಿಯ ರಾಜೀ ಮನೋಭಾವದ ಸಂಕೇತ ಎಂದು ಬಗೆಯಬೇಕೋ ಅದು ಬೇರೆ ವಿಷಯ. ಆದರೆ, ಇವರ ಮೊದಲೆರಡು ಸಂಕಲನಗಳ ಅನೇಕ ಪದ್ಯಗಳು ಕೇವಲ ಸ್ಲೋಗನ್ ಪದ್ಯಗಳು ಎಂದು ಹಿಂಜರಿಯಬಹುದಾಗಿದ್ದ ಸಂದರ್ಭದಲ್ಲೂ ಅವುಗಳ ಹಾಡಿನ ಗೇಯಗುಣ ಅಥವಾ ಛಂದೋಬದ್ಧವಾದ ಲಯಗಾರಿಕೆಯಿಂದ ಮೂರಡುವ ಭಾವತೀವ್ರತೆ ಪ್ರಸ್ತುತ ಸಂಕಲನದಲ್ಲಿ ಹಠಾತ್ತನೆ ಸ್ತಬ್ಧವಾದಂತಾಗಿ, ಓದುಗನನ್ನು ಸೆಳೆದುಕೊಂಡು, ಒಂದು ವಿಶಿಷ್ಟ ಬಗೆಯ ಅಭಿವಚನವೆನಿಸುವ ವಸ್ತುವನ್ನು ಸಂವಹನಗೊಳಿಸುವ ಯಶಸ್ವಿ ತಂತ್ರದಿಂದ ವಂಚಿತವಾಗುವ ಇವರ ಮೂರನೆಯ ಸಂಕಲನದ ಸೋಲನ್ನು ಮರೆಮಾಚುವಂತಿಲ್ಲ. ಜೊತೆಗೆ ಇವರ ಮೂರನೆಯ ಸಂಕಲನದ ಒಟ್ಟು ಇಪ್ಪತ್ತೆರಡು ಕವಿತೆಗಳಲ್ಲಿ "ಕೆಂಪು ಸೂರ್ಯ", "ಕೆಂಪು ಕಡಲು", "ಕೆಂಪು ಕಮಲ" ಮತ್ತು "ಕುಡುಗೋಲು ಸುತ್ತಿಗೆ" ಮುಂತಾದ ಕಮ್ಯುನಿಸಂ ಸಂಕೇತಗಳು ಕೊನೆಯಪಕ್ಷ ಹತ್ತು ಬಾರಿಯಾದರೂ ಮತ್ತೆ ಮತ್ತೆ ಬಳಕೆಯಾಗಿರುವುದನ್ನು ನೋಡಿದಾಗ, ಬಹುಶಃ ಕಮ್ಯುನಿಸಂನ ಸೈದ್ಧಾಂತಿಕಬದ್ಧತೆ ಇಲ್ಲಿ ಗೋಚರವಾಗುವುದು ಮಾತ್ರವಲ್ಲದೆ ಈ ಬದ್ಧತೆಯಿಂದಾಗಿ ಕವಿಯ ಮುಂದಿನ ವಸ್ತುವಿಗೆ ಒಂದು ಗಂಭೀರ ಮಿತಿ ಸೃಷ್ಟಿಯಾಗುತ್ತಿರಬೇಕೆಂಬ ಅನುಮಾನ ಮೂಡುವುದು ಸಹಜವಾಗಿಯೇ ಇದೆ. ಹಾಗೆಯೇ "ಸುಟ್ಟಾಪು ಬೆಳ್ಳಿ ಕಿರಣ" ಮತ್ತು "ನಿನ್ನ ಕಣ್ಣಿನ ಹಾಡು" ಎಂಬ ಕವಿತೆಗಳಲ್ಲಿ ಒಂದು ತುದಿಯ ಜಾತಿ, ಇನ್ನೊಂದು ತುದಿಯ ವರ್ಗಗಳ ನಡುವೆ ಈ ಕವಿಯ ವಸ್ತುವಿನ ಆಯ್ಕೆಯ ಕ್ರಿಯೆ ದೋಲಾಯಮಾನ ಸ್ಥಿತಿಯಲ್ಲಿ ಒದ್ದಾಡುತ್ತಿರುವುದನ್ನು ಮನಗಂಡ ಬಳಿಕ. ಈ ಕವಿಯ ಮುಂದಿನ ಬೆಳವಣಿಗೆ ಕುತೂಹಲಕಾರಿಯಾದುದು ಎನಿಸುವ ಬದಲು ತುಂಬಾ ಗಂಭೀರವಾದುದು ಎನಿಸುತ್ತದೆ.

ಇಷ್ಟೆಲ್ಲಾ ಆದ ಮೇಲೆ ಕೂಡ, ಇವರ ಕವಿತೆಗಳಲ್ಲಿ ನಮಗೆ ಕಂಡುಬರುವ ಎರಡು ಮುಖ್ಯ ಸಂಗತಿಗಳು ಎಂದರೆ, ಈ ಕವಿ ಆಯ್ಕೆ ಮಾಡಿಕೊಳ್ಳುವ ಯಾವುದೇ ವಸ್ತುವಿನ ಯಶಸ್ವಿ ಚಿತ್ರಣದಲ್ಲಿನ ತದೇಕ ಚಿತ್ತವೃತ್ತಿಯನ್ನು, ಕವಿತೆಯ ಚೌಕಟ್ಟಿನ ಮಿತಿಯೊಳಗೇ ಕಾವ್ಯದ ಅರ್ಥ ಹಾಗೂ ಉದ್ದೇಶಗಳು ನಿರರ್ಗಳವಾಗಿ ಹರಿದಾಡುವುದನ್ನು

"ಕತ್ತಿ ಮತ್ತು ಧರ್ಮ". "ಕಂಡೆ ನಿನ್ನವಳ ಒಂದು ದಿವಸ", "ಸಾವಿರಾರು ನದಿಗಳು", "ಕಪ್ಪು ಕಾಡಿನ ಹಾಡು" ಮುಂತಾದ ಕವಿತೆಗಳಲ್ಲಿ ಕಾಣಬಹುದಾಗಿದೆ. ಹಾಗೆಯೇ ತಮ್ಮ ಭಾವಾಭಿವ್ಯಕ್ತಿಗೆ ಸ್ಫುಟವಾದ ಬಿಂಬಚಿತ್ರಣಕ್ಕೆ ಜಾನಪದ ಶೈಲಿಯನ್ನು, ಅದರಲ್ಲೂ ವಿಶೇಷವಾಗಿ ತ್ರಿಪದಿಯನ್ನು, ಸಾದ್ಯಂತವಾಗಿ ಬಳಸಿಕೊಂಡಿರುವುದನ್ನು "ಬಿದ್ದಾವು ಮನೆಗಳು". "ಕತ್ತಿ ಮತ್ತು ಧರ್ಮ" ಇನ್ನು ಮುಂತಾದ ಹಲವಾರು ಕವಿತೆಗಳಲ್ಲಿ ಕಾಣಬಹುದಾಗಿದೆ.

ಕೊನೆಯದಾಗಿ, ಇದುವರೆಗಿನ ಕನ್ನಡ ಸಾಹಿತ್ಯ ಚರಿತ್ರೆಯ ಸದ್ಯದ ಪರಿಸ್ಥಿತಿಯಲ್ಲಿ ಈವರೆಗಿನ ನವೋದಯ, ಪ್ರಗತಿಶೀಲ ಹಾಗೂ ನವ್ಯ ಸಂಪ್ರದಾಯಗಳ ನಂತರ ಕಾಣಿಸಿಕೊಂಡಿರುವ ಬಂಡಾಯ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಬಳಿಕ ಮನಸ್ಸಿನ ಮೇಲೆ ನಿಲ್ಲುವ ಒಂದೆರಡು ಸಾಮಾನ್ಯ ಸಂಗತಿಗಳೆಂದರೆ :

(1) ನವ್ಯ ಸಂಪ್ರದಾಯದ ಸಾಹಿತ್ಯ ಪ್ರಕಾರಗಳನ್ನು ಭಾಷಾವೈಜ್ಞಾನಿಕ ದೃಷ್ಟಿಯಲ್ಲಿ ಅಧ್ಯಯನಮಾಡಿದ ನಂತರ, ಬಹುಶಃ ನವ್ಯದ ಸೋಲಿನಿಂದಲೇ ಸೃಷ್ಟಿಯಾಯಿತು ಎಂಬಂತೆಯೂ ಬಂಡಾಯ ಸಾಹಿತ್ಯಕ್ಕೆ ನಿಸರ್ಗದತ್ತವಾಗಿಯೂ ಪ್ರಾಪ್ತವಾದಂತಿರುವ ಒಂದು ಅಪೂರ್ವ ವೈಶಿಷ್ಟ್ಯವೆಂದರೆ, ತನ್ನ ಭಾಷೆಯಲ್ಲಿನ ಜಾನಪದೀಯ ಮಾಧ್ಯಮ. ಏಕೆಂದರೆ, ನವ್ಯದ ಸೋಲಿನ ಬಗೆಗೆ ಸೂಚಿಸಬಹುದಾದ ಹಲವಾರು ಕಾರಣಗಳಲ್ಲಿ ಅವರ ಅಭಿವ್ಯಕ್ತಿ ಮಾಧ್ಯಮದ ಜಟಿಲತೆಯೂ ಒಂದೆಂಬುದನ್ನು ಮರೆಯುವಂತಿಲ್ಲ.

(2) ಬಂಡಾಯ ಸಾಹಿತ್ಯದ ಸಮಗ್ರ ಸ್ವರೂಪದ ಬಗೆಗೆ, ಯುಗಧರ್ಮ ಹಾಗೂ ಸಾಮಾಜಿಕ ಸಂದರ್ಭದಲ್ಲಿ ಅವರ ಸೋಲುಗೆಲುವುಗಳ ಬಗೆಗೆ, ಅವರ ಸೈದ್ಧಾಂತಿಕ ಧೋರಣೆಯಲ್ಲಿ ಕಾಣಿಸಿಕೊಂಡ ವಿಷಾದ ವಿಪರ್ಯಾಸಗಳ ಬಗೆಗೆ, ಅಥವಾ ಇನ್ನೂ ಸ್ವಲ್ಪ ಮುಂದೆ ಹೋಗಿ ಹೇಳುವುದಾದರೆ, ಕೆಲವು ಕ್ಷುಲ್ಲಕವೆನಿಸುವ ಕಾರಣಗಳಿಂದಾಗಿ ಈ ಸಂಘಟನೆ ಒಂದು ಜನಪರ ಆಂದೋಲನವಾಗಿ ದುರ್ಬಲಗೊಳ್ಳುತ್ತ ನಡೆಯುತ್ತಿದೆ ಎನ್ನಬಹುದಾದರೂ, ಬಹುಶಃ ಕನ್ನಡದಲ್ಲಿ ಮಾತ್ರ ವಿಶಿಷ್ಟವೆನ್ನಬಹುದಾದ ಈ ಸಂಘಟನೆಯಲ್ಲಿ ತೋರಿಬರುವ ತೀವ್ರ ವಿಚಾರದ ತೇಜಸ್ಸಿನ, ಯುವಕರ ಕ್ರಿಯಾಶೀಲ ಪ್ರತಿಭೆಯ ಹಾಗೂ ಉನ್ನತ ಸೃಜನಶೀಲ ಸಾಹಿತ್ಯಕ ಮೌಲ್ಯಗಳ ಬಗೆಗೆ, ಒಂದು ನಿರ್ಣಾಯಕ ಅಭಿಪ್ರಾಯವನ್ನು ರೂಪಿಸಿಕೊಳ್ಳಲು ಬಹುಶಃ ಇದು ತೀರಾ ಅಪಕ್ವವಾದ ಕಾಲ ಎನ್ನದಿರಲಾಗದು.

ಪ್ರಶ್ನೋತ್ತರಗಳು

(ಪ್ರ) ನಿಮ್ಮ ಪ್ರಬಂಧದಲ್ಲಿ ದಲಿತ ವರ್ಗದ ಕೆಲವು ಲೇಖಕರನ್ನು ವಿಮರ್ಶಕರು ಗುರುತಿಸಿಲ್ಲ ಎಂದು ಹೇಳಿದ್ದೀರಿ. ಆದರೆ ವಿಮರ್ಶಕರು ಗುರುತಿಸುವುದರಿಂದಲೇ ಲೇಖಕ ದೊಡ್ಡವನಾಗುವುದಿಲ್ಲ.

(ಉ) ಆದರೆ ನೀವು ಅರ್ಥ ಮಾಡಿಕೊಂಡಿರುವುದು ನನ್ನ ಅಭಿಪ್ರಾಯದ ಅರ್ಥವಲ್ಲ. ಕೇವಲ ವಿಮರ್ಶಕರಿಂದಲೇ ಯಾವ ಲೇಖಕನೂ ದೊಡ್ಡವನಾಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ಆದ್ದರಿಂದ, ಲೇಖನದ ಆರಂಭದಲ್ಲೇ ನಾನು ಸೂಚಿಸಿರುವ ಕೆಲವು ಕವಿಗಳ ಬಗೆಗೆ ಬಹುಶಃ ಇದೇ ಹೊದಲ ಅಭಿಪ್ರಾಯವಿರಬೇಕೆಂಬ ಅನುಮಾನ ಮಾತ್ರ ನನ್ನ ಅಭಿಪ್ರಾಯದ ಅರ್ಥವಾಗಿದೆ.

(ಪ್ರ) 'ಒಡಲಾಳ'ದ ಕಡಲೇಕಾಯಿ ಪ್ರಸಂಗದಲ್ಲಿನ ಪೊಲೀಸರ ದಾಳಿಗೆ ದಲಿತರು ಮೌನವಾಗಿ ನಿಲ್ಲುವುದು ಒಂದು ರೀತಿಯ ಮೌನ ಪ್ರತಿಭಟನೆ ಎನಿಸುವುದಲ್ಲವೆ ?

(ಉ) ನಾನು 'ಪ್ರತಿಭಟನೆ' ಎಂಬ ಮಾತನ್ನು ಪ್ರಬಂಧದ ಆ ಸಂದರ್ಭದಲ್ಲಿ ಬಳಸಿರುವುದಿಲ್ಲ. ಬದಲಾಗಿ, ಪೊಲೀಸರ ದಾಳಿಗೆ ಕಡಲೇಕಾಯಿಯ ಒಂದೇ ಒಂದು ಸಿಪ್ಪೆಯೂ ಸಿಗದಂತೆ ಸುಟ್ಟು ಬೂದಿಯಾಗುವುದು, ಅಥವಾ ನಾಮಾವಶೇಷವಾಗುವುದು ಉಳ್ಳವರ ದರ್ಪ, ಅನ್ಯಾಯ, ಅಧಿಕಾರ, ದಬ್ಬಾಳಿಕೆ ಮುಂತಾದವು ಕಡಲೇಕಾಯಿ ಸಿಪ್ಪೆಗೆ ಸಮವೆನಿಸಿ, ಅಥವಾ ಕಡಲೇಕಾಯಿ ಸಿಪ್ಪೆಯಂತೆ ನಾಮಾವಶೇಷವಾದೀತು ಎಂಬ ಎಚ್ಚರಿಕೆಯ (caution) ಧ್ವನಿಸಾಧ್ಯತೆಯನ್ನು ಈ ಪ್ರಸಂಗದಲ್ಲಿ ಸೂಚಿಸಿದ್ದೇನೆ. ಹಾಗೆಯೇ ನೀವು ಸೂಚಿಸುವ 'ಮೌನ ಪ್ರತಿಭಟನೆ' ನಿಜವೇ ಆದರೂ ಅದು ಅಹಿಂಸೆಯಾಗಬಹುದೇ ಹೊರತು 'ಬಂಡಾಯ'ವೆನಿಸಲು ಸಾಧ್ಯವಿಲ್ಲ.

(ಪ್ರ) 'ಒಡಲಾಳ' ಕಥೆಯನ್ನು ಕುರಿತ ನಿಮ್ಮ ವಿಶ್ಲೇಷಣೆ ಪೂರ್ವಗ್ರಹಪೀಡಿತವಾಗಿರುವಂತೆ ತೋರುತ್ತದೆ.

(ಉ) ನನಗೆ ತಿಳಿದಂತೆ ವಿಮರ್ಶೆಯಂಥ ವಿಷಯದಲ್ಲಿ 'ಪೂರ್ವಗ್ರಹ' ಎಂಬ ಮಾತಿಗೆ ಅವಕಾಶವಿದ್ದಂತಿಲ್ಲ. ಏಕೆಂದರೆ, ಒಂದು ಕೃತಿಯನ್ನು ಕುರಿತು ಒಬ್ಬ ವಿಮರ್ಶಕ ತನ್ನ ದೃಷ್ಟಿ ಹಾಗೂ ಮಿತಿಯಲ್ಲಿ ರೂಪಿಸಿಕೊಂಡ ಅಭಿಪ್ರಾಯಗಳಿಗೆ ಈ ಕೃತಿಯ ಸಂದರ್ಭದಲ್ಲಿ ಅವನು ಕಂಡುಕೊಳ್ಳುವ ಆಧಾರ-ಪುರಾವೆಗಳಿಗೂ,ಅದೇ ಕೃತಿಯನ್ನು ಕುರಿತು ಇನ್ನೊಬ್ಬ ವಿಮರ್ಶಕ ಕಂಡುಕೊಂಡ ಆಧಾರ-ಪುರಾವೆಗಳಿಗೂ ವ್ಯತ್ಯಾಸವಿರಬಹುದು. ಆದರೆ ಈ ವ್ಯತ್ಯಾಸವನ್ನು 'ಭಿನ್ನಾಭಿಪ್ರಾಯ' ಎನ್ನಬಹುದೆ ಹೊರತು 'ಪೂರ್ವಗ್ರಹ' ಎನ್ನಲು ಸಾಧ್ಯವಿದ್ದಂತಿಲ್ಲ. ಒಂದು ವೇಳೆ ಒಬ್ಬ ಲೇಖಕನನ್ನು ದುರುದ್ದೇಶದಿಂದ ಕಡೆಗಣಿಸುವ ಯತ್ನ ಮಾಡಿದಾಗ ಬಹುಶಃ ಅದು ಪೂರ್ವಗ್ರಹವಾಗಬಹುದೇನೋ. ಆದರೆ ಅದು ವಿಮರ್ಶೆಯಂತೂ ಆಗಲಾರದು. ಅಲ್ಲದೆ, 'ಒಡಲಾಳ'ದ ಸಂದರ್ಭದಲ್ಲಿ ಕೆಲವು ವಿಶಿಷ್ಟವಾದ ಧ್ವನಿಸಾಧ್ಯತೆಗಳನ್ನು ತೋರಿಸಿ ಕೊಟ್ಟಿದ್ದೇನೆ, ಅದನ್ನು ನಾವು ಕಡೆಗಣಿಸುವುದು ಸರಿಯೆನಿಸುವಂತಿಲ್ಲ. ಉದಾ : 'ಒಡಲಾಳ'ದಲ್ಲಿನ ಹುಂಜ ಅತ್ಯಂತ ಮುಖ್ಯವಾದ ಒಂದು ಪ್ರಾಣಿ ಪಾತ್ರವೆನಿಸುವುದಲ್ಲದೆ, ಅದರಿಂದ ಹೊರಡುವ ಅತ್ಯಂತ ಗಂಭೀರವಾದ ಅರ್ಥಸಾಧ್ಯತೆಗಳನ್ನು ಮರೆಯುವಂತಿಲ್ಲ. ಏಕೆಂದರೆ, ಸಾಕವ್ವ ಕಳೆದುಕೊಂಡಿರುವುದು ಕೇವಲ ಹತ್ತಿಪ್ಪತ್ತು ರೂಪಾಯಿಯ ಒಂದು ಹುಂಜವನ್ನು ಮಾತ್ರ

ಸಾಮಾನ್ಯ ಅಥವಾ ತವನಿಧೆ ಮಾಡಿಬಿಡುವುದು. ಆದರೆ, ಮುಂಜವನ್ನು ಹುಡುಕುತ್ತ ಕೇರಿಕೇರಿ, ಬೀದಿಬೀದಿ, ಗಲ್ಲಿಗಲ್ಲಿಯನ್ನೂ ಅಲೆದು, ಉಸಿರಿನ ಮೇಲೂ ಎಚ್ಚರವಿಲ್ಲದೆ. ಅವಳು ಮುಂಜವನ್ನು ಹುಡುಕುವುದರ ಅರ್ಥ. ಒಂದು ರೀತಿಯಲ್ಲಿ ತನ್ನ ಇಡೀ ವಂಶದ ಊರ್ಜಿತ ಬದುಕನ್ನೇ ಹುಡುಕುತ್ತಿದ್ದಾಳೆ ಎಂದಾಗುತ್ತದೆ.

(ಪ್ರ) ಸಿದ್ಧಲಿಂಗಯ್ಯನವರ ಆರಂಭದ ಕವಿತೆಗಳ ರಚ್ಚುರಚನಗಳಲ್ಲಿ ಅನಂತರದ ಕವಿತೆಗಳಲ್ಲಿ 'ಪ್ರೀತಿ' 'ಪ್ರೇಮ' 'ಒಲವು'ಗಳಾಗಿವೆ ಎಂದಿದ್ದೀರಿ. ಅಂದರೆ 'ಪ್ರೀತಿ' 'ಪ್ರೇಮ' 'ಒಲವು'ಗಳು ಕಾವ್ಯದಲ್ಲಿ ಬರಬಾರದು ಎಂತಲೆ ?

(ಉ) ಹಾಗೇನಿಲ್ಲ. ಹಾಗೆ ಬಂದಂಥ 'ಪ್ರೀತಿ' ಮುಂತಾದವು ಅವರ ಹಿಂದಿನ ಕವಿತೆಗಳಂತೆ ತೀವ್ರ ಭಾವನೆಗಳಿಂದ ತುಂಬಿದ ಕವಿತೆ ಎಂದೆನಿಸುವುದಿಲ್ಲ, ಅಷ್ಟೆ.

(ಪ್ರ) ಸಿದ್ಧಲಿಂಗಯ್ಯನವರ ಕಾವ್ಯದಲ್ಲಿನ "ಕೆಂಪು ಸೂರ್ಯ", "ಕೆಂಪು ಕಮಲ" ಮುಂತಾದ ಕಮ್ಯೂನಿಸಂ ಸಂಕೇತಗಳಿಂದ, ಅವರ ಕಾವ್ಯದ ಅರ್ಥವ್ಯಾಪ್ತಿ ಸೀಮಿತಗೊಳ್ಳುತ್ತದೆ ಎಂಬರ್ಥ ಬರುವಂತೆ ನಿಮ್ಮ ಪ್ರಬಂಧದಲ್ಲಿ ಹೇಳಿದ್ದೀರಿ. ಇದರರ್ಥವೇನು ?

(ಉ) ಅರ್ಥವ್ಯಾಪ್ತಿ ಸೀಮಿತಗೊಳ್ಳುತ್ತದೆ ಎಂದಲ್ಲ ನಾನು ಹೇಳಿರುವುದು. ಅವರ ಕವಿತೆಗಳಲ್ಲಿ ಸಂಕೇತ ಪದಗಳು ಅನೇಕ ಬಾರಿ ಬಳಕೆಯಾಗಿದ್ದು, ಆ ಪದಗಳ ಈ ರೀತಿಯ ಪುನರುಕ್ತಿಯಿಂದಾಗಿ ಅವರ ಕಾವ್ಯದ ವಸ್ತುವಿನ ಆಯ್ಕೆಯಲ್ಲಿ, ಒಂದು ಗಂಭೀರವಾದ ಮಿತಿ ಉದ್ಯುಕ್ತವಾಗತೊಡಗಿರುವಂತೆ ಕಾಣುತ್ತದೆ ಎಂದಿದ್ದೇನೆ. ಅಷ್ಟೆ.

(ಪ್ರ) ದೇವನೂರರ ಕಥೆಗಳ ಬಗ್ಗೆ ಹೀಗೋ ಹೇಳಿದ್ದೀರಿ : ನೀವು ಬೆಳೆಯೋ ವಿಮರ್ಶಕರು, ಪರವಾಗಿಲ್ಲ. ಆದರೆ, ದಲಿತ ವರ್ಗದಿಂದ ಆ ಲೇಖಕರು ಬಂದದ್ದೇ ಒಂದು ಅಭಿಮಾನದ ವಿಚಾರವಾಗಿದೆ.

(ಉ) ನಿಮ್ಮಂಥ ಅಭಿಮಾನಿಗಳ ಈ ಬಗೆಯ ಅಭಿಮಾನದಿಂದಾಗಿಯೇ "ನನ್ನ ಕಥೆಗಳಿಂದ ಇಡೀ ಕನ್ನಡ ಸಾಹಿತ್ಯವೆಲ್ಲಾ ಅಲ್ಲಾಡತೊಡಗಿದೆ" ಎಂಬ ದುರಭಿಮಾನ ಅವರನ್ನು ಕಾಡತೊಡಗಿರುವುದು. ಒಟ್ಟಿನಲ್ಲಿ ನಿಮ್ಮ ಅಭಿಮಾನಕ್ಕೂ, ಅವರ ಕಥೆಗಳನ್ನು ಅನಂತಮೂರ್ತಿಯವರು ಉಪನಿಷತ್ತುಗಳಿಗೆ ಹೋಲಿಸುವುದಕ್ಕೂ ಏನೂ ವ್ಯತ್ಯಾಸವಿಲ್ಲ.

ಅಮೇಲೆ, ನಾನು ಬೆಳೆಯೋ ವಿಮರ್ಶಕ ಅಂತ ಸ್ವಲ್ಪ ರಿಯಾಯಿತಿಯನ್ನೂ ಉಪದೇಶವನ್ನೂ ಮಾಡಿದ್ದೀರಿ ತಾವು. ಅದಕ್ಕಾಗಿ ನನ್ನ ವಂದನೆಗಳು. ಆದರೆ ನನಗೂ ನಿಮಗೂ ವಯಸ್ಸಿನಲ್ಲಿ ಬಹಳ ಅಂತರವಿಲ್ಲವೆಂಬುದನ್ನು ತಾವು ನೆನಪಿಟ್ಟುಕೊಳ್ಳಬೇಕು. ಇಷ್ಟೆಲ್ಲಾ ಆದಮೇಲೆ ಕೂಡ, ನನ್ನ ಪ್ರಬಂಧ ನಿಮಗೆ ಅರ್ಥವೇ ಆಗಿಲ್ಲ ಅನ್ನೋದು ಸ್ಪಷ್ಟವಾಗಿದೆ.

(ಪ್ರ) ಬಂಡಾಯದ ಇನ್ನಷ್ಟು ಲೇಖಕರನ್ನು ನೀವು ವಿಶ್ಲೇಷಿಸಬೇಕಾಗಿತ್ತು ಎನಿಸುತ್ತದೆ.

(ಉ) ಈ ಪ್ರಬಂಧದ ಮಿತಿಯಲ್ಲಿ ಅದು ಸಾಧ್ಯವಾಗಲಿಲ್ಲ ಎಂಬುದನ್ನು ಆರಂಭದಲ್ಲೇ ಹೇಳಿದ್ದೇನೆ. ಅಂದಮಾತ್ರಕ್ಕೆ ಬಂಡಾಯದ ಅನ್ಯ ಲೇಖಕರನ್ನು ಕಡೆಗಣಿಸಿದ್ದೇನೆ ಎಂತಲೋ, ಅಥವಾ ಅಗೌರವದಿಂದ ಕಂಡಿದ್ದೇನೆ ಎಂತಲೋ ಭಾವಿಸುವುದಕ್ಕೆ ಕಾರಣವಿಲ್ಲ.

ಪ್ರಧಾನ್ ಗುರುದತ್ತ

ಟಾಲ್‌ಸ್ಟಾಯ್ ಮಾರ್ಗ*

ಹಳ್ಳಿಯಲಿ ಇರುವುದೊಂದು ಟಾಲ್‌ಸ್ಟಾಯ್ ಹೆಸರಿನ
ಉದ್ದನೆಯ ಬಹು ಸುವಿಶಾಲ ಮಾರ್ಗ ತಾನೊಂದು:
ದಾರಿಯಲಿ ತಾನಾಗಿ ಸಿಕ್ಕ ಯಾವನೂ
ವಿವರಿಸದೆ ಹೋದ ಬಳಿಯಲ್ಲಿ ಇದ್ದ ಆ ಹೆಸರನು.

"ಟಾಲ್‌ಸ್ಟಾಯ್ ?"—"ಇರಬೇಕು ಅದು ಬಹುಶಃ
ಯಾವನೋ ಆಂಗ್ಲೇಯನೊಬ್ಬನ ಹೆಸರು !"
"ಟಾಲ್‌ಸ್ಟಾಯ್ ?"—"ಇರಬೇಕು ಇರಬೇಕು ಅದು
ಯಾವನೋ ಪಟಿಯುದವನೊಬ್ಬನ ಹೆಸರು !"
ನಡೆಯುವೆನು ದುಃಖಭಾರದಲಿ ಹೆಜ್ಜೆಯನಿಡುತ
ತಪ್ಪೆಲ್ಲ ನನ್ನದೆ ಏನೊ ಎಂಬ ಭಾವನೆ ಬೆಳೆಯುತಿರೆ

ಹಳ್ಳಿಯಲಿರುವ ಕೆಲವು ಚಿಕ್ಕ ಮಕ್ಕಳು ತಾವು
ನೆರವಕೊಡುವರು ನನಗೆ ಕೊನೆಕೊನೆಗೆ.
ಕೇಳಿಬಲ್ಲರು ಅವರು ಟಾಲ್‌ಸ್ಟಾಯನ ಹೆಸರ.
ಆನಂದವಹುದೆನಗವರ ಈ ಮಾತ ಕೇಳಿ :
"ಓ ಅವರೆ! ಗಾಂಧಿತಾತನ ಗೆಳೆಯರಲ್ಲವೆ ಅವರು !"
ಚಿಂತಿಲ್ಲ. ನೆಚ್ಚನೀವುದು ಮಾತು ! ತಾನದು ಇರಲಿ ಅಂತೆ !
ವರುಷಗಳು ತಾವುರುಳಿ ಬರುದೊಮ್ಮೆ ಆ ದಿನವು—
ಎಲ್ಲರಿಗೂ ಅಂದು ಟಾಲ್‌ಸ್ಟಾಯನ ಪರಿಚಯವಿಹುದು
ಅನಕ್ಷರತೆ ತಾನಿರದೆ ಈ ನೆಲದಿಂದೆ ಕೊಚ್ಚಿಹೋದಂದು!

---

* ಸೆರ್ಗೆಯಿ ಬರೂಜ್‌ದಿನ್ ಅವರ 'ಭಾರತವನ್ನು ಕುರಿತ ಕವನಗಳು' ಸಂಕಲನದಿಂದ. ವಾಲ್ಟರ್ ಹೇ ಅವರ ಅನುವಾದವನ್ನು ಅನುಸರಿಸಿ.

ಡಾ. ಡಿ. ಕೆ. ರಾಜೇಂದ್ರ

ಸಂಬಂಧಗಳು

ಇಂದು ಸಂಬಂಧಗಳ ಬಗೆಗೆ ಆಲೋಚಿಸುವವರೇ ಕಡಿಮೆ. ಇತ್ತೀಚಿನ ದಿನಗಳಲ್ಲಂತೂ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಾಗಿದೆ. ಏಕೆಂದರೆ ಸಂಬಂಧಗಳು ಒಂದು ಬಗೆಯವೇ ಎರಡು ಬಗೆಯವೇ ? ಅವುಗಳ ಬಗೆಗೆ ಆಲೋಚಿಸಹೊರಟಷ್ಟು ಸಮಸ್ಯೆಗಳೇ ಹೆಚ್ಚು. ಒಂದು ರೀತಿಯಲ್ಲಿ ಮೈನಡುಕ ಹುಟ್ಟುತ್ತದೆ. ಸಂಬಂಧಗಳು ಅನಿವಾರ್ಯವೆಂಬಂತೆ ಅನಿವಾರ್ಯ ಸ್ಥಿತಿಯಲ್ಲಿಯೇ ಜನ್ಮತಳೆಯುತ್ತವೆ ನಿಜ. ಅದರಲ್ಲಿ ನಮ್ಮ ಪಾಲೂ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಇಷ್ಟವಿರಲಿ ಇಲ್ಲದಿರಲಿ ಕೆಲವು ಸಂಬಂಧಗಳು ಬೆಳೆದುಬಿಡುತ್ತವೆ. ಬಿಸಿ ತುಪ್ಪದಂತೆ ನುಂಗಲೂ ಆಗದೆ ಉಗಿಯಲೂ ಆಗದ ರೀತಿಯಲ್ಲಿ ಅವನ್ನು ಉಳಿಸಿಕೊಂಡು ಬರಬೇಕಾಗುತ್ತದೆ. ಇಂದು ಅನೇಕ ಸುಬಂಧಗಳು ಉಳಿದು ಬಂದಿರುವುದು ಇಂಥದೇ ಸ್ಥಿತಿಯಲ್ಲಿ. ಹಲವು ಸಂಬಂಧಗಳು–'ಸಂಸಾರ ಗುಟ್ಟು ವ್ಯಾಧಿ ರಟ್ಟು' ಎಂಬ ಕಾರಣಕ್ಕಾಗಿ ಹೇಗೋ ಉಳಿದು ಬಂದಿರುತ್ತವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಇದು ಎಲ್ಲೆ ಮೀರಿ ಬೆಳೆದು ಸ್ಫೋಟಿಸಿದಾಗ ಗುಟ್ಟು ರಟ್ಟಾಗುವುದೂ ಉಂಟು. ಆಗ ವಾಸ್ತವಿಕತೆ ಹೊರಬಿದ್ದು ಯಾವುದಾದರೂ ಒಂದು ದಾರಿಯನ್ನು ಹಿಡಿಯುವತ್ತ ಸಾಗುತ್ತದೆ ಸಂಬಂಧ. ಕೆಲವೊಮ್ಮೆ ಅದು ಕೂಡಿಕೊಳ್ಳಲೂಬಹುದು. ಆದರೆ, ಬೆಸುಗೆ ಹಾಕಿದ ಕೊಂಡಿ ಎಂಬ ಭಾವನೆ ಕೆಲವರ ಮನಸ್ಸಿನಲ್ಲಿ ಕೊನೆತನಕ ಉಳಿದು ಬರುವ ಸಾಧ್ಯತೆಯೂ ಇರುತ್ತದೆ. ಇನ್ನೂ ಕೆಲವು ಕಡೆ ಅದು ಬೆಸುಗೆ ಎಂಬುದೇ ಮರೆತು ಹೋಗುವಷ್ಟು ಹೊಂದಾಣಿಕೆ ಸಾಧ್ಯವಾಗಬಹುದು. ಆದರೆ ಕೆಲವೆಡೆ ನೆಲಕ್ಕೆ ಚೆಲ್ಲಿದ ಹಾಲಾಗಿ ಕೈಗೂಡದೆಯೇ ಹೋಗಬಹುದು.

ಸಂಬಂಧಗಳ ವಿಚಾರ ಬಂದಾಗ ನಡುಕ ಹುಟ್ಟಿಸುವ ಘಟನೆಗಳು ಸಂಭವಿಸುವುದು, ಅಳಿಯದೇವರ ವಿಚಾರದಲ್ಲಿ. ಹೆಣ್ಣುಮಕ್ಕಳಿಗ ಜನ್ಮವಿತ್ತವರನ್ನು ನವಗ್ರಹಗಳು ಕಾಡದೆ ಹೋಗಬಹುದು. ಆದರೆ ಹತ್ತನೆಯ ಗ್ರಹವಾಗಿ ಈ ಅಳಿಯದೇವ ಕಾಡುತ್ತಾನೆ ಎಂಬ ಭಯ ಎಲ್ಲರಲ್ಲೂ ಇದ್ದೇ ಇದೆ. ಒಳ್ಳೆಯ ಹೆಂಡತಿ ಸಿಕ್ಕುವುದು, ಒಳ್ಳೆಯ ಅಳಿಯ ಸಿಕ್ಕುವುದು ಎರಡೂ ಒಂದೇ ಅನ್ನಿಸುತ್ತದೆ. ಇವೆರಡೂ ಬೆನ್ನಿಗಂಟಿದ ಚರ್ಮವಿದ್ದಂತೆ:

ತೊಂದರೆ ಕೊಡಲು ಆರಂಭಿಸಿದರೆ ಕೊನೆತನಕ ಅನುಭವಿಸಲೇ ಬೇಕಾಗುತ್ತದೆ. ಬೇರೆ ದಾರಿಯೇ ಕಾಣುವುದಿಲ್ಲ. ಅದಕ್ಕಾಗಿಯೇ ಸಂಬಂಧಗಳಲ್ಲಿ ಅಳಿಯನಿಗಿರುವ ಸ್ಥಾನಮಾನವೇ ಬೇರೆ. ಅಳಿಯನನ್ನು ಕುರಿತಂತೆ ಪ್ರಾಚೀನರಿಂದ ಅರ್ವಾಚೀನರವರೆಗೆ ಹರಿದು ಬಂದಿರುವ ವಿಚಾರಧಾರೆ ವಿಶಿಷ್ಟವಾದುದು.

'ಅಳಿಯ ಮನೆ ತೊಳೆಯ'–ಎಂಬ ಗಾದೆ ಪ್ರಾಚೀನವಾದುದು. ಪ್ರಚಲಿತವಾದುದೂ ಕೂಡ. ಇಲ್ಲಿ ಒಂದು ಅನುಮಾನ ತಲೆ ಎತ್ತುತ್ತದೆ. 'ತೊಳೆ' ಎಂಬ ಶಬ್ದಕ್ಕೂ 'ಅಳಿಯ' ಎಂಬ ಶಬ್ದಕ್ಕೂ ಏತರ ಸಂಬಂಧ ? "ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ" ಎಂಬಂತೆ. 'ತೊಳೆ' ಎಂಬ ಶಬ್ದಕ್ಕೆ ಇರುವ ಅರ್ಥವಾದರೂ ಏನು ?

ಅರ್ಥಕೋಶದ ಪ್ರಕಾರ 'ತೊಳೆ' ಎಂಬುದಕ್ಕೆ ಎರಡು ರೀತಿಯ ಅರ್ಥವಿದೆ. ಒಂದು ನೀರಿನಿಂದ ಸ್ವಚ್ಛ ಮಾಡು ಎಂದು, ಇನ್ನೊಂದು ಕಿತ್ತಳೆ ಮುಂತಾದ ಹಣ್ಣಿನ ಒಂದು ಖಂಡ ಎಂದು. ಈ ಸಂದರ್ಭದಲ್ಲಿ ಎರಡನೆಯ ಅರ್ಥವಂತೂ ಖಂಡಿತ ಅಲ್ಲ. ಇನ್ನು ಮೊದಲನೆಯ ಅರ್ಥದ ಸ್ವಚ್ಛಮಾಡು, ಇಲ್ಲವೇ ಚೊಕ್ಕಮಾಡು ಎಂಬುವುಗಳಲ್ಲಿಯೂ ಈ ಸಂದರ್ಭಕ್ಕೆ ಹೊಂದುವಂತಹುದು–'ಚೊಕ್ಕ ಮಾಡು' ಎಂಬುದೇ ಹೊರತು 'ಸ್ವಚ್ಛ ಮಾಡು' ಎಂಬುದಲ್ಲ. ಏಕೆಂದರೆ 'ಚೊಕ್ಕ' ಎಂಬುದಕ್ಕೆ ಇರುವ ಶಕ್ತಿ (force) 'ಸ್ವಚ್ಛ' ಎಂಬುದಕ್ಕೆ ಇರುವಂತೆ ಅನ್ನಿಸುವುದಿಲ್ಲ. ಆದ್ದರಿಂದ ಈ ಸಂದರ್ಭಕ್ಕೆ 'ಚೊಕ್ಕಟ' ಎಂಬುದೇ ಸೂಕ್ತ ! ಅಂದರೆ, ಅಳಿಯ ಮಾವನ ಮನೆಯನ್ನು ಹೊಕ್ಕು ಯಾವ ರೀತಿ 'ಚೊಕ್ಕ' ಮಾಡುತ್ತಾನೆ ? ಅವನಿಗೆ ಅದರ ಅಗತ್ಯವಾದರೂ ಏನು ? ಈ ಪ್ರಶ್ನೆಗಳು ಏಳುತ್ತವೆ. ಇಲ್ಲಿ ಇನ್ನೂ ಕೆಲವು ಅನುಮಾನಗಳು ಇರುವಂತೆ ತೋರುತ್ತದೆ.

'ತೊಳೆ' ಎಂಬುದಕ್ಕೆ ಮೇಲೆ ಗಮನಿಸಿದಂತೆ, ಹೇಗೆ 'ಕಿತ್ತಳೆ ಮುಂತಾದ ಹಣ್ಣಿನ ಖಂಡ' ಎಂಬ ಅರ್ಥ ಬರುವುದಿಲ್ಲವೋ ಹಾಗೆಯೇ 'ಚೊಕ್ಕಟಮಾಡು' ಎಂಬುದಕ್ಕೆ ಸುಂದರಗೊಳಿಸು, ಅಲಂಕರಿಸು ಎಂಬ ಅರ್ಥವೂ ನಿಲ್ಲುವುದಿಲ್ಲ. ಹಾಗೆ ಭಾವಿಸುವುದಾದರೆ ಈ ಗಾದೆಗೇ ಅರ್ಥವಿಲ್ಲದಂತಾಗುತ್ತದೆ ! ಅದರ ಧ್ವನಿಶಕ್ತಿಯೇ ಕುಂದಿ ಹೋಗುತ್ತದೆ.

ಅಂದರೆ, 'ತೊಳೆ' ಎಂಬ ಶಬ್ದಕ್ಕೆ ಅರ್ಥಕೋಶದಲ್ಲಿ ಇಲ್ಲದ ಬೇರೊಂದು ಅರ್ಥವನ್ನೇ ಕೊಡಬೇಕು ಎಂದಾಯಿತು! ಅಳಿಯನಾದವನು ನೀರಿನಿಂದ ಮಾವನ ಮನೆಯನ್ನು ಸ್ವಚ್ಛಗೊಳಿಸುವ ಕಾರಣವೂ ಇಲ್ಲ : ಅದರ ಅಗತ್ಯವೂ ಇರುವುದಿಲ್ಲ. ಆದ್ದರಿಂದ 'ತೊಳೆ' ಎಂದರೆ 'ಇಲ್ಲವಾಗಿಸು', 'ನಿರ್ನಾಮ ಮಾಡು' ಎಂಬ ಅರ್ಥ ಬರಬಹುದೆ ? ಏಕೆಂದರೆ 'ನಿನ್ನ ಕೈಗೆ ಯಜಮಾನಿಕೆ ಕೊಟ್ಟರೆ ಮನೆ ತೊಳೆದು ಬಿಡ್ತೀಯ' ಎಂಬ ಮಾತು ಅನೇಕ ಕಡೆಗಳಲ್ಲಿ ಬಳಕೆಯಲ್ಲಿದೆ. ಇದನ್ನು ಬೆಂಬಲವಾಗಿಟ್ಟುಕೊಂಡು ಅರ್ಥೈಸುವುದಾದರೆ,

ತೊಳೆ' ಎಂಬ ಪದಕ್ಕೆ 'ನಿರ್ನಾಮ ಮಾಡು' ಇಲ್ಲವೇ 'ಇಲ್ಲವಾಗಿಸು' ಎಂಬ ಅರ್ಥವೇ ಹೆಚ್ಚು ಸಮಂಜಸ ಅನ್ನಿಸುತ್ತದೆ,

ಈ ಅರ್ಥದಲ್ಲಿ 'ಅಳಿಯ ಮನೆ ತೊಳೆಯ' ಎಂಬ ಗಾದೆಯನ್ನು ಗಮನಿಸುವುದು ಸರಿಯೇ ? ಅಳಿಯನಿಗೆ ಈ ಬಿರುದು ಬಂದುದಾದರೂ ಏಕೆ ? ಹೇಗೆ ? ಅಳಿಯ ನಾದವನು ಕೆಲವು ಕಾರಣಗಳಿಂದ, ಕೆಲವು ಸಂದರ್ಭಗಳಲ್ಲಿ 'ಮನೆವಾಳ್ತನ'ಕ್ಕೆ ಬಂದು ಮನೆ ಅಳಿಯ'ನಾಗುವುದೇನೋ ಸರಿ ! ಆದರೆ ಮನೆ ತೊಳೆಯುವ 'ಮನೆಹಾಳ್ತನ'ಕ್ಕೆ ಇಳಿರುವುದು ಹೇಗೆ ? ಇದು ವಿಚಾರಾರ್ಹ ಸಂಗತಿಯೇ ! ಏಕೆಂದರೆ, ಗಾದೆಯ ಮಾತಿನಲ್ಲಿ ಬಂದಿರುವುದರಿಂದ ಇದನ್ನು ಕಡೆಗಣಿಸುವಂತಿಲ್ಲ. ಅಳಿಯ-ಮಾವನ ಸಂಬಂಧ ಕಡೆಗಣಿಸು ವಂತಹುದೂ ಅಲ್ಲ !

ಗಾದೆ ಎಂದ ಮೇಲೆ, ಅದು ಪ್ರಾಚೀನವಾದುದು ಎಂದು ಪ್ರತ್ಯೇಕಿಸಿ ಹೇಳಬೇಕಾ ಗಿಲ್ಲ ತಾನೆ ? 'ಗಾದೆ ವೇದಕ್ಕೆ ಸಮ', 'ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ' ಎಂಬ ಗಾದೆ ಮಾತುಗಳೂ ನಮ್ಮಲ್ಲಿವೆ. ಅಂದ ಮೇಲೆ ಮೇಲಿನ ಗಾದೆಯ ಸತ್ಯದ ಬಗೆಗೆ, ಸತ್ವದ ಬಗೆಗೆ ಅನುಮಾನಿಸುವಂತೆಯೇ ಇಲ್ಲ. ಗಾದೆಗಳು ಅನುಭವಜನ್ಯವೇ ಹೊರತು, ಪುಸ್ತಕದ ಬದನೆಕಾಯಿಯಿಂದ ಜನಿಸಿದುದಲ್ಲ. 'ಅನುಭವ' ತಲೆ ತಾಕಿಸಿಕೊಂಡು ಬಂದದ್ದು. ತಲೆ ತಾಕಿಸಿಕೊಂಡವನಿಗೆ ಅದರ ಬೆಲೆ ತಿಳಿದೇ ಇರುತ್ತದೆ. ಅದನ್ನು ಅವರು ಮರೆಯುವುದೆಂತು ! ಆದ್ದರಿಂದಲೇ ಅಂತಹವರ ಬಾಯಲ್ಲಿ ಸಾರ್ವಕಾಲಿಕವಾದ ನಿತ್ಯ ಸತ್ಯದ ಈ ಅಮೃತವಾಣಿ ಹೊರಬಿದ್ದಿರಬೇಕು ! "ಹಿಂದೆ ಶತ್ರುವಾಗಿ ನಿಮ್ಮಿಂದ ಮರಳಿದ್ದವನೇ ಈ ಜನ್ಮದಲ್ಲಿ ಸೇಡು ತೀರಿಸಿಕೊಳ್ಳುವುದಕ್ಕಾಗಿ ನಿಮ್ಮ ಅಳಿಯನಾಗಿಯೋ, ಮಾವನಾಗಿಯೋ ಹುಟ್ಟುವನು" ಎಂದು ಕನ್ನಡದ ಲೇಖಕರೊಬ್ಬರು ಒಂದು ಕಡೆ ಹೇಳುತ್ತಾರೆ. ಅಂದರೆ ಅರ್ವಾಚೀನರ ಅಭಿಪ್ರಾಯವೂ ಅದೇ ಆಗಿದೆ !

ಕಣ್ಣಿಗಿಂತ ಹೆಚ್ಚಾಗಿ ಕಾಪಾಡಿಕೊಂಡು, ಪ್ರೀತಿಯ ಕಟ್ಟೆಯನ್ನು ಕಟ್ಟಿ, ವಾತ್ಸಲ್ಯದ ನೀರೆರೆದು, ಅಭಿಮಾನದ ಗೊಬ್ಬರವನ್ನು ಸುರಿದು ಬೆಳಸಿ ದೊಡ್ಡವಳನ್ನಾಗಿ ಮಾಡಿದ ಮಗಳನ್ನು ಧಾರೆ ಎರೆದುಕೊಟ್ಟ ಅಳಿಯನ ಮೇಲೆ ಇಂತಹ ಆಪಾದನೆ ಹೊರಿಸುವುದು ಅಪರಾಧವೇ ಅನ್ನಿಸುತ್ತದೆ ! ತಮ್ಮ ಮನೆಯ ಅಂಗಳದಲ್ಲಿ ಬೆಳೆಸಿದ ಆ ಹೂವನ್ನು, ಮತ್ತೊಬ್ಬರ ಮನೆಗೆ ಕಿತ್ತುಕೊಡುವಾಗ ತನ್ನ ಹೊಟ್ಟೆಯ ಕರುಳೇ ಕಿತ್ತು ಬಂದಂತಾ ದರೂ, ಸಂಕಟವನ್ನು ತಾಳಲಾರದೆ, ಸಿಟ್ಟುತ್ತಿ ಶಿವನ ಬಯ್ಯುವಂತಾದರೂ ಅದೆಲ್ಲವನ್ನು ಸಹಿಸಿಕೊಂಡು ಹೊಸದಾಗಿ ಬೆಳೆಸಿದ ಸಂಬಂಧ ಹಸನಾಗಿ, ಹುಲುಸಾಗಿ ಹಬ್ಬಲೆಂದು ಹರಸುತ್ತಾರೆ, ಆದರೂ ಈ ಅಪಸ್ವರದ ನುಡಿ ಏಕೆ ?

ಹೆಣ್ಣು ಮಕ್ಕಳೆಂದರೆ ಪ್ರಾಣ ಬಿಡುವ ತಂದೆತಾಯಿಗಳು ಒಮ್ಮೊಮ್ಮೆ ಇಂತಹ ಅಳಿಯಂದಿರ ಕಾಟದಿಂದಾಗಿಯೋ ಏನೋ—

ಹೆಣ್ಣು ಹುಟ್ಟಿದ ಮನಿ ಹೆಗ್ಗಣತ್ತಿದ್ದಾಂಗ
ಗಂಡಸಾ ಮಗ ಗಜಭೀಮ । ಹುಟ್ಟಿದರೆ
ಚಿಲಕಿ ಚಿತ್ತರ ನಗತಾವ ॥

ಎಂದು ಕೊರಗಿ, ಗಂಡು ಮಕ್ಕಳಿಗಾಗಿ ಆಶಿಸಿ, ಹಂಬಲಿಸಿರುವುದೂ ಉಂಟು. ಹೀಗೆಂದ ಮನಸ್ಸೇ ಮರುಕ್ಷಣವೇ ಅಂತಹ ಹೆಣ್ಣುಮಗಳನ್ನು ತೌರಿನಿಂದ ಕಳುಹಿಸಿಕೊಡುವಾಗ, ಮನೆಮಂದಿಯೆಲ್ಲ ದುಃಖವನ್ನು ಸಹಿಸಲಾರದೆ ಕಣ್ಣೀರಿಡುವುದೂ ಉಂಟು—

ಮಗಳೆ ನಿನ್ನ ಕಳುವಿ ಮಾಳೀಗೆ ಏರೇನ
ಮಾವಿನ ಗೊಲ್ಲಿ ಮರೆಯಾಗಿ ಕಂದವ್ವ
ಮಾಣೇಕ ನಮಗ ಎರವಾಗಿ ॥

ತಂಗೀಯ ಕಳುವ್ಯಾಗ ತೆವರೇರಿ ನಿಂತಾನ
ಅಂಗೀಲಿ ನೀರು ಒರಸ್ಯಾನ ನನ್ನಣ್ಣ
ಇಂದೀಗಿ ತಂಗಿ ಎರವೆಂದ ॥

ಹೆಣ್ಣು ಮಕ್ಕಳ ಕಳುವಿ ಕಣ್ಣಿಗೆ ನೀರು ತಂದು
ಸಣ್ಣ ಸಲ್ಲಿವಲಿ ಮುಸುಕು ಹಾಕಿ ಹಡೆದವ್ವ
ಹೆಣ್ಣು ಸಾಕೆಂದು ಜಲುಮಾಕೆ ॥

ತಂದೆ, ತಾಯಿ, ಅಣ್ಣ, ತಮ್ಮ, ತಂಗಿ—ಹೀಗೆ ಮನೆಮಂದಿಯೆಲ್ಲಾ ಅವಳನ್ನು ಗಂಡನ ಮನೆಗೆ ಕಳುಹಿಸಿದ ದುಃಖದಲ್ಲಿ ಬೆಂದು ನೊಂದರೂ—ತಮ್ಮ ಮನೆಗೆ ಅಳಿಯನೆನಿಸಿದ, ತಮ್ಮ ಕರುಳಿನ ಕುಡಿಯ ಗಂಡನನ್ನು 'ಮನೆ ತೊಳೆಯ' ಎಂದು ನೊಂದು ನುಡಿಯಲು ಇರಬಹುದಾದ ಕಾರಣಗಳಾದರೂ ಏನು ?

ಅಳಿಯ ಕೊಟ್ಟ ಕಷ್ಟವನ್ನೆಲ್ಲಾ ನುಂಗಿಕೊಂಡು, ಅವನೆಲ್ಲಾ ಬಯಕೆಗಳನ್ನು ಈಡೇರಿಸುವುದರಲ್ಲಿಯೇ ತಮ್ಮ ಜೀವವನ್ನು ತೇಯ್ದು ಮಗಳ ಸುಖವನ್ನು ಬಯ ಸುವ ಹೆತ್ತವರ ಕೈ ಸಾಗದೆ ಹೋದಾಗ ಅವರ ಬಾಯಿತಪ್ಪಿ ಬಂದ ಮಾತು ಇದಾಗಿರ ಬಹುದೇ ?

ಸಂಬಂಧಗಳು ಕೆಟ್ಟಾಗ ಇಂತಹ ಆಣಿಮುತ್ತುಗಳು ಹೊರಬೀಳುತ್ತವೆ ಅನ್ನಿಸು ತ್ತದೆ ! ಕೊಡುವವರನ್ನು ಕಂಡಾಗ ಬಿಡದೆ ವ್ಯಾಪಾರ ಎಂಬ ಉದಾರ ನೀತಿಯೂ ಇದಕ್ಕೆ ಕಾರಣವಾಗಬಹುದು. 'ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟಂಗೆ' ಎಂದು ಭಾವಿಸುವ ಅಳಿಯ ಮಹಾಶಯ, ಕೇಳಿದ ಬೇರೆ ಯಾವುದನ್ನು ತಾನೆ 'ಇಲ್ಲ' ಎನ್ನು ತ್ತಾನೆ ? ಎಂದು ತಾನೇ ನಿರ್ಧರಿಸಿ ಮುಂದುವರಿದಾಗಲೂ ಇಂತಹ ಅನಾಹುತಗಳ ಸಂಭವಿಸಲು ಕಾರಣವಾಗಬಹುದು! ನನಗಾಗಿ ನಾನು ಏನನ್ನೂ ಕೇಳುತ್ತಿಲ್ಲ—ಕೇಳುವುದಿಲ್ಲ ಎಲ್ಲ ಅವರ ಮಗಳ ಭವಿಷ್ಯಕ್ಕಾಗಿ, ಮೊಮ್ಮಕ್ಕಳ ಉನ್ನತಿಗಾಗಿ ಎಂಬ ದೂರದೃಷ್ಟಿಯ ನಿಲುವನ್ನು ತಾಳಿ ದಾಪುಗಾಲುಹಾಕಿದಾಗ ಮಾವನೆನಿಸಿದವನಿಗೆ ಮುಗ್ಗರಿಸಿದಂತಾ

ುಪುದು. ಅವರಿಂದ ತಲೆಕಾಕಿ ಅಳಿಯನೆನಿಸಿದವನ ಬಗೆಗೆ ಇಂತಹ ಕಹಿ ಭಾವನೆ ಉಂಟಾಗಲೂ ಸಾಧ್ಯ !

ಮೊದಮೊದಲು, 'ಅಳಿಯ ಬೇರೆಯಲ್ಲ, ಮಗ ಬೇರೆಯಲ್ಲ' ಎಂದು ಭಾವಿಸಿ, ಸಮತಾಭಾವವನ್ನು ಸಂಸಾರದಲ್ಲಿಯೂ ವ್ಯಾಪಕವಾಗಿ ತರಲು ಹೊರಟ ನೂರಾರುಮಂದಿರಿಗೂ ಇದರ ಕಾವು ಬಹುಬೇಗ ತಟ್ಟಿ ಇಂತಹ ನಿಟ್ಟುಸಿರೆಳೆದಿರುವುದೂ ಸಂಭವನೀಯ.

ಸಂಬಂಧಗಳು ಬಹಳ ಸೂಕ್ಷ್ಮವಾದುವುಗಳು. ಅವು ಬೆಸೆದುಕೊಳ್ಳುವುದು, ಬಿಟ್ಟು ಕೊಳ್ಳುವುದು ಕೆಲವು ಅಂಶಗಳನ್ನು ಆಧರಿಸಿ. ಆದರೆ ಅವು ಬಿಟ್ಟುಕೊಳ್ಳುವಷ್ಟು ಸುಲಭವಾಗಿ ಬೆಸೆದುಕೊಳ್ಳುವುದಿಲ್ಲ. ವ್ಯಕ್ತಿ ವ್ಯಕ್ತಿಯ ನಡುವಣ ಸಂಬಂಧದಿಂದ ಹಿಡಿದು, ದೇಶ ದೇಶದ ನಡುವಣ ಸಂಬಂಧದವರೆಗೂ ಈ ಸೂತ್ರದ ವ್ಯಾಪ್ತಿ ಕಂಡು ಬರುತ್ತದೆ. ಗಂಡ – ಹೆಂಡತಿಯಾಗಲಿ, ಅಪ್ಪ–ಮಗನಾಗಲಿ, ಅತ್ತೆ–ಸೊಸೆಯಾಗಲಿ, ಮಾವ–ಅಳಿಯನಾಗಲಿ, ಅಣ್ಣ–ತಮ್ಮನಾಗಲಿ ಅಥವಾ ಯಾರೇ ಆಗಲಿ ಸಂಬಂಧ ಉಳಿಯುವುದು. ಬೆಳೆಯುವುದು ಹಲವು ಅಂಶಗಳನ್ನು ಅಧರಿಸಿ.

'ತುತ್ತು ತೂಕ ಕೆಡಿಸ್ತು' ಎಂಬ ಗಾದೆ ಇದೆ. ನಾವು ಸಂಬಂಧವಲ್ಲ ಇಂತಹವು ಗಳಿಗೆ ಎಡೆ ಕೊಟ್ಟಾಗ ಸಂಬಂಧದ ಕಟ್ಟು ಸಡಿಲಗೊಳ್ಳುತ್ತದೆ. ಅದು ಅತಿಯಾಗಿ ಮಿತಿ ಮೀರಿದಂತೆ, ಕಟ್ಟೊಡೆದು ಗುಟ್ಟು ಹೊರಬೀಳುತ್ತದೆ. ಇಂತಹ ಸಂದರ್ಭಗಳಲ್ಲಿ ಯಾರಂ ಯಾರೋ ನೋವನ್ನನುಭವಿಸುವ ಸಾಧ್ಯತೆಗಳೂ ಉಂಟು. ಯಾರೋ ಮಾಡಿದ ತಪ್ಪಿಗೆ ಮತ್ತಾರೋ ನೋವನ್ನನುಭವಿಸಿ ಸಂಕಟಕ್ಕೊಳಗಾಗುವುದನ್ನು ಕಾಣಬಹುದು. ಇದು ಉದ್ದೇಶಿತವಾಗಿ ಆಗುವಂತಹುದಲ್ಲವಾದರೂ, ಸಂದರ್ಭವಶದಿಂದ ಸಂಭವಿಸುವಂತಹ ದ್ದಾಗಿರುತ್ತದೆ.

ಯಾವುದೇ ಬಗೆಯ ಸಂಬಂಧವಾಗಲಿ ಅದು ಏರ್ಪಡುವಾಗ ಕೆಲವು ತಾತ್ವಿಕ ಅಂಶ ಗಳನ್ನು ಆಧರಿಸಬೇಕಾಗುತ್ತದೆ. ಇಲ್ಲವಾದರೆ, ಅದು ಬಹಳ ಕಾಲ ಉಳಿಯುವುದಿಲ್ಲ, ಬಾಳುವುದಿಲ್ಲ. ಸಮಾನತೆ. ಸ್ನೇಹಭಾವ, ಸೌಹಾರ್ದ, ಮರ್ಯಾದೆ. ಪ್ರೀತಿ, ಪ್ರೇಮ, ವಾತ್ಸಲ್ಯ ಇತ್ಯಾದಿಗಳನ್ನು ಅದು ಅವಲಂಬಿಸಿರುತ್ತದೆ–ಅವಲಂಬಿಸಬೇಕಾಗುತ್ತದೆ. ಇಲ್ಲ ವಾದರೆ ಸಂಬಂಧಗಳು ದುರ್ಗಂಧವಾಗುವ ಸಾಧ್ಯತೆಗಳೇ ಹೆಚ್ಚು. ಇಲ್ಲಿ ಸಮಾನತೆ ಎನ್ನು ವಾಗ ಅದು ಆರ್ಥಿಕ ದೃಷ್ಟಿಯದಲ್ಲ. ಬಡತನ–ಶ್ರೀಮಂತಿಕೆ ಎಂಬುದು ಸಂಬಂಧದ ಅಥವಾ ಸಮಾನತೆಯ ಮಾನದಂಡವಾಗಲಾರವು, ಇಲ್ಲಿ ಆತ್ಮ ಶ್ರೀಮಂತಿಕೆ ಮುಖ್ಯವಾಗಿ ಬೇಕಾಗುತ್ತದೆ. ಆತ್ಮ ಶ್ರೀಮಂತಿಕೆಯ ತಳಹದಿಯ ಮೇಲೆ ಬೆಳೆದ ಸಂಬಂಧಗಳು ಬಹಳ ಕಾಲ ಉಳಿಯುತ್ತವೆ–ಬೆಳೆಯುತ್ತವೆ. ಸ್ನೇಹಭಾವ, ಸೌಹಾರ್ದತೆ ಎಂಬುವು ಅದರಲ್ಲಿ ಹಾಸುಹೊಕ್ಕಾಗಿ ಹರಡಿಕೊಂಡು ಅದನ್ನು ಮತ್ತಷ್ಟು ಬಿಗಿಗೊಳಿಸಲು ಕಾರಣವಾಗುತ್ತವೆ, ಪ್ರೀತಿ, ಪ್ರೇಮ ಮುಂತಾದ ಮುದ್ರೆಯೊತ್ತಿದಂತೆ ಅಂತಹ ಸಂಬಂಧಗಳನ್ನು ಎತ್ತಿ ಹಿಡಿಯುತ್ತವೆ. ಅವುಗಳ ಸಾಚಾತನವನ್ನು ಪ್ರಚುರಪಡಿಸುತ್ತವೆ. ಇಂತಹ ಸಂಬಂಧಗಳು ಶಾಶ್ವತ ಸಂಬಂಧಗಳಾಗಿಯೂ ಬೆಳೆದು ಬೆಳಗುತ್ತವೆ,

ಕೆಲವು ಸಂಬಂಧಗಳು ಕೇವಲ ಲಾಭದೃಷ್ಟಿಯನ್ನು ಹೊಂದಿರುತ್ತವೆ. ಸ್ವಾರ್ಥದ ಮೇಲೆ ನಿಂತಿರುತ್ತವೆ. 'ಗಂಟಿದ್ದರೆ ನಂಟು' ಎಂಬ ಗಾದೆ ಇದನ್ನು ಮನದಟ್ಟಾಗಿಸುತ್ತದೆ. ಅಷ್ಟೇ ಅಲ್ಲ. 'ನಮ್ಮ ಮನೆ ರಾಗಿಕಲ್ಲು ಬೀಸಿದರೆ ಊರೆಲ್ಲ ನಂಟರು' ಎಂಬ ಗಾದೆ ಈ ಸಂಬಂಧದ ವ್ಯಾಪ್ತಿ, ಗತಿ ಏನನ್ನವಲಂಬಿಸಿದೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಹಾಗೆಯೇ 'ನಮ್ಮ ಮನೆ ಒಲೆ ಉರಿಯುತ್ತಿದ್ದರೆ ನೆಂಟರು ಇಷ್ಟರು' ಎಂಬ ಮಾತಿನಲ್ಲಿಯೂ ಈ ಅಂಶವನ್ನು ಕಾಣಬಹುದು. ಜೇಬನ್ನು ನೋಡಿ ಸ್ನೇಹ ಬೆಳೆಸುವಂತಹ ಗೆಳೆಯರಂತೆಯೇ ಸಂಬಂಧಿಗಳೂ ಇರುತ್ತಾರೆ. ರಾಗಿಕಲ್ಲು ಶಬ್ದವಾಗುತ್ತಿದ್ದು, ಒಲೆ ಉರಿಯುತ್ತಿದ್ದರೆ ಮಾತ್ರ ಅವರು ಕಾಣಿಸಿಕೊಳ್ಳುತ್ತಾರೆ. ಇಲ್ಲವಾದರೆ ನನಗೇ ಬೆನ್ನಿಗಂಟಿದ ಬೇತಾಳವಾಗಬಹುದೆಂದು ಭಾವಿಸಿ ದೂರವಾಗುತ್ತಾರೆ.

ಅದೊಂದು ದಿನ ನಾನು ಮನೆಯಲ್ಲಿಯೇ ಇದ್ದೆ. ನನ್ನವಳು ಊರಿಗೆ ಹೋಗಿದ್ದಳು. ಮನೆ ಸೂಜಿಬಿದ್ದರೆ ಕೇಳಿಸುವಷ್ಟು ಶಾಂತವಾಗಿತ್ತು. ಮಧ್ಯಾಹ್ನ ಸ್ನೇಹಿತರೊಬ್ಬರ ಮನೆಯಲ್ಲಿ ಊಟಮಾಡಿ ಬಂದು ದಿಂಬಿಗೆ ತಲೆಕೊಟ್ಟಿದ್ದೆ. ಆದರೆ ಇನ್ನೂ ನಿದ್ರೆ ಹತ್ತಿರಲಿಲ್ಲ. ಪಕ್ಕದ ಮನೆಯ ದಂ-ಪತಿಗಳ ಸಂಭಾಷಣೆ ಕಿವಿಯ ಮೇಲೆ ಬೀಳತೊಡಗಿತು. ಅದರ ಸಾರಾಂಶ ಇಷ್ಟು :

ಯಾವುದೋ ದೂರದ ಸಂಬಂಧಿಗಳು ನಾಲ್ಕಾರುದಿನ ಮಕ್ಕಳುಮರಿ ಸಮೇತ ಬಂದು ಅವರ ಮನೆಯಲ್ಲಿ ತಂಗುವವರಿದ್ದರು. ಅವರ ಸಂಭಾಷಣೆಯಿಂದ ತಿಳಿದದ್ದು : ಅವರನ್ನು ತುಂಬಾ ಚೆನ್ನಾಗಿ ನೋಡಿಕೊಂಡರೆ ಇನ್ನೂ ನಾಲ್ಕು ದಿನ ಇರುವ ಸಂಭವವೂ ಉಂಟೆಂಬುದು. ಅದಕ್ಕಾಗಿ ಅವರನ್ನು ಆ ನಾಲ್ಕಾರು ದಿನಗಳ ಒಳಗೇ ಕಳುಹಿಸುವ ತಂತ್ರವೊಂದನ್ನು ಸಿದ್ಧಪಡಿಸಿದಂತಿತ್ತು. ಅವರುಗಳು ಮನೆಗೆ ಬಂದ ಸಂದರ್ಭದಲ್ಲಿ ಮನೆಯ ತಾಪತ್ರಯಗಳನ್ನು ಪ್ರಧಾನವಾಗಿ ಅವರ ಕಿವಿಗೆ ತಲುಪಿಸುವ ರೀತಿಯಲ್ಲಿ ಒಂದು ಕಿರುನಾಟಕವನ್ನು ಅವರು ಸಜ್ಜುಗೊಳಿಸಿದರು. ಅದರಂತೆ ಮಾರನೆಯ ದಿನ ಆ ಸಂಬಂಧಿಕರು ಅವರ ಮನೆಗೆ ಬಂದರು. ಅವರ ಈ ತಂತ್ರ ಎಷ್ಟರಮಟ್ಟಿಗೆ ಫಲಕಾರಿಯಾಗಬಹುದೆಂಬ ಕುತೂಹಲವೂ ನನ್ನಲ್ಲಿ ಬಲವಾಗಿ ಬೇರೂರಿತ್ತು. ಅದಕ್ಕಾಗಿಯೇ ಆಸಕ್ತನಾಗಿ ಗಮನಹರಿಸಿದೆ. ಅದು ಫಲ ನೀಡಿತ್ತು. ಆ ನಾಲ್ಕು ದಿನಗಳೂ ಅವರು ಅವರ ಯೋಜನೆಯಂತೆ ಅವರ ಮನೆಯಲ್ಲಿ ಉಳಿಯಲಿಲ್ಲ. ಮುಂಚಿತವಾಗಿಯೇ ಮನೆ ತೆರವು ಮಾಡಿದ್ದರು. ನಂತರ ತಿಳಿಯಿತು-ಇವರಿಗೆ ಉಪಕಾರ ಮಾಡಬೇಕೆಂಬ ಕಾರಣಕ್ಕೆ ಅವರು ತೆರವು ಮಾಡಿದ್ದಲ್ಲ-ಇನ್ನೂ ಹೆಚ್ಚು ದಿನ ಇದ್ದರೆ ಇವರೇ ನಮಗೆ ಹೊರೆಯಾಗಬಹುದೆಂಬ ಕಾರಣಕ್ಕೆ ಎಂದು. ಅಷ್ಟರಮಟ್ಟಿಗೆ ಅವರ ಈ ಕಿರುನಾಟಕ ಯಶಸ್ವಿಯಾಗಿತ್ತು.

ಸಂಬಂಧಿಕರನ್ನು ದೂರ ಇಡುವ ಬಗೆಗಳಲ್ಲಿ ಇದೂ ಒಂದೆಂದು ನನಗೆ ತಿಳಿದದ್ದು ಆಗಲೇ. ನೆಂಟರಾಗಲೀ ಇಷ್ಟರಾಗಲೀ ಬಹುತೇಕ ಜನ ಭಯ ಪಡುವುದು ಅವರವರ ಜೇಬಿಗೆ ಇತರರು ಭಾರವಾಗುತ್ತಾರೆ ಎಂಬ ಭಯದಿಂದ.

'ಹತ್ತಿರವಿದ್ದರೆ ಅಡಕುನಾಥ, ದೂರವಿದ್ದರೆ ದೂಪದ ಗಮನ' ಎಂಬ ಮಾತು ಸಂಬಂಧಗಳಲ್ಲಿ ಸದಾ ನೆನಪಿನಲ್ಲಿಡಬೇಕಾದುದು. ಅನಾವಶ್ಯಕವಾಗಿ ಸಂಬಂಧಗಳಲ್ಲಿ ಸಲಿಗೆಯನ್ನು ಬೆಳೆಸಬಾರದು. ಎಷ್ಟೋ ಅಷ್ಟರಲ್ಲಿ ಇದ್ದಾಗ ಮಾತ್ರ ಯಾವುದೇ ಸಂಬಂಧ ಸಂತೋಷವನ್ನು ತರುತ್ತದೆ. ಮಲ್ಲಿಗೆ ಹೂವಿನ ಕಂಪು ತಂಪು ತಟ್ಟುವುದು, ಒಂದು ಅಂತರದಲ್ಲಿ ನಿಂತು ಅದನ್ನು ಅನುಭವಿಸಿದಾಗಲೇ. ಅದನ್ನು ಬಿಟ್ಟು ಕೈಯಲ್ಲಿ ಹಿಡಿದು ಹಿಸುಕಿದರೆ, ಅದರಿಂದ ಬರುವುದು ಹೆಚ್ಚು ಸುಗಂಧವಲ್ಲ, ದುರ್ಗಂಧ. ಆರೋಗ್ಯವಿರ ಬೇಕಾದರೆ, ಇನ್ನೂ ಒಂದು ತುತ್ತು ಬೇಕು ಎನ್ನುವಂತಿರುವಾಗಲೇ ಹೇಗೆ ಊಟವನ್ನು ನಿಲ್ಲಿಸಬೇಕೋ, ಹಾಗೆಯೇ ಸಂಬಂಧ ಚೆನ್ನಾಗಿ ಉಳಿಯಬೇಕಾದರೆ ಒಂದು ಅಂತರವನ್ನು ಅನಿವಾರ್ಯವಾಗಿ ಕಾಯ್ದುಕೊಳ್ಳಬೇಕಾಗುತ್ತದೆ. ಉತ್ಸಾಹದಲ್ಲಿ ಹೆಚ್ಚು ಮೇಲೆ ಎಳೆದು ಕೊಂಡರೆ, ಅದರ ಪ್ರತಿಫಲ ಶತಸ್ಸಿದ್ಧ.

ಸಂಬಂಧಗಳನ್ನು ಬೆಳೆಸುವುದು ಸುಲಭ. ಆದರೆ ಅವುಗಳನ್ನು ಉಳಿಸಿಕೊಂಡು ಬರುವುದು ಕಷ್ಟ. ಅವುಗಳನ್ನು ಉಳಿಸಿಕೊಂಡು ಬರಬೇಕಾದರೆ ಕೆಲವು ನಿಯಮಗಳನ್ನಾ ದರೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಬೇಕಾಗುತ್ತದೆ. ಕೆಲವು ಪ್ರತಿಷ್ಠಾಗುಣ ಗಳನ್ನು ದೂರಮಾಡದ ಹೊರತು ಸಂಬಂಧಗಳು ನಿಲ್ಲುವುದಿಲ್ಲ. ಎಲ್ಲದರಲ್ಲಿಯೂ ತನ್ನದೇ ಮೇಲುಗೈ ಎಂಬ ಅಹಂ ಅನ್ನಾಗಲಿ, ಸ್ವಾರ್ಥಮೂಲವಾದ ಭಾವನೆಗಳನ್ನಾಗಲೀ ತೊರೆಯದ ಹೊರತು ಸಂಬಂಧಗಳು ನಿಲ್ಲುವುದಿಲ್ಲ.

ಸಂಬಂಧಗಳನ್ನು ಪ್ರಧಾನವಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದೆಂದು ತೋರುತ್ತದೆ—ವ್ಯಾಪಕವಾದ ಅರ್ಥದಲ್ಲಿಯೂ ಕೂಡ. ರಕ್ತಸಂಬಂಧ ಹಾಗೂ ಸ್ನೇಹಸಂಬಂಧ. ಇವಲ್ಲದೆ ಇನ್ನೂ ಬೇರೆ ಬೇರೆ ಬಗೆಯ ಸಂಬಂಧಗಳು ಸಮಾಜದಲ್ಲಿ ನಾವು ಬೇರು ಬಿಟ್ಟಂತೆ ಉಂಟಾಗುತ್ತಾ ಹೋಗುತ್ತವೆ. ಅವು ರಕ್ತಸಂಬಂಧದ ಸುತ್ತ ಮುತ್ತ ಹರಡುವುವು-ಹಬ್ಬುವುವು ಕೆಲವಾದರೆ, ಮತ್ತೆ ಕೆಲವು ಸ್ನೇಹಸಂಬಂಧದ ಸುತ್ತ ಮುತ್ತ ಹಬ್ಬಿ ಹರಡುವುವು. ಇವನ್ನೆಲ್ಲ ದೂರದ ಸಂಬಂಧ, ಯಾವುದೋ ಬಾದರಾ ಯಣನ ಸಂಬಂಧ ಮುಂತಾಗಿ ಕರೆದು ಬಿಡುತ್ತಾರೆ. ಹಾಗೆಯೇ ಹೆಂಡತಿಯ ಕಡೆಯ ಸಂಬಂಧವೆಂದೂ, ಗಂಡನ ಕಡೆಯ ಸಂಬಂಧವೆಂದೂ ವರ್ಗೀಕರಿಸಬಹುದು.

ಇವುಗಳಲ್ಲಿ ರಕ್ತಸಂಬಂಧ, ಬೆನ್ನಿಗಂಟಿದ ಚರ್ಮದಂತೆ. ಅದು ಚೆನ್ನಾಗಿ ನಡೆದು ಕೊಂಡು ಹೋದರೆ ಚಿಂತೆಯಿಲ್ಲ. ಸುಖದ ಸವಿಯನ್ನು ಕಾಣಬಹುದು. ಸ್ವರ್ಗದ ಸುಖವನ್ನು ಅನುಭವಿಸಬಹುದು. ಬದುಕನ್ನು ನಂದನವನದಂತೆ ಅನುಭವಿಸಿ ಆನಂದಿಸ ಬಹುದು. ರಾಮ-ಲಕ್ಷ್ಮಣರಂತಹ ಸಂಬಂಧವನ್ನಾಗಲಿ, ಪಂಚಪಾಂಡವರಂತಹ ಸಂಬಂಧವನ್ನಾಗಲಿ ಯಾರು ಬೇಡವೆನ್ನುತ್ತಾರೆ ? ಕಷ್ಟ ಬರಲಿ, ಸುಖ ಬರಲಿ ಒಟ್ಟೊ ಟ್ಟಿಗೇ ಅನುಭವಿಸಿ ಆನಂದಿಸಿದ ಅವರ ಆ ಸಂಬಂಧದ ಸೂತ್ರವಾವರೂ ಅದೆಂತಹುದು ! ಕಾಡುಮೇಡುಗಳನ್ನು ಅಲೆದು, ಗಾಳಿ-ಬಿಸಿಲುಗಳಲ್ಲಿ ಬಳಲಿ, ಹಸಿವು ನೀರಡಿಕೆಗಳಲ್ಲಿ ಕನಲಿದರೂ ಪರಸ್ಪರ ಪ್ರೀತಿಸಿ ಆ ಸಂಬಂಧವನ್ನು ಅಮರಗೊಳಿಸಿದರು. ರಕ್ತಸಂಬಂಧ

ವಲ್ಲಿ ಶ್ರವಣನ ಪಾತ್ರವೇನು ಕಡಿಮೆಯದೇ! ಕಣ್ಣು ಕಾಣದ ತನ್ನ ತಂದೆ-ತಾಯಿಗಳನ್ನು ಅಡ್ಡೆಯಲ್ಲಿ ಕೂರಿಸಿಕೊಂಡು, ಹೆಗಲ ಮೇಲೆ ಹೊತ್ತು ತೀರ್ಥಯಾತ್ರೆ ಮಾಡಿಸಿದ ಆ ಪುಣ್ಯಜೀವಿ ಸಂಬಂಧದ ವಿಚಾರದಲ್ಲಿ, ಮಾತೃಭಕ್ತಿ-ಪಿತೃಭಕ್ತಿಯ ವಿಚಾರದಲ್ಲಿ ಅಮರ ಜೀವಿ. ನಿಷ್ಕಲ್ಮಷ ಭಾವನೆಯಿಂದ, ಪ್ರೀತಿ-ವಾತ್ಸಲ್ಯಗಳನ್ನೇ ಮೂಲಾಧಾರವಾಗಿಸಿಕೊಂಡು ಸಂಬಂಧದ ಜ್ಯೋತಿಯನ್ನು ಬೆಳಗಿದ ಅವನು ಸಂಬಂಧದ ಉಳಿವಿಗೆ ಅಗತ್ಯವಾದುದೇನೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಸಂಬಂಧ ಸ್ವಾರ್ಥದ ಮೇಲೆ ನಿಲ್ಲುವಂತಹುದಲ್ಲ. ತ್ಯಾಗದ ಮೇಲೆ ನಿಲ್ಲುವಂತಹುದು. ಶ್ರವಣ ಕುಮಾರ ಸ್ವಲ್ಪ ತನ್ನ ಸುಖದ ಕಡೆಗೆ ಆಲೋಚಿಸಿದ್ದಿದ್ದರೆ! ಇಂದು ಪುರಾಣದ ನೆನಪಿನ ವ್ಯಕ್ತಿಯಾಗಿ ಉಳಿಯುತ್ತಿರಲಿಲ್ಲ. ಸಂಬಂಧದ ಮಹತ್ವವನ್ನು ಸಾರುವ ಸಾರಥಿಯಾಗಿ ನಿಲ್ಲುತ್ತಿರಲಿಲ್ಲ. ಈ ಸಂದರ್ಭದ ನಮ್ಮ ನೆನಪಿನ ವೀರನಾಗಿ ಬರುತ್ತಿರಲಿಲ್ಲ.

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ । ಕಂದನಂಥ
ಮಕ್ಕಳಿರಲವ್ವ ಮನೆ ತುಂಬ ॥

ಎಂದು ಜೋಗುಳ ಹಾಡುವ ತಾಯಿ ತನ್ನ ಎಳೆಯ ಕಂದನೊಂದಿಗೆ ಬಯಸುವ ಸಂಬಂಧವಾದರೂ ಎಂಥದು! ಅಲ್ಲಿಯ ಸಂಬಂಧಕ್ಕೆ ಬೆಲೆ ಕಟ್ಟಲು ಸಾಧ್ಯವೇ? 'ಬಡತನ ನನಗಿರಲಿ, ಬಹಳ ಮಕ್ಕಳಿರಲಿ, ಬಡತನದ ಚಿಂತೆ ನಿನಗಿರಲಿ' ಎನ್ನುವ ತಾಯಿಯ ಮಮತೆಯ ಹಿಂದೆ ಬೇರುಬಿಟ್ಟಿರುವ ಸಂಬಂಧದ ಉದ್ದಗಲವನ್ನು ಅಳೆಯಲಾದೀತೆ? ಅಂತಹ ಮಕ್ಕಳು ಬೆಳೆದು ದೊಡ್ಡವರಾದಂತೆ ಆ ಪ್ರೀತಿಯ, ಮಮತೆಯ ಸವಿಯುಂಡು ಹಿಗ್ಗಿದಂತೆ: ಅವರಿಂದ-ಕಾಲವಶದಿಂದ, ಸಂದರ್ಭವಶದಿಂದ—ದೂರವಾದರೂ ಕೃತಜ್ಞತೆಯೇ ಮೈವೆತ್ತಂತೆ ವ್ಯಕ್ತಪಡಿಸುವ ಅವಳು—

ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡಿಲಿರುವ ಕರಕೀಯ । ಕುಡಿಹಂಗೆ
ಹಬ್ಬಲೀ ಅವರ ರಸಬಳ್ಳಿ ॥
ಕಾಶೀಗೆ ಹೋಗಲಾಕ ಏಸೊಂದು ದಿನ ಬೇಕ
ತಾಸ್ಹೊತ್ತಿನಾದಿ ತವರೂರು! ಮನೆಯಾಗ
ಕುಂತಾಳೆ ಕಾಶಿ ಹಡೆದವ್ವ ॥

ಇಂತಹ ವಾತ್ಸಲ್ಯ ತುಂಬಿದ ಸಂಬಂಧದ ನುಡಿಗಳಿಗೆ ಅರ್ಥ ಕಟ್ಟಲು ಸಾಧ್ಯವಾದೀತೆ? ರಕ್ತಸಂಬಂಧ, ರಕ್ತದೊಂದಿಗೆ ಹರಿದು ಬಂದದ್ದು-ಹಂಚಿ ಬಂದದ್ದು. ಅದು ಯಾವುದೇ ಕಾರಣಕ್ಕೆ ಅಷ್ಟು ಸುಲಭವಾಗಿ ಕಳಚಿಹೋಗುವಂತಹುದಲ್ಲ. ಒಂದಲ್ಲ ಒಂದು ಬಗೆಯಲ್ಲಿ ಯಾವುದೋ ಬಗೆಯಲ್ಲಿ ಕೂಡಿಕೊಳ್ಳುತ್ತದೆ-ಕೂಡಿಕೊಳ್ಳಲು ಹವಣಿಸುತ್ತದೆ. ಕರ್ಣ, ಕೌರವ ಪಕ್ಷಪಾತಿಯಾಗಿದ್ದು, ನಿಷ್ಠೆ, ಪ್ರಾಮಾಣಿಕತೆಯಿಂದ ದುರ್ಯೋಧನನಿಗೆ ಮಣಿದಿದ್ದರೂ ಶ್ರೀ ಕೃಷ್ಣನ ಕುತಂತ್ರದಿಂದಾಗಿ ಪಾಂಡವ

ರೊಂದಿಗಿನ ನಿಜಾಂಶದ ಸಂಬಂಧವನ್ನೂ ತಿಳಿದ ಮೇಲೆ ಸ್ವಲ್ಪವಾದರೂ ಅವನ ಮನ ಕರಗಲಿಲ್ಲವೇ ? ತನ್ನನ್ನು ನಂಬಿದ ಪ್ರಭುವಿಗೆ ತನ್ನ ಕೃತ್ಯದಿಂದ ತೊಂದರೆಯಾಗುತ್ತದೆ, ತನಗೂ ಅದು ಹಾನಿಯಾಗುತ್ತದೆ ಎಂದು ತಿಳಿದೂ ಪಾಂಡವರಿಗೆ ಅನುಕೂಲವಾಗುವಂತೆ ನಡೆದುಕೊಳ್ಳಲಿಲ್ಲವೆ ? ಇಲ್ಲೆಲ್ಲ ಅಂತರ್ಗಾಮಿಯಂತೆ ನಿಂತು ಕಾರ್ಯ ಸಾಧಿಸಿದ್ದು ರಕ್ತಸಂಬಂಧವಲ್ಲದೆ ಮತ್ತೇನು ? 'Blood is thicker than water' ಎನ್ನುವ ಮಾತಿನ ಅರ್ಥವಾದರೂ ಏನು ? ಅದು ಎಲ್ಲಿದ್ದರೂ ಹೇಗಿದ್ದರೂ ತನ್ನ ಪಾಲಿನ ಕಾರ್ಯವನ್ನು ಅದು ಮಾಡಿಯೇ ಬಿಡುತ್ತದೆ. ಅದೇ ಅದರ ವೈಶಿಷ್ಟ್ಯ. ದುರ್ಯೋಧನನಿಗೂ ಕರ್ಣನ ವಿಚಾರ ಮೊದಲೇ ತಿಳಿದಿತ್ತಾದರೂ ತನ್ನ ಸ್ವಾರ್ಥಕ್ಕಾಗಿ ಅವನನ್ನು ಹೇಗೆ ಬಳಸಿಕೊಳ್ಳುತ್ತಾನೆ. ದಾಯಾದಿ ಮತ್ಸರವೂ ಇಲ್ಲಿ ಹೇಗೆ ಮಹತ್ತರವಾದ ಪಾತ್ರ ವಹಿಸುತ್ತದೆ !

ಎಂತಹ ಸಂಬಂಧವೂ ಒಂದಲ್ಲ ಒಂದು ಬಗೆಯ ಸೂತ್ರಕ್ಕೆ ಒಳಪಟ್ಟೇ ನಿಂತಿರುತ್ತದೆ. ಸೂತ್ರ ತಪ್ಪಿದರೆ ಅದೂ ಅಲುಗಾಡುತ್ತದೆ. ತಾಯಿ-ಮಕ್ಕಳಾದರೂ, ತಂದೆ-ಮಕ್ಕಳಾದರೂ ಸಂಬಂಧ ಸ್ಥಿರವಾಗಿ ಸೌಹಾರ್ದತೆಯಿಂದ ಉಳಿದು ಬೆಳೆಯಬೇಕಾದರೆ ಸೂತ್ರಪಾಲನೆ ಅತ್ಯಗತ್ಯ. 'ಅಪ್ಪ-ಮಕ್ಕಳಾದರೂ ಲೆಕ್ಕಾಚಾರ ಚೆನ್ನಾಗಿರಬೇಕು' ಎನ್ನುವ ಮಾತು ಗಮನಾರ್ಹ. ಲೆಕ್ಕಾಚಾರ ತಪ್ಪಿದ ಎಷ್ಟು ಮಂದಿ ತಂದೆ-ಮಕ್ಕಳು ಜಗಳವಾಡಿಲ್ಲ ! ಕೋರ್ಟು ಕಛೇರಿ ಹತ್ತಿಲ್ಲ !

ಒಡಹುಟ್ಟಿದವರ ಪಾಡೂ ಅಷ್ಟೇ ! ಅಕ್ಕ-ತಂಗಿಯರಾದರೂ ಅದು ಲೆಕ್ಕಾಚಾರವನ್ನೇ ಅವಲಂಬಿಸಿದ್ದು. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಜಾಣತನದಿಂದ ನಡೆದುಕೊಂಡರೆ ಮಾತ್ರ ಸಂಬಂಧ ಸಂವೃದ್ಧಿಯಾಗುತ್ತದೆ. ಇಲ್ಲವಾದರೆ ಸವೆದು ಸೊರಗುತ್ತದೆ. 'ಅಕ್ಕನ ಮನೆಯಿಂದ ಅವರೇಬೇಳೆ ಹೋದರೆ ತಂಗಿಯ ಮನೆಯಿಂದ ತೊಗರಿಬೇಳೆ ಬರುವುದು' ಎಂಬ ಮಾತಿನ ಅರ್ಥವಾದರೂ ಏನು ? ಕೊಳು-ಕೊಡುಗೆ ಸಂಬಂಧ ಚೆನ್ನಾಗಿದ್ದರೇನೇ ರಕ್ತಸಂಬಂಧವೂ ಚೆನ್ನಾಗಿರುವುದು. ಇಲ್ಲವಾದರೆ, ವ್ಯವಹಾರ ತಪ್ಪಿದಂತೆ ಅದೂ ಕೂಡ ತೆಪ್ಪಗಾಗುತ್ತದೆ.

ಇನ್ನು ರಕ್ತಸಂಬಂಧವಾದರೂ ದಾಯಾದಿ ಮತ್ಸರದಿಂದಾಗಿ ಆಗಿಹೋದ, ಆಗಬಹುದಾದ ಘಟನಾವಳಿಗೆ ಭಾರತೀಯ ಮಹಾಕಾವ್ಯವಾದ ಮಹಾಭಾರತವೇ ಇದೆ. ಅಲ್ಲಿ ಅದಕ್ಕೆ ಉದಾಹರಣೆಗಳು ಒಂದೇ, ಎರಡೇ ! ಸ್ವಾರ್ಥಸಾಧನೆಗಾಗಿ ಎಂತಹ ಸಂಬಂಧವನ್ನಾದರೂ ಹೇಗೆ ಬೇಕಾದರೂ ಬಳಸಿಕೊಳ್ಳುವ ತಂತ್ರ ಅಲ್ಲಿ ಚೆನ್ನಾಗಿ ವಿಶ್ಲೇಷಿತವಾಗಿದೆ. ಸ್ವಾರ್ಥ ಬಲಗೊಂಡಾಗ ಸಂಬಂಧ ಸೊರಗುತ್ತದೆ ಎಂಬುದಕ್ಕೆ ಮಹಾಭಾರತದ ಕತೆಯೇ ಒಂದು ದೊಡ್ಡ ಉದಾಹರಣೆ. ಅಪವಾದಕ್ಕೆ ಹೆದರಿ ಕುಂತಿ ತನ್ನ ಸ್ವಂತ ಮಗ ಕರ್ಣನನ್ನು ನದಿಯಲ್ಲಿ ಬಿಟ್ಟಲ್ಲಿಂದಲೇ ಇದು ಆರಂಭವಾಗುತ್ತದೆ. ಸ್ವಂತ ಮಗನಾದರೂ ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳುವಲ್ಲಿ ತೋರಿದ ಸ್ವಾರ್ಥ ಬುದ್ಧಿ ಮುಂದೆ ಎಂತಹ ಅನರ್ಥಗಳಿಗೆ ಕಾರಣವಾಯಿತು ! ಕೊನೆಗೆ ಅವನು ಬೆಳೆದು ದೊಡ್ಡವ

ನಾದ ಮೇಲೂ, ತನ್ನ ಮಗ ಅವನು ಎಂಬುದು ತಿಳಿದ ಮೇಲೂ. ತನ್ನ ಉಳಿದ ಐವರು ಮಕ್ಕಳನ್ನು ಯುದ್ಧದಲ್ಲಿ ಉಳಿಸಿಕೊಳ್ಳಲು ಕುಂತಿ ಮಾಡಿದ್ದಾದರೂ ಏನು ?

ಒಟ್ಟಿನಲ್ಲಿ ಸ್ವಾರ್ಥದ ಮುಂದೆ ಯಾವುದೂ ನಿಲ್ಲುವುದಿಲ್ಲ. ಎಂತಹ ಸಂಬಂಧವಾದರೂ ಕ್ಷಣ ಕಾಲವಾದರೂ ಅಲುಗಾಡದೇ ಇರುವುದಿಲ್ಲ. ಮನಸ್ಸಿಲ್ಲದ ಮನಸ್ಸಿನಲ್ಲಿಯಾದರೂ ಅದು ನಡೆದು ಹೋಗುತ್ತದೆ.

ರಕ್ತಸಂಬಂಧಗಳ ಕತೆ ಈ ಬಗೆಯದಾದರೆ, ಇನ್ನು ಕೆಲವು ಸಾಮಾಜಿಕ ನಡವಳಿಕೆಗಳಿಂದ ಉಂಟಾಗುವ ಸಂಬಂಧಗಳ ಕತೆ ಬೇರೊಂದು ಬಗೆಯದು. ಗಂಡ-ಹೆಂಡಿರ ಸಂಬಂಧವನ್ನೂ ಇಲ್ಲಿ ಹೇಳಬಹುದು. ಎಲ್ಲೋ ಹುಟ್ಟಿದ ಎರಡು ಜೀವಗಳು ಹಿರಿಯರ ಕಟ್ಟಿಗೆ ಬಿದ್ದೋ ಇಲ್ಲವೇ ಪ್ರೇಮದ ಬಲೆಗೆ ಬಿದ್ದೋ 'ಗಂಡ-ಹೆಂಡತಿ' ಎಂಬ ಹೆಸರಿನಲ್ಲಿ ಒಂದಾಗುತ್ತವೆ. ಅಳಿಯುವವರೆಗೂ ಒಂದೆಂದು ಭಾವಿಸಿ ಬದುಕನ್ನು ನಡೆಸುತ್ತವೆ. 'ಕೂಡಿದೋನಿಗೆ ಕೋಡಗ ಮುದ್ದು' ಎಂಬಂತೆ ಆ ಪ್ರೇಮದ ಸಂಬಂಧದಲ್ಲಿ ಎಲ್ಲವೂ ಮುಚ್ಚಿಹೋಗಿ ಅವರ ಪ್ರೇಮವಷ್ಟೇ ಬೆಳಗುತ್ತದೆ. ಬಡತನ-ಸಿರಿತನ ನಿಜವಾದ ಪ್ರೇಮದ ಎದುರಿಗೆ ನಿಲ್ಲಲಾರದು ಎಂಬ ಸತ್ಯವನ್ನು ಅದು ಹಲವು ಸಂದರ್ಭಗಳಲ್ಲಿ ವ್ಯಕ್ತಗೊಳಿಸುತ್ತದೆ.

ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನನಗೆ ನನರಾಯ ಬಡವೇನ । ಬಂಗಾರ
ಮಾಲು ಇದ್ದಾಂಗ ಮನೆಯಾಗ ॥

ಎಂದು ಭಾವಿಸಿ ಅನ್ಯೋನ್ಯವಾಗಿ ಜೀವನರಥ ನಡೆಸುವುದನ್ನು ಕಾಣುತ್ತೇವೆಯಾದರೂ. ಅಲ್ಲಿಯೂ ಒಮ್ಮೊಮ್ಮೆ ಬಿರುಗಾಳಿ ಏಳುವುದುಂಟು. ಸಂಬಂಧವನ್ನು ಕಲಕುವುದುಂಟು. ಬೇರೊಂದು ಹೆಣ್ಣು ಆ ಸಂಸಾರ ರಥದೊಳಗೆ ಪ್ರವೇಶ ಮಾಡುವುದರ ಮೂಲಕ ಇದು ಆಗಬಹುದು. ಇಲ್ಲವೇ ಅವರ ಪ್ರೇಮವೇ ಶಿಖರವನ್ನೇರಿದಾಗಲೂ ಇದು ಸಂಭವಿಸಬಹುದು. ಹೆಂಡತಿಯ ಅಗಲಿಕೆಯನ್ನು ಕ್ಷಣ ಕಾಲವೂ ಸಹಿಸದ ಪ್ರೀತಿಯ ಪತಿ, ಅಷ್ಟೇ ಪ್ರೀತಿಸುವ ತನ್ನ ಪತ್ನಿ ತೌರಿಗೆ ಒಂದೆರಡು ದಿನ ಹೋಗಿಬರುವುದನ್ನು ಸಹಿಸದೆ ಕೋಪದಲ್ಲಿ ಹೆಂಡತಿಗೆ ಬಡಿಯಬಹುದು ! ಬಡಿದು ಅದಕ್ಕಾಗಿ ಮರುಗಬಹುದು. ಮರುಗಿ ಅವಳ ಸೆರಗನ್ನೇ ಹಿಡಿದು ಸಮಾಧಾನಗೊಳಿಸಬಹುದು !

ಮಡದೀಯ ಬಡಿದಾನ ಮನದಾಗ ಮರುಗ್ಯಾನ
ಒಳಗೋಗಿ ಸೆರಗ್ಹಿಡಿದು । ಕೇಳ್ಯಾನ
ನಾ ಹೆಚ್ಚೋ ನಿನ್ನ ತವರ್ಹೆಚ್ಚೋ ॥

ಇದು ಕೋಪದಿಂದ ಆದುದಲ್ಲ. ಅತಿಯಾದ ಪ್ರೀತಿಯಿಂದ ಆದುದು. ಅದರ ಕಾರಣ ಮಾತ್ರ ಸ್ಪಷ್ಟ ; ಸ್ವಾರ್ಥಮೂಲವಾದ ಪ್ರೀತಿ, ಆ ಹೆಣ್ಣು ಮಗಳಿಗೆ ತನ್ನ ತೌರನ್ನೂ, ತೌರಿನ ಸಂಬಂಧಿಗಳನ್ನೂ ನೋಡಬೇಕೆಂಬ ಆಸೆಗೆ ಅಡ್ಡಿಯಾದ ಸ್ವಾರ್ಥ ! ಅದೇ ಅವನ

ಕ್ಷಣ ಕಾಲದ ಕೋಪಕ್ಕೆ ಮೂಲ. ಆದರೆ ಇದು ಕೈಮೀರಿದರೆ ? ವಿಕೋಪಕ್ಕೂ ಹೋಗಬಹುದು. ಸಂಬಂಧ ತೂರಿಹೋಗಲೂಬಹುದು.

ಇವುಗಳಂತೆಯೇ ಸ್ನೇಹ ಸಂಬಂಧ, ಕೌಟುಂಬಿಕವಾದ ಸಂಬಂಧಗಳೂ ಸಹ ಬಹಳ ನಾಜೂಕಾಗಿ ಹೆಣೆದುಕೊಂಡಿರುತ್ತವೆ. ಇಲ್ಲಿ ಒಂದು ಬಗೆಯ ವ್ಯವಹಾರ ಇವುಗಳನ್ನು ನಡೆಸಿಕೊಂಡು ಬರುತ್ತದೆ. ಆ ವ್ಯವಹಾರ ಚೆನ್ನಾಗಿರುವವರೆಗೂ ಆ ಸಂಬಂಧ ಚೆನ್ನಾಗಿರುತ್ತದೆ. ಅರಿತು ನಡೆಯುವುದೇ ಇಂತಹ ಸಂಬಂಧಗಳ ಪ್ರಧಾನ ಸೂತ್ರ. ಇಂತಹ ಸಂಬಂಧಗಳು ಹೆಚ್ಚು ಕಾಲ ಉಳಿದು ಬರಬೇಕಾದರೆ ಒಂದು ಅಂತರವನ್ನು ಕಾಯ್ದುಕೊಂಡು ಬರುವುದು ಮುಖ್ಯವಾಗುತ್ತದೆ. ಅದಕ್ಕಾಗಿಯೇ ನಮ್ಮ ಹಿರಿಯರು ಹೇಳಿದರು : ''ಹತ್ತಿರವಿದ್ದರೆ ಅಡಕುನಾಥ ದೂರವಿದ್ದರೆ ದೂಪದ ಗಮನ'' ಎಂದು. ಸಂಬಂಧಗಳು ತೀರ ಹತ್ತಿರವಾದಷ್ಟು ಸಮಸ್ಯೆಗಳು ಹೆಚ್ಚಾಗುತ್ತವೆ. ಅದನ್ನೂ ನಿಭಾಯಿಸಿಕೊಂಡು ಹೋಗುವ ಶಕ್ತಿಯಿಲ್ಲದಾಗ ಅವು ತೊಡಕಾಗುತ್ತವೆ. 'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು' ಎಂಬ ಹಿರಿಯೋಕ್ತಿಯನ್ನು ಗಮನಿಸಿದಾಗ ಸಂಬಂಧದ ಸಲಿಗೆಯನ್ನೂ ದುರುಪಯೋಗಪಡಿಸಿಕೊಳ್ಳುತ್ತಾ ಹೋದರೆ, ಅಂತಹ ವ್ಯಕ್ತಿ ಅವರ ದೃಷ್ಟಿಯಲ್ಲಿ ತೀರ ಸಾಮಾನ್ಯವಾಗಿ ಬಿಡುತ್ತಾನೆ. ಮತ್ತೆ ಹಿಂದಿನ ಸ್ಥಾನವನ್ನು ಗಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಇಬ್ಬರು ವ್ಯಕ್ತಿಗಳ ಸಂಬಂಧದಿಂದ ಹಿಡಿದು ಎರಡು ದೇಶಗಳ ಸಂಬಂಧಗಳವರೆಗೂ ಇದೇ ಸೂತ್ರ ಅನ್ವಯವಾಗುತ್ತದೆ.

'ಹಾಕ್ ಮಣೆ ನೂಕ್ ಮಣೆ ಯಾಕ್ ಮಣೆ' ಎಂಬ ಗಾದೆಮಾತು ಸಂಬಂಧ ಸಡಿಲಗೊಳ್ಳುತ್ತಾ ಹೋಗುವ ಬಗೆಯನ್ನು ಬಹಳ ಚೆನ್ನಾಗಿ ವಿವರಿಸುತ್ತದೆ. ಸಂಬಂಧದ ಹೊಸತರಲ್ಲಿ ಮಣೆಯನ್ನು ಹಾಕಿ ವ್ಯಕ್ತಿಯನ್ನು ಬಹಳ ಗೌರವದಿಂದ ಕಾಣುತ್ತಾರೆ. ಆ ವ್ಯಕ್ತಿ ಮುಂದೆಯೂ ಅದೇ ಸ್ಥಾನಮಾನವನ್ನು ಉಳಿಸಿಕೊಂಡು ಹೋದರೆ ಅದೇ ಗೌರವ ಮುಂದುವರಿಯುತ್ತದೆ, ಇಲ್ಲವಾದರೆ 'ನೂಕ್ ಮಣೆ'ಯಾಗುತ್ತದೆ. ಅಂದರೆ ಕುಳಿತಲ್ಲಿಂದಲೇ ಮಣೆಯನ್ನು ನೂಕಿ ಕುಳಿತುಕೊಳ್ಳಲು ಸೂಚಿಸುತ್ತಾರೆ. ಇನ್ನು ಮುಂದಿನ ಹಂತ 'ಯಾಕ್ ಮಣೆ' ? ದಿನಾ ಸಾಯುವವರಿಗೆ ಅಳುವವರು ಯಾರು ಎಂಬಂತೆ ಆ ಮರ್ಯಾದೆಯೂ ದೊರೆಯದೆ ನೆಲದಲ್ಲಿಯೇ ಕುಳಿತು ಬರಬೇಕಾಗುತ್ತದೆ.

ಸಂಬಂಧದಲ್ಲಿ ಮರ್ಯಾದೆಯನ್ನು ಕಾಯ್ದುಕೊಂಡು ಬರುವುದು ಬಹಳ ಮುಖ್ಯ. ಇಲ್ಲವಾದರೆ ಗಂಟು-ನಂಟು ಎರಡೂ ಮಾಯವಾದಂತಾಗುತ್ತದೆ. ಅಲ್ಲಿ ತಾತ್ಸಾರ ತಲೆದೋರದಂತೆ ನೋಡಿಕೊಳ್ಳುವುದು ಬಹಳ ಮುಖ್ಯ.

ಕ್ಷಮಿಸಿ ! ನಾನು ಹೇಳಹೊರಟಿದ್ದು ಮಾವ-ಅಳಿಯನ ಸಂಬಂಧ. ಅದರೆ, ಅದು ಎಳೆದೊಯ್ದಿದ್ದು ಎಲ್ಲೆಲ್ಲಿಗೋ. ಆ ಸಂಬಂಧವೇ ಅಂತಹುದು ಅನ್ನಿಸುತ್ತದೆ ! ಗಣಪತಿಯನ್ನು ಮಾಡಲು ಹೋಗಿ ಅದರ ಅಪ್ಪನನ್ನು ಮಾಡಿದಂತಾಯಿತು ! ಅಳಿಯನನ್ನಾಗಿ ಮಾಡಿಕೊಂಡ ಗೆಳೆಯ ಮನೆ ತೊಳೆಯುವಂತಾದುದೂ ಹೀಗೆ ತಾನೇ ! ಮಗಳಿಗೆ ಗಂಡನಾಗಿರು ಎಂದು ಕರೆತಂದರೆ ಮನೆಯನ್ನೇ ತೊಳೆಯಲು ಸಿದ್ಧನಾದಂತೆ ! 'ಮರ

ದಕ್ಷಿಣೆ'ಯ ಹೆಸರಿನಲ್ಲಿ ಆರಂಭವಾಗುವ ಈ ಸುಲಿಗೆ ಕಾಲಕ್ರಮದಲ್ಲಿ ವಿವಿಧ ಹೆಸರುಗಳಲ್ಲಿ ಮುಂದುವರಿಯುತ್ತದೆ. ಮಾವನೆನಿಸಿದವನು ಸಾಕಷ್ಟು ತಾಕತ್ತಾಗಿದ್ದರೆ ಚಿಂತೆಯಿಲ್ಲ. ಇಲ್ಲವಾದರೆ ಅವನು ಕೆಲವು ಸಂದರ್ಭಗಳಲ್ಲಿ ಅಳಿಯನಿಗಿಂತ ಮೊದಲೇ 'ಕಾಶೀಯಾತ್ರೆ' ಮಾಡುವ ಸಂಭವ ಬರಬಹುದು. ಹೇಗೋ ಮಗಳಿಗಾಗಿ ಎಲ್ಲವನ್ನೂ ಸಹಿಸಿಕೊಂಡು, ನೋವನ್ನು ನುಂಗಿಕೊಂಡು ಮುಂದುವರಿದರೂ ಅಳಿಯನ ಶೋಷಣೆಯೇನೂ ನಿಲ್ಲುತ್ತದೆ ಎಂದು ಹೇಳಬರುವಂತಿಲ್ಲ.

ಇನ್ನು ಮಧ್ಯಮ ವರ್ಗದ ಕುಟುಂಬದ ಕತೆಯನ್ನಂತೂ ಹೇಳಬೇಕಾಗಿಯೇ ಇಲ್ಲ. ಮದುವೆಯ ಖರ್ಚಿಗೆಂದೇ ಸಿಗಬಹುದಾದ ಕಡೆಗಳಲ್ಲೆಲ್ಲ ಸಾಲ ತೆಗೆದು, ಇದ್ದಬದ್ದ ಸ್ವಲ್ಪ ಜಮೀನನ್ನು ಮಾರುವುದೋ ಇಲ್ಲ ಭೋಗ್ಯ ಹಾಕುವುದೋ ಮಾಡಿ, ಅದೂ ಸಾಲದೇ ಹೋದರೆ ಹೆಂಡತಿಯ ಮೇಲಿನ ಅಲ್ಪ ಸ್ವಲ್ಪ ಒಡವೆಗಳನ್ನು ಕರಗಿಸಿ ಮದುವೆ ಮಾಡಿ ಕೊಟ್ಟ ಮೇಲೂ ಅದು ಅಲ್ಲಿಗೇ ಪೂರ್ಣಗೊಂಡಿತೆನ್ನುವಂತಿಲ್ಲ. ಇನ್ನೂ ಅಳಿಯನನ್ನು ಕರೆಯುವುದು ಕಳುಹಿಸುವುದು ಇತ್ಯಾದಿ ಇತ್ಯಾದಿಗಳಲ್ಲಿ ಬಳಲಿ ಬೆಂಡಾಗುತ್ತಾನೆ. ಇವೆಲ್ಲ ಕರ್ತವ್ಯವೆಂಬಂತೆ ನಡೆಸಿದರೂ, ಅಳಿಯ ಒಳ್ಳೆಯವನಾಗಿದ್ದರೆ ಚಿಂತೆಯಿಲ್ಲ. ಇಲ್ಲವಾದರೆ ಮಾವನ ಕಥೆ ಮುಗಿದಂತೆಯೇ. ಎಲ್ಲವನ್ನೂ ಮಾರಿಕೊಂಡು ಊರು ಬಿಡಬೇಕಾಗುತ್ತದೆ. 'ಎಲ್ಲಾ ಹೋಗಿ ಅಳಿಯ ಬಂದ ಡುಂ....ಡುಂ' ಎನ್ನುವಂತಾಗುತ್ತದೆ ಅವರ ಸ್ಥಿತಿ !

ಮಾವನ ಈ ಸ್ಥಿತಿಗೆ ಸಂಪೂರ್ಣವಾಗಿ ಅಳಿಯನೊಬ್ಬನೇ ಕಾರಣನಾಗುತ್ತಾನೆ ಎಂದು ಹೇಳಲಾರೆ. ಒಂದು ಪಕ್ಷ ಅಳಿಯ ಒಳ್ಳೆಯವನೇ ಆಗಿದ್ದರೂ, ಅವನನ್ನು ಸಾಕಿ, ಸಲಹಿ, ದೊಡ್ಡವನನ್ನಾಗಿ ಮಾಡಿದ ಅಪ್ಪನೋ ಅಮ್ಮನೋ ಆ ಜವಾಬ್ದಾರಿಯನ್ನು ಹೊರುವುದೂ ಉಂಟು. ಇವನ ಮಗಳಿಗಾಗಿಯೇ ಅವನನ್ನು ಓದಿಸಿ, ಬೆಳೆಸಿ ದೊಡ್ಡವನನ್ನಾಗಿ ಮಾಡಿದಂತೆ ಅವರು ಭಾವಿಸಿದಾಗ ಈ ಅನಾಹುತಗಳೆಲ್ಲವೂ ನಡೆಯುತ್ತವೆ.

ಒಟ್ಟಿನಲ್ಲಿ ಹೆಣ್ಣು ಹೆತ್ತವರಿಗೆ ಕಣ್ಣೀರು ತಪ್ಪಿದ್ದಲ್ಲ. ಎಂಬ ಮಾತನ್ನು ಸಾರಾಸಗಟು ತಳ್ಳಿಹಾಕುವಂತಿಲ್ಲ. ಅಳಿಯದೇವರ ಮುಂದೆ ಅವರು ಶರಣಾಗಲೇಬೇಕಾಗುತ್ತದೆ ! ಮನೆಯನ್ನೂ ತೊಳೆಸಿಕೊಳ್ಳಲು ಸಿದ್ಧರಾಗಲೇಬೇಕಾಗುತ್ತದೆ. ಇದು ಹೇಗೋ ಹೋಗಲಿ ಎಂದರೆ, ಬೆಳಿಗ್ಗೆ ಎದ್ದರೆ ದಿನಪತ್ರಿಕೆಯ ಮುಖಪುಟದಲ್ಲಿಯೇ ಕಾಣಸಿಕೊಳ್ಳುವ 'ವರದಕ್ಷಿಣೆಯ ಬೆಂಕಿಗೆ ಮತ್ತೊಂದು ಬಲಿ', 'ಹಣ ತರದ ಹೆಂಡತಿಗೆ ಗಂಡನಿಂದ ಸಾವು' ಮುಂತಾದ ವರದಿಗಳನ್ನೂ ಓದಿದಾಗ ಭಯಂಕರ ಅನ್ನಿಸುತ್ತದೆ. ಇದನ್ನೆಲ್ಲ ಕೇಳಿದ, ಓದಿದ, ನೋಡಿದ ಯಾರಿಗೆ ತಾನೇ ಅಳಿಯನ ಬಗೆಗೆ ಗೌರವ ಮೂಡೀತು ! ಅಭಿಮಾನ ಆವರಿಸೀತು !

ಇದಕ್ಕೆ ಅಪವಾದಗಳು ಇಲ್ಲವೆಂದಲ್ಲ, ಇವೆ. ಆದರೆ, ಇಂತಹ ಸಂಬಂಧಗಳಲ್ಲಿ ಅವು ನಕ್ಷತ್ರಗಳ ಮಧ್ಯೆ ಚಂದ್ರನಿದ್ದಂತೆ ! ಆದರೆ ಅಳಿಯನ ಬಗೆಗೆ ಹೆಚ್ಚು ಜನರ ಅಭಿಪ್ರಾಯ ಒಂದೇ :

ಅಳಿಯನಿಗೆ ಮಾಡೋದು ಒಂದೆ
ಆಳುಗಳಿಗೆ ಮಾಡೋದು ಒಂದೆ

'ಎಳೆಗರು ಎತ್ತಲ್ಲ. ಮನೆಗೆ ಬಂದ ಅಳಿಯ ಮಗನಲ್ಲ' ಇತ್ಯಾದಿ ಇತ್ಯಾದಿ. ನೀವೂ ಒಂದು ದಿನ ಮಾವನೆನಿಸಿಕೊಳ್ಳುವರು ತಾನೇ ? ಆದ್ದರಿಂದ ಅಳಿಯನಾಗಿ ಎಚ್ಚರದಿಂದಿರಿ ! ಬದುಕು ವೃತ್ತಾಕಾರವಾದುದು. ಒಂದಲ್ಲ ಒಂದು ದಿನ ಎಲ್ಲರೂ ಅವರ ಎಲ್ಲ ಸ್ಥಿತಿಯನ್ನು ತಲುಪಲೇಬೇಕಾಗುತ್ತದೆ, ಅನುಭವಿಸಲೇಬೇಕಾಗುತ್ತದೆ. ಇಂದು ಮಗ, ನಾಳೆ ಅಳಿಯ, ಮತ್ತೊಂದು ದಿನ ಮಾವ–ಇತ್ಯಾದಿ, ಇತ್ಯಾದಿ. ಆದ್ದರಿಂದ ಮುಜುಕ ಬೇಡಿ ! ಎಚ್ಚರವಿರಲಿ !

ನಿಮಗೆ ಸಂಬಂಧ ಚೆನ್ನಾಗಿರಬೇಕೇ ? ಹಾಗಾದರೆ, ವ್ಯವಹಾರವನ್ನು ಚೆನ್ನಾಗಿ ಇಟ್ಟುಕೊಳ್ಳಿ–ಸ್ವಾರ್ಥವನ್ನು ಬಿಡಿ. ಆದರೆ, ಎರಡೂ ಬೇಕು ಎಂದರೆ ಕಷ್ಟವಾಗುತ್ತದೆ. "ಎರಡು ವಸ್ತುಗಳು ಏಕಕಾಲದಲ್ಲಿ ಒಂದೇ ಸ್ಥಳವನ್ನು ಆಕ್ರಮಿಸಲಾರವು" ಎಂಬ ಸಿದ್ಧಾಂತ ನೆನಪಿದೆ ತಾನೇ ? ಸಂಬಂಧವನ್ನು ಕುರಿತಂತೆ ಜನಪದ ಗಾದೆಮಾತು ಹೇಗೆ ಸುಳ್ಳಾಗುವುದಿಲ್ಲವೋ ಹಾಗೆಯೇ ವಿಜ್ಞಾನಿಯ ಮಾತೂ ! ಎರಡೂ ಸಿದ್ಧಾಂತಗಳೇ ! ಆದರೆ ಒಂದು ಅನುಭವಮೂಲವಾದದ್ದು, ಮತ್ತೊಂದು ಪ್ರಯೋಗಮೂಲವಾದದ್ದು.

ಪ್ರಧಾನ್ ಗುರುದತ್ತ

ಮೆಣಸು*

ಭಾರತದ ಈ ಭೂಮಿಯನು ನನ್ನೆದೆಯು ಒಲಿದಿಹುದು ಇಂತು
ಅದು ಏಕಾಗಿ ಇಲ್ಲಿದ್ದುದು ಎಂತು ಒಬ್ಬನು ಅರಿಯಲಾರದೆ ನಿಂತು.

ಅವರಲಿರುವೆಲ್ಲವನು ನಾನೊಲಿದಿಹೆನು–
ಅವರ ಹಣ್ಣುಗಳೆನಗೆ ಪ್ರಿಯತರವು.
ನಡೆಸಿಹೆನು, ಎಂದೆಂದು ನಾನು
ಮೆಣಸಿನೊಡನೊಂದು ಯುದ್ಧವನು :
ಅವರೇನ ಮಾಡಲಿ ನಾನು ? ಅರಿಯೆನು !
ನಾನೆಣಿಸಿದುದಕಿಂತ ಪ್ರಬಲ ತಾನದು !

ಭಕ್ಷ್ಯ ವಸ್ತುವು ತಾನು ಅವುದಾದರೆ ಏನು ?
ಕಾರಣವು ಇರಲದಕೆ ಅಥವಾ ಇಲ್ಲದಿರಲಿ,
ಬೇಕಿರಲಿ, ಬೇಡದಿರಲಿ ಬೆರೆಸುವನು ಅದನು
ಕೈ ಹಿಡಿಯದೆಯೆ ತಾನೆಲ್ಲದಕು ಅವನು.
ಹದಗೊಳಿಸೆ ರುಚಿಯನು ಭಾರತೀಯನು ತಾನು
ಏನು ಬೇಕಾದರು ನಿಮ್ಮ : ಮೆಣಸಿಲ್ಲದಿರುವಂಥ
ಭೋಜ್ಯವಸ್ತುವನು ನಾನರಿಯೆ ಭಾರತದಿ.

ಹಿಂದಿರುಗಿ ಬಂದೆನು. ಮಾಸ್ಕೋದ ಅಡುಗೆಯನು
ಅಣಿಗೊಳಿಸುವಿನಿಯಳಿಗೆ ನಾನೊರೆವೆ ಇದನು :
"ನಿನ್ನ ಮೆಣಸನೆಲ್ಲವನು ಕೊಡು ನೀನೆನಗೆ !"
ಆ ಬಳಿಕ ನೆರೆಯ ಗೆಳೆಯರ ಮನೆಗೆ ತೆರಳಿ
ಅರಳು ನಗೆಯನು ಬೀರಿ ಹೇಳುವೆವು ನಾವು :
"ಮತ್ತಿನಿತು ಸಿಹಿ ನಿಮ್ಮ ಬಾಳುವೆಯು ತಾನಾಗಲಿ !"

---

* ಸೆರ್ಗೇಯ್ ಮಿಖಾಲ್ಕೋವ್ ಅವರ 'ಭಾರತವನ್ನು ಕುರಿತ ಕವನಗಳು' ಸಂಕಲನದಿಂದ. ವಾಲ್ಟರ್ ಮೇ ಅವರ ಅನುವಾದವನ್ನು ಅನುಸರಿಸಿ.

ಕೆ. ಆರ್. ಶೇಷಗಿರಿ

ಸುಮತಿ ಮದುವೆ

ಒಂದು ಮದುವೆ ಕಥೆಯ ನಾನಂ
ಹೇಳ ಬಯಸುವೆ
ವಿವಾಹವಾದ ರೀತಿಯನ್ನು
ತಿಳಿಸ ಲೆಳಸುವೆ ೧

ತನ್ನ ಮಗಳ ಕೇಳಿಕೊಂಡು
ಬಂದ ವರನನು
ಕೇಳಿ ಬಂದ ಗಂಡಿನವರ
ಮಾತಿಗೊಲವನಂ ೨

ಮದುವೆ ಹೇಗೆ ಮಗಳು ಹರೆಯ
ಳಿನ್ನು ಕಾಲವು
ಕಳೆಯಲೆಂದು ಮನಸು ಹೇಳೆ
ಆಸೆ ತುಂಬಲು ೩

ತನ್ನ ಸ್ಥಿತಿಯ ನೆನೆದುಕೊಳ್ಳೆ
ಬಡವೆ ನಾನುವೆ
ಗಂಡನಂತು ಮಗಳ ಮದುವೆ
ದಿಟದಿ ಮಾಡ್ವನೆ ? ೪

ವರ್ಷದಿಂದ ನರಳುತಿರುವ
ಗಂಡನಾಸೆಯೆ
ಗಂಡನಲ್ಲಿ ದುಡಿಮೆ ಇಲ್ಲ
ನನ್ನ ದುಡಿಮೆಯೆ ೫

ಅವರ ಇವರ ಮಾತಿಗೇಕೆ
ನಾನು ಕಾಯಲಿ
ಎಂಬ ಆತುರದಲಿ ಒಪ್ಪಿ
ಮಾತ ಕೊಡುವಲಿ ೬

ಮಾತು ಕೊಟ್ಟು ನನ್ನ ಬಳಿಗೆ
ಬಂದು ಕೇಳಲು
'ಹೇಗೆ ಭಾವ ಮಗಳ ಮದುವೆ
ಎಂತು ?' ಎನ್ನಲು ೭

ಪುಟ್ಟತಾಯ ಮಾತು ಕೇಳಿ
ಬೆಚ್ಚಿ ಬಿದ್ದೆನು
ಸುಮಂತಿ ಬಾಳು ಹೀಗೆ ಏನೊ
ಕರುಣೆ ಪಟ್ಟೆನು ೮

ಸುಮಂತಿಗೊ ಹತ್ತಾರು ವರುಷ
ಏಕೆ ಯೋಚನೆ ?
ಊರಿನಲ್ಲಿ ನಡೆದ ಘಟನೆ
ಕೇಳೆ ಯಾತನೆ ೯

'ಭಾವ ನೋಡಿ ಇವಳ ಗೆಳತಿ
ಓಡಿ ಹೋದಳು
ತಂದೆ ತಾಯಿಯರಿಗೆ ತಿಳಿದು
ಬಳಿಗೆ ಹೋದರು ೧೦

ಇವಳ ಗೆಳತಿ ಹೇಳೆ 'ನಾನು
ಬರೆನು ಎಂದಿಗು'
ತಂದೆ ತಾಯಿಯವರು ಬಲ–
ವಂತಗೊಳಿಸಲು ೧೧

'ಏನೆ ನೀನು ಇನ್ನು ಚಿಕ್ಕ
ಹುಡುಗಿಯಾದರು
ನಿನ್ನ ನಲ್ಲನೊಡನೆ ಮದುವೆ
ಸಿದ್ಧವೆಂದ'ರು ೧೨

ಕಪಟತನದ ಮಾತುಗಳನು
ಮಗಳು ಗಮನಿಸೆ
ಸೂಕ್ಷ್ಮದಲ್ಲಿ ಅರಿತು ಅವರೆ
ಮುಂದೆ ವಿವರಿಸೆ ೧೩

'ನಮ್ಮಲಿರುವ ಆಸ್ತಿ ಪಾಸ್ತಿ
ನಿನ್ನ ನಲ್ಲಗೆ
ಕೊಡುವೆ ಬಾರೆ ನಮ್ಮ ಜೊತೆಗೆ'
ಆಸೆ ತೋರಿಸೆ ೧೪

'ನಿಮ್ಮ ಆಸ್ತಿ ಪಾಸ್ತಿ ಒಲ್ಲೆ
ಹೋರಟು ಹೋಗಿರಿ
ನಲ್ಲನೊಡನೆ ಬಾಳುಯೆಂದು
ನಮ್ಮ ಹರಸಿರಿ ೧೫

ನಾನು ನಿಮ್ಮ ಬಳಿಗೆ ಬರಲು
ನನ್ನ ನಲ್ಲನು
ಜೀವಸಹಿತವಿರನು ಗೊತ್ತೆ
ಹೋಗಿರೆಂ'ದಳು ೧೬

'ನಾನು ನನ್ನ ನಲ್ಲನೊಡನೆ
ಸುಖದಿ ಬಾಳ್ವೆನು
ಆಸ್ತಿಯನ್ನು ದಾನ ಮಾಡಿ
ನಮಗೆ ಬೇಡವು ೧೭

ನಮ್ಮ ಬಾಳದೋಣಿಯನ್ನು
ಎಂದು ಒಡೆಯದೆ
ಸುಮ್ಮನಿದ್ದು ಊರಿಗ್ಹೋಗಿ
ಹಿಂದೆ ತಿರುಗದೆ' ೧೮

ಮಗಳ ಮಾತ ಅಪ್ಪ ಅಮ್ಮ
ಕೇಳಿ ರೋಷಕೆ
ಅವಳ ಮೇಲೆ ಕೋಪ ಬರಲು
ಮನವು ಶಾಪಕೆ ೧೯

ಮಗಳು ತಮ್ಮ ಮಾತುಗಳನು
ಕಿತ್ತು ಹಾಕಿರೆ
ಮನದ ಪ್ರೀತಿ ನೀತಿಯೆಲ್ಲ
ರೋಷವಾಗಿರೆ ೨೦

'ನಮ್ಮ ಆಸ್ತಿ ಪಾಸ್ತಿ ಇಲ್ಲ
ನಿನ್ನ ಪಾಲಿಗೆ'
'ಬೇಡಿ ಹೋಗಿ ಬಿಡಿರಿ ನಮ್ಮ
ಪ್ರೀತಿ ಒಲುಮೆಗೆ ೨೧

ಜಗವಿಶಾಲ-ಜೀವನಕ್ಕೆ
ಆಸ್ತಿ ಬೇಡವು
ನಮ್ಮ ಪ್ರೇಮಕಡ್ಡಿ ಬರದೆ
ತೆರಳಿ ನಮಿಪೆವು' ೨೨

ತಂದೆ ತಾಯಿ ಮಗಳ ಬಂಧ
ಕಿತ್ತು ಹೋಗಲು
ಅವರ ಪ್ರೇಮ ನಿರಂತರದಿ
ಸುಗಮವಾಗಲು ೨೩

ಹುಡುಗಿ ಕೊನೆಗು ಒಪ್ಪಲಿಲ್ಲ
ಬಿಡದೆ ನಲ್ಲನ
ಆತುರದಿ ಹೊಯ್ದರಂತು
ಮದ್ದು ಮಗಳನ ೨೪

ತಮ್ಮ ಊರಿಗೊಯ್ದರವಳ
ಕಾವಲಿಟ್ಟರು
ಎರಡು ಮೂರು ದಿನವು ಕಳೆಯೆ
ನಲ್ಲ ಬಂದನು ೨೫

ಎಲ್ಲಿ ಸುಮತಿ ? ಎಲ್ಲಿ ? ಎಂಬ
ಮನದಿ ಆತುರ
ಅವನು ಕೇಳ್ದ ಪ್ರಶ್ನೆಗಿಲ್ಲ
ನೇರ ಉತ್ತರ ೨೬

'ಹೌದು ನಾವು ಕರೆದುಕೊಂಡು
ಬಂದೆವಿಲ್ಲಿಗೆ
ಕಾಣೆವವಳ ನಿನ್ನೆಯಿಂದ
ಹೋದಳೆಲ್ಲಿಗೆ ?' ೨೭

ನಲ್ಲನಂತು ದುಃಖದಿಂದ
ಮಾಡ್ವುದೇನನು ?
ಎಲ್ಲಿಯೂ ಸುಳಿವಿಲ್ಲ ಒಂದು
ತಿಂಗಳಾದರು ೨೮

ಚಿಂತೆಯಿಂದ ಬಳಲಿ ಹೋಗಿ
ಕಾಣದಾದನು
ಇತ್ತ ಹುಡುಗಿ ಬಂಧನದಲಿ
ತೆಳ್ಳಗಾದಳು ೨೯

ಜೈಲಿನ ವಾಸಕ್ಕು ಕಡೆ
ಸ್ಥಿತಿಯು ತಂದಿತು ?
ನಲ್ಲ ನಲ್ಲೆಯರನು ದೂರ–
ವಿರಿಸೆ ಬಂದಿತು ೩೦

ಬೇರೆ ಕಡೆಗೆ ಮಗಳ ಮದುವೆ
ದೊಡ್ಡ ಯೋಜನೆ
ತಂದೆ ತಾಯಿಯರಿಗೆ ಬರಲು
ನಿತ್ಯ ಯಾತನೆ ೩೧

ಯಾರು ಒಪ್ಪುವವರು ಇಂಥ
ಹುಡುಗಿಯನ್ನನು
ಎಂಥ ಕೆಲಸವಾಯ್ತು ಅರ್ಥ-
ವಾಗೆ ತಪ್ಪನು ೩೨

ಮಂಗಳ ನಲ್ಲ ಎಲ್ಲಿಗ್ಹೋದ
ತಿಳಿದು ಹುಡುಕಿರೆ
ಸುದ್ದಿ ಬಂತು ಅವನ ಸಾವು
ಜನರು ತಿಳಿಸಿರೆ ೩೩

ಆಕಾಶವೆ ಕಳಚಿ ಬೀಳೆ
ಕ್ಷಣದಿ ಮೇಲೆಯೆ
ತಮ್ಮ ತಲೆಯು ಸಿಡಿದು ಕುಸಿಯೆ
ನಿಂತ ಕಡೆಯಲಿ ೩೩

ಅಕಟ ಶಿವನೆ ಏನು ಪರಿಕೆ
ಅಹಂಕಾರಕೆ
ತುಂಬಿ ಹೋಯ್ತು ಮಗಳ ಬಾಳು
ದುಃಖದಾಳಕೆ ೩೪

ನಲ್ಲ ಸತ್ತ ಸುದ್ದಿಯೇನು ರ-
ಹಸ್ಯದಲ್ಲಿಯೆ
ಮಗಳಿಗಂತು ತಿಳಿಸಲಿಲ್ಲ
ಮೌನದಲ್ಲಿಯೆ ! ೩೫

ಕೊನೆಗೆ ಅಳಿಯ ತಮ್ಮನಿಗೇ
ಮದುವೆ ಮಾಡಿರೆ
ಕಳೆಯಿತೊಂದು ವರುಷವು ಸಂ-
ಸಾರ ನಡೆಸಿರೆ ೩೬

ಇವನಿಗಂತು ತಿಳಿದೆ ಇತ್ತು
ನಡೆದ ಸಂಗತಿ
ಮಡದಿಗೊಂದು ದಿವಸ ಹೇಳೆ
ಆಯ್ತು ಅಪಕೃತಿ ೩೭

ಗಂಡನ ಮಾತನ್ನು ಕೇಳಿ
ಮಡದಿ ಹೃದಯವು
ಬಿರ ಬಿರನೆ ಊದಿಕೊಳಲು
ಬೆವರು ಒಸರಲು ೩೮

ಶರಿರದಲ್ಲಿ ವ್ಯಥೆ ಪ್ರವಾಹ
ಬಿಡದೆ ಪ್ರವಹಿಸೆ
ಕ್ಷಣದಿ ಮೂರ್ಛೆ ಹೋಗಲಂತು
ಬಾಯಿ ತೊದಲಿಸೆ ೪೦

ಗಂಡೆ ತನ್ನ ತೊಡೆಯ ಮೇಲೆ
ಅವಳ ಶಿರವನು
ಎಂಥ ಅನಾಹುತವು ಬರಲು
ಬಿಡಲು ಉಸಿರನು" ೪೦

** ** ** **

'ಇಂತು ಎರಡು ಜೀವಗಳನು
ವಿಧಿಯು ಸೆಳೆಯಿತು
ಮುಂದೆ ನನ್ನ ಮಗಳ ದಾರಿ
ಕಾಣ್ವುದೊಳ್ಳಿತು ೪೧

ನನ್ನ ಮಗಳು ಹರೆಯುಳಿನ್ನು
ಕೊಡಲಸಾಧ್ಯವು
ನಿಮ್ಮ ಮಗಗೆ ವಯಸು ಬಹಳ
ಎನಲು ಹಾಸ್ಯವು ೪೨

ಪಾಪ ಬಡವೆ ಏನೊ ಬಂದ-
ರದಕೆ ಒಪ್ಪದೆ
ಸಿಟ್ಟಿನಿಂದ ಗಂಡಿನವರು
ಮಾನ ಕಳೆಯರೆ ? ೪೪

ಗಂಡಿಗಂತು ವಯಸು ಹೆಚ್ಚು
ಎಲ್ಲ ಗೊತ್ತಿದೆ
ಭಾವ, ಆದರೆನ್ನ ಭಾರ
ಅಧಿಕವಾಗಿದೆ ೪೫

ಇಂದು ಬಡವರಾವು ಮುಂದೆ
ಎಂತು ಜೀವನ?
ಇನಿತಿರುವಾ ನೆರವಿನಿಂದ
ಆಗ್ವೆ ಪಾವನ ೪೬

ತನ್ನ ಮಗಳ ಮದುವೆಯನ್ನು
ಕಾಣುವಾಸೆಯು
ತಂದೆಯ ಮನಸ್ಸಿನೊಳಗೆ
ತುಂಬ ಕಾಸೆಯು ೪೭

ಹೆಣ್ಣು ಹೆತ್ತ ಹೊಟ್ಟೆಗದುವೆ
ಬೆಂಕಿ ಬೀಳದೆ ?
ಸಭ್ಯರಾದ ಗಂಡು ಸಿಗದೆ
ತಾಪ ಬಾರದೆ ? ೪೮

ಹೆಣ್ಣು ಮಕ್ಕಳಿರಲು ದಿಟವು
ಹೊನ್ನ ಶೂಲವು
ಪ್ರಾಯ ಮೀರಿ ಮನೆಯಲುಳಿಯೆ
ಸದಾ ಚಿಂತೆಯು ೪೯

ನನ್ನ ಗಂಡನೆನಿತು ಭಂಡ
ನಿಮಗೆ ತಿಳಿಯದೆ ?
ಆತನೊಡನೆ ಇನಿತು ಕಾಲ
ಜೀವ ತೇಯ್ದಿದೆ ೫೦

ಎಷ್ಟೊ ಹೆಣ್ಣು ಮಗಳ ಕಥೆಯು
ನಿಮಗೆ ತಿಳಿದಿರೆ
ಬಡವರಾದ ನಾವು ಹೇಗೆ
ನಡೆಯ ಹೇಳಿರೆ ? ೫೧

ಸುಮತಿ ಜಾಣೆ ನಮ್ಮ ಪ್ರಾಣೆ
ಮಾತ ಮೀರಳು
ತನ್ನ ಪ್ರಾಣಕಿಂತ ಅವಳು
ಎದುರು ನುಡಿಯಳು ೫೨

ನಾವು ಒಪ್ಪಿ ಧಾರೆಯೆರೆದ
ಜೀವದೊಂದಿಗೆ
ನಗುತ ನಗುತ ಜೀವನವ
ನಡೆಸಲಾರಳೆ ? ೫೩

ನಮ್ಮ ಜೀವನದ ಗುರಿಯು
ಇಲ್ಲಿ ಹುದುಗಿದೆ
ಮದುವೆಯಾಗೆ ಅವಳ ಬಾಳು
ಹೇಗೊ ಮುಗಿಯದೆ ? ೫೪

ನನ್ನ ಮಗಳ ಗೆಳತಿ ಮತ್ತು
ನಲ್ಲ ಸತ್ತರು
ಹೇಳಿ ಭಾವ ನನ್ನ ದಾರಿ
ಒಳಿತೆ ?' ಎಂದಳು ೫೫

ಎಲ್ಲ ಒಪ್ಪಿ ಈಗ ಬಂದು
ನನ್ನ ಕೇಳಿರೆ ?
ಏನು ತಾನೆ ನಾನು ಗೆಯ್ವೆ
ಬೇಡವೆನ್ನಲೆ ? ೫೬

ಇನ್ನು ಮೂರು ನಾಲ್ಕು ವರುಷ
ತಾಳು ಎನ್ನಲೆ ?
ಬಂದ ನೆಂಟತನವನಿನ್ನು
ತ್ಯಜಿಸು ಎನ್ನಲೆ ? ೫೭

ಅಳಿದು ಸುರಿದು ಈಗ ಒಂದು
ಸಲಹೆ ಮಾತನು
ಸುಮತಿ ಹಣೆಯ ಬರಹವೆಂತೊ
ಹೇಗೆ ಹೇಳ್ವೆನು ? ೫೮

ಮೊದಲೆ ಬಡವೆ ಬಂದ ಗಂಡು
ಬೇಡವೆಂದರೆ
ಇವಳ ಮನೆಗೆ ಬರುವರಾರು
ಪ್ರಶ್ನೆ ನಿಂತಿರೆ ೫೯

ಹುಡುಗ ಹುಡುಗಿಗಂತು ವರ–
ಸಾಮ್ಯವಿಲ್ಲವು
ಹುಡುಗಿಗಿಂತ ಎರಡು ಪಟ್ಟು
ವಯಸು ಹೇಳ್ವುದು ೬೦

ವಧುವ ಮನೆಗೆ ವರನೆ ಬಂದ
ಎಂಥ ಹರುಷವು
ಒಂದು ವಿಧದಿ ಮನದಿ ಆಯ್ತು
ಭಾರ ಹಗುರವು ೬೧

ಬಡವರ ಮನೆ ಹುಡುಕಿಕೊಂಡು
ಬಂದ ಕಾರಣ
ಈಗ ಹೇಗೆ ಹೇಳುವುದೋ
ಮುಂದೆ ತೋರಣ ೬೨

'ವೀಳ್ಯಶಾಸ್ತ್ರಕೆಲ್ಲ ಬನ್ನಿ'
ಎಂದು ಕರೆದಳು
'ಆಯ್ತು ನಿನ್ನ ಇಷ್ಟ ನಮ್ಮ
ಇಷ್ಟ'ವೆಂದೆವು ೬೩

ನಾವು ಬೇಡವೆಂದರದುವೆ
ತಪ್ಪೆ ಆಗ್ವುದು
ತಪ್ಪು ಒಪ್ಪುಗಳನು ಗುಣಿಸೆ
ಮಾತು ತಪ್ಪದು ೬೪

ನಮಗೆ ಮಾತ್ರ ಇಷ್ಟವಿರ-
ಲಿಲ್ಲವೆಂದಿಗು
ಆದರೇನು ಅವಳ ಬಯಕೆ
ಸಲ್ಲಲೆಂದೆವು ೬೫

ಯಾವ ಯಾವ ಕಾಲದಲ್ಲಿ
ನಡೆವುದೆಲ್ಲವು
ವಿಧಿಯ ಆಟವೆಂದು ತಿಳಿದು
ತೆಪ್ಪಗಿರುವೆವು ೬೬

ವಿಧಿಯು ಹಿರಿಯ ಅವನ ಮುಂದೆ-
ನಾವು ಕಿರಿಯರು
ವಿಧಿಯನೆದುರು ಹಾಕಿಕೊಳಲು
ಬಾಳಸಾಧ್ಯವು ೬೭

ಅಂತೆ ಅವಳ ಮಗಳ ಮದುವೆ-
ಗೊಪ್ಪಿಕೊಳ್ಳಲು
ಹರುಷ ತುಂಬಿ ಹೃದಯ ತುಂಬಿ
ಊರಿಗ್ಹೊರಟಳು ೬೮

ಊರಿಗ್ಹೋಗುವಾಗ ಹೇಳಿ
'ಮೂರು ದಿನದಲಿ
ನೀವು ಬನ್ನಿ ಎಲ್ಲ ಬನ್ನಿ
ಶಾಸ್ತ್ರ ನಡೆಯಲಿ' ೧೯

ಪುಟ್ಟತಾಯಿ ತೋಷದಿಂದ
ಊರ ಸೇರ್ದಳು
ಇತ್ತ ನಮ್ಮ ಮನೆಯಲಾದ
ಘಟನೆ ಹೇಳ್ವೆನು ೨೦

ಹರುಷದಿಂದ ಬಂಧು ಬಳಗ
ಕಾಲ ಕಳೆಯಲು
ಅವಳು ಹೋದ ರಾತ್ರಿ ನಮಗೆ
ದುಃಖವೆರಗಲು ೨೧

ನಾವು ಸಾಕುತಿದ್ದ ನಾಯಿ–
ಯದುವೆ ಬಸ್ಸಿಗೆ
ಸಿಕ್ಕಿ ತನ್ನ ಪ್ರಾಣವನ್ನು
ನೀಗಿ ಚಕ್ರಕೆ ೨೨

ಅಲ್ಲಿ ಶಾಸ್ತ್ರ ಇಲ್ಲಿ ವ್ಯಥೆಯು
ಹೇಗೆ ಹೋಗ್ವುದು ?
ದುಃಖದಿಂದ ಬೆಂದು ಹೋಗೆ
ಶಾಂತಿ ದೊರಕದು ೨೩

ಇದುವೆ ಅಪಶಕುನವೆಂದು
ಎಲ್ಲ ಬಗೆದರು
ಮುಂದೆ ಏನು ಕಾದಿದೆಯೋ
ಯಾರು ಬಲ್ಲರು ? ೨೪

ಅಲ್ಲಿ ಇಲ್ಲಿ ಸಾಲ ಮಾಡಿ
ಸುಮತಿ ಮದುವೆಗೆ
ಬಡವೆ ಬೇಡೆ ನೆರವು ನೀಡೆ
ಜನರು ಕರುಣೆಗೆ ೨೫

ಎಂಟುಂ ಹತ್ತು ತಿಂಗಳಿಂದ
ಅವಳ ಗಂಡನು
ಅನಾರೋಗ್ಯದಿಂದ ನರಳು-
ತಿದ್ದ ಭಂಡನು ೨೬

ಕಟ್ಟುಮಸ್ತಿನಿಂದ ಇದ್ದ
ಕಾಲದಲ್ಲಿಯೆ
ಮಡಿಯಲಿಲ್ಲ ಮೂರು ಕಾಸು
ಮೂರ್ಖನಂತೆಯೆ ೨೭

ಪುಟ್ಟತಾಯ ದುಡಿಮೆಯಿಂದ
ಕಾಲ ಕಳೆದನಂ
ಬೇಕಂ ಬೇಡ ತಿಂಡಿ ತಿನಿಸ
ತಂದು ತಿಂದನಂ ೨೮

ಬೀಡಿ ಚುಟ್ಟ ಸಿಗರೇಟುಂ
ನೋಡೆ ಪ್ರಾಣವು
ದಿನವು ಅವನುಂ ಸೇದಬೇಕು
ಕುಸಿಯೆ ತ್ರಾಣವು ೨೯

ವೈದ್ಯರೊಡನೆ ದಿನವು ಜಗಳ
ಪೈತ್ಯವಿರದಿರೆ
ಅದೂ ಇದೂ ತಿನಲು ರೋಗ
ಗುಣವು ಆಗ್ವುದೆ ? ೩೦

ಮಂಗಳ ಮದುವೆಗೊಂದು ದಿವಸ
ರೋಗ ವಿಷಮಿಸೆ
ಸಿಹೀ ಬೂಂದಿ ಕಾಫಿ ಬೀಡಿ
ಕುಡಿದು ಮಲಗಿರೆ ೩೧

ಇದ್ದಕಿದ್ದ ಹಾಗೆ ರೋಗ
ಹಿಡಿತ ತಪ್ಪಲುಂ
ಪರಲೋಕಕವನು ನಡೆಯೆ
ವ್ಯಥೆಯುಂ ತುಂಬಲುಂ ೩೨

ಸುಮತಿ ಮದುವೆ ೨೨

ಪುಟ್ಟತಾಯ ಮಗಳು ಸುಮತಿ
ಹೇಗೆ ಮದುವೆಗೆ
ಬಂದು ನಿಲ್ಲಬೇಕು ಹೇಳಿ
ಮರು ದಿವಸಕೆ ? ೨೩

ಮದುವೆಯೆಂಬ ಸಂಭ್ರಮವು
ಆರಿಹೋಯಿತು
ಮಂಟಪದಿ ದೀಪವಂತು
ನಂದಿಹೋಯಿತು ೨೪

ಬೀಸುತಿದ್ದ ಗಾಳಿ ತಾನೆ
ಹಾಗೆ ನಿಂತಿತು
ಹರಿಯುತಿದ್ದ ತೊರೆಯು ಅದುವೆ
ಸ್ತಬ್ಧವಾಯಿತು ೨೫

ಎಲ್ಲರ ಬಾಯೆಲ್ಲು ಮೊಳಗೆ
ಮದುವೆ ಆಗ್ವುದೆ ?
ಗಂಡಿನವರು ಬಂದ ಮೇಲೆ
ಸುದ್ದಿ ತಿಳಿಯದೆ ೨೬

ಪುಟ್ಟತಾಯ ತಾಳಿಗೊಡೆಯ
ಹೆಣ್ಣಿನಪ್ಪನು
ತನ್ನ ಪ್ರಾಣವನ್ನು ಬಿಟ್ಟ-
ನಿಷ್ಟನಿಟ್ಟನು ೨೭

ಮದುವೆ ಮಾಡೆ ಸೂತಕವು
ಹೇಗೆ ಮಾಡ್ವುದು ?
ಗಂಡಿನವರ ಮನವ ನಾವು
ಎಂತು ಗೆಲ್ವುದು ? ೨೮

ಎರಡು ಕೆಟ್ಟ ಶಕುನವಂತು
ಮುಂದೆ ಸುಳಿದಿವೆ
ಶುಭದ ಕಾರ್ಯಕಡ್ಡಿ ತಂದು
ನಗುತ ನಿಂತಿವೆ ೨೯

ಮದುವೆ ವಿಷಯದಲ್ಲಿ ನಿಲುವು
        ಮುಂದೆ ಕಾದಿದೆ
ಗಂಡಿನವರ ಮೇಲೆ ಭಾರ
        ಬೀಳ್ವುದರಿಯದೆ ? ೬೦

ಅಂತು ಇಂತು ಹೆಣ್ಣಿನವರು
        ಅಕ್ಕಿ ಕಾಳನು
ಬಾಯಿಯಲ್ಲಿ ಹಾಕಿಕೊಂಡು
        ಗಳಿಗೆ ಎಣಿಸಲು ೬೧

ಅಗೋ ಗಂಡಿನವರು ಬಂದು-
        ಬಿಟ್ಟರೆನುತಲಿ
ಹೆಣ್ಣಿನಪ್ಪ ಸತ್ತ ಸುದ್ದಿ
        ಎರಗೆ ಅವರಲಿ ೬೨

ಮುಂಕುಕವಿಯುವಂತೆ ಒಮ್ಮೆ
        ಕೂರೆ ನೆಲದಲಿ
ಸಿಡಿಲು ಹೊಡೆಯೆ ತಡೆವರಾರು
        ಎನುತ ಕ್ಷಣದಲಿ ೬೩

ತಿಳಿದ ಕೆಲವರಂತು ಗಂಡಿ-
        ನವರ ನೋಡಲು
ಒಂದು ಕಡೆಗೆ ಸೇರೆ ಬಂದ
        ಬವಣೆ ನೀಗಲು ೬೪

'ಏನೆ ಇರಲಿ ಇಲ್ಲದಿರಲಿ
        ಮದುವೆಯಾಗಲಿ'
ಎಲ್ಲರೊಂದೆ ಕಂಠದಲ್ಲಿ
        ಮೊಳಗೆ ದನಿಯಲಿ ೬೫

'ಅಯ್ಯೊ ಇದುವೆ ಎಲ್ಲ ಸಾ-
        ಮಾನ್ಯವಾಗಿದೆ
ಲೋಕದಲ್ಲಿ ಸಾಯದವರ
        ಪುಣ್ಯವೆಲ್ಲಿದೆ ? ೬೬

ನಡಿರಿ ಮದುವೆಮಂಟಪಕ್ಕೆ
ಎಲ್ಲ'ರೆಂದರು
ಪುಟ್ಟತಾಯಿ ಬಳಗಕೆಲ್ಲ ೯೭
ಹರುಷ ತಂದರು

ನಿಂತ ಗಾಳಿ ತನಗೆ ತಾನೆ
ಬೀಸ ಹೊರಟಿತು
ಬತ್ತಿ ಹೋದ ತೊರೆಯು ತುಂಬಿ ೯೮
ಹರಿಯ ತೊಡಗಿತು

ಗಂಡಿನವರಿಗಂತು ಮನಸಿ
ನೊಳಗೆ ಸಂತಸ
ಮುಟ್ಟು ಮೈಲಿಗೆಯನು ತಳ್ಳಿ ೯೯
ಆಗಲೆಸ್ನಾತ

ವಯಸು ಮೀರಿ ಮೊಗವು ಬಾಡು
ತಿರುವ ಗಂಡಿಗೆ
ಮುಂದೆ ಮಗಗೆ ಕೊಡುವರಾರು ೧೦೦
ಹೆಣ್ಣ ತಣ್ಣಗೆ

ಗಂಡು ಹೆಣ್ಣಿನವರು ಒಟ್ಟು
ಗೂಡೆ ಕಾರ್ಯಕೆ
ಸಂತಸವು ತುಂಬಿ ಬರಲು ೧೦೧
ವಿಧಿಯ ಕೊಟಕೆ

ಮದುವೆ ನಿಂತೆ ಹೋಯ್ತು ಎಂದು
ಭಾವಿಸಿದ್ದೆವು
ವಿಧಿಯ ಆಟಕಿಂತು ನಾವು ೧೦೨
ಮಾರು ಹೋದೆವು

ಮಾರನೆಯ ದಿನದಿ ಬಂದ
ಬಂಧು ಬಳಗಕೆ
ಹೆಣ್ಣಿನಪ್ಪನವರನಾದ ೧೦೩
ವಿಷಯ ಅಂತ್ಯಕೆ

ಮದುವೆ ಮಂಟಪದಲಿ ದನಿಯು
ಮೊಳಗೆ ಓಲಗ
ಶುಭದಿ ಮಾಂಗಲ್ಯ ಧಾರೆ
ಸೂಸೆ ನಗು ಮೊಗ ೧೦೪

ಸುಮತಿ ಮಗಳ ಪುಟ್ಟತಾಯ
ಒಡಲು ಬೆಂಕಿಗೆ
ಸರಿ ಸಮಾನವಾಗಿ ನಿಲ್ಲೆ
ಮುಂದೆ ಬೆಳಕಿಗೆ ೧೦೫

ಅಪ್ಪ ಸತ್ತನೆಂದು ಬಂಧು
ಬಳಗವೆಲ್ಲವು
ನಿಲಿಸೆ ಆಗುತಿತ್ತೆ ಹೇಳಿ
ಸುಮತಿ ಮದುವೆಯು ೧೦೬

ಅಂತು ಸೂತಕದಲಿ ಸುಮತಿ
ಮದುವೆಯಾಯಿತು
ಮುಂದೆ ಅವಳ ಬಾಳಿಗೊಂದು
ನಾಂದಿಯಾಯಿತು ೧೦೭

ಕಾವ್ಯಾವಲೋಕನ

ಜಾನಪದ ವಿಹಾರ (ಸಂ. ೨), ಕ್ಯಾತನಹಳ್ಳಿ ರಾಮಣ್ಣ, ಪ್ರಕಾಶನ : ದಿನಕರ ಪ್ರಕಾಶನ, 690, 7ನೇ ಬ್ಲಾಕ್,ಬನಶಂಕರಿ, 3ನೇ ಹಂತ, ಬೆಂಗಳೂರು-570 085, ಪುಟ: 136, ಬೆಲೆ : ರೂ. 10.

ಇತ್ತೀಚಿನ ದಿನಗಳಲ್ಲಿ ಜಾನಪದ ಅಧ್ಯಯನ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಸಂಗ್ರಹಣೆ ಮತ್ತು ಅದರ ವಿಶ್ಲೇಷಣೆಯ ಹಂತವನ್ನು ಮೀರಿ ಬೆಳೆದಿದೆ. ಒಂದು ವಿಷಯವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಬಿಡಿಸಿ ಅದರ ಅಂತಸ್ಸತ್ವವನ್ನು ಕೆದಕಿ ಮೂಲವನ್ನು ಪತ್ತೆಹಚ್ಚುವ ಪ್ರಯತ್ನ ಈಗ ನಡೆದಿದೆ. ಯಾವುದೇ ಒಂದು ಸಂಪ್ರದಾಯ, ಆಚರಣೆ, ನಂಬಿಕೆ, ಕಲೆ ಮುಂತಾದುವು ಈ ಹಿನ್ನೆಲೆಯಲ್ಲಿ ಪಡೆದುಕೊಳ್ಳಬಹುದಾದ ಸ್ಥಾನವನ್ನು ನಿರ್ದೇಶಿಸುವ ದೃಷ್ಟಿ ವಿಶೇಷವಾಗಿ ಗೋಚರವಾಗುತ್ತಿದೆ. ಇದೊಂದು ಶ್ಲಾಘ್ಯ ಪ್ರಯತ್ನ. ಯಾವುದೇ ಜಾನಪದ ವಸ್ತು-ವಿಷಯ ನಮ್ಮ ಮೂಲ ಸಂಸ್ಕೃತಿಯ ಸತ್ವವನ್ನೊಳಗೊಂಡ ಅಡಿಗಲ್ಲು. ಅದನ್ನು ಅರ್ಥೈಸದ ಹೊರತು ಅದರ ಮಹತ್ವ ತಿಳಿಯುವುದಿಲ್ಲ. ಹಾಗೆಯೇ ನಮ್ಮ ಜನಪದದ ನೈಜ ಪ್ರತಿಭೆ ವ್ಯಕ್ತವಾಗುವುದಿಲ್ಲ. ನಮ್ಮ ಅಧ್ಯಯನವೆಲ್ಲವೂ ಈವೊಂದು ಹಿನ್ನೆಲೆಯನ್ನು ಒಳಗೊಂಡಿರಬೇಕಾಗುತ್ತದೆ.

ಈ ದೃಷ್ಟಿಯಿಂದ ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರ 'ಜಾನಪದ ವಿಹಾರ' ಗಮನಾರ್ಹ ಕೃತಿ. ಒಟ್ಟು ಎಂಟು ವಿವಿಧ ವಿಷಯಗಳಿಗೆ ಸಂಬಂಧಿಸಿದ ಲೇಖನಗಳ ಸಂಚಯ-'ಜಾನಪದ ವಿಹಾರ'. ಇದರ ಮೊದಲ ಲೇಖನವೇ 'ಟಬೂ' (Taboo). ಜನಪದ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶೇಷ ಮಹತ್ವವನ್ನು ಹೊಂದಿರುವ-ಧಾರ್ಮಿಕವಾಗಿ, ಸಾಮಾಜಕವಾಗಿ ಸ್ಥಾನ ಪಡೆದಿರುವ-ಜನಪದ ಸಮಾಜದ ಹಲವಾರು ಆಚರಣೆಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಅಲಿಖಿತ ಕಾನೂನನ್ನು 'ಟಬೂ' ಎಂದು ಕರೆಯಲಾಗುತ್ತದೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಈಗ 'ನಿಷಿದ್ಧತೆ', 'ನಿಷೇಧ' ಎಂಬ ಪದಗಳು ರೂಢಿಯಲ್ಲಿವೆ. ತಮ್ಮ ಲೇಖನದ ಪ್ರಾರಂಭದಲ್ಲಿ ಶ್ರೀ ರಾಮಣ್ಣನವರು 'ಟಬೂ' ವಿಗೆ ಸಂವಾದಿಯಾಗಿ ಈ ಪದಗಳನ್ನು ಬಳಸುವ ಔಚಿತ್ಯದ ಪ್ರಸ್ತಾಪವನ್ನು ಮಾಡಿದ್ದಾರೆ. 'ನಿಷೇಧ' ಅಥವಾ 'ನಿಷಿದ್ಧತೆ' ಎಂಬುವು prohibition ಎಂಬ ಅರ್ಥವನ್ನು ಹೊಂದುವುದರಿಂದ 'ಟಬೂ' ಶಬ್ದವನ್ನೇ ಏಕೆ ಕನ್ನಡ ಶಬ್ದವಾಗಿಸಿಕೊಳ್ಳಬಾರದು ? ಎಂಬ ಸೂಚನೆಯನ್ನು ಇತ್ತಿದ್ದಾರೆ. ಇದು ಆಲೋಚಿಸಬಹುದಾದ ವಿಚಾರವೇ ಆದರೂ ಈಗಾಗಲೇ 'ನಿಷಿದ್ಧತೆ' ಎಂಬ ಶಬ್ದ ಕನ್ನಡದಲ್ಲಿ 'Taboo'

ಶಬ್ದಕ್ಕೆ ಸಂವಾದಿಯಾಗಿ ಸಮರ್ಥವಾಗಿ ಬಳಕೆಯಾಗುತ್ತಿದೆ. ಅದರಲ್ಲಿ ಯಾವ ಗೊಂದಲವೂ ಕಂಡುಬರುತ್ತಿಲ್ಲ. ಯಾವುದೇ ಶಬ್ದದ ಅರ್ಥ ನಾವು ಬಳಸುವುದರ ಮೇಲೆ ಮತ್ತು ಬಳಕೆಯ ಮೇಲೆ ನಿಲ್ಲುತ್ತದೆ ಎಂಬುದು ಭಾಷಾವಿಷಯಕ್ಕೆ ಸಂಬಂಧಿಸಿದಂತೆ ಹೊಸ ವಿಷಯವೇನೂ ಅಲ್ಲ. ಅಲ್ಲದೆ ಕೆಲವರು 'Taboo' ಮತ್ತು 'ನಿಷಿದ್ಧತೆ' ಪದಗಳನ್ನು ಒಟ್ಟೊಟ್ಟಿಗೇ ಬಳಸುತ್ತಿರುವುದೂ ಉಂಟು. ಕೊನೆಗೆ ಯಾವುದು ಉಳಿದುಕೊಳ್ಳುತ್ತದೆ ಎಂಬುದೂ ಕಾದುನೋಡಬೇಕಾದ ವಿಚಾರ.

ಈವೊಂದು ಲೇಖನದಲ್ಲಿ ಶ್ರೀ ರಾಮಣ್ಣನವರು 'ಟಬೂ'ವಿನ ಹುಟ್ಟು, ಅದಕ್ಕಿರಬಹುದಾದ ಕಾರಣಗಳು, ಅದಕ್ಕೆ ಸಂಬಂಧಿಸಿದ ವಿವಿಧ ವಿದ್ವಾಂಸರ ಅಭಿಪ್ರಾಯಗಳು ಹಾಗೂ ಪ್ರಪಂಚದ ನಾನಾ ಭಾಗಗಳಲ್ಲಿ ಕಂಡುಬರುವ ಈ 'ಟಬೂ'ವಿನ ಸ್ವರೂಪ, ಲಕ್ಷಣ, ಅವುಗಳ ಹಿನ್ನೆಲೆ ಮುಂತಾದವುಗಳನ್ನು ಕುರಿತು ದೀರ್ಘವಾಗಿ ವಿಚಾರಮಾಡಿದ್ದಾರೆ. ಲೇಖನದ ಕೊನೆಯ ಭಾಗದಲ್ಲಿ "ಮಾನವನ ಪ್ರತಿಯೊಂದು ಬಾಹ್ಯ ಚಟುವಟಿಕೆಯಲ್ಲೂ ಮನಸ್ಸಿನ ವ್ಯಾಪಾರವನ್ನೇ ಕಾಣುವ ಮನೋವಿಜ್ಞಾನಿಗಳಿಗೂ ಮಾನವ ಇತಿಹಾಸವನ್ನು ವಿಶ್ಲೇಷಿಸುವ ಮಾನವಶಾಸ್ತ್ರಜ್ಞರಿಗೂ ಸಮೃದ್ಧ ಆಹಾರವಾಗಬಲ್ಲ ಈ 'ಟಬೂ' ಅಗತ್ಯವೂ ಅನುಕರಣೀಯವೂ ಆಗಿರುವಂತೆ ಅನಗತ್ಯವೂ ತ್ಯಾಜ್ಯವೂ ಆಗಿದೆ" ಎಂಬ ಮಾತುಗಳು 'ಟಬೂ'ವಿನ ಬಗೆಗೆ ಇರುವ ಗೊಂದಲವನ್ನು ಮತ್ತು ಜನಪದ ಸಮಾಜದಲ್ಲಿ ಅವು ಹೊಂದಿರುವ ಹಿಡಿತವನ್ನು ಸೂಚಿಸುತ್ತವೆ. ಮನುಷ್ಯನ ಮನಸ್ಸು ಎಷ್ಟೆಷ್ಟು ರೀತಿಯಲ್ಲಿ ಆಲೋಚಿಸುತ್ತದೆ ಎಂಬುದು ಈ 'ಟಬೂ'ಗಳಿಂದ ವ್ಯಕ್ತವಾದರೂ ಅವುಗಳಿಗಿರಬಹುದಾದ ನಿಜವಾದ ಅರ್ಥವನ್ನು, ಹಿನ್ನೆಲೆಯನ್ನು ಪಡೆದುಕೊಳ್ಳುವುದು ಕಷ್ಟವಾಗುತ್ತದೆ. ಅವೊಂದು ಸಾಮಾಜಿಕ ಸಂದರ್ಭದ ಹಿನ್ನೆಲೆಯೂ ಅಲ್ಲಿ ಬಹಳ ಮುಖ್ಯವಾದುದು. ಅಲ್ಲಿಯವರೆಗೆ ಈ ಗೊಂದಲ ಇದ್ದದ್ದೇ.

ಇಲ್ಲಿಯ ಎರಡನೆಯ ಲೇಖನ-ಒಗಟುಗಳು. ಈಗಾಗಲೇ ಒಗಟುಗಳನ್ನು ಕುರಿತಂತೆ ಸಾಕಷ್ಟು ಲೇಖನಗಳು ವಿವಿಧ ಸಂದರ್ಭಗಳಲ್ಲಿ ಹೊರಬಿದ್ದಿವೆ. ಹಾಗಾಗಿ ಇದೊಂದು ಸಮೀಕ್ಷಾ ಲೇಖನವಾಗಿ ಗಮನಾರ್ಹವಾಗಿದೆ. ಪ್ರಾರಂಭದಲ್ಲಿ ಒಗಟಿನ ಸ್ವರೂಪವನ್ನು ಹೇಳಿ ಅನಂತರ ಜನಪದ ಒಗಟುಗಳು, ಸಾಹಿತ್ಯಕ ಒಗಟುಗಳು ಎಂದು ಪ್ರಧಾನವಾಗಿ ಎರಡು ವರ್ಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಜನಪದ ಒಗಟುಗಳನ್ನು ಅವುಗಳ ಸ್ವರೂಪ-ಲಕ್ಷಣಗಳ ದೃಷ್ಟಿಯಿಂದ ಸಂಭಾಷಣಾ ರೂಪದ ಒಗಟುಗಳು, ಹಾಡಿನ ರೂಪದ ಒಗಟುಗಳು, ಗಣಿತಸಂಬಂಧಿ ಒಗಟುಗಳು, ನಂಬಿಕೆಗಳಿಗೆ ಸಂಬಂಧಿಸಿದ ಒಗಟುಗಳು, ಸರ ಒಗಟುಗಳು, ಅಶ್ಲೀಲ ರೂಪದ ಒಗಟುಗಳು, ಕಥಾ ಹಿನ್ನೆಲೆಯ ಒಗಟುಗಳು ಎಂದು ವರ್ಗೀಕರಿಸಿದ್ದಾರೆ. ಕೊನೆಯಲ್ಲಿ ಇದುವರೆವಿಗೆ ಹೊರಬಂದಿರುವ ಒಗಟುಗಳ ಸಂಕಲನಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಇಲ್ಲಿಯ ಕೆಲವು ವಿಚಾರಗಳು ಚರ್ವಿತಚರ್ವಣವೆನಿಸಿದರೂ, ಈವೊಂದು ಪುಟ್ಟ ಲೇಖನದಲ್ಲಿ ಒಗಟು ಸಂಬಂಧಿಯಾದ ಎಲ್ಲ ವಿಚಾರಗಳನ್ನು ಅಡಗಿಸಿ ಹೇಳುವಲ್ಲಿ ಶ್ರೀ ರಾಮಣ್ಣನವರು ಕೌಶಲವನ್ನು ತೋರಿದ್ದಾರೆ.

‘ಪ್ರಾಣಿ ಜಾನಪದ’–ಇಲ್ಲಿಯ ಮೂರನೆಯ ಲೇಖನ. ಮಾನವ ಮತ್ತು ಪ್ರಾಣಿಗಳ ಸಂಬಂಧ, ಆ ಸಂಬಂಧದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಬಗೆಬಗೆಯ ನಂಬಿಕೆಗಳು, ಅವಕ್ಕಿರಬಹುದಾದ ಕಾರಣಗಳು–ಈ ವಿಷಯಗಳನ್ನು ಒಳಗೊಂಡ ಸ್ವಾರಸ್ಯಪೂರ್ಣ ಲೇಖನ. ಮಾನವ ಮತ್ತು ಪ್ರಾಣಿಗಳ ಸಂಬಂಧ ಅತ್ಯಂತ ಪ್ರಾಚೀನವಾದಂತೆಯೇ ಆ ಸಂಬಂಧವಾದ ನಂಬಿಕೆಗಳೂ ಪ್ರಾಚೀನ. ಹಾಗೆಯೇ ಆ ನಂಬಿಕೆಗಳು ಮಾನವನ ಬದುಕಿನಲ್ಲಿ ಮಾಡಿರುವ ಪರಿಣಾಮ ಮುಂತಾದವುಗಳ ಬಗೆಗೆ ಬೆಳಕು ಚೆಲ್ಲುವ ಲೇಖನ. ಹೀಗಾಗಿ ಪ್ರಾಣಿಸಂಬಂಧವಾದ ಜಾನಪದ, ಮಾನವನ ಸಂಸ್ಕೃತಿಯ ಇತಿಹಾಸ ಮತ್ತು ಸ್ವರೂಪವನ್ನು ಗುರುತಿಸುವ ಹಿನ್ನೆಲೆಯಲ್ಲಿ ಪ್ರಯೋಜನಕಾರಿ ಎಂಬ ಅಂಶವನ್ನು ಯಾರೂ ತಳ್ಳಿಹಾಕುವಂತಿಲ್ಲ. ಶ್ರೀ ರಾಮಣ್ಣನವರ ಈ ಲೇಖನದಲ್ಲಿ ಅವರ ಹೆಜ್ಜೆ ಗುರುತುಗಳನ್ನು ಕಾಣಬಹುದು.

ಉತ್ತರ ಕರ್ನಾಟಕದ ವೃತ್ತಿಗಾಯಕ ಸಂಪ್ರದಾಯವಾದ ‘ಭೂತೇರು’ ಇಲ್ಲಿಯ ಒಂದು ವಿಶಿಷ್ಟ ಲೇಖನ. ಒಂದು ನಿರ್ದಿಷ್ಟ ದೈವಕ್ಕೆ ತಮ್ಮನ್ನು ತಾವೇ ಅರ್ಪಿಸಿಕೊಂಡು ಆ ದೈವದ ಹೆಸರಿನಲ್ಲಿ ನಡೆದುಕೊಳ್ಳುವ ಒಂದು ವರ್ಗ. ಆದರೆ ಇಲ್ಲಿ ಒಂದು ತೊಡಕೆಂದರೆ, ಈ ಒಂದು ಸಂಪ್ರದಾಯ ಒಂದಲ್ಲ ಒಂದು ಬಗೆಯಲ್ಲಿ ಕರ್ನಾಟಕದಾದ್ಯಂತವೂ ಕಂಡುಬರುವಂತಹುದೇ ಆಗಿದೆ. ಹೆಚ್ಚಾಗಿ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಈವೊಂದು ಸಂಪ್ರದಾಯವನ್ನು ಕಾಣಬಹುದು. ಮೂಲಭೂತವಾಗಿ ಇದರ ಹೆಸರಿನಲ್ಲಿಯೇ ತೊಡಕಿರುವಂತೆ, ಸಂಪ್ರದಾಯದಲ್ಲಿಯೂ ಕೆಲವೊಂದು ಅನುಮಾನಗಳು ಎದುರಾಗುತ್ತವೆ. ಭೂತೇರು, ಗೊಂದಲಿಗರು, ಜೋಗೇರು, ಜೋಳಿಗೇರು, ಚೌಡಿಕೆಯವರು—ಈ ಹೆಸರುಗಳಲ್ಲಿ ತೊಡಕಿರುವಂತೆ ತೋರುತ್ತದೆ. ಹಾಗೆಯೇ ಶ್ರೀ ರಾಮಣ್ಣನವರು ಇವುಗಳ ಮೂಲಚೂಲವನ್ನು ಶೋಧಿಸುವ ಕೆಲಸವನ್ನೂ ಮಾಡಿದ್ದಾರೆ. ಆ ಒಂದೊಂದಕ್ಕೂ ಇರುವ ಅಂತರವನ್ನು ಗುರುತಿಸುವ ಪ್ರಯತ್ನ ನಡೆಸಿದ್ದಾರೆ. ಈ ಒಂದೊಂದಕ್ಕೂ ಹೆಚ್ಚುಹೆಚ್ಚು ಹೋಲಿಕೆ ಇರುವುದೇ ಈ ಗೊಂದಲಕ್ಕೆ ಮುಖ್ಯ ಕಾರಣ. ದಕ್ಷಿಣ ಕರ್ನಾಟಕದ ಚೌಡಿಕೆಯವರು, ಉತ್ತರ ಕರ್ನಾಟಕದಿಂದ ಬಂದ ‘ಗೊಂದಲಿಗರು,’ ‘ಭೂತೇರು’ ಎಂದು ಅಭಿಪ್ರಾಯಿಸುತ್ತ, ಆ ಹೆಸರಿಗೆ ಬದಲಾಗಿ ತಾವು ಬಳಸುವ ‘ಚೌಡಿಕೆ’ ವಾದ್ಯದ ಹೆಸರನ್ನೇ ಇಟ್ಟುಕೊಂಡಿರಬೇಕು ಎನ್ನುತ್ತಾರೆ. ಇಂತಹವೇ ಇನ್ನೂ ಹಲವು ಸಮಸ್ಯೆಗಳನ್ನು ಲೇಖಕರು ಈ ಸಂದರ್ಭದಲ್ಲಿ ಎತ್ತಿ, ಆ ಮೂಲಕ ವಿದ್ವಾಂಸರ ಗಮನ ಸೆಳೆದಿದ್ದಾರೆ. ಹೆಚ್ಚಿನ ಸಂಶೋಧನೆಗೆ ಪ್ರೇರಣೆ ನೀಡಿದ್ದಾರೆ.

‘ಜೀಡೆಯ ಹಾಡುಗಳು’—ಉತ್ತರ ಕರ್ನಾಟಕದಲ್ಲಿ ದೀಪಾವಳಿಯ ಸಂದರ್ಭದಲ್ಲಿ ಗೋವುಗಳನ್ನು ಕುರಿತು ಹಾಡುವ ಹಾಡುಗಳೇ ಆಗಿವೆ. ಇದೊಂದು ವಿಶಿಷ್ಟ ಸಂಪ್ರದಾಯವಾಗಿಯೂ ಅಲ್ಲಿ ಬೆಳೆದುಬಂದಿದೆ. ಆದರೆ ಇದನ್ನೇ ಹೋಲುವ ‘ಅಂಟಿಗೆ–ಪಂಟಿಗೆ’ ಸಂಪ್ರದಾಯ ದಕ್ಷಿಣ ಕರ್ನಾಟಕ ಭಾಗದಲ್ಲಿಯೂ ಕಂಡುಬರುತ್ತದೆ. ಡಾ.

ಎಂ. ಚಿದಾನಂದಮೂರ್ತಿ ಅವರು ಇದಕ್ಕೆ ಸಂಬಂಧಿಸಿದಂತೆ ಈ ಕೃತಿಯ ಮುನ್ನುಡಿಯಲ್ಲಿ ಹೇಳಿರುವ ಕೆಲವು ಮಾತುಗಳು ಗಮನಾರ್ಹ. ಶ್ರೀ ರಾಮಣ್ಣನವರು ಆ ಹಿನ್ನೆಲೆಯಲ್ಲಿ ಈ ಲೇಖನವನ್ನು ರಚಿಸಿದ್ದರೆ ಇನ್ನು ಹೆಚ್ಚು ಮಹತ್ವದ್ದಾಗುತ್ತಿತ್ತು. ಆ ಅಂಶವನ್ನು ಕೈಬಿಟ್ಟು, ಬರಿಯ 'ಕೀಡೆಯ ಹಾಡುಗಳು' ಲೇಖನವನ್ನು ಗಮನಿಸುವಾಗ ಒಂದು ವಿಶಿಷ್ಟ ಸಂಪ್ರದಾಯದ ಸಮಗ್ರ ಚಿತ್ರವನ್ನು ಕೊಡುವ ಸಮರ್ಥ ಲೇಖನವಾಗಿದೆ. ಅಲ್ಲಿಯ ಹಾಡುಗಳ ಸ್ವರೂಪ, ಲಕ್ಷಣಗಳನ್ನು ಹಾಗೂ ಆ ಹಿನ್ನೆಲೆಯ ಮಹತ್ವವನ್ನು ನಮ್ಮ ಮುಂದೆ ತೆರೆದಿಡುತ್ತದೆ.

ಕೊಡವ ಸಂಸ್ಕೃತಿಯ ಒಂದು ಪ್ರಮುಖ ಭಾಗವಾದ ವರ್ಣರಂಜಿತ 'ಹುತ್ತರಿ ಕುಣಿತ'ವೇ 'ಕೊಡವರ ಹೊಸಕ್ಕಿ ಹಬ್ಬ'. ಹುತ್ತರಿಹಬ್ಬದಲ್ಲಿ ಕುಣಿಯುವ ಕುಣಿತವೇ 'ಹುತ್ತರಿ ಕುಣಿತ'. ಇದರ ಮೂಲದ ಬಗೆಗೆ ಇರುವ ಒಂದು ಐತಿಹ್ಯದೊಂದಿಗೆ ಕೇರಳದ 'ಓಣಂ ಹಬ್ಬ'ಕ್ಕೂ ಕೊಡಗಿನ 'ಹುತ್ತರಿ ಹಬ್ಬ'ಕ್ಕೂ ಇರುವ ನಂಟನ್ನು ಸೂಚಿಸುವುದರೊಂದಿಗೆ ಲೇಖನ ಆರಂಭವಾಗುತ್ತದೆ. ಮುಂದೆ ಈ ಹಬ್ಬದ ಆಚರಣೆಯ ವಿಧಾನ, ರೀತಿ, ನೀತಿಯನ್ನೂ ಕುರಿತ ಸಂಪೂರ್ಣ ವಿವರವಿದೆ. ಆ ಒಂದು ಹಬ್ಬದ ಸಂಪ್ರದಾಯವನ್ನು ಕುರಿತ ಒಳ್ಳೆಯ ಪರಿಚಯಾತ್ಮಕ ಲೇಖನವಾಗಿದೆ.

'ಕಲ್ಲಿಮಟ್ಟಿ ಕಾಶೀಬಾಯಿ : ಒಂದು ವಿಚಾರ' ನೈಜ ಘಟನೆಯೊಂದನ್ನು ಆಧರಿಸಿ ಹುಟ್ಟಿಕೊಂಡ ಲಾವಣಿ. ಇಂತಹ ಲಾವಣಿಗಳ ಪರಂಪರೆ ಉತ್ತರ ಕರ್ನಾಟಕ ಭಾಗದಲ್ಲಿ ಅಪರೂಪವೇನಲ್ಲ. ಕತೆಗಾರರಾದ ಶ್ರೀ ರಾಮಣ್ಣನವರು ಹೃದಯಸ್ಪರ್ಶಿಯಾಗಿ ಆ ಸನ್ನಿವೇಶವನ್ನು ಇಲ್ಲಿ ವಿವರಿಸಿದ್ದಾರೆ. ಸುಮಾರು ೧೯೦೫ ರಲ್ಲಿ ನಡೆದಿರಬಹುದಾದ ಈ ಘಟನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಪಾಠಾಂತರಗಳ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಸತ್ಯ ಸಂಗತಿಯೊಂದರ ಸ್ಪಷ್ಟ ಚಿತ್ರಣವಾಗಿದೆ.

ಈ ಕೃತಿಯ ಕೊನೆಯ ಲೇಖನ 'ನರಬಲಿ : ಒಂದು ಭೀಕರ ಚಿತ್ರ' ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ 'ಬಲಿ' ಪದ್ಧತಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಬಂದಿದೆ. ಮನುಷ್ಯ ಸ್ವಾರ್ಥದ ಹಿನ್ನೆಲೆಯಲ್ಲಿ ಏನೆಲ್ಲ ಮಾಡುತ್ತಾನೆ ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನ. ಫ್ರೇಜರ್ ಅವರು 'ದಿ ಗೋಲ್ಡನ್ ಬೋ' ಕೃತಿಯಲ್ಲಿ ಪ್ರಸ್ತಾಪಿಸಿರುವ ಅಂತಹ ಒಂದು ನರಬಲಿಯ ಚಿತ್ರದ ನಿರೂಪಣೆ ಇಲ್ಲಿದೆ. ಉಸಿರು ಕಟ್ಟಿಸುವ ಸನ್ನಿವೇಶಗಳ ಈ ಭೀಕರ ಚಿತ್ರದ ವರ್ಣನೆ ಮಾನವನ ಅಂಧಶ್ರದ್ಧೆಗೆ ಸಾಕ್ಷಿಯೂ ಹೌದು. ಶ್ರೀ ರಾಮಣ್ಣನವರು ಇದರ ಜೊತೆಗೆ ಮುನ್ನುಡಿಕಾರರೂ ಸೂಚಿಸಿರುವಂತೆ ಕರ್ನಾಟಕದಲ್ಲಿಯ ಕೆಲವು ಬಲಿಪದ್ಧತಿಗಳ ಬಗ್ಗೆಯೂ ಪ್ರಸ್ತಾಪಿಸಿದ್ದರೆ ಚೆನ್ನಾಗಿರುತ್ತಿತ್ತು.

ಒಟ್ಟಾರೆ ಶ್ರೀ ರಾಮಣ್ಣನವರ 'ಜಾನಪದ ವಿಹಾರ' (ಸಂ. ೨) ಒಂದು ಸ್ವಾಗತಾರ್ಹ ಕೃತಿ. ಜನಪದ ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುವ ಕೃತಿ. 'ಪ್ರಾಣಿ ಜಾನಪದ', 'ಭೂತೇರ ಪದಗಳು', 'ಕೀಡೆಯ ಹಾಡುಗಳು' ಹಾಗೂ 'ಕೊಡವರ

ಪೊಸಕ್ಕೆ ಹಬ್ಬ'–ಇವುಗಳು ಜನಪದ ಜೀವನದ ಸುತ್ತಮುತ್ತ ಹಬ್ಬಿಕೊಂಡು, ಅವರ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಲೇಖನಗಳಾದರೆ, 'ಕಡ್ಲಿಮಟ್ಟಿ ಕಾಶೀಬಾಯಿ : ಒಂದು ವಿಚಾರ' ಮನುಷ್ಯನ ಸ್ವಭಾವದ ಮೇಲೆ ಬೆಳಕು ಚೆಲ್ಲುವಂತಹುದು. ಕಾಮಾತುರನಾದ ಗಂಡು, ಕಾಮಕ್ಕೆ ಬಲಿಯಾದಾಗ ಹೆಣ್ಣು, ಆ ನಡುವಣ ಮಾನಸಿಕ ಹೊಯ್ದಾಟ ಇತ್ಯಾದಿ ಅಂಶಗಳು ಕತೆಗಾರರಾದ ಶ್ರೀ ರಾಮಣ್ಣನವರ ಕೈಯಲ್ಲಿ ಸೊಗಸಾಗಿ ಮೂಡಿ ಬಂದಿವೆ. ಕ್ಷೇತ್ರಕಾರ್ಯದ ಹೆಚ್ಚಿನ ಅನುಭವವಿರುವ ಶ್ರೀ ರಾಮಣ್ಣನವರು ಸಾಕಷ್ಟು ವಿಷಯ ಸಂಗ್ರಹಣೆ ಮಾಡಿ, ತಕ್ಕ ನಿರೂಪಣೆಯೊಂದಿಗೆ ಲೇಖನಿಸಿದ್ದಾರೆ. ಆವೇಶಕ್ಕೆ ಒಳಗಾಗದೆ ವಿಷಯ ವ್ಯಾಪ್ತಿಯಲ್ಲಿಯೇ ಮುನ್ನಡೆಯುವ ಅವರ ಶೈಲಿ ಹಲವೊಮ್ಮೆ ಕಥಾ ಶೈಲಿಯನ್ನು ತಾಳುವುದು ಕೆಲವೆಡೆ ಗುಣವಾಗಿ ಕಂಡರೂ, ಮತ್ತೆ ಕೆಲವೆಡೆ ದೋಷವಾಗಿ ಪರಿಣಮಿಸಬಹುದಾದ ಅಪಾಯವೂ ಕಂಡುಬರುತ್ತದೆ. ಸಂಶೋಧನ ವಿಷಯಗಳಂತಹ ಬರಹಗಳಲ್ಲಿ ಶ್ರೀ ರಾಮಣ್ಣನವರು ಸ್ವಲ್ಪ ಎಚ್ಚರ ವಹಿಸುವುದು ಅಗತ್ಯ. ಜಾನಪದ ಅಧ್ಯಯನ ಬಿರುಸಿನಿಂದ ನಡೆಯುತ್ತಿರುವ ಈ ಸಂದರ್ಭದಲ್ಲಿ 'ಜಾನಪದ ವಿಹಾರ'ದಂತಹ ಕೃತಿಗಳ ಆವಶ್ಯಕತೆ ಹೆಚ್ಚಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

–ಡಾ. ಡಿ. ಕೆ. ರಾಜೇಂದ್ರ

ಸಂಪಾದಕೀಯ

ವಿಶ್ವಕನ್ನಡ ಸಮ್ಮೇಳನ

1982ರಲ್ಲಿ ನಡೆಯಬೇಕೆಂದು ಮೂಲತಃ ಯೋಜಿಸಿದ್ದು, ಕಾರಣಾಂತರಗಳಿಂದ ಮುಂದೆ ಮುಂದೆ ಹೋಗುತ್ತ ಬಂದಿದ್ದ ಪ್ರಥಮ ವಿಶ್ವಕನ್ನಡ ಸಮ್ಮೇಳನ ಕೊನೆಗೂ ಮೈಸೂರಿನಲ್ಲಿ 1985ರ ಡಿಸೆಂಬರ್ 15 ರಿಂದ 17 ರವರೆಗೆ ನಡೆಯಿತು. 15–12–1985ರಂದು ಬೆಳಿಗ್ಗೆ ರಾಷ್ಟ್ರಕವಿ ಡಾ. ಕೆ. ವಿ. ಪುಟ್ಟಪ್ಪನವರು ಡಾ.ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಸಮಾರಂಭಗಳನ್ನು ಉದ್ಘಾಟಿಸಿದರು. ಸಮ್ಮೇಳನದ ನೆನಪಿನ ಸಂಚಿಕೆಯಾದ 'ಅವಲೋಕನ' (ಇಂಗ್ಲಿಷ್ ಮತ್ತು ಕನ್ನಡ), ವಿಶೇಷ ಪ್ರಕಟಣೆಯಾದ 'ಚೆಲುವ ಕನ್ನಡ ನಾಡು' ಹಾಗೂ ಸಮ್ಮೇಳನದ ಅಂಗವಾಗಿ ಹೊರತರಲಾಗಿದ್ದ ಐವತ್ತು ಪುಸ್ತಕಗಳನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಅಂದು ಸಂಜೆ ನಡೆದ 'ಕವಿ ಸಮ್ಮೇಳನ'ಕ್ಕೂ ಕುವೆಂಪು ಅವರೇ ಅಧ್ಯಕ್ಷರಾಗಿದ್ದರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಇಪ್ಪತ್ತೈದು ಮಂದಿ ಕವಿಗಳು ಮತ್ತು ಕವಯಿತ್ರಿಯರು ಇದರಲ್ಲಿ ಪಾಲ್ಗೊಂಡಿದ್ದರು.

ನಮ್ಮ ನಾಡಿನ ಪ್ರಧಾನ ಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿ ಅವರು ಎರಡನೆಯ ದಿವಸ ಈ ಸಮಾರಂಭದಲ್ಲಿ ಭಾಗವಹಿಸಿ, ಕನ್ನಡ ನಾಡು, ನುಡಿ, ಇತಿಹಾಸ ಮತ್ತು ಸಂಸ್ಕೃತಿಗಳ ಹಿರಿಮೆಯನ್ನು ಹಾಡಿ ಹೊಗಳಿ, ಕನ್ನಡಿಗರಿಗೆ ಶುಭಾಶಯಗಳನ್ನು ಕೋರಿದರು.

ವಿಚಾರಗೋಷ್ಠಿಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ನಡೆಸುವ ಹೊಣೆಯನ್ನು ರಾಜ್ಯದ ವಿವಿಧ ಅಕಾಡೆಮಿಗಳಿಗೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿಗೆ ವಹಿಸಲಾಗಿತ್ತು. ಸಾಹಿತ್ಯ ಸಂಬಂಧವಾದ ಗೋಷ್ಠಿಗಳನ್ನು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದುವು. 16 ಮತ್ತು 17 ರಂದು ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿಗಳು ನಡೆದುವು. ಡಾ. ಆರ್. ಸಿ. ಹಿರೇಮಠ ಅವರು ಈ ಗೋಷ್ಠಿಗಳನ್ನು ಉದ್ಘಾಟಿಸಿದರು. ಪ್ರೊ. ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು.

16ರಂದು ನಡೆದ 'ಪ್ರಾಚೀನ ಕನ್ನಡ ಸಾಹಿತ್ಯ'ವನ್ನು ಕುರಿತ ಮೊದಲನೆಯ ಗೋಷ್ಠಿಗೆ ಡಾ. ರಂ. ಶ್ರೀ. ಮುಗಳಿಯವರು ಅಧ್ಯಕ್ಷರಾಗಿದ್ದು, ಡಾ. ಸಿ. ಪಿ. ಕೃಷ್ಣ ಕುಮಾರ್ (ಚಂಪೂ ಸಾಹಿತ್ಯ), ಡಾ. ಪ್ರಭುಶಂಕರ (ವಚನ ಸಾಹಿತ್ಯ), ಪ್ರೊ. ಸುಜನಾ (ಷಟ್ಪದಿ ಸಾಹಿತ್ಯ) ಮತ್ತು ಡಾ. ಜಿ. ವರದರಾಜರಾವ್ (ದಾಸ ಸಾಹಿತ್ಯ) ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ವಿಚಾರಗೋಷ್ಠಿ 'ಆಧುನಿಕ ಕನ್ನಡ ಸಾಹಿತ್ಯ'ಕ್ಕೆ ಸಂಬಂಧಿಸಿದ್ದು, ಈ ಗೋಷ್ಠಿಯಲ್ಲಿ ಡಾ. ಶ್ರೀನಿವಾಸ ಹಾವನೂರ (ಕನ್ನಡ ಸಾಹಿತ್ಯದ ಅರುಣೋದಯ), ಡಾ. ಜಿ. ಎಸ್. ಆಮೂರ (ಕಾದಂಬರಿ), ಡಾ. ಗಿರಡ್ಡಿ ಗೋವಿಂದರಾಜ (ಕಾವ್ಯ), ಶ್ರೀಮತಿ ವೀಣಾ ಶಾಂತೇಶ್ವರ (ಸಣ್ಣಕತೆ) ಮತ್ತು ಶ್ರೀಮತಿ ವಿಜಯಾ (ನಾಟಕ) ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ಡಾ. ವಿ. ಕೆ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ 17-12-85 ರಂದು ನಡೆದ ಮೂರನೆಯ ವಿಚಾರಗೋಷ್ಠಿಯಲ್ಲಿ ಪ್ರೊ. ಎಸ್. ಅನಂತನಾರಾಯಣ (ಪಾಶ್ಚಾತ್ಯ ಸಾಹಿತ್ಯ ಬಾಂಧವ್ಯ), ಡಾ. ಕೆ. ಕುಶಾಲಪ್ಪಗೌಡ (ದ್ರಾವಿಡ ಭಾಷಾ ಸಾಹಿತ್ಯ ಬಾಂಧವ್ಯ), ಶ್ರೀ ಪ್ರಧಾನ್ ಗುರುದತ್ತ (ದ್ರಾವಿಡೇತರ ಭಾಷಾ ಸಾಹಿತ್ಯ ಬಾಂಧವ್ಯ) ಮತ್ತು ಶ್ರೀ ಶೇಷನಾರಾಯಣ (ಇತರ ಭಾಷೆಗಳಲ್ಲಿ ಕನ್ನಡ ಕೃತಿಗಳ ಅನುವಾದ) ಅವರು ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ಡಾ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ 'ಸಾಹಿತ್ಯ ಓದುಗನನ್ನು ತಲುಪುವ ಬಗೆ' ಎಂಬ ವಿಚಾರ ಸಂಕಿರಣದಲ್ಲಿ ಪ್ರೊ. ಅ. ರಾ. ಮಿತ್ರ, ಶ್ರೀ ಸಂತೋಷ ಕುಮಾರ ಗುಲ್ವಾಡಿ, ಶ್ರೀ ಎಂ. ಸತ್ಯನಾರಾಯಣರಾವ್, ಶ್ರೀ ಜಿ.ಎಸ್. ಅಶೋಕವರ್ಧನ ಮತ್ತು ಶ್ರೀ ಎನ್. ಕೆ. ಕುಲಕರ್ಣಿ ಅವರು ಸಮಸ್ಯೆಯ ವಿವಿಧ ಮುಖಗಳನ್ನು ಕುರಿತ ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ಡಾ. ಹಾ. ಮಾ. ನಾಯಕ ಅವರ ಅಧ್ಯಕ್ಷತೆಯಲ್ಲಿ ಡಾ.ಎ. ಎನ್. ಮೂರ್ತಿರಾವ್ ಅವರು ಉದ್ಘಾಟಿಸಿದ ಜಾಗತಿಕ ವಿಚಾರಗೋಷ್ಠಿಯಲ್ಲಿ ಡಾ. ಸಿದ್ಧಯ್ಯ ಪುರಾಣಿಕ (ವಿಶ್ವಮಾನ್ಯ ಕನ್ನಡಿಗರು), ಶ್ರೀಮತಿ ವಿಮಲಾ ಚನ್ನಬಸಪ್ಪ (ವಿದೇಶಗಳಲ್ಲಿ ಕನ್ನಡ), ಶ್ರೀ ಪ್ರಧಾನ್ ಗುರುದತ್ತ (ಅನ್ಯಭಾಷೆಗಳಲ್ಲಿ ಕನ್ನಡ ಸಾಹಿತ್ಯ), ಡಾ ಗಂಗಾಧರ ಕೋರಿ (ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ಪ್ರೋತ್ಸಾಹ) ಅವರು ಪ್ರಬಂಧಗಳನ್ನು ಮಂಡಿಸಿದರು. ಗೋಷ್ಠಿಯಲ್ಲಿ ಮೂಲತಃ ಹೆಸರಿರದೆ ಇದ್ದ ಇನ್ನೂ ಇಬ್ಬರು ಮಾತನಾಡಿದರು-ಒತ್ತಾಯಪೂರ್ವಕವಾಗಿ. ಅಧ್ಯಕ್ಷತೆ ವಹಿಸಿದ್ದ ಡಾ. ಹಾ. ಮಾ. ನಾಯಕರು ಇದು ಹೇಗೆ ವಿಶ್ವ ಕನ್ನಡ ಸಮ್ಮೇಳನವೇ ಆಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದು ಈ ಗೋಷ್ಠಿಯ ವಿಶಿಷ್ಟ ಸಂಗತಿಯಾಗಿತ್ತು. 'ಮಹಿಳಾ ಸಾಹಿತ್ಯ'ವನ್ನು ಕುರಿತ ವಿಚಾರ ಸಂಕಿರಣ ಶ್ರೀಮತಿ ಎಚ್. ಎಸ್. ಪಾರ್ವತಿ ಅವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಮತಿಯರಾದ ಜಿ. ನ.

ಮುಂಗಳ (ಲೌಕಿಕಯಾಗಿ ಮಹಿಳೆ), ಶಾಂತಾ ನಾಗರಾಜ್ (ವಸ್ತು ಮತ್ತು ಶೈಲಿಯ ಸಮಸ್ಯೆಗಳು), ಕಮಲಾ ಹಂಪನಾ (ವಿಚಾರ ಸಾಹಿತ್ಯ), ಎಸ್. ಕೆ. ಪೂರ್ಣಿಮಾದೇವಿ (ಕವನ), ಲಲಿತಾ ಕುಪ್ಪುಸ್ವಾಮಿ (ಅಮೇರಿಕದಲ್ಲಿ ಕನ್ನಡ), ಯಮುನಾಮೂರ್ತಿ (ರೇಡಿಯೋ ನಾಟಕಗಳು) ಮತ್ತು ಮಾಲಿನಿ ಶ್ರೀರಾಮು (ವಿದೇಶಗಳಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳು) ತಮ್ಮ ಪ್ರಬಂಧಗಳನ್ನು ಮಂಡಿಸಿದರು.

ಇದೇ ರೀತಿ, ನಾಟಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಶ್ರೀ ಪರ್ವತವಾಣಿ ಮತ್ತು ಶ್ರೀ ಎಂ. ಪಿ. ಪ್ರಕಾಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರಗೋಷ್ಠಿಗಳಲ್ಲಿ ಶ್ರೀಯುತ ರಾವ ಸದಾಶಿವ (ಕನ್ನಡ ಹವ್ಯಾಸಿ ರಂಗಭೂಮಿ), ಎಚ್. ಕೆ. ಯೋಗಾನರಸಿಂಹ (ಕನ್ನಡ ವೃತ್ತಿ ರಂಗಭೂಮಿ) ಮತ್ತು ಮುದೇನೂರ ಸಂಗಣ್ಣ (ಕನ್ನಡ ಜಾನಪದ ರಂಗಭೂಮಿ) ಅವರು ಮೊದಲ ಗೋಷ್ಠಿಯಲ್ಲೂ, ಎಂ. ಎಸ್. ಸತ್ಯು (ರಾಷ್ಟ್ರೀಯ ರಂಗಭೂಮಿಗೆ ಕನ್ನಡದ ಕೊಡುಗೆ), ಜಯಪ್ರಕಾಶಗೌಡ (ಕನ್ನಡ ರಂಗಭೂಮಿ ಮತ್ತು ಸರ್ಕಾರ) ಮತ್ತು ವಿಶ್ವನಾಥ ಮಿರ್ಲೆ(ಕರ್ನಾಟಕ ಪ್ರೇಕ್ಷಕ) ಅವರು ಎರಡನೆಯ ಗೋಷ್ಠಿಯಲ್ಲಿಯೂ ಪ್ರಬಂಧಗಳನ್ನು ಮಂಡಿಸಿದರು.

'ಕರ್ನಾಟಕ ಜನಪದಕಲೆ'ಯನ್ನು ಕುರಿತಂತೆ ಡಾ. ಜವರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಜನಪದ ಕಲೆಗಳ ಬಗೆಗಿನ ಜಿಲ್ಲಾವಾರು ಸಮೀಕ್ಷೆ ನಡೆದದ್ದು ಒಂದು ವಿಶೇಷ ಸಂಗತಿ. ಡಾ. ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಪ್ರಾತ್ಯಕ್ಷಿಕೆಗಳಲ್ಲಿ ಡಾ. ಜೀ. ಶಂ. ಪರಮಶಿವಯ್ಯನವರು ಮೂಡಲಪಾಯ ಯಕ್ಷಗಾನವನ್ನೂ ಶ್ರೀ ಕೆರೆಮನೆ ಶಂಭುಹೆಗ್ಗಡೆ ಅವರು ಕರಾವಳಿ ಯಕ್ಷಗಾನವನ್ನೂ ಪರಿಚಯಿಸಿಕೊಟ್ಟರು.

ಇದೇ ರೀತಿ, ನ್ಯಾಯಾಂಗ, ವಿಜ್ಞಾನ, ಆಡಳಿತ ಭಾಷೆ, ಕಾರ್ಖಾನೆಗಳಲ್ಲಿ ಕನ್ನಡ, ಶಿಕ್ಷಣದಲ್ಲಿ ಕನ್ನಡ, ಪತ್ರಿಕೋದ್ಯಮ, ಚಲನಚಿತ್ರ, ಬ್ಯಾಂಕಿಂಗ್, ಸಂಗೀತ, ನೃತ್ಯ ಕಲೆ, ಧರ್ಮ, ಕನ್ನಡತನ, ಕರ್ನಾಟಕದ ರಾಜಕೀಯ ಪರಂಪರೆ ಮೊದಲಾದುವುಗಳಿಗೆ ಸಂಬಂಧಿಸಿದಂತೆಯೂ ಚಿಂತನೆ ನಡೆಯಿತು.

ಈ ಸಂದರ್ಭದಲ್ಲಿ ಮೊದಲ ದಿನ ಸಂಜೆಯೇ (15-12-86) ಸಾಹಿತ್ಯ ಕ್ಷೇತ್ರಕ್ಕೆ ಗಣನೀಯವಾದ ಸೇವೆಯನ್ನು ಸಲ್ಲಿಸಿರುವ ಹಿರಿಯರಾದ ಪ್ರೊ. ಎಸ್. ಎಸ್. ಮಾಳವಾಡ, ಪ್ರೊ. ಆರ್. ಸಿ. ಹಿರೇಮಠ, ಪ್ರೊ. ಎಂ. ವಿ. ಸೀತಾರಾಮಯ್ಯ, ಪ್ರೊ. ದೇ. ಜವರೇಗೌಡ ಮತ್ತು ಶ್ರೀ ತ. ಸು. ಶಾಮರಾವ್ ಅವರನ್ನು ಸನ್ಮಾನಿಸಲಾಯಿತು. ಇತರ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಗಾಗಿ ಸನ್ಮಾನಿತರಾದ ವಿದ್ವಾಂಸರಲ್ಲಿ ಸಂಶೋಧನ ಕ್ಷೇತ್ರಕ್ಕೆ ಮಹತ್ವದ ಕಾಣಿಕೆ ಸಲ್ಲಿಸಿರುವ ಡಾ. ಚಿದಾನಂದ ಮೂರ್ತಿ ಅವರು ಒಬ್ಬರಾಗಿದ್ದರು.

ವಿಶೇಷ ಉಲ್ಲೇಖಕ್ಕೆ ಅರ್ಹವಾದ ಇನ್ನೊಂದು ಸಂಗತಿಯೆಂದರೆ, 10,000ಕ್ಕೂ ಮೇಲ್ಪಟ್ಟ ಕನ್ನಡ ಪುಸ್ತಕಗಳ ಪ್ರದರ್ಶನವನ್ನು ಏರ್ಪಡಿಸಿದ್ದುದು.

'ಕನ್ನಡ ವೈಜಯಂತ' ಮೊದಲಾದ ಸಾಂಸ್ಕೃತಿಕ ಹಾಗೂ ಮನರಂಜನೆಯ ಕಾರ್ಯಕ್ರಮಗಳೂ ನಡೆದುವು.

ವಿಶ್ವಕನ್ನಡ ಸಮ್ಮೇಳನದ ವ್ಯವಸ್ಥೆಗಳೆಲ್ಲ ಏರುಪೇರಾಗುವಷ್ಟರ ಮಟ್ಟಿಗೆ ನಾಡಿನ ಮೂಲೆ ಮೂಲೆಗಳಿಂದಲೂ, ಹೊರಗಿನಿಂದಲೂ ಕನ್ನಡಾಭಿಮಾನಿಗಳು ಬಹು ಸಂಖ್ಯೆ ಆಗಮಿಸಿದ್ದುದು ಇನ್ನೊಂದು ವಿಶೇಷ ಸಂಗತಿ. ಅಕ್ಷರಶಃ ಎಲ್ಲ ಕಾರ್ಯಕ್ರಮಗಳಿಗೂ ಕನ್ನಡಾಭಿಮಾನಿಗಳು ಕಿಕ್ಕಿರಿದು ನೆರೆದಿದ್ದರು ಎಂದೇ ಹೇಳಬೇಕು.

ಒಟ್ಟಿನಲ್ಲಿ, ಸಾಹಿತಿಗಳು, ಕಲಾವಿದರು, ರಾಜಕಾರಣಿಗಳು, ವಿವಿಧ ಕ್ಷೇತ್ರಗಳಲ್ಲಿನ ಮುಖ್ಯರು ಹಾಗೂ ವಿಶೇಷವಾಗಿ ಸಾಹಿತ್ಯಾಭಿಮಾನಿಗಳಿಗೆ ಈ ಮೂರು ದಿವಸಗಳ ಮೊದಲ ವಿಶ್ವಕನ್ನಡ ಸಮ್ಮೇಳನ ಗೊಂದಲಮಯವಾಗಿದ್ದರೂ, ಸಂಭ್ರಮ-ಸಡಗರಗಳ ಹಬ್ಬವೂ ಆಗಿತ್ತು.

'ದುರ್ಗಾಸ್ತಮಾನ'ಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ

1985ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ 'ದುರ್ಗಾಸ್ತಮಾನ' ಕಾದಂಬರಿಗೆ ದೊರೆತುದಕ್ಕೆ 'ಪ್ರಬುದ್ಧ ಕರ್ಣಾಟಕ' ಹರ್ಷಿಸುತ್ತದೆ. ಆದರೆ ಅಭಿನಂದನೆಗಳನ್ನು ಸ್ವೀಕರಿಸಲು ನಮ್ಮ ಮುಂದೆ ತ. ರಾ. ಸು. ಅವರು ಈಗ ಇಲ್ಲ. ಇದು ಅವರಿಗೆ ದೊರೆತ ಮರಣೋತ್ತರ ಪ್ರಶಸ್ತಿ.

ಪ್ರಗತಿಶೀಲ ಲೇಖಕರಲ್ಲಿ ಒಬ್ಬರಾದ ತ. ರಾ. ಸು. ಅವರು ಕನ್ನಡದ ಶ್ರೇಷ್ಠ ಕಾದಂಬರಿಕಾರರಾಗಿದ್ದಾರೆ. ಬದುಕಿನ ವಾಸ್ತವಿಕತೆಯನ್ನು ಅತ್ಯಂತ ಉತ್ಕಟತೆಯಿಂದ ಚಿತ್ರಿಸುವ ಅವರ ಬರವಣಿಗೆ ಓಜಸ್ವಿಯಾದುದು, ಶಕ್ತಿವತ್ತಾದುದು. ವೈಚಾರಿಕ ಸೂಕ್ಷ್ಮತೆ ಮತ್ತು ಸಮಕಾಲೀನ ಸಮಸ್ಯೆಗಳ ಒಳನೋಟಗಳು ಅವರ ಅನೇಕ ಕಾದಂಬರಿಗಳಲ್ಲಿ ಕೆಲಸಮಾಡಿವೆ. ಚಂದವಳ್ಳಿಯ ತೋಟ, ಚಂದನದ ಗೊಂಬೆ, ಹಂಸಗೀತೆ, ಮಸಣದ ಹೂವು, ಬಿಡುಗಡೆಯ ಬೇಡಿ, ನಾಗರಹಾವು-ಈ ಮುಂತಾದ ಕಾದಂಬರಿಗಳಲ್ಲಿ ತ.ರಾ.ಸು. ಅವರ ಬರವಣಿಗೆಯ ಸಾಮರ್ಥ್ಯವನ್ನೂ ಜೀವನ ವಿಶ್ಲೇಷಣಾ ರೀತಿಯನ್ನೂ ಕಾಣಬಹುದಾಗಿದೆ. ಸಮಕಾಲೀನ ಜೀವನವನ್ನು ಚಿತ್ರಿಸುವುದರ ಜೊತೆಗೆ, ಗತಕಾಲದ ಜೀವನವನ್ನು ಕಟ್ಟಿಕೊಡುವುದರಲ್ಲೂ ಅವರು ಸಮರ್ಥರು. ಅದರಲ್ಲೂ ಚಿತ್ರದುರ್ಗದ ಇತಿಹಾಸ ಕುರಿತ ಕಾದಂಬರಿಗಳು ಪ್ರಸಿದ್ಧವಾಗಿದ್ದು, ಅವರಿಗೆ ಅಪಾರ ಕೀರ್ತಿಯನ್ನು ತಂದಿವೆ. ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ-ಈ ಕಾದಂಬರಿಗಳಲ್ಲಿ ಆ ಕಾಲದ ಇತಿಹಾಸ ತನ್ನೆಲ್ಲಾ ದೃಶ್ಯ ಪ್ರಪಂಚದೊಡನೆ ಉಜ್ವಲವಾಗಿ ತೆರೆದುಕೊಳ್ಳುತ್ತದೆ.

ಈ ಸರಣಿಯಲ್ಲಿ ಕೊನೆಯದೂ ಅತ್ಯಂತ ಪರಿಪಕ್ವದ್ದೂ ಆದ ಕೃತಿಯೇ ಪ್ರಸ್ತುತ 'ದುರ್ಗಾಸ್ತಮಾನ' ಕಾದಂಬರಿ.

ಇತ್ತೀಚಿನ ಮಹತ್ವದ ಕಾದಂಬರಿಗಳಲ್ಲಿ 'ದುರ್ಗಾಸ್ತಮಾನ'ವೂ ಒಂದು. ಹತ್ತು ಪಾಯಿಂಟುಗಳಲ್ಲಿ ಅಚ್ಚಾಗಿರುವ ಏಳುನೂರು ಪುಟಗಳ ಈ ಬೃಹತ್ ಐತಿಹಾಸಿಕ ಕಾದಂಬರಿ ಚಿತ್ರದುರ್ಗದ ಪಾಳೆಯಗಾರ ಮದಕರಿನಾಯಕನ ಕಥೆಯನ್ನು ಹೇಳುತ್ತದೆ. ಇತಿಹಾಸ ಮತ್ತು ಕಲೆಗಳೆರಡೂ ಸಮನಾಗಿ ಮೇಳವಿಸಿರುವ ಒಂದು ಶ್ರೇಷ್ಠ ಸೃಜನಶೀಲ ಕೃತಿ.ಕಾದಂಬರಿಗೆ ಇಟ್ಟಿರುವ ಹೆಸರೇ ವೈಶಿಷ್ಟ್ಯಪೂರ್ಣವಾದುದು.ಇದು ಮದಕರಿನಾಯಕನ ದುರಂತವನ್ನಷ್ಟೆ ಹೇಳುವುದಿಲ್ಲ, ಬದುಕಿನ ದುರಂತವನ್ನೂ ಧ್ವನಿಸುತ್ತದೆ. ಕಾದಂಬರಿಯನ್ನು ಕುರಿತು ಡಾ. ಹಾ. ಮಾ. ನಾಯಕರು ಹೀಗೆ ಹೇಳುತ್ತಾರೆ: ''ಚರಿತ್ರೆ ಕತೆಯಾಗುವ, ಬಾಳಾದದ್ದು ಹಾಳಾಗುವ, ಹಾಳಾದದ್ದು ಬಾಳಾಗುವ ಪ್ರತಿಕ್ರಿಯೆಯನ್ನೂ ಇದರಲ್ಲಿ ನೋಡಬಹುದು. ಈ ಕಾದಂಬರಿಯಲ್ಲಿ ಅವರು ತೋರಿಸಿರುವ ರಾಜತಾಂತ್ರಿಕ ಸಂದರ್ಭಗಳು, ಸಂಭಾಷಣೆಗಳು ನಮ್ಮ ಐತಿಹಾಸಿಕ ಕಾದಂಬರಿಗಳಲ್ಲಿಯೇ ಅಪರೂಪವಾದವು. ತರಾಸು ಅವರ ಸೂಕ್ಷ್ಮ ನಿರೀಕ್ಷಣಾ ದೃಷ್ಟಿ, ಅಧ್ಯಯನದ ಹರವು ಇಲ್ಲಿ ಸುವ್ಯಕ್ತವಾಗಿದೆ. ಅವರು ಸೃಷ್ಟಿಸಿರುವ ರಾಗದ್ವೇಷಗಳ ಪ್ರಪಂಚ ಒಂದು ಧ್ವನಿತಟ್ಟೆ. ತಟ್ಟಿದಲ್ಲೆಲ್ಲ ಅದು ಮರುದನಿಗೈಯುತ್ತದೆ.'' ಒಟ್ಟಿನಲ್ಲಿ 'ದುರ್ಗಾಸ್ತಮಾನ' ಸಂಕೀರ್ಣ ಸ್ವರೂಪದ ಕಾದಂಬರಿಯೆಂದು ಹೇಳಬಹುದು. ಇಂತಹ ಮಹತ್ವದ ಕೃತಿಗೆ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಸಂದಿರುವುದು ಸಹಜವೇ ಆಗಿದೆ.

ಕಂಬನಿ

ಪ್ರೊ. ವಿ. ಎಂ. ಇನಾಂದಾರ್

ಕನ್ನಡ ಸಾಹಿತ್ಯ ಕ್ಷೇತ್ರಕ್ಕಾಗಿ ದುಡಿದಿರುವ, ದುಡಿಯುತ್ತಿರುವ ಇಂಗ್ಲಿಷ್ ಪ್ರಾಧ್ಯಾಪಕರುಗಳಲ್ಲಿ ತುಂಬ ಗಮನಾರ್ಹವಾಗಿರುವ ಹೆಸರುಗಳಲ್ಲಿ ಪ್ರೊ. ವಿ. ಎಂ. ಇನಾಂದಾರ್ ಅವರು ಮುಖ್ಯರು. ಕಾದಂಬರಿಕಾರರೂ, ವಿಮರ್ಶಕರೂ, ಅನುವಾದಕರೂ, ಮೇಲಾಗಿ ಶ್ರೇಷ್ಠ ಅಧ್ಯಾಪಕರೂ ಆಗಿದ್ದ ಶ್ರೀ ಇನಾಂದಾರ್ ಅವರು ಈಚೆಗೆ

ತೀರಿಕೊಂಡಿದ್ದು (ಜನವರಿ 26, 1986) ಕನ್ನಡದ ಪಾಲಿಗೆ ನಿಜಕ್ಕೂ ತುಂಬಲಾಗದ ನಷ್ಟವೇ ಸರಿ. ಕರ್ನಾಟಕದ ಹೊರಗೂ ಇಂಗ್ಲಿಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಅವರು, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ, ಶಿವಮೊಗ್ಗೆಯ ಕಾಲೇಜಿನಲ್ಲಿ ಹಾಗೂ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿಯೂ ಸೇವೆ ಸಲ್ಲಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ 'ಅಕಾಡೆಮಿಕ್ ಕೌನ್ಸಿಲ್'ಗೆ ಅವರನ್ನು ನಾಮಕರಣ ಮಾಡಲಾಗಿತ್ತು. 'ಪ್ರಬುದ್ಧ ಕರ್ಣಾಟಕ'ದ ಬಗ್ಗೆಯಂತೂ ಅವರಿಗೆ ವಿಶೇಷ ಆದರಾಭಿಮಾನಗಳಿದ್ದವು. ತಮ್ಮನ್ನು 'ಪ್ರಬುದ್ಧ ಕರ್ಣಾಟಕ' ಬೆಳೆಸಿದ ಶಿಶುವೆಂದೇ ಅವರು ಭಾವಿಸಿದ್ದರು.

ಸ್ವತಃ ಅನೇಕ ಜನಪ್ರಿಯ ಮತ್ತು ಮಹತ್ವದ ಕಾದಂಬರಿಗಳನ್ನು ರಚಿಸಿದ್ದ ಇನಾಂದಾರ್ ಅವರು ವಿಷ್ಣು ಖಾಂಡೇಕರ ಅವರ 'ಯಯಾತಿ'ಯಂಥ ಸುಪ್ರಸಿದ್ಧ ಕಾದಂಬರಿಯನ್ನು ಕನ್ನಡಕ್ಕೆ ತಂದು ಕೊಟ್ಟಿದ್ದರು. ಹಾಸ್ಯ ಸಾಹಿತ್ಯಕ್ಕೂ 'ಮಂಗಲ್ಯಾಂಡಿನಲ್ಲಿ ಮೂರು ವಾರ'ದಂಥ ವಿಶಿಷ್ಟ ಕೃತಿಯನ್ನು ಕಾಣಿಕೆಯಾಗಿ ಕೊಟ್ಟಿದ್ದರು. ಕನ್ನಡದಲ್ಲಿ ವಿಮರ್ಶಾ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆಯನ್ನು ಕೊಟ್ಟಿದ್ದ ಅವರು ಕನ್ನಡ ಸಾಹಿತ್ಯದ ಸಾಧನೆಯನ್ನು ಇತರ ಭಾಷೆಗಳಿಗೆ ಪರಿಚಯಿಸಿಕೊಡುವ 'ಕನ್ನಡ ರೈಟರ್ಸ್ ಅಂಡ್ ದೇರ್ ವರ್ಕ್ಸ್' (ಇಂಗ್ಲಿಷ್) ಮಾಲೆಗೆ ಡಾ. ಶಿವರಾಮ ಕಾರಂತ ಮತ್ತು ಎಂ. ಗೋವಿಂದ ಪೈ ಅವರನ್ನು ಕುರಿತ ಗ್ರಂಥಗಳನ್ನು ರಚಿಸಿಕೊಟ್ಟಿದ್ದರು. ಇವೆಲ್ಲಕ್ಕಿಂತ ಮಿಗಿಲಾದ ಅವರ ಸಾಧನೆ 'ಪಾಶ್ಚಾತ್ಯ ಕಾವ್ಯ ಮೀಮಾಂಸೆ'ಯಂಥ ಆಚಾರ್ಯ ಕೃತಿಯನ್ನು ರಚಿಸಿ, ಈ ಕ್ಷೇತ್ರದ ಬಹು ದೊಡ್ಡ ಕೊರತೆಯನ್ನು ದೂರಮಾಡಿದ್ದು. ಅವರು ಸಾಹಿತ್ಯ ಅಕಾದೆಮಿಯ ಮತ್ತು ಇತರ ಪ್ರಶಸ್ತಿಗಳನ್ನು ಪಡೆದಿದ್ದರು.

ಇನಾಂದಾರ್ ಅವರು ಬಿಡುವಿಲ್ಲದೆ ದುಡಿಯುತ್ತಿದ್ದಂಥ ಚೇತನವಾಗಿದ್ದರು. ಕನ್ನಡ ಅಧ್ಯಯನ ಸಂಸ್ಥೆಗಾಗಿ ಅನಕೃ ಅವರನ್ನು ಕುರಿತ ಇಂಗ್ಲಿಷ್ ಗ್ರಂಥವನ್ನು ರಚಿಸುತ್ತಿದ್ದರು. ಭೀಷ್ಮಪರ್ವವನ್ನು ಅನುವಾದಿಸಿ, ಅಚ್ಚುಕೂಟದ ಪ್ರತಿಯನ್ನು ಸಿದ್ಧಪಡಿಸುತ್ತಿದ್ದರು. ಕೇಂದ್ರ ಸಾಹಿತ್ಯ ಅಕಾದೆಮಿಯ 'ಎನ್‌ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಲಿಟರೇಚರ್' ಮಾಲೆಯಲ್ಲಿನ ಕನ್ನಡದ ಸಂಪುಟದ ಒಂದು ಭಾಗದ ಕೆಲಸವನ್ನು ಮುಗಿಸಿ ಕೊಟ್ಟಿದ್ದರು. ಹೀಗೆ ಕನ್ನಡಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದ ಅವರ ಅಕಾಲಿಕ ನಿಧನಕ್ಕಾಗಿ 'ಪ್ರಬುದ್ಧ ಕರ್ಣಾಟಕ' ಅಶ್ರುತರ್ಪಣವನ್ನು ಸಲ್ಲಿಸುತ್ತ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಶ್ರೀ ಕೃಷ್ಣಮೂರ್ತಿ ಪುರಾಣಿಕ

ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಕೃಷ್ಣಮೂರ್ತಿ ಪುರಾಣಿಕರು 1985ನೇ ನವೆಂಬರ್ 13ರಂದು ನಿಧನರಾದುದಕ್ಕೆ 'ಪ್ರಬುದ್ಧ ಕರ್ಣಾಟಕ' ತನ್ನ

ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಅವರ ಅಗಲಿಕೆ ಕನ್ನಡ ಸಾರಸ್ವತಲೋಕಕ್ಕೆ ತುಂಬ ಲಾಗದ ನಷ್ಟವೆನಿಸಿದೆ.

ಪುರಾಣಿಕರು ಆದರ್ಶ ಶಿಕ್ಷಕರೆಂದು ಹೆಸರಾದವರು; ಸ್ವಾತಂತ್ರ್ಯ ಹೋರಾಟ ಗಾರರೂ ಕೂಡ. ಕನ್ನಡದಲ್ಲಿ ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದವರ ಸಾಲಿಗೆ ಪುರಾಣಿಕರೂ ಸೇರುತ್ತಾರೆ. ಕವನ, ಸಣ್ಣಕಥೆ, ನಾಟಕ, ಮಕ್ಕಳಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಕೆಲಸಮಾಡಿದ್ದರೂ, ಅವರು ಕಾದಂಬರಿಕಾರರೆಂದೇ ಪರಿಚಿತರು. ಅವರ ಕೃತಿಗಳಲ್ಲಿ ಕಾದಂಬರಿಗಳದೇ ಬಹುಪಾಲು.ಮುಗಿಲ ಮಲ್ಲಿಗೆ,ಬೆವರಿನ ಬೆಲೆ,ಕಣ್ಣು ತುಂಬಿದ ಕರುಣೆ, ಭಾಗೀರಥಿ, ಕುಲವಧು, ಬನದ ಹುಣ್ಣಿಮೆ, ಮನೆ ತುಂಬಿದ ಹೆಣ್ಣು, ಹಿಮ ಗಿರಿಯ ಗೌರಿ,ಕಾಂಚನ ಕಸ್ತೂರಿ, ಹಸಿರು ತೋರಣ, ದೇವ ಸಂತಾನ, ಸನಾದಿ ಅಪ್ಪಣ್ಣ, ಮರಳಿ ಮನೆಗೆ, ಸೌಭಾಗ್ಯವತಿ-ಇವು ಅವರ ಕೆಲವು ಕಾದಂಬರಿಗಳು. ಅವರ ಕೆಲವು ಕಾದಂಬರಿಗಳು ಚಲನಚಿತ್ರಗಳಾಗಿಯೂ ಜನಪ್ರಿಯವಾಗಿವೆ. ಕನ್ನಡದಲ್ಲಿ ಓದುಗರ ಸಂಖ್ಯೆಯನ್ನು ಹೆಚ್ಚಿಸಿದುದರಲ್ಲಿ ಅವರ ಕಾದಂಬರಿಗಳ ಪಾತ್ರವೂ ಇದೆ.

ಪುರಾಣಿಕರ ಕಾದಂಬರಿಗಳು ಮಧ್ಯಮವರ್ಗದ ಸಮಸ್ಯೆಗಳನ್ನು ಚಿತ್ರಿಸುತ್ತ, ಅಲ್ಲಿನ ನೋವು-ನಲಿವುಗಳಿಗೆ ಅಭಿವ್ಯಕ್ತಿ ನೀಡಿವೆ. ಜೀವನದ ಯಥಾವತ್ತಾದ ಚಿತ್ರಣ ಕೊಡುವ ಇವರ ಕಾದಂಬರಿಗಳು ಸಮಾಜದ ಒಳಿತು-ಕೆಡುಕುಗಳನ್ನು ಚರ್ಚಿಸುತ್ತವೆ. ಇಲ್ಲೆಲ್ಲ ಲೇಖಕರು ಒಂದು ಆದರ್ಶ ಜೀವನ ದೃಷ್ಟಿಯನ್ನು ಹೊಂದಿರುವುದು ಕಂಡಂ ಬರುತ್ತದೆ. ಯಾವ ತಾಂತ್ರಿಕ ಅವಲಂಬನೆಯೂ ಇಲ್ಲದ ಅವರ ಕಾದಂಬರಿಗಳು ಸುಲಭ ವಾಗಿ ಓದಿಸಿಕೊಳ್ಳುವಂಥವು, ಹೃದಯವನ್ನು ನೇರವಾಗಿ ಮುಟ್ಟುವಂಥವು. ಇದ ರಿಂದಾಗಿ, ದೊಡ್ಡ ಓದುಗ ಸಮುದಾಯವನ್ನು ಪಡೆದಿರುವ ನಮ್ಮ ಲೇಖಕರಲ್ಲಿ ಕೃಷ್ಣಮೂರ್ತಿ ಪುರಾಣಿಕರೂ ಒಬ್ಬರಾಗಿದ್ದಾರೆ.

ಕನ್ನಡ ನಾಡು ನುಡಿಗೆ ಅವರು ಸಲ್ಲಿಸಿದ ಸೇವೆಯನ್ನು 'ಪ್ರಬುದ್ಧ ಕರ್ಣಾಟಕ' ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತದೆ.

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ’, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು; ‘ಪರಂಜ್ಯೋತಿ’, ಹುಬ್ಬಳ್ಳಿ: ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು: ‘ತುಳುವ’. ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ರಕ್ಷಾಪುಟ ಮುದ್ರಣ: ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು